TEXT FLY WITHIN THE BOOK ONLY

UNIVERSAL
LIBRARY
OU_198226
UNIVERSAL
LIBRARY

OSMANIA UNIVERSITY LIBRARY Gok
Call No. K921 A827M Accession No. 107
Author ಎಸ್. ವಿ. ಪುಟ್ಟಣ್ಣಯ್ಯ
Title ಕಳ್ಳರು. 1919

This book should be returned on or before the date last marked below.

ಅಶೋಕ

ಅಥವಾ

ಪ್ರಿಯದರ್ಶಿ.



ಮಹಾದೇವ ಪ್ರಭಾಕರ ಪ್ರೆಸ್ಸಿನಲ್ಲಿ
ಎಮ್. ಪಿ. ಪೂಜಾರ, ಧಾರವಾಡ.

೧೯೧೯.

ಬೆಲೆ ೧—೬—೦.

ಜೀವಗಾಮಿಯೊಳಗೆ ದೇವೇಂದ್ರ ಫಡೆಪ್ಪ ಚೌಗುಲೆ ಇವರು ತಮ್ಮ. ಶ್ರೀಮಹಾವೀರ
ಮುದ್ರಣಾಲಯದಲ್ಲಿ ಮುದ್ರಿಸಿದರು.
ಫಾರವಾಡದೊಳಗೆ ಶ್ರೀ ನಾರಾಯಣರಾವ ದೇಶಪಾಂಡೆ ಬಿ. ಓ. ಎಲ್. ಎಲ್. ಬಿ.
ಇವರು ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಪ್ರಕಟಿಸಿದರು.

ಪ್ರಸ್ತಾವನೆ.



ಬಹು ಭಾಷಾಪಂಡಿತನಾದ ಸರ ವಿಲ್ಯಮ್‌ಜೋನ್ಸ ಎಂಬ ವಿದ್ವಾಂಸನು ಎಲ್ಲ ಕ್ಕೂ ಮೊದಲು ಚಂದ್ರಗುಪ್ತನೂ, ಸಾಂದ್ರುಕೋಟಾಸನೂ ಒಂದೇ ವ್ಯಕ್ತಿಯೆಂದು ಜಗತ್ತಿನೆದುರಿಗೆ ಪ್ರಕಟಿಸಿದನು. ಮುಂದೆ ೪೦ ವರ್ಷಗಳ ತರುವಾಯ ಸಿಂಹಲದ ಸುಪ್ರಸಿದ್ಧ ಆನರೆಬಲ್ ಜಾರ್ಜ್ ಟರ್ನರ್ (Houble George Turnour) ಎಂಬವರು ದ್ವೀಪವಂಶ, ಮಹಾವಂಶ ಮೊದಲಾದ ಪ್ರಾಚೀನ ಐತಿಹಾಸಿಕ ಗ್ರಂಥ ಗಳು ಮೊದಲಾದ ಸಂಗತಿಗಳ ಸಮಾಲೋಚನೆ ಮಾಡಹತ್ತಿದರು. ಈ ಸಮಾಲೋಚ ನೆಯಿಂದ ಫಲಿತವಾಗಿ ಹೊರಟ ಐತಿಹಾಸಿಕ ಸಂಗತಿಗಳನ್ನು ಅವರು ೧೮೩೭ರಲ್ಲಿ ಏಸಿಯಾಟಿಕ ಸೊಸಾಯಟಿಯ ಪತ್ರಿಕೆಯಲ್ಲಿ ಎಲ್ಲಕ್ಕೂ ಮೊದಲು ಪ್ರಕಟಿಸಿದರು. ಈ ಕಾಲದಲ್ಲಿಯೇ ಜೇಮ್ ಪ್ರಿನ್ಸೆಪ್ ಎಂಬವರು ಭರತಖಂಡದ ಐತಿಹಾಸಿಕ ವಿಷಯ ಗಳ ಶೋಧಕ್ಕಾಗಿ ನಿಯಮಿಸಲ್ಪಟ್ಟು ಈ ದೇಶಕ್ಕೆ ಬಂದರು. ಅವರು ಎಲ್ಲಕ್ಕೂ ಮೊದಲು ದಿಲ್ಲಿ, ಅಲಹಾಬಾದಗಳ ಸ್ತಂಭ—ಲಿಪಿಗಳನ್ನು ಓದಿ ಅವುಗಳನ್ನು ೧೮೩೭ರಲ್ಲಿ ಏಸಿ ಯಾಟಿಕ್ ಸೋಸಾಯಟಿಯ ಮಾಸಪತ್ರಿಕೆಯಲ್ಲಿ ಪ್ರಕಟಿಸಿದರು. ಮೊದಲು ಅವರು ಈ ಎರಡೂ ಸ್ತಂಭ-ಲಿಪಿಗಳಲ್ಲಿ ಉಲ್ಲೇಖಿಸಲ್ಪಟ್ಟ 'ಪ್ರಿಯದರ್ಶಿ'ಯೂ ಸಿಂಹಲದ ರಾಜನಾದ "ದೇವಾನಾಂ ಪ್ರಿಯಃ "ಎಂಬ ಅಭಿಧಾನವುಳ್ಳ ತಿಷ್ಯನೂ ಒಂದೇ ವ್ಯಕ್ತಿ ಯೆಂದು ಊಹೆ ಮಾಡಿದ್ದರು. ಕ್ರಮದಿಂದ ಬೇರೆ ಅನುಶಾಸನಗಳನ್ನು ಓದಲು ಈ ಊಹೆಯು ಸುಳ್ಳಿನಿಸಿತು. ಜಾರ್ಜ್‌ಟರ್ನರ್, ಜೇಮ್ಸ ಪ್ರಿನ್ಸೆಪ್ ಇವರಿಬ್ಬರ ಪ್ರಯತ್ನ ದಿಂದಲೂ, ಪರಿಶ್ರಮದಿಂದಲೂ ಅಶೋಕನೂ, 'ಪ್ರಿಯದರ್ಶಿ'ಯೂ ಒಂದೇ ವ್ಯಕ್ತಿ ಯೆಂಬದು ಎಲ್ಲಕ್ಕೂ ಮೊದಲು ಪ್ರಕಟಿಸಲ್ಪಟ್ಟಿತು. ಈ ಕಾಲದಿಂದಲೇ ಈ ದೇಶದಲ್ಲಿ ಯೂ ಪರದೇಶಗಳಲ್ಲಿಯೂ ಅಶೋಕನ ವಿಷಯವಾಗಿ ವಿಚಾರವು ಆರಂಭವಾಯಿತು. ಕಳೆದ ೭೪ವರ್ಷಗಳಿಂದ ಈ ವಿಷಯದ ಆಲೋಚನೆಯು ಪಂಡಿತರಲ್ಲಿ ನಡೆದಿರುವದು. ಜರ್ಮನ್, ಫ್ರೆಂಚ, ರಶಿಯನ್ ಮೊದಲಾದ ಭಾಷೆಗಳಲ್ಲಿ ಅಶೋಕನ ವಿಷಯವಾಗಿ ಶೋಧಗಳೂ ವಿಚಾರಗಳೂ ಉಳ್ಳ ಹಲವು ಲೇಖಗಳು ಪ್ರಕಟಿಸಲ್ಪಟ್ಟಿರುವವು. ಬುಲ್ಹರ್, ಸೇನರ್, ಉಲ್ಡನ್‌ಬರ್ಗ್, ಬೂರ್‌ನಫ್, ಬಸಿಸ್ಲಿಫ್, ಕೊಪ್ಪೇನ್, ಸ್ತಾನಿಸ್‌ಲಾಸ್, ಜೂಲಿಎನ್, ಲ್ಯಾಸೆನ್, ಶ್ಲೀಫೆಲ್, ಲಾಮಾ ತಾರಾನಾಥ ಮೊದಲಾದ ಪಂಡಿತರು ಅಶೋ ಕನ ವಿಷಯವಾಗಿ ಸಮಾಲೋಚನೆಮಾಡಿರುವರು. ಇಂಗ್ಲಿಷರಲ್ಲಿ ಕನಿಂಗ್‌ಹಾಮ್, ಡಾಉಸೆನ್, ಎಲ್‌ಫಿನ್ಸ್‌ಟನ್, ವಿಲ್ಸನ್, ಅರಸ್ಕಾಯಿನ್, ಪೇರಿ, ರಿಸ್‌ಡೇವಿಡ್, ಫರ್ಗು ಸನ್, ವಾಡೆಲ್, ಥಾಮಸ್, ಫ್ಲೀಟ್, ಪ್ರಿನ್ಸೆಪ್ ಮೊದಲಾದ ಪಂಡಿತರೂ, ವಂಗ ದೇಶದ ಡಾ. ರಾಜೇಂದ್ರಲಾಲಮಿತ್ರ, ಆರ್. ಸಿ. ದತ್ತ ಎಂಬವರೂ ಮುಂಬಯಿಯ

ಡಾ. ಭಾಂಡಾರಕರ, ಭಗವಾನಲಾಲ ಇಂದ್ರಜಿ ಮೊದಲಾದವರೂ ಅಶೋಕನ ವಿಷಯವಾಗಿ ಪುಸ್ತಕಗಳನ್ನೂ ಲೇಖಗಳನ್ನೂ ಬರೆದಿರುವರು. ವಿಲಾಯತಿಯ ರಾಯಲ್ ಏಸಿಯಾಟಿಕ ಸೊಸಾಯಿಟಿ, ಬಂಗಾಲ ಏಸಿಯಾಟಿಕ್ ಸೊಸಾಯಿಟಿ, ಬೋಂಬೆ ಏಸಿಯಾಟಿಕ್ ಸೊಸಾಯಿಟಿ ಎಂಬ ಪತ್ರಿಕೆಗಳಲ್ಲಿಯೂ, ಇಂಡಿಯನ್ ಎಂಟಿಕ್ವರಿ ಎಂಬ ಮಾಸಪತ್ರಿಕೆಯಲ್ಲಿಯೂ ಮೇಲೆ ಹೇಳಿದ ಪಂಡಿತರಿಂದಲೂ, ಬೇರೆ ಜನರಿಂದಲೂ ಹಲವು ಲೇಖ ಮೊದಲಾದವು ಪ್ರಕಟಿಸಲ್ಪಟ್ಟಿರುವವು. ಅಶೋಕನ ವಿಷಯವಾಗಿ ಆಲೋಚನೆ ಮಾಡಿದವರಲ್ಲಿ ವಿಂಸೆಂಟ್‌ಸ್ಮಿಥ್ (Vincentsmith) ಎಂಬವರು ಮುಖ್ಯರು. ಕಳೆದ ೧೦-೧೨ ವರ್ಷಗಳಿಂದ ಅವರು ಅಶೋಕಯುಗದ ಇತಿಹಾಸದ ವಿಷಯವಾಗಿ ಬೇರೆ ಬೇರೆ ಪತ್ರಿಕೆಗಳಲ್ಲಿ ಅವಿಶ್ರಾಂತವಾಗಿ ಆಲೋಚನೆ ಮಾಡುತ್ತಿರುವರು. ಇವರು ಎಲ್ಲಕ್ಕೂ ಮುಂಚೆ ಅಶೋಕನ ವಿಷಯವಾಗಿ ತಿಳಿಯಬೇಕಾದ ಸಂಗತಿಗಳನ್ನೆಲ್ಲ ಸಂಗ್ರಹಿಸಿ ಇಂಗ್ಲಿಷಿನಲ್ಲಿ ಒಂದು ಅಶೋಕನ ಜೀವನಚರಿತ್ರೆಯನ್ನು ಪ್ರಕಟಿಸಿರುವರು. ಈ ಪುಸ್ತಕವು ಹೊರಬಿದ್ದ ತರುವಾಯವೇ ಎಲ್ಲರ ದೃಷ್ಟಿಯು ಈ ವಿಷಯದ ಕಡೆಗೆ ಹತ್ತಿತು. ಐದುವರ್ಷಗಳಲ್ಲಿಯೇ ಆ ಪುಸ್ತಕದ ಎರಡನೆಯ ಆವೃತ್ತಿಯು ಹೊರಟಿತು. ಇವರು ಎಲ್ಲ ಅಶೋಕಶಾಸನಗಳ ಇಂಗ್ಲಿಷ ಭಾಷಾಂತರವನ್ನೂ ಪ್ರಕಟಿಸಿರುವರು. ವಿಂಸೆಂಟ್‌ಸ್ಮಿಥರ ಪುಸ್ತಕವು ಪ್ರಕಟವಾಗುವದಕ್ಕೆ ೨೦ ವರ್ಷಗಳ ಪೂರ್ವದಲ್ಲಿ ಸ್ವರ್ಗವಾಸಿ ಕೃಷ್ಣವಿಹಾರಿ ಸೇನ ಎಮ್. ಏ. ಎಂಬವರು ಬಂಗಾಲಿಯಲ್ಲಿ ಒಂದು ಅಶೋಕಚರಿತ್ರವನ್ನು ಬರೆದಿದ್ದರು. ಈಗ ಅದರ ೩ನೆಯ ಆವೃತ್ತಿಯು ಹೊರಟಿದೆ. ಈ ಪುಸ್ತಕವು ಪ್ರಕಟವಾದ ತರುವಾಯ ಅಶೋಕನ ಸಂಬಂಧವಾಗಿ ಹಲವು ಹೊಸ ಸಂಗತಿಗಳು ಶೋಧವಾದವು: ಮತ್ತು ಆಗುತ್ತಿರುವವು. ಇದಲ್ಲದೆ ಹಲವು ವರ್ತಮಾನಪತ್ರ, ಮಾಸಪತ್ರಗಳಲ್ಲಿ ಅಶೋಕಚರಿತ್ರದ ಸಮಾಲೋಚನೆಯು ಮಾಡಲ್ಪಟ್ಟಿರುವದು. ಇನ್ನು ಕೆಲವರು ಅಶೋಕನ ಸಂಬಂಧವಾಗಿ ನಾಟಕಗಳನ್ನೂ ಬರೆದಿರುವರು. ಆದರೆ ಇವೆಲ್ಲವುಗಳಲ್ಲಿಯೂ ಎಲ್ಲಿಯೂ ಅಶೋಕನ ಜೀವನಚರಿತ್ರವೂ, ರಾಜ್ಯಭಾರವ್ಯವಸ್ಥೆಯೂ ಬೇರೆ ಐತಿಹಾಸಿಕಸಂಗತಿಗಳೂ ವಿಸ್ತಾರವಾಗಿ ಆಲೋಚಿಸಲ್ಪಟ್ಟಿಲ್ಲ. ಆದದರಿಂದ ಸದ್ಯಕ್ಕೆ ಉಪಲಬ್ಧವಾಗಿರುವ, ಅಶೋಕನ ಜೀವನಚರಿತ್ರೆಗೆ ಸಂಬಂಧಪಟ್ಟ ಎಲ್ಲ ಸಂಗತಿಗಳನ್ನೂ, ಅಶೋಕಯುಗದ ಬೇರೆ ಐತಿಹಾಸಿಕ ವಿಷಯಗಳನ್ನೂ ಸೇರಿಸಿ **ಅಶೋಕಯುಗದ ಇತಿಹಾಸ**ರೂಪವಾದ ಈ ಗ್ರಂಥವು ಬರೆಯಲ್ಪಟ್ಟಿದೆ.

ಅನುವಾದಕನ ಎರಡು ಮಾತುಗಳು.

ಇಂತಹ ಮಹಾಗ್ರಂಥವನ್ನು ಸ್ವತಂತ್ರವಾಗಿ ಬರೆಯುವದು ನನ್ನ ಯೋಗ್ಯತೆಯ ಕೆಲಸವಲ್ಲ. ಆದರೂ ಕನ್ನಡಭಾಷೆಯಲ್ಲಿ ಇತಿಹಾಸದ ಅಭಾಸವುಳ್ಳ ಅಶೋಕಯುಗದ ಕಾದಂಬರಿಗಳು ಕೆಲವು ಮೊದಲೇ ರಚಿತವಾಗಿದ್ದರೂ ಅಶೋಕಯುಗದ ನಿಜವಾದ ಇತಿಹಾಸಾಂಶಗಳುಳ್ಳ ಪುಸ್ತಕಗಳು ವಿದ್ವಾಂಸರಾದ ಕನ್ನಡಿಗರಿಂದ ಇನ್ನೂ ಬರೆಯಲ್ಪಡದಿರುವದರಿಂದ ಅವರು ಬರೆವವರೆಗಾದರೂ ಇದರಿಂದ ಆ ಕಾಲದ ಇತಿಹಾಸಾಂಶಗಳು ಕೇವಲ ಕನ್ನಡಿಗರಿಗೆ ತಿಳಿಯಲೆಂದು ಬಂಗಾಲಿಯ ಒಂದು ಪುಸ್ತಕದ ಆಧಾರದಿಂದ ಇದನ್ನು ಬರೆದೆನು. ಮೂಲ ಗ್ರಂಥಕಾರರು ದೊಡ್ಡ ಯೋಗ್ಯತೆಯವರಿರುವದರಿಂದ ಅದರ ಭಾಷಾಂತರವು ಹೇಗಿದ್ದರೂ ಇತಿಹಾಸಾಭಿಮಾನಿಗಳ ಆದರಕ್ಕೆ ಪಾತ್ರವಾದೀತೆಂದು ನಂಬಿರುವೆನು.

ಮೋ ರಾಘಾ.
ಧಾರವಾಡ.

ಎಮ್. ಪಿ. ಪೂಜಾರ.

ಅಧ್ಯಾಯಾನುಕ್ರಮ.

ಉಪಕ್ರಮಣಿಕೆ.

ಮಗಧದ ಪ್ರಾಚೀನವರ್ಣನೆ, ಚಂದ್ರಗುಪ್ತ, ಅಲೆಕ್ಸಂದರ, ಮೌರ್ಯರಾಜ್ಯಸ್ಥಾಪನ.

೧ನೆಯ ಅಧ್ಯಾಯ.

ಬಿಂದುಸಾರ, ಸಿಂಹಲದೇಶದಲ್ಲಿಯ ಕಥೆ, ಭರತಖಂಡದಲ್ಲಿಯ ಕಥೆ, ತಿಬೇಟದಲ್ಲಿಯ ಕಥೆ, ಬ್ರಹ್ಮದೇಶದಲ್ಲಿಯ ಕಥೆ, ಕಾಶ್ಮೀರದಲ್ಲಿ ಪ್ರಚಲಿತವಾಗಿರುವ ಕಥೆ.

೨ನೆಯ ಅಧ್ಯಾಯ.

ಅಶೋಕಾವದಾನ, ಮತ್ತು ಮಹಾವಂಶ ಇವುಗಳ ವರ್ಣನೆಯಲ್ಲಿರುವ ಭೇದವು.

೩ನೆಯ ಅಧ್ಯಾಯ.

ಅಂಗದೇಶ—ಸುಭದ್ರಾಂಗೀ ರಾಣಿಯು.

೪ನೆಯ ಅಧ್ಯಾಯ.

ಅಶೋಕನ ಬಾಲ್ಯಜೀವನ—ತಕ್ಷಶಿಲೆಯಲ್ಲಿ ದಂಗೆಯನ್ನು ಶಾಂತಪಡಿಸಿದ್ದು.

೫ನೆಯ ಅಧ್ಯಾಯ.

ಉಜ್ಜಯಿನಿ.

೬ನೆಯ ಅಧ್ಯಾಯ.

ಬಿಂದುಸಾರ—ಅಶೋಕನು ರಾಜ್ಯಭಾರವನ್ನು ಸ್ವೀಕರಿಸಿದ್ದು.

೭ನೆಯ ಅಧ್ಯಾಯ.

ಅಶೋಕನ ಮೇಲೆ ಅಪವಾದವು.

೮ನೆಯ ಅಧ್ಯಾಯ.

ಕಲಿಂಗವಿಜಯ.

೯ನೆಯ ಅಧ್ಯಾಯ.

ಅಶೋಕನು ಬೌದ್ಧಧರ್ಮದ ದೀಕ್ಷೆಯನ್ನು ತೆಗೆದುಕೊಂಡದ್ದು.

೧೦ನೆಯ ಅಧ್ಯಾಯ.

೩ನೆಯ ಬೌದ್ಧಧರ್ಮ ಮಹಾಸಭೆ.

೧೧ನೆಯ ಅಧ್ಯಾಯ.

ಅಶೋಕನ ಧರ್ಮಪ್ರಚಾರ.

೧೨ನೆಯ ಅಧ್ಯಾಯ.
ಉಪಗುಪ್ತ.

೧೩ನೆಯ ಅಧ್ಯಾಯ.
ಅಶೋಕನ ತೀರ್ಥಯಾತ್ರೆ.

೧೪ನೆಯ ಅಧ್ಯಾಯ,
ಅಶೋಕನ ಧರ್ಮವಿಧಿ.

೧೫ನೆಯ ಅಧ್ಯಾಯ.
ಅಶೋಕಯುಗದಲ್ಲಿ ಭಾಷೆಯೂ, ವಾಙ್ಮಯವೂ.

೧೬ನೆಯ ಅಧ್ಯಾಯ.
ಅಶೋಕನ ರಾಜ್ಯಶಾಸನ ಪದ್ಧತಿ.

೧೭ನೆಯ ಅಧ್ಯಾಯ.
ಅಶೋಕನ ವಿಷಯವಾಗಿ ಬೇರೆ ಬೇರೆ ಕಥೆಗಳು.

೧೮ನೆಯ ಅಧ್ಯಾಯ.
ಉಪಸಂಹಾರ.
ಪರಿಶಿಷ್ಟ



ಅಶೋಕ ಅಥವಾ ಪ್ರಿಯದರ್ಶಿ.

ಉಪಕ್ರಮಣಿಕೆ.

ಎರಡುವರೆ ಸಾವಿರ ವರ್ಷಗಳ ಪೂರ್ವದಲ್ಲಿ ಅವತರಿಸಿದ ಒಬ್ಬ ಮಹಾಪುರುಷನ ಅಲೌಕಿಕವಾದ ಮಹಿಮೆಯಿಂದ ಭರತಖಂಡದ ಪ್ರಾಚೀನ-ಇತಿಹಾಸವು ಗೌರವವುಳ್ಳದ್ದೂ, ಪುಣ್ಯಕರವೂ ಆಗಿರುವದು. ಯಾವನು ಅರಸುಮಗನಾಗಿದ್ದರೂ ವಿರಕ್ತನಾಗಿ ಸನ್ಯಾಸವನ್ನು ಸ್ವೀಕರಿಸಿದನೋ, ಯಾವನು ತಾರುಣ್ಯಭರದಲ್ಲಿ ಹೊಸದಾಗಿ ಹುಟ್ಟಿದ ಮಗನನ್ನೂ, ಪ್ರೀತಿಯ ಹೆಂಡತಿಯನ್ನೂ, ರಾಜೈಶ್ವರ್ಯವನ್ನೂ ಬಿಟ್ಟು ಕೊಟ್ಟು ಭಿಕ್ಷಾವೃತ್ತಿಯನ್ನವಲಂಬಿಸಿದನೋ, ಯಾವನು ಸಾವು ಮುಪ್ಪುಗಳಿಂದ ಬಳಲುತ್ತಿರುವ ಸಂಸಾರದಲ್ಲಿ ಶಾಂತಿಮಯ ವೈರಾಗ್ಯವನ್ನುಂಟುಮಾಡುವ ನಿರ್ವಾಣವನ್ನು ಮನೆಮನೆಗೆ ಹೋಗಿ ಸಾರಿದನೋ. ಈಗಲೂ ಪೃಥ್ವಿಯ ಮೇಲಿನ ಮೂರರಲ್ಲೊಂದು ಪಾಲು ಜನವು ಯಾವಾತನನ್ನು ಭಕ್ತಿಭಾವದಿಂದ ಪೂಜಿಸುತ್ತಿರುವದೋ ಆ ಪುಣ್ಯಕೀರ್ತಿಯಾದ ಗೌತಮಬುದ್ಧದೇವನ ಪಾದಸ್ಪರ್ಶದಿಂದ ಧರ್ಮಭೂಮಿಯಾದ ಭಾರತವರ್ಷವು ಪುಣ್ಯಕ್ಷೇತ್ರವಾಗಿರುವದು.

ವೇದಕಾಲದ ಹಿಂಸಾಬಹುಲವಾದ ಧರ್ಮದ ಮೇಲೆ ಔದಾಸೀನ್ಯವು ಹುಟ್ಟಲು ಹಿಂಸೆಯಿಲ್ಲದ ಒಣ ಕರ್ಮಕಾಂಡವು ಯಾವಾಗ ಆರಂಭವಾಯಿತೋ, ಆಗ ಎಲ್ಲ ಮಾನವಸಮಾಜದ ಕಲ್ಯಾಣಕ್ಕೋಸ್ಕರ ಶಾಕ್ಯಸಿಂಹನು ನಿಷ್ಕಾಮಕರ್ಮಮೂಲವಾದ ಧರ್ಮವನ್ನು ಪ್ರಸಾರಗೊಳಿಸಿದನು. ಈ ಹೊಸಧರ್ಮದ ಉದಯವಾಗಲು ಭರತಖಂಡದ ಪ್ರಾಚೀನ ಧರ್ಮವೂ, ಸಮಾಜವೂ, ಪರಿಸ್ಥಿತಿಯೂ ಸಂಪೂರ್ಣವಾಗಿ ಬದಲಾವಣೆಯನ್ನು ಹೊಂದಿದವು. ಈ ಕಾಲಕ್ಕೇ ಇತಿಹಾಸದಲ್ಲಿ ಬೌದ್ಧಯುಗವೆಂದು ಹೆಸರು. ಬುದ್ಧದೇವನು ದೇಹವಿಟ್ಟಬಳಿಕ ಸುಮಾರು ಇನ್ನೂರು ವರ್ಷಗಳಾದ ತರುವಾಯ ಅಶೋಕಮಹಾರಾಜ ಚಕ್ರವರ್ತಿಯು ಉದಯಹೊಂದಿದನು. ಅತನ ಶುಭ್ರವಾದ ಕೀರ್ತಿಯೂ, ಅತಿಶಯವಾದ ಧರ್ಮಾನುರಾಗವೂ, ಅಪ್ರತಿಹತವಾದ ರಾಜಶಕ್ತಿಯೂ, ಪ್ರಾಣಿಮಾತ್ರದ ಮೇಲಿನ ದಯೆಯೂ ಆ ಬೌದ್ಧಯುಗದ ಇತಿಹಾಸವನ್ನು ಉಜ್ವಲವಾಗಿ ಮಾಡಿರುವವು; ಪ್ರತಿಭಾಶಾಲಿಯೂ, ದಯಾಮಯನೂ ಆದ ಆ ಮಹಾತ್ಮನ ಪವಿತ್ರವಾದ ಹೆಸರನ್ನು ಪ್ರಾಚೀನೇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬೇಕಾಗಿರುವದು; ಯುಗಯುಗಾಂತರಗಳು ಗತಿಸಿಹೋಗಿದ್ದರೂ ಅತನ ಕೀರ್ತಿಚಿಹ್ನಗಳು ಇದುವರೆಗೆ ಎರಡುಸಾವಿರ ವರ್ಷಗಳ ಪೂರ್ವದ ಇತಿಹಾಸವನ್ನು ದೇಶದೇಶಗಳಲ್ಲಿ ಜನದ ಕಣ್ಣಿದುರಿಗೆ ತಂದು ನಿಲ್ಲಿಸುತ್ತಿರುವವು. ಆ "ದೇವಾನಾಂ

ಪ್ರಿಯಃ ಪ್ರಿಯದರ್ಶಿ" ಎಂದೆನಿಸಿಕೊಳ್ಳುವ ಅಶೋಕಚಕ್ರವರ್ತಿಯ ಜೀವನಚರಿತ್ರವನ್ನು ಹೇಳುವದಕ್ಕೆ ಮುಂಚೆ ಒಮ್ಮೆ ನಾವು ಮಗಧದೇಶದ ಪ್ರಾಚೀನ-ಇತಿಹಾಸವನ್ನಷ್ಟು ಅವಲೋಕಿಸುವ.

ಗೌತಮಬುದ್ಧನು ಬದುಕಿರುವಾಗ ಶಿಶುನಾಗವಂಶದ ಬಿಂಬಸಾರನೆಂಬ ರಾಜನು ಮಗಧದೇಶವನ್ನಾಳುತ್ತಿದ್ದನು. ಆಗ ರಾಜಗೃಹವೆಂಬ ಪಟ್ಟಣವು ಆ ದೇಶದ ರಾಜಧಾನಿಯಾಗಿತ್ತು. ಮಗಧದೇಶವನ್ನಾಳಿಹೋದ ಜರಾಸಂಧನಿಗೆ ಗಿರಿವ್ರಜಪುರವು‡ ರಾಜಧಾನಿಯಾಗಿತ್ತೆಂದು ಭಾರತದಲ್ಲಿ ಉಲ್ಲೇಖವುಂಟು. ಈ ಗಿರಿವ್ರಜಪುರಕ್ಕೇ ಈಗ ಕುಶಾಗಾರಪುರ, ಇಲ್ಲವೆ ಪ್ರಾಚೀನ ರಾಜಗೃಹವೆಂದು ಕರೆಯುತ್ತಾರೆ. ಪ್ರಸಿದ್ಧ ಶಿಲ್ಪಿಯಾದ* ಮಹಾಗೋವಿಂದನೆಂಬವನು ಗಿರಿದುರ್ಗವುಳ್ಳ ಈ ಪಟ್ಟಣವನ್ನು ಕಟ್ಟಿದ್ದನು. ಕ್ರಿ. ಪೂ. ೬ನೆಯ ಶತಮಾನದಲ್ಲಿ ಬಿಂಬಸಾರನು ಈ ನಗರವನ್ನು ಬಿಟ್ಟು ಸಮೀಪದ ಪರ್ವತದ ಕೆಳಗಡೆಯಲ್ಲಿ ನವರಾಜಗೃಹವೆಂಬ ಹೊಸರಾಜಧಾನಿಯನ್ನು ಕಟ್ಟಿಸಿದನು. ಮಗಧವು ಬಹು ಪ್ರಾಚೀನ ದೇಶವು. †ಋಗ್ವೇದದಲ್ಲಿ ಉಲ್ಲೇಖಿಸಿರುವ ಕೀಕಟವೆಂಬದು ಮಗಧದ ಮೊದಲಿನ ಹೆಸರೆಂದು ಹಲವರು ಹೇಳುತ್ತಾರೆ. ಮಗಧದ ರಾಜಧಾನಿಯು ಗಿರಿವ್ರಜಪುರವೆಂದು ರಾಮಾಯಣದಲ್ಲಿಯೂ. ಮಹಾಭಾರತದಲ್ಲಿಯೂ ಹೇಳಿದೆ. ಬ್ರಹ್ಮವಂಶದಲ್ಲಿ ಹುಟ್ಟಿದ ಮಹಾತ್ಮನಾದ ಕುಶನಿಗೆ ವಿದರ್ಭದೇಶದ ಹೆಂಡತಿಯ ಹೊಟ್ಟೆಯಲ್ಲಿ ನಾಲ್ವರು ಮಕ್ಕಳು ಹುಟ್ಟಿದರು. ಅವರಲ್ಲಿ ವಸು ಎಂಬವನು ಎಲ್ಲರಿಗಿಂತ ಚಿಕ್ಕವನು. ಈ ವಸುವೇ ಗಿರಿವ್ರಜಪುರವನ್ನು ಸ್ಥಾಪಿಸಿ ಬಹು ಪರಾಕ್ರಮದಿಂದ ರಾಜ್ಯವಾಳಿದನು. ರಾಮಾಯಣದಲ್ಲಿ ಹೇಳಿದುದೇನೆಂದರೆ:—" ಈ ಎದುರಿಗಿರುವ ಭೂಪ್ರದೇಶವು§ ಆ ಮಹಾತ್ಮನಾದ ವಸುವಿನ ರಾಜ್ಯವು. ಮುಂದೆ ಕಾಣುವ ಐದು ಪರ್ವತಗಳು ಇದರ ನಾಲ್ಕೂ ದಿಕ್ಕಿಗೆ ಶೋಭಿಸುತ್ತಿರುವವು. ಮಗಧದೇಶದಲ್ಲಿ ಹರಿದ ಸುಮಾಗಧಿ ಎಂಬ ಹೊಳೆಯು ಈ ಪರ್ವತಗಳ ನಡುವೆ ಮಾಲಾಕಾರವಾಗಿ ಕಂಗೊಳಿಸುತ್ತಿರುವದು." (ರಾಮಾಯಣ ಆದಿ. ೩೨ನೆಯ ಸರ್ಗ.)

ಇಂದ್ರಪ್ರಸ್ಥದಲ್ಲಿ ಧರ್ಮರಾಯನು ಮಾಡಿದ ರಾಜಸೂಯಯಜ್ಞದ ಆರಂಭದಲ್ಲಿ ಮಗಧಾಧಿಪತಿಯಾದ ಜರಾಸಂಧನ ವಧಕ್ಕಾಗಿಯೂ. ಅವನು ಸೆರೆಹಾಕಿದ ಅರ

---

‡ ಮಹಾಭಾರತ, ಸಭಾಪರ್ವ. ಇದಕ್ಕೆ ಅಂದಾಜು ಶ್ಲೋಕಗಳು. ರಾಮಾಯಣ. ಆದಿಕಾಂಡ. ೩೨ನೆಯ ಸರ್ಗ. ೫ನೆಯ ತಪ್ಪಿಯ. ಗಿರಿವ್ರಜಪುರವಾಸಿಗಳಾದ ಕೆಲವು ಯಾತ್ರಿಕರಿಗೆ ಸಾಹೇಬರು ಗಯಾದಿಂದ ಈಶಾನ್ಯಕ್ಕೆ ೩೬ ಮೈಲುಗಳ ದೂರದ ಈಗಿನ ಗಿರ್ಯೆಕ್ (Giryek) ಎಂಬದು ಪೂರ್ವಕಾಲದ ಗಿರಿವ್ರಜಪುರವೆಂದು ನಿರ್ಣಯಿಸಿರುವರು.

* ಮಯಾನವಸ್ತ್ರ ಎಂಬ ಪಾಲಿಗ್ರಂಥದ ಟೀಕೆಯಲ್ಲಿ ನಿರ್ದೇಶವಾಗಿದೆ.

† ಋಗ್ವೇದ, ೩ನೆಯ ಮಂಡಲ.

§ ಮಗಧರಾಜ್ಯವನ್ನು.

ಸರ ಬಿಡುಗಡೆಗಾಗಿಯೂ ಶ್ರೀಕೃಷ್ಣನು ಭೀಮಾರ್ಜುನರೊಡನೆ ಮಗಧದ ರಾಜಧಾನಿಯಾದ ಗಿರಿವ್ರಜಪುರಕ್ಕೆ ಹೋಗಿದ್ದನು. ಆಗ ಶ್ರೀಕೃಷ್ಣನು ದಾರಿಯುಲ್ಲಿ ಹೋಗುತ್ತ ಮಗಧರಾಜ್ಯವನ್ನು ವರ್ಣಿಸಿದಂತೆ ಭಾರತದಲ್ಲಿ ಮನೋಹರವಾದ ವರ್ಣನೆ ಯುಂಟು. ಅದನ್ನು ಇಲ್ಲಿ ಕೊಡುವೆವು:— "ಶ್ರೀಕೃಷ್ಣನೂ ಭೀಮಾರ್ಜುನರೂ ಗಂಗಾಶೋಣಗಳನ್ನತಿಕ್ರಮಿಸಿ ಪೂರ್ವದಿಕ್ಕಿಗೆ ಮಗಧವನ್ನು ಕುರಿತು ನಡೆದರು. ಅವರು ಕೆಲವು ವೇಳೆಯಾದ ಬಳಿಕ ಗೋಧನ ಪೂರ್ಣವಾಗಿಯೂ, ಜಲಸಮೃದ್ಧವಾಗಿಯೂ, ನಾನಾವೃಕ್ಷಗಳಿಂದ ಮನೋಹರವಾಗಿಯೂ ಇರುವ ಗೋರಥಪರ್ವತವನ್ನು ಹತ್ತಲು ಮುಂದೆ ಮಗಧಪುರವು ಅವರ ಕಣ್ಣಿಗೆ ಬಿತ್ತು. ಆಗ ಶ್ರೀಕೃಷ್ಣನು—"ಎಲೈ ಪಾರ್ಥನೆ, ಇದು ನಿರಂತರ ಜಲಸಮೃದ್ಧವಾಗಿಯೂ, ಮನೋಹರವಾದ ಉಪ್ಪರಿಗೆಗಳಿಂದ ಕಂಗೊಳಿಸುವದಾಗಿಯೂ, ರೋಗೋಪದ್ರವಶೂನ್ಯವಾಗಿಯೂ ಇರುವ ಮಗಧರಾಜ್ಯವು. ವೈಹಾರ, ವರಾಹ, ವೃಷಭ, ಋಷಿಗಿರಿ, ಚೈತ್ಯಕ ಎಂಬ ಐದು ಪರ್ವತಗಳು ಒಂದಕ್ಕೊಂದು ಸೇರಿಕೊಂಡು ಈ ಗಿರಿವ್ರಜಪುರವನ್ನು ಕಾಪಾಡುತ್ತಿರುವವೋ ಎಂಬಂತೆ ಕಾಣುವದು. ಆ ಗಿರಿಗಳು ಪುಷ್ಪಿತವಾದ, ಕಾಮಿಜನಪ್ರಿಯವಾದ ಲೋಧ್ರ ವೃಕ್ಷರಾಜಿಯಿಂದ ಮುಚ್ಚಿಹೋಗಿರುವವು. ಇದೇ ಸ್ಥಾನದಲ್ಲಿ ಮಹಾತ್ಮನಾದ ಗೌತಮನೆಂಬ ಋಷಿಯು ಶೂದ್ರ ಸ್ತ್ರೀಯಾದ ಔಶೀನರಿಯುಲ್ಲಿ ಕಕ್ಷೀವ ಮೊದಲಾದ ಮಕ್ಕಳನ್ನು ಹಡೆದನು. ಎಲೈ ಅರ್ಜುನನೇ, ಗೌತಮನ ಆಶ್ರಮದ ಸುತ್ತಲು ಬೆಳೆದ ಅಶ್ವತ್ಥ ಲೋಧ್ರವೃಕ್ಷಗಳ ವನರಾಜಿಯನ್ನು ನೋಡು. ಸ್ವಸ್ತಿಕನ, ಮತ್ತು ಮಣಿನಾಗನ ಆಲಯಗಳು ಇಲ್ಲಿ ಇರುವವು. ಮಗಧ ರಾಜ್ಯದ ಮೇಲೆ ತಪ್ಪದೆ ಮಳೆಗರೆಯುವಂತೆ ಮನುವು ಅನುಗ್ರಹಮಾಡಿರುವನು. ಮತ್ತು ಚಂಡಕೌಶಿಕ, ಮಣಿಮಂತರು ಜರಾಸಂಧನಲ್ಲಿ ಅನುಗ್ರಹಮಾಡಿರುವರು. ಈ ಪರ್ವತಗಳಲ್ಲಿ ಯತಿಗಳು, ಸಿದ್ಧರು, ಮುನಿಗಳು, ನಾಗರು, ಗಂಧರ್ವರು ಇವರ ವಾಸಸ್ಥಳಗಳಿರುವವು. ಶತ್ರುಗಳಿಗೆ ಮುತ್ತಲಿಕ್ಕಾಗದ ಈ ಪಟ್ಟಣಕ್ಕೆ ಒಡೆಯನಾಗಿ ಜರಾಸಂಧನು ತನ್ನ ಕಾರ್ಯಸಿದ್ಧಿಯ ವಿಷಯದಲ್ಲಿ ಅಭಿಮಾನಪಡುವನು. (ಮಹಾಭಾರತ, ಸಭಾಪರ್ವ ೨೦-೨೧.)

ಕ್ರಿ. ಶ. ೫ನೆಯ ಶತಮಾನದಲ್ಲಿ ಸುಪ್ರಸಿದ್ಧ ಚೀನಪ್ರವಾಸಿಯಾದ ಫಾಹಿಯಾನನು ಭರತಖಂಡಕ್ಕೆ ಬಂದಿದ್ದನು. ಅವನು ತಾನು ಬರೆದ ಭರತಖಂಡದ ವೃತ್ತಾಂತದಲ್ಲಿ ಪ್ರಾಚೀನ ಗಿರಿವ್ರಜಪುರದಿಂದ ಉತ್ತರಕ್ಕೆ ೬ ಮೈಲಿನ ಮೇಲೆ ನೂತನ-ರಾಜಗೃಹಪುರವಿರುವದೆಂದೂ, ಭಾರತದಲ್ಲಿ ಹೇಳಿದ ೫ ಪರ್ವತಗಳು ಪ್ರಾಕಾರದಂತೆ ಈ ಪಟ್ಟಣವನ್ನು ಸುತ್ತುಗಟ್ಟಿರುವವೆಂದೂ, ವರ್ಣಿಸಿರುವನು. ಕ್ರಿ. ಶ. ೭ನೆಯ ಶತಕದಲ್ಲಿ ಇನ್ನೊಬ್ಬ ಚೀನಪ್ರವಾಸಿಯಾದ ಹುಯೆನ್‌ತ್ಸಾಂಗನು ಭರತಖಂಡಕ್ಕೆ ಬಂದಾಗ

ಹೊಸರಾಜಗೃಹದ ಒಳಕೋಟೆಯು ಮಾತ್ರ ಇನ್ನೂ ಇತ್ತು. ಹೊರಗಿನ ಕೋಟೆಯು ಬಿದ್ದುಹೋಗಿತ್ತು. ಈಗ ರಾಜಗೃಹಕ್ಕೆ ರಾಜಗಿರ ಎಂದು ಹೆಸರುಂಟು. ಅಲ್ಲಿ ಒಂದು ಹಾಳಾದ ಕೋಟೆಯು ಇರುವದು. ರಾಜಗಿರವು ಈಗ ಗಯಾಕ್ಕೆ ಸೇರಿರುವದು. ಮೇಲೆ ಹೇಳಿದ ೫ ಪರ್ವತಗಳಿಗೆ ಈಗ ಕ್ರಮವಾಗಿ ವೈಭಾರಗಿರಿ, ವಿಪುಲಗಿರಿ, ರತ್ನಗಿರಿ, ಉದಯಗಿರಿ, ಶೋಣಗಿರಿ ಎಂಬ ಹೆಸರುಗಳು ಬಂದಿರುವವು.

ಇಂಗ್ಲಿಷ-ಐತಿಹಾಸಿಕರು *ತುರಾನಿಯನ್ ಎಂದು ಕರೆಯುವ ವೃಜಿ ಎಂಬ ಒಂದು ಜಾತಿಯ ಜನರು ಹಿಮಾಲಯದಿಂದ ಇಳಿದು ಹಿಂದುಸ್ತಾನವನ್ನು ಸೇರಿ ಕೊಳ್ಳೆ ಹೊಡೆಯುತ್ತಿದ್ದರೆಂದೂ, ಅವರು ಉತ್ತರಬಿಹಾರವನ್ನಾಕ್ರಮಿಸಿ ವೈಶಾಲಿಯಲ್ಲಿ ಪಾಳಯ ಹಾಕಿಕೊಂಡು ನಿಂತಿದ್ದರೆಂದೂ, ಈ ಹೊಸಜನರಿಂದ ಮಗಧಸಾಮ್ರಾಜ್ಯವನ್ನು ಕಾಪಾಡಿಕೊಳ್ಳುವದಕ್ಕಾಗಿ ಅಲ್ಲಿಯ ಅರಸನಾದ ಅಜಾತಶತ್ರುವು ಗಂಗಾನದಿಯ ದಂಡೆಯಮೇಲೆ ಪಾಟಲಿಗ್ರಾಮದಲ್ಲಿ ಕ್ರಿ. ಪೂ. ೫೪೬ ರಲ್ಲಿ ಒಂದು ಕೋಟೆಯನ್ನು ಕಟ್ಟಿಸಿದ್ದನೆಂದೂ ಪ್ರವಾದವುಂಟು. ಮುಂದೆ ಈ ಅಜಾತಶತ್ರುವಿನ ಮೊಮ್ಮಗನಾದ ಉದಯಾಶ್ವನು + ಅಲ್ಲಿ ಒಂದು ಹೊಸಪಟ್ಟಣವನ್ನು ಕಟ್ಟಿಸಿ ಅಲ್ಲಿಗೆ ರಾಜಧಾನಿಯನ್ನು ಒಯ್ದನೆಂದು ವಾಯುಪುರಾಣದಲ್ಲಿ ಹೇಳಿದೆ. ಮಹಾಪರಿನಿರ್ವಾಣಸೂತ್ರವೆಂಬ ಪ್ರಸಿದ್ಧ ಪಾಲಿಗ್ರಂಥದಲ್ಲಿ ಪಾಟಲಿಪುತ್ರದ ಮೊದಲಿನ ಹೆಸರು ಪಾಟಲಿಗ್ರಾಮವೆಂದು ಹೇಳಿದೆ. ಬುದ್ಧದೇವನು ತನ್ನ ಪ್ರಿಯ ಶಿಷ್ಯನಾದ ಆನಂದಸೊಡನೆ ಪಾಟಲಿಗ್ರಾಮದಮೇಲಿಂದ ಹಾಯ್ದು ಹೋಗುವಾಗ ಆ ನಗರದ ವಿಷಯವಾಗಿ ಹೇಳಿದ ಭವಿಷ್ಯವಾಣಿಯು ಅದೇ ಗ್ರಂಥದಲ್ಲಿ ಸವಿಸ್ತಾರವಾಗಿ ವರ್ಣಿತವಾಗಿದೆ. ಅದರ ಕೆಲವು ಭಾಗವನ್ನು ಇಲ್ಲಿ ಕೊಟ್ಟಿದೆ:—ಬುದ್ಧದೇವನು ತನ್ನ ಅಲೌಕಿಕವಾದ ದಿವ್ಯದೃಷ್ಟಿಯಿಂದ ಪಾಟಲಿಗ್ರಾಮದಲ್ಲಿ ಸಾವಿರಾರು ದೇವತೆಗಳು ವಾಸಮಾಡುವದನ್ನು ಕಂಡನು. ಮುಂದೆ ಆತನು ರಾತ್ರಿಯ ಕೊನೆಯಭಾಗದಲ್ಲಿ ಎದ್ದು ಶಿಷ್ಯನಾದ ಆನಂದನಿಗೆ ಪ್ರಶ್ನೆಮಾಡಿದನು—ಹೇ! ಆನಂದ, ಈ ಪಾಟಲಿಗ್ರಾಮಕ್ಕೆ ಯಾರು ಕೋಟೆಯನ್ನು ಕಟ್ಟಿಸುತ್ತಿರುವರು? ಆನಂದ—ಭಗವನ್, ಮಗಧರಾಜನ ಸುನೀಧ, ವರ್ಷಕಾರ ಎಂಬ ಇಬ್ಬರು ಮಂತ್ರಿಗಳು ವೃಜಿಗಳಿಂದ ದೇಶವನ್ನು ರಕ್ಷಿಸುವದಕ್ಕಾಗಿ ಈ ಕೋಟೆಯನ್ನು ಕಟ್ಟಿಸುತ್ತಿರುವರು; ಬಳಿಕ ಬುದ್ಧದೇವನು 'ಆ ಮಂತ್ರಿಗಳು ೩೩ ದೇವಗಣಗಳೊಡನೆ ಆಲೋಚಿಸಿ ಈ ಕೋಟೆಯನ್ನು ಕಟ್ಟಿಸುತ್ತಿರುವರು. ಈ ಸ್ಥಳಕ್ಕೆ ಕಾಲಕ್ರಮದಿಂದ ಪಾಟಲಿಪುತ್ರವೆಂಬ ಹೆಸರು ಬರುವದು. ಇದು ನಾಗರಿಕತೆಯಲ್ಲಿಯೂ ವ್ಯಾಪಾರದಲ್ಲಿಯೂ ಬಹಳ ಪ್ರಸಿದ್ಧಿಯನ್ನು ಹೊಂದುವದು. ಅಗ್ನಿ, ಜಲ, ಗೃಹಕಲಹ ಈ ಮೂರು

* R. C. Dutt's Ancient Civillsation vol II p 221

+ ಮಹಾವಂಶದಲ್ಲಿ ಉದಯಾಶ್ವನು ಮಗಧರಾಜನಾದ ಅಜಾತಶತ್ರುವಿನ ಮಗನೆಂದು ಹೇಳಿದೆ.

ಕಾರಣಗಳಿಂದ ಪಾಟಲಿಪುತ್ರವು ಮುಂದೆ ನಾಶಹೊಂದುವದು' ಎಂದು ನುಡಿದನು. (ಮಹಾಪರಿನಿವ್ವಾಣಸೂತ್ತ-ಗಿನೆಯು ಭಾಣವಾರ.)

ಮೌರ್ಯವಂಶದ ಅರಸರ ಕಾಲದಲ್ಲಿ ಭಾಗೀರಥೀ-ಶೋಣಗಳ ಸಂಗಮದ ಹತ್ತರ ಕಂಗೊಳಿಸುವ ಪಾಟಲಿಪುತ್ರವು ಮಗಧದೇಶದ ರಾಜಧಾನಿಯಾಗಿತ್ತು. ಪಾಟಲಿಪುತ್ರವಿದ್ದ ಸ್ಥಳವು ಈಗ ಪಾಟನಾ, ಬಂಕಿಪುರ ಇವುಗಳಲ್ಲಿ ಸೇರಿರುವದು. ಈ ಪಾಟಲಿಪುತ್ರಕ್ಕೆ ಗ್ರೀಕರು ಪಾಲಿಬೊಥ್ರಾ ಎಂದು ಕರೆಯುತ್ತಿದ್ದರು. ಗ್ರೀಕವೀರನಾದ ಸೆಲ್ಯುಕಸ ನಿಕೇತರನ ಕಾಲದಲ್ಲಿ (ಕ್ರಿ. ಪೂ. ೩೦೫.) ಪಾಟಲಿಪುತ್ರದ ಸುತ್ತಳತೆಯು ೨೫ ಮೈಲುಗಳಿತ್ತೆಂದು ಗ್ರೀಕ ಐತಿಹಾಸಿಕರು ಹೇಳಿರುವರು. ಕ್ರಿ. ಶ. ೭ನೆಯ ಶತಮಾನದಿಂದ ಇದು ಕಡಿಮೆಯಾಗಿ ೧೨ ಮೈಲುಗಳಾಗಿತ್ತು. ಉತ್ತರಕ್ಕೆ ಭಾಗೀರಥಿಯು, ದಕ್ಷಿಣಕ್ಕೆ ವಿಂಧ್ಯಪರ್ವತವು, ಪೂರ್ವಕ್ಕೆ ಚಂಪಾವತೀನದಿಯು, ಪಶ್ಚಿಮಕ್ಕೆ ಹಿರಣ್ಯವತಿ, ಇಲ್ಲವೆ ಹಿರಣ್ಯವಾಹನದಿಯು ಈ ಮೇರೆಗಳ ನಡುವಿರುವ ದೇಶವು ಮಗಧರಾಜ್ಯವೆಂದು ಹೇಳಲ್ಪಡುತ್ತಿತ್ತು. ಇದರ ವ್ಯಾಸವು ೧೫೦೦ ಕ್ರೋಶಗಳು; ೮೦೦೦ ಗ್ರಾಮಗಳು ಇಲ್ಲಿ ಇದ್ದವು. ತಿಬೇಟದ ಪ್ರಾಚೀನ ಗ್ರಂಥಕಾರರು ಸಂಪೂರ್ಣ ಭರತಖಂಡಕ್ಕೆ ಮಗಧ ಅಂದರೆ ಪುಣ್ಯವಂತವಾದದ್ದು ಇಲ್ಲವೆ ಪೂಜ್ಯರ ವಾಸಭೂಮಿ ಎಂದು ಕರೆದಿರುವರು. ಬೌದ್ಧಯುಗದಲ್ಲಿಯೂ, ಅದರ ಮುಂದಿನ ಕಾಲದಲ್ಲಿಯೂ ಮಗಧದೇಶವು ಭರತಖಂಡದಲ್ಲಿ ಮುಖ್ಯವಾದ ಮತ್ತು ಸಮೃದ್ಧಿಯುಳ್ಳ ದೇಶವಾಗಿತ್ತು. ಇದೇ ಮಗಧದಲ್ಲಿ ಹರಿದ ನೈರಂಜನಾ ನದಿಯ ತೀರದಲ್ಲಿದ್ದ ಬೋಧಿವೃಕ್ಷದ ಬುಡದಲ್ಲಿ ಗೌತಮನು ಬುದ್ಧತ್ವವನ್ನು ಪಡೆದನು. ಇದೇ ಮಗಧದಲ್ಲಿರುವ ಕುಕ್ಕುಟಪಾದ ಪರ್ವತದಮೇಲೆ ಕುಳಿತುಕೊಂಡು ಶಾಕ್ಯಮುನಿಯು ಹಲವುಸಾರೆ ತನ್ನ ಅಮೃತಸಮವಾದ ಉಪದೇಶವನ್ನು ಮಾಡಿದನು. ಇದೇ ಮಗಧದೇಶದ ರಾಜಗೃಹಪುರದಲ್ಲಿ ಬುದ್ಧದೇವನು ಬಿಂಬಿಸಾರರಾಜನಿಗೆ ತನ್ನ ಹೊಸಧರ್ಮದ ದೀಕ್ಷೆಯನ್ನು ಕೊಟ್ಟನು. ಈಗಲೂ ಬುದ್ಧಗಯೆ, ಕುಕ್ಕುಟಪಾದ, ರಾಜಗೃಹ, ಕುಶಾಗಾರಪುರ, ನಾಲಂದ, ಇಂದ್ರಶೀಲಗುಹೆ, ಕಪೋತಿಕ ವಿಹಾರ ಮೊದಲಾದ ಸ್ಥಾನಗಳು ಪವಿತ್ರತೀರ್ಥಗಳೆನಿಸಿ ದೇಶಪರದೇಶಗಳ ಜನರ ಭಕ್ತಿಗೆ ಪಾತ್ರವಾಗಿರುವವು. ಮಗಧರಾಜ್ಯವು ಹಾಳಾದ ಒಳಿಕ ಆಗಿಹೋದ ಗ್ರಂಥಕಾರರು ಮಗಧಸಾಮ್ರಾಜ್ಯವನ್ನು ಬಹಳಮಟ್ಟಿಗೆ ಹೊಗಳಿರುವರು. ಕಾಲಿದಾಸನು ರಘುವಂಶದಲ್ಲಿ ಇಂದುಮತೀ-ಸ್ವಯಂವರ-ಸಭಾ-ವರ್ಣನ-ಪ್ರಸಂಗದಲ್ಲಿ ಎಲ್ಲಕ್ಕೂ ಮೊದಲು ಮಗಧರಾಜನನ್ನೇ ಉಲ್ಲೇಖಿಸಿರುವನು.

ಕುಶನ ಮಗನಾದ ವಸುವು ಗಿರಿವ್ರಜಪುರವನ್ನು ಸ್ಥಾಪಿಸಿದನೆಂದು ಹಿಂದೆ ಹೇಳಿದೆನಷ್ಟೇ. ಇವನೇ ಅಲ್ಲಿಯ ಮೊದಲನೆಯ ರಾಜನೆಂದು ರಾಮಾಯಣದಲ್ಲಿ ಹೇಳಿದೆ.

ಆದರೆ ಇವನ ತರುವಾಯ ಯಾವ ಯಾವ ರಾಜವಂಶಗಳು ಗಿರಿವ್ರಜಪುರದಲ್ಲಿ ಆಳಿದವೆಂಬ ವಿಷಯವು ಎಲ್ಲಿಯೂ ಬರೆಯಲ್ಪಟ್ಟಿಲ್ಲ. ಮಹಾಭಾರತದಲ್ಲಿಯೂ, ವಿಷ್ಣುಪುರಾಣದಲ್ಲಿಯೂ ಜರಾಸಂಧನ ತಂದೆಯಾದ ಬೃಹದ್ರಥನ ಉಲ್ಲೇಖವುಂಟು. ಆತನ ಮುಂದೆ ಬೃಹದ್ರಥನ ವಂಶದ ೨೮ ಜನ ರಾಜರು ಮಗಧದಲ್ಲಿ ಆಳಿದ ಬಳಿಕ ಕೊನೆಯವನಾದ ರಿಪುಂಜಯನೆಂಬವನನ್ನು ಅವನ ಮಂತ್ರಿಯಾದ ಸುನೀಕನೆಂಬವನು ಕೊಂದು ತನ್ನ ಮಗನಾದ ಪ್ರದ್ಯೋತನಿಗೆ ಪಟ್ಟಗಟ್ಟಿದನು. ಪ್ರದ್ಯೋತವಂಶದ ಐವರು ಮಗಧ ರಾಜ್ಯವನ್ನಾಳಿದರು. ಇವರ ಆಳಿಕೆಯು ಬಹುತರ ಕ್ರಿ. ಪೂ. ೯೫೦ ರಲ್ಲಿ ಆರಂಭವಾಗುತ್ತದೆ. ಇವರು ಸುಮಾರು ೧೫೮ ವರ್ಷ ಆಳಿದರೆಂದು ಅನುಮಾನ ಮಾಡುತ್ತಾರೆ. ಪ್ರದ್ಯೋತವಂಶವಾದ ಬಳಿಕ * ಶಿಶುನಾಗವಂಶದ ೧೦ ಜನ ಅರಸರು ಕ್ರಮವಾಗಿ ಆಳಿದರು. ಇವರ ಆಳಿಕೆಯ ಆರಂಭವು ಕ್ರಿ. ಪೂ. ೭೮೨ ರಲ್ಲಿ ಆಗುವದು. ಶಿಶುನಾಗ ವಂಶದ ಈ ೧೦ ಜನ ರಾಜರು ೩೩೨ ವರ್ಷ ಆಳಿದರು. ಬುದ್ಧದೇವನ, ಮತ್ತು ಜೈನ ತೀರ್ಥಂಕರನಾದ ಮಹಾವೀರಸ್ವಾಮಿಯ ಸಮಕಾಲಿಕನೂ, ನೂತನರಾಜಗೃಹದ ಸ್ಥಾಪಕನೂ ಆದ ಬಿಂಬಿಸಾರರಾಜನು ಈ ಶಿಶುನಾಗವಂಶದಲ್ಲಿಯೇ ಹುಟ್ಟಿದವನು. ಇವನೇ ತನ್ನ ಆಳಿಕೆಯಲ್ಲಿ ಅಂಗರಾಜ್ಯವನ್ನು ಗೆದ್ದು ಮಗಧರಾಜ್ಯಕ್ಕೆ ಸೇರಿಸಿದನು. ಈ ವಂಶದ ಕೊನೆಯ ಅರಸನಾದ ಮಹಾನಂದಿಯೆಂಬವನು ಶೂದ್ರಜಾತಿಯ ಹೆಂಡತಿಯಲ್ಲಿ ನಂದಮಹಾಪದ್ಮನೆಂಬ ಮಗನನ್ನು ಹಡೆದನು. ಇವನಿಂದ ಮುಂದಿನ ವಂಶಕ್ಕೆ ನಂದವಂಶವೆಂಬ ಹೆಸರುಂಟಾಯಿತು. ಆತನ ಎಂಟುಜನ ಮಕ್ಕಳು ಕ್ರಮದಿಂದ ರಾಜ್ಯವಾಳಿದ ತರುವಾಯ ಸುಪ್ರಸಿದ್ಧ ಮೌರ್ಯವಂಶದ ಅರಸರು ಭರತಖಂಡದ ಏಕಚ್ಛತ್ರಾಧಿಪತಿಗಳಾಗಿ ಆಳಿದರು. ಇಲ್ಲಿ ಶಿಶುನಾಗ, ನಂದ, ಮೌರ್ಯರಾಜರ ವಂಶಾವಳಿಯನ್ನು ಕೊಡುವೆವು.

---

* ವಿಷ್ಣುಪುರಾಣದಲ್ಲಿಯೂ ವಾಯುಪುರಾಣದಲ್ಲಿಯೂ ಹೇಳಿದ ಶಿಶುನಾಗ, ನಂದ ವಂಶಗಳ ಆಳಿಕೆಯ ಕಾಲದ ಅವಧಿಯು ನಿಜವಲ್ಲವೆಂದು ಕೆಲವರು ಹೇಳುವರು. ಈ ಎರಡು ಪುರಾಣಗಳ ಮತದಿಂದ ಶಿಶುನಾಗ ಮತ್ತು ನಂದವಂಶಗಳ ಆಳಿಕೆಯ ಕಾಲವು ಕ್ರಮವಾಗಿ ೩೩೨ ಮತ್ತು ೧೦೦ ವರ್ಷಗಳು. ಆದರೆ ಈಗಿನ ಐತಿಹಾಸಿಕರು ಶಿಶುನಾಗವಂಶದ ಆಳಿಕೆಯ ಕಾಲವು ೨೫೯ ವರ್ಷಗಳಿಂದೂ, ನಂದವಂಶದ ಕಾಲವು ೪೦ ವರ್ಷಗಳಿಂದೂ ನಿಶ್ಚಯಪಡಿಸಲಿಚ್ಛಿಸುವರು. ಅವರ ಮತದಂತೆ ಕ್ರಿ. ಪೂ. ೬೦೦ರ ಸಮಯದಲ್ಲಿ ಶಿಶುನಾಗವಂಶದವರೂ, ಕ್ರಿ. ಪೂ ೩೬೧ ರಲ್ಲಿ ನಂದವಂಶದ ರಾಜರೂ ಮಗಧದಲ್ಲಾಳುತ್ತಿದ್ದರು.

ಮಹಾವಂಶ.	ದಿವ್ಯಾವದಾನ.	ವಿಷ್ಣುಪುರಾಣ.	ಜೈನಸ್ಥವಿರಾವಲೀಚರಿತ.
ಬಿಂಬಿಸಾರ	ಬಿಂಬಿಸಾರ	ಶಿಶುನಾಗವಂಶ	ಶ್ರೇಣಿಕ
ಅಜಾತಶತ್ರು	ಅಜಾತಶತ್ರು	ಶಿಶುನಾಗ	ಕುಣಿಕ
ಉದಯಿಭದ್ರ	ಉದಯಿಭದ್ರ	ಕಾಕವರ್ಣ	ಉದಯೀ (ನಿಸ್ಸಂತಾನ)
ಅನುರುದ್ಧಕ	ಮುಂಡ	ಕ್ಷೇಮಧರ್ಮಣ	(ವಂಶಕ್ರಮದಿಂದ) ನಂದ
ಮುಂಡ	ಕಾಕವರ್ಣಿ	ಕ್ಷೇತ್ರೌಜಸ್	ಚಂದ್ರಗುಪ್ತ
ನಾಗದಾಸಕ	ಸಹಲೀ	ಬಿಂಬಿಸಾರ	ಅಶೋಕ
ಶಿಶುನಾಗ	ತೂಲಕೂಚೀ	ಅಜಾತಶತ್ರು	ಕುನಾಲ
ಕಾಲಾಶೋಕ	ಮಹಾಮಂಡಲ	ದರ್ಶಕ (ಹರ್ಷಕ)	ಸಂಪ್ರತಿ
ನವನಂದ	ಪ್ರಸೇನಜಿತ್	ಉದಯಾಶ್ವ	
ಚಂದ್ರಗುಪ್ತ	ನಂದ	ನಂದವರ್ಧನ	
ಬಿಂದುಸಾರ	ಬಿಂದುಸಾರ	ಮಹಾನಂದಿ	
ಅಶೋಕ.	ಸುಷೀಮ–ಅಶೋಕ—ವಿಗತಾಶೋಕ		**ನಂದವಂಶ**
	ಕುನಾಲ		ಮಹಾಪದ್ಮನಂದ
	ಸಂಪದಿ		ಅವನ ೮ ಜನ ಮಕ್ಕಳು
			ಮೌರ್ಯವಂಶ
	ಬೃಹಸ್ಪತಿ		ಚಂದ್ರಗುಪ್ತ
	ವೃಷಸೇನ		ಬಿಂದುಸಾರ
	ಪುಷ್ಯಧರ್ಮ		ಅಶೋಕ
	ಪುಷ್ಯಮಿತ್ರ		ಸುಯಶ
			ದಶರಥ

ಮೌರ್ಯವಂಶದ ಅರಸರ ಕಾಲದಲ್ಲಿ ಭರತಖಂಡದಲ್ಲಿ ೧೬ ಮುಖ್ಯ ರಾಜ್ಯಗಳಿದ್ದವು.* ಅವು:—

೧ ಅಂಗ	೫ ವೃಜಿ	೯ ಕುರು	೧೩ ಅಸಭಕಾ
೨ ಮಗಧ	೬ ಮಲ್ಲ	೧೦ ಪಾಂಚಾಲ	೧೪ ಅವಂತಿ
೩ ಕಾಶಿ	೭ ಚೇದಿ	೧೧ ಮತ್ಸ್ಯ	೧೫ ಗಾಂಧಾರ
೪ ಕೋಸಲ	೮ ವಂಗ	೧೨ ಸೂರಸೇನ	೧೬ ಕಾಂಭೋಜ.

ಈ ೧೬ ರಾಜ್ಯಗಳ ಅರಸರಲ್ಲಿ ಪರಸ್ಪರ ವಿವಾಹಗಳು ನಡೆದಿದ್ದವು. ಒಮ್ಮೊಮ್ಮೆ ಯಾವದೊಂದು ಕಾರಣದಿಂದ ಯುದ್ಧಗಳೂ ಒದಗುತ್ತಿದ್ದವು. ಇವಲ್ಲದೆ ಇನ್ನೂ ಕೆಲವು ಸಣ್ಣ ಸಣ್ಣ ರಾಜ್ಯಗಳು ಇದ್ದವು. ಮಗಧರಾಜನು ಲಿಚ್ಛವಿ ಅಥವಾ ವೃಜಿ ಎಂಬ ಜನಾಂಗದ ಸಂಗಡ ಬಹುಕಾಲ ಹೋರಾಡಿ ಕೊನೆಗೆ ಜಯಹೊಂದಿದನು. ಬಳಿಕ ಅದೇ ಲಿಚ್ಛವಿಗಳನ್ನು ಕೂಡಿಕೊಂಡು ಬೇರೆ ಹಲವು ದೇಶಗಳನ್ನು ಜಯಿಸಿದನು.

ಧನನಂದ ಮಹಾರಾಜನ ಕಾಲದಲ್ಲಿ ಮಗಧದೇಶವು ಸಂಪತ್ತಿಯಿಂದಲೂ, ಬಲದಿಂದಲೂ ಬಹಳ ಪ್ರಸಿದ್ಧಿಯನ್ನು ಹೊಂದಿತ್ತು. ಸಣ್ಣ ಸಣ್ಣ ಎಷ್ಟೋ ಅರಸರು ಅವನ ಮಾಂಡಲಿಕರಾಗಿದ್ದರು. ಎಷ್ಟೋ ಅರಸರು ಈತನನ್ನು ನೋಡಿ ಅಸೂಯೆಪಡುತ್ತಲೂ ಇದ್ದರು. ಈ ಕಾಲದಲ್ಲಿಯೇ ಚಂದ್ರಗುಪ್ತನೆಂಬವನು ಈ ಅರಸನ ವಿರುದ್ಧವಾಗಿ ಅನೇಕ ಒಳತಂತ್ರಗಳನ್ನು ನಡೆಸಿದ್ದನು. ಧನನಂದನು ಇದನ್ನು ತಿಳಿದು ಚಂದ್ರಗುಪ್ತನನ್ನು ತನ್ನ ರಾಜ್ಯದಿಂದ ಹೊರಗೆ ಹಾಕಿದನು.

ಇದೇ ಸಮಯದಲ್ಲಿ ದಿಗ್ವಿಜಯಿಯಾದ ಸೆಕಂದರಶಹನೆಂಬ ಮಹಾವೀರನು (ಅಲೆಕ್ಸಂದರ) ದೊಡ್ಡ ಸೈನ್ಯದೊಡನೆ ಪಂಚನದವನ್ನು ನಡುಗಿಸಿ ಶತದ್ರುವಿನ ಮೇರೆಯವರೆಗೆ ಬಂದಿದ್ದನು. ಆಗ ಭರತಖಂಡದಲ್ಲಿ ಸಣ್ಣ ಸಣ್ಣ ರಾಜ್ಯಗಳು ಇದ್ದವು. ಅರಸರೆಲ್ಲ ಮಹಾ ಪರಾಕ್ರಮಿಗಳೂ, ವಿಪುಲಸೈನ್ಯವುಳ್ಳವರೂ ಆಗಿದ್ದರು. ಅವರೆಲ್ಲರು ಒಟ್ಟಾದರೆ ಅವರನ್ನು ಜಯಿಸುವದು ಅಸಂಭವವಾಗಿತ್ತು. ಆದರೆ ಅವರು ಪರಸ್ಪರ ಅಸೂಯೆಯಿಂದಲೂ, ಅಂತಃಕಲಹಗಳಿಂದಲೂ ನಿರ್ವೀರ್ಯರಾಗಿದ್ದರು. ಇದನ್ನೆಲ್ಲ ತಿಳಿದು ಅಲೆಕ್ಸಂದರನು ಒಂದೊಂದೇ ರಾಜ್ಯವನ್ನು ಆಕ್ರಮಿಸಹತ್ತಿದನು. ಚಂದ್ರಗುಪ್ತನು ಅಲೆಕ್ಸಂದರನ ಈ ಮುತ್ತಿಗೆಯನ್ನೂ ಗೆಲುವನ್ನೂ ನೋಡಿ ಮನಸ್ಸಿನಲ್ಲಿ ಮರುಗಹತ್ತಿದನು. ಅಲೆಕ್‌ಜಾಂಡರನಿಗೆ ಮಗಧರಾಜ್ಯವನ್ನು ಜಯಿಸುವದು ಮಾತ್ರ ಅಸಾಧ್ಯವೆಂದು ತೋರಿತು. ಮಗಧವನ್ನಾಳುತ್ತಿದ್ದ ಧನನಂದ ಮಹಾರಾಜನ ಬಳಿಯಲ್ಲಿ ೨ ಲಕ್ಷ ಕಾಲಾಳುಗಳು, ೨೦ ಸಾವಿರ ರಾವುತರು, ೨ ಸಾವಿರ ರಥಗಳು, ೪ ಸಾವಿರ ಆನೆಗಳು

*Buddhist India P. 23 ಮತ್ತು ಅಂಗುತ್ತರ ನಿಕಾಯ.

*ಕೆಲವರು ನಂದವಂಶಾಭಿವೃದ್ಧಿಯನು ಈಗ ಮಗಧದ ರಾಜರಾಗಿದ್ದನೆಂದು ಹೇಳುವರು.

ಯಾವಾಗಲೂ ಯುದ್ಧಕ್ಕೆ ಸಜ್ಜಾಗಿದ್ದವು. ಈ ಮೊದಲೇ ಪಂಚನದದಲ್ಲಿ ಮಹಾಶೂರನಾದ ಪುರುರಾಜನ ಪರಾಕ್ರಮಕ್ಕೆ ಅಲೆಕ್ಸಂದರನು ಬೆರಗಾಗಿದ್ದನು. ಈ ಸಮಯದಲ್ಲಿಯೇ ನಂದವಂಶದ ಹಗೆಯಾದ ಚಂದ್ರಗುಪ್ತನು ತನ್ನ ಇಷ್ಟವನ್ನು ನೆರವೇರಿಸುವದಕ್ಕಾಗಿ ಆ ಗ್ರೀಕವೀರನಿಗೆ ಕೂಡಿದನು. ಇವರೀರ್ವರಲ್ಲಿ ಒಬ್ಬನು ಇಡಿ ಭೂಮಂಡಲವನ್ನೆಲ್ಲ ಜಯಿಸಬೇಕೆಂಬ ಮಹತ್ವಾಕಾಂಕ್ಷೆಯುಳ್ಳವನಾಗಿ ಭರತಖಂಡದಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸುವದಕ್ಕೆ ಹವಣಿಸುವವನು; ಕುಟಿಲನೀತಿಯಲ್ಲಿ ನಿಪುಣನಾದ ಇನ್ನೊಬ್ಬನು ಗ್ರೀಕರಿಂದ ಭರತಖಂಡವನ್ನು ರಕ್ಷಿಸುವದಕ್ಕೂ, ತನ್ನ ಏಕಚ್ಛತ್ರಾಧಿಪತ್ಯವನ್ನು ನೆಲೆಗೊಳಿಸುವದಕ್ಕೂ ಹವಣಿಸುವವನು. ಚಂದ್ರಗುಪ್ತನು ನಿಪುಣತೆಯಿಂದ ಅಲೆಕ್ಸಂದರನನ್ನು ಬದಿಗಿಟ್ಟು ತನ್ನ ವರ್ಚಸ್ಸನ್ನು ನೆಲೆಗೊಳಿಸಲಾರಂಭಿಸಿದನು. ಆದರೆ ಅಲೆಕ್ಸಂದರನಿಗೆ ಸ್ವಲ್ಪ ಕಾಲದಲ್ಲಿಯೇ ಚಂದ್ರಗುಪ್ತನ ಈ ಭಾವವು ಗೊತ್ತಾಗಲು ಅವನು ಗುಪ್ತವಾಗಿ ಚಂದ್ರಗುಪ್ತನ ಕೊಲೆಮಾಡುವ ವಿಚಾರದಲ್ಲಿದ್ದನು. ಇದನ್ನು ಚಂದ್ರಗುಪ್ತನು ತಿಳಿದು ಕೂಡಲೆ ಅವನ ಪಾಳಯವನ್ನು ಬಿಟ್ಟು ಓಡಿಹೋದನು. ಗ್ರೀಕವೀರನು ಪಂಜಾಬದ ಪೂರ್ವಭಾಗದಲ್ಲಿ ವಿಪಾಶಾನದಿಯ ವರೆಗಿನ ದೇಶವನ್ನು ಗೆದ್ದು ಒಂದುವರ್ಷ ೭ ತಿಂಗಳು † ಇದ್ದು ಬಳಿಕ ಈ ದೇಶವನ್ನು ಬಿಟ್ಟು ಮಿಸರದೇಶಕ್ಕೆ ಹೋದನು. ಹೋಗುವಾಗ ಮಗಧದೇಶವನ್ನು ಜಯಿಸುವ ಆಶೆಯನ್ನೂ ಬಿಟ್ಟು ಹೋದನು.

ಕ್ರಿ. ಪೂ. ೩೨೩ರಲ್ಲಿ ಬಾಬಿಲನದಲ್ಲಿ ಅಲೆಕ್ಸಂದರನು ಮರಣಹೊಂದಿದನು. ಅವನ ಸಾಮಂತರು ಅವನ ರಾಜ್ಯವನ್ನೆಲ್ಲ ವಿಭಾಗಿಸಿ ಹಿಂದುಸ್ತಾನದಲ್ಲಿದ್ದ ಪ್ರದೇಶವನ್ನು ಈ ದೇಶದಲ್ಲಿದ್ದ ಗ್ರೀಕ ಅಧಿಕಾರಿಗಳ ವಶಕ್ಕೆ ಕೊಟ್ಟರು. ಅಲೆಕ್ಸಂದರನ ಆಕ್ರಮಣದಿಂದ ಭರತಖಂಡದ ಎಷ್ಟೋ ಭಾಗವು ಅರಾಜಕವಾಗಿತ್ತು; ಗ್ರೀಕರ ಪಾಳಯದಿಂದ ಓಡಿಹೋದ ಚಂದ್ರಗುಪ್ತನು ಆ ಭಾಗದಲ್ಲಿ ಬಲಿಷ್ಠವಾದ ಸೈನ್ಯವನ್ನು ಕೂಡಿಸಿ ಅದಕ್ಕೆ ಯುದ್ಧಶಿಕ್ಷಣವನ್ನು ಕೊಡತೊಡಗಿದನು. ಅಲೆಕ್ಸಂದರನ ಮರಣದ ತರುವಾಯ ಚಂದ್ರಗುಪ್ತನು ಭರತಖಂಡದಲ್ಲಿದ್ದ ಗ್ರೀಕರ ರಾಜ್ಯವನ್ನು ಆಕ್ರಮಿಸಿ ತನ್ನ ಅಪೂರ್ವ ಪರಾಕ್ರಮದಿಂದ ಅವರನ್ನು ಸಂಪೂರ್ಣವಾಗಿ ಜಯಿಸಿದನು. ಆ ರಾಜ್ಯವನ್ನು ವಶಮಾಡಿಕೊಂಡ ಬಳಿಕ ಮಗಧರಾಜ್ಯವನ್ನು ಮುತ್ತಿದನು. ಈ ಸಮಯದಲ್ಲಿ ಅಸಾಧಾರಣ ತೀಕ್ಷ್ಣಬುದ್ಧಿಯುಳ್ಳ ಚಾಣಕ್ಯನೆಂಬ ರಾಜನೀತಿನಿಪುಣನಾದ ಪಂಡಿತನು ನಂದರಾಜರೊಡನೆ ತನಗಿದ್ದ ದ್ವೇಷವನ್ನು ತೀರಿಸಿಕೊಳ್ಳುವ ಸುಯೋಗವು ಒದಗಿದ್ದನ್ನು

† ಒಂದುಕುಶವನ್ನು ದಾಟಿ ಸಿಂಧುದೇಶಕ್ಕೆ ಬರುವದಕ್ಕೆ ೧೦ ತಿಂಗಳುಗಳು ಹಿಡಿದಿದ್ದವು. ಪಶ್ಚಿಮ ಒಂದುಸ್ಥಾನದಲ್ಲಿ ೧೯ ತಿಂಗಳು ವಾಸಿಸಿದ್ದನು. ಪುತ್ತು ಪಂಚನದದಿಂದ ಸಿಂಧುನದಿಯ ಮೇಲಿಂದ ಹಾಯ್ದು ತಿರುಗಿ ಹೋಗುವದಕ್ಕೆ ೭ ತಿಂಗಳು ಹಿಡಿದವು. ಒಟ್ಟು ೩ ವರ್ಷಗಳು.

ನೋಡಿ ಗುಪ್ತವಾಗಿ ಚಂದ್ರಗುಪ್ತನಿಗೆ ಸಹಾಯಮಾಡತೊಡಗಿದನು. ನಂದವಂಶದ ನಾಶಕ್ಕೂ, ಮೌರ್ಯವಂಶದ ಸ್ಥಾಪನೆಗೂ ಈ ಚಾಣಕ್ಯನೇ ಬಹಳಮಟ್ಟಿಗೆ ಕಾರಣವು. ಇವನಿಗೆ ವಿಷ್ಣುಗುಪ್ತನೆಂದೂ, ಕೌಟಿಲ್ಯನೆಂದೂ ಇತಿಹಾಸದಲ್ಲಿ ಹೆಸರುಗಳಿರುವವು. ಈ ಮೊದಲೇ ಸಿಕಂದರಶಹನ (ಅಲೆಕ್ಸಂದರನ) ಬಲವಾದ ದಾಳಿಯಿಂದ ಮಗಧವೂ ಭರತಖಂಡದ ಬೇರೆ ಭಾಗಗಳೂ ಅತಿಶಯ ವಿಸ್ಖಲಿತವಾಗಿದ್ದವು. ಮತ್ತು ಆ ದಾಳಿಯಿಂದಾದ ಹಾನಿಯು ಇನ್ನೂ ಮಾಜದಿರುವಾಗಲೇ ಚಂದ್ರಗುಪ್ತನ ದಾಳಿಯು ಆರಂಭವಾಗಲು ಮಗಧದೇಶಕ್ಕೆ ಅದನ್ನು ತಾಳಿಕೊಳ್ಳುವದಾಗಲಿಲ್ಲ. ಆ ಯುದ್ಧದಲ್ಲಿ ಧನನಂದನು ಹತನಾದನು. ಚಂದ್ರಗುಪ್ತನು ಮಗಧಸಾಮ್ರಾಜ್ಯವನ್ನು ಕೈವಶಮಾಡಿಕೊಂಡು ಪಾಟಲಿಪುತ್ರದಲ್ಲಿ ರಾಜಧಾನಿಯನ್ನು ಸ್ಥಾಪಿಸಿ ಸಿಂಹಾಸನವೇರಿದನು. ಬಲಿಷ್ಠವಾದ ತನ್ನ ಸೇನೆಯ ಸಹಾಯದಿಂದ ಚಂದ್ರಗುಪ್ತನು * ಭರತಖಂಡದ ಬಹಳ ಭಾಗದಲ್ಲಿ ತನ್ನ ವರ್ಚಸ್ಸನ್ನು ನೆಲೆಗೊಳಿಸಿದನು. ಮತ್ತು ಏಕಚ್ಛತ್ರ ಸಾಮ್ರಾಜ್ಯವನ್ನು ಸ್ಥಾಪಿಸುವದರಲ್ಲಿ ತನ್ನ ಎಲ್ಲ ಬುದ್ಧಿ, ಶಕ್ತಿಗಳನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡನು. ಈ ಮಹಾರಾಜ ಚಕ್ರವರ್ತಿ ಚಂದ್ರಗುಪ್ತನೇ ಮೌರ್ಯವಂಶಸ್ಥಾಪಕನು.

ಅಲೆಕ್ಸಂದರನ ಮರಣವಾದ ೨ ವರ್ಷಗಳ ತರುವಾಯ ಕ್ರಿ. ಪೂ. ೩೨೧ ರಲ್ಲಿ ಅತನ ವಿಸ್ತಾರವಾದ ಸಾಮ್ರಾಜ್ಯವು ಎರಡನೆಯ ಸಾರೆ ವಿಭಾಗಿಸಲ್ಪಟ್ಟಿತು. ವೀರಶ್ರೇಷ್ಠನಾದ ಸೆಲ್ಯುಕಸನಿಕೇತರನು ಬಾಬಿಲೋನದ ಕ್ಷತ್ರಪ ಪದವನ್ನು ಹೊಂದಿದನು. ಬಳಿಕ ೬ ವರ್ಷಗಳಾದ ಮೇಲೆ ಅವನು ಪ್ರಬಲ ವೈರಿಯಾದ ಅಂಟಿಗೋನಾಸನಿಂದ ಪರಾಜಿತನಾಗಿ ಮಿಸರದೇಶಕ್ಕೆ ಓಡಿಹೋಗಿದ್ದನು. ಮುಂದೆ ಮೂರು ವರ್ಷಗಳ ಪ್ರಯತ್ನದಿಂದ ಸೆಲ್ಯುಕಸನು ಬಾಬಿಲೋನವನ್ನು ಪುನಃ ಆಕ್ರಮಿಸಿ ತನ್ನ ಪ್ರತಾಪವನ್ನು ಮತ್ತೆ ನೆಲೆಗೊಳಿಸಿದನು. ಅತನು ಬಾಕ್ತ್ರಿಯಾ (ಬಾಹ್ಲಿಕ) ದೇಶವನ್ನು ಆಕ್ರಮಿಸಿ ಅಲ್ಲಿ ತನ್ನ ಅಧಿಕಾರವನ್ನು ನೆಲೆಗೊಳಿಸಿದನು. ಬಳಿಕ ಸೆಲ್ಯುಕಸನು ಜಯದಿಂದುಬ್ಬಿದ ತನ್ನ ಸೇನೆಯಿಂದ ಭರತಖಂಡವನ್ನಾಕ್ರಮಿಸುವ ಸಂಕಲ್ಪವಮಾಡಿದನು. ಅವನಿಗೆ ಭರತಖಂಡದಲ್ಲಿ ಗ್ರೀಕರು ಸಂಪಾದಿಸಿದ ಸೀಮೆಗಳನ್ನು ಮತ್ತೆ ಆಕ್ರಮಿಸಬೇಕೆಂಬ ಇಚ್ಛೆಯು ಬಲವಾಗಿತ್ತು. ಆದರೆ ಚಂದ್ರಗುಪ್ತನು ದೊಡ್ಡ ಸೇನೆಯೊಡನೆ ಸ್ವದೇಶರಕ್ಷಣೆಗಾಗಿ ಗ್ರೀಕಸೈನ್ಯವನ್ನು ಎದುರಿಸಿದನು. ಚಂದ್ರಗುಪ್ತನ ಪರಾಕ್ರಮವನ್ನು ನೋಡಿ ಜಯಾಶೆಯುಳ್ಳ ಗ್ರೀಕಸೇನಾಪತಿ ಸೆಲ್ಯುಕಸನಿಕೇತರನು ಭರತಖಂಡವನ್ನು ಜಯಿಸಬೇಕೆಂಬ ಆಶೆಯನ್ನು ಬಿಟ್ಟದ್ದಲ್ಲದೆ ಭರತಖಂಡದ ಮೇರೆಯ ಪ್ರದೇಶಗಳನ್ನೂ ಬಿಟ್ಟುಹೋಗಿ ಒಪ್ಪಂದವನ್ನು ಕೇಳಿಕೊಂಡನು. ಈ ಒಪ್ಪಂದವೆಂದರೆ ಅಪಜಯದ ಒಪ್ಪಿ

* Vencent Smith. P. 12

ಗೆಯೇ ಸರಿ. ಒಪ್ಪಂದದ ನಿಯಮಕ್ಕನುಸರಿಸಿ ಸೆಲ್ಯುಕಸನ ಮಗಳನ್ನು ಚಂದ್ರಗುಪ್ತನು ಮದುವೆಯಾಗಬೇಕೆಂದು ಗೊತ್ತಾಯಿತು. ಪರೋಪನಿಸದಾಯಿ (Paropanisadai) ಅರಿಯಾ (Aria) ಅರಾಕೋಸಿಯಾ (Arachosia) ಅಂದರೆ ಕಾಬೂಲ, ಹಿರಾಟ, ಕಂದಹಾರ ಮೊದಲಾದ ಪ್ರದೇಶವೆಲ್ಲ ಮಗಧಸಾಮ್ರಾಜ್ಯಕ್ಕೆ ಸೇರಿದ್ದೆಂದು ‡ಗ್ರೀಕರು ಒಪ್ಪಿದರು. ಚಂದ್ರಗುಪ್ತನು ಸೆಲ್ಯುಕಸನಿಗೆ ೫೦೦ ಆನೆಗಳನ್ನು ಕೊಟ್ಟನು. ಈ ಕಾಲದಿಂದ ಭರತಖಂಡದಲ್ಲಿ ಗ್ರೀಕ ಆಧಿಪತ್ಯವು ಕೊನೆಯ ಅಪ್ಪಣೆಯನ್ನು ಪಡೆದುಕೊಂಡಿತು. ಅಸಾಧಾರಣವಾದ ಬಲ ಮತ್ತು ಅಪೂರ್ವವಾದ ಪ್ರತಿಭೆ ಇವುಗಳ ಸಹಾಯದಿಂದ ಮೌರ್ಯಚಂದ್ರಗುಪ್ತನು ಭರತಖಂಡದಲ್ಲಿ ವಿಶಾಲವಾದ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಈ ವೀರಪುರುಷನೇ “ದೇವಾನಾಂ ಪ್ರಿಯಃ” ಎನಿಸಿದ ಅಶೋಕಮಹಾರಾಜನ ಅಜ್ಜನು.

ಭರತಖಂಡದಲ್ಲಿ ಹೊಸದಾಗಿ ಸ್ಥಾಪಿತವಾದ ಈ ಸಾಮ್ರಾಜ್ಯದ ಸಾಮಾಜಿಕ, ರಾಜನೈತಿಕ ಸ್ಥಿತಿಗಳು ಹೇಗೆ ಇದ್ದವೆಂಬದನ್ನು ಇಲ್ಲಿ ಆಲೋಚಿಸುವದು ಅಪ್ರಾಸಂಗಿಕವಾಗಲಾರದು.

ಚಂದ್ರಗುಪ್ತನ ವಿಷಯವಾಗಿ ಒಂದೆರಡು ದಂತಕಥೆಗಳು ಪ್ರಚಲಿತವಾಗಿರುವವು. ಪಾಠಕರ ತಿಳುವಳಿಕೆಗಾಗಿ ಇಲ್ಲಿ ಅವುಗಳನ್ನು ಉಲ್ಲೇಖಿಸುವೆವು. ಒಂದಾನೊಂದು ಸಮಯದಲ್ಲಿ * ಪ್ರಸಂಗಾನುಸಾರವಾಗಿ ಚಂದ್ರಗುಪ್ತನು ಒಬ್ಬ ಬಡ ವಿಧವೆಯ ಗುಡಿಸಲಲ್ಲಿ ವಾಸಮಾಡಿದ್ದನು. ಒಂದುದಿವಸ ಆ ಹೆಂಗಸು ತನ್ನ ಮಕ್ಕಳಿಗೆ ರೊಟ್ಟಿಯನ್ನು ಮಾಡುತ್ತಿದ್ದಳು. ಮಕ್ಕಳನ್ನು ಬಳಿಯಲ್ಲಿ ಕುಳ್ಳಿರಿಸಿಕೊಂಡು ಒಂದೊಂದೇ ಬೆಂದುಬಂದಂತೆ ಅದನ್ನು ಅವರಿಗೆ ತಿನ್ನುವದಕ್ಕೆ ಕೊಡುತ್ತಿದ್ದಳು. ಒಬ್ಬ ಮಗನು ರೊಟ್ಟಿಯ ಅಂಚನ್ನು ಬಿಟ್ಟು ನಡುವಿನದಷ್ಟನ್ನೇ ತಿಂದು ಮತ್ತೆ ಬೇಡಹತ್ತಿದನು. ಅದಕ್ಕೆ ಸಿಟ್ಟಾಗಿ ಅವಳು-ಈ ಹುಡುಗನ ಪದ್ಧತಿಯು ಚಂದ್ರಗುಪ್ತನ ರಾಜ್ಯವಾಕ್ರಮಿಸುವ ಪದ್ಧತಿಯಂತೆಯೇ ಇದೆ, ಎಂದು ಅಂದಳು. ಆಗ ಆ ಹುಡುಗನು ಅವ್ವಾ ನಾನೇನು ಮಾಡಿದೆ? ಚಂದ್ರಗುಪ್ತನಿಗೂ ನನಗೂ ಏತರ ಹೋಲಿಕೆ? ಎಂದು ಕೇಳಿದನು. ಅದಕ್ಕೆ ತಾಯಿಯು “ಮಗುವೇ ನೀನು ರೊಟ್ಟಿಯ ಅಂಚನ್ನು ಬಿಟ್ಟು ನಡುವಿನದಕ್ಕೇ ಮೊದಲು ಕೈಹಾಕುವೆ; ಚಂದ್ರಗುಪ್ತನೂ ಚಕ್ರವರ್ತಿಯಾಗಬೇಕೆಂಬ ಆಶೆಯಿಂದ ಭರತಖಂಡದ ಮೇರೆಯ ಪ್ರದೇಶಗಳನ್ನು ಜಯಿಸದೆ ಕೇವಲ ಅದರ ನಡುವಿನ ಭಾಗಗಳನ್ನೇ ಆಕ್ರಮಿಸುತ್ತಿರುವನು. ಕೊನೆಗೆ ಆತನ ಸೈನ್ಯವು ನಾಲ್ಕೂ ದಿಕ್ಕುಗಳಿಂದ ಸುತ್ತುಗಟ್ಟಲ್ಪಟ್ಟು ನಾಶಹೊಂದುವದು. ಇದೇ ಚಂದ್ರಗುಪ್ತನ ಮೂಢತನವು” ಎಂದು

‡Vincent Smith.

* ಮಹಾವಂಶದ ಟೀಕೆಯಲ್ಲಿ-ಪುಟ ೧೭೩, Colombo Edition.

ಹೇಳಿದಳು. ಚಂದ್ರಗುಪ್ತನು ಈ ಮಾತುಗಳನ್ನು ಕೇಳಿ ತನ್ನ ಆಕ್ರಮಣಪದ್ಧತಿಯನ್ನು ಬದಲಿಸಿದನಂತೆ. ಚಂದ್ರಗುಪ್ತನ ವಿಷಯವಾಗಿ ಇನ್ನೊಂದು ಕಥೆಯುಂಟು. ಅದರ ಸಾರಾಂಶವೇನಂದರೆ—ಚಂದ್ರಗುಪ್ತನು ಗ್ರೀಕವಾಳಯದಿಂದ ಹೊರಗೆಹಾಕಲ್ಪಟ್ಟಾಗ ಒಂದು ದಿವಸ ಅಡವಿಯಲ್ಲಿ ನಿದ್ದೆಹತ್ತಿ ಮಲಗಿರಲು ಒಂದು ಸಿಂಹವು ಬಂದು ಪ್ರೇಮದಿಂದ ಆತನ ಮೈಯನ್ನು ನೆಕ್ಕಿತಂತೆ. ಇನ್ನೊಮ್ಮೆ ರಾಜ್ಯವನ್ನು ಆಕ್ರಮಿಸುವದಕ್ಕಾಗಿ ಅನುಚರರೊಡನೆ × ಚಂದ್ರಗುಪ್ತನು ಆಲೋಚನೆಮಾಡುತ್ತಿರುವಾಗ ಒಂದು ಕಾಡಾನೆಯು ಬಂದು ಆತನನ್ನು ಬೆನ್ನಮೇಲೆ ಕುಳ್ಳಿರಿಸಿಕೊಳ್ಳಬೇಕೆಂದು ಎದುರಿಗೆ ನಿಂತಿತಂತೆ. ಈ ತರದ ದಂತಕಥೆಗಳಿಗೆ ಏನೂ ಬೆಲೆಯಿಲ್ಲ. ಯಾವದೊಂದು ವಿಷಯದಲ್ಲಿ ಯಾರಾದರೂ ಅತಿಶಯ ಶಕ್ತಿಯುಳ್ಳವರಾದರೆ ಅವರ ವಿಷಯವಾಗಿ ಈ ತರದ ಹಲವು ಜನವಾರ್ತೆಗಳು ಹುಟ್ಟುವವು. ಇಂಥ ದಂತಕಥೆಗಳಿಂದ ಚಂದ್ರಗುಪ್ತನು ಆ ಕಾಲದಲ್ಲಿ ಒಬ್ಬ ಅಸಾಧಾರಣಶಕ್ತಿಯುಳ್ಳವನೂ, ತೀಕ್ಷ್ಣಬುದ್ಧಿಯುಳ್ಳವನೂ ಎಂದು ಎಣಿಸಲ್ಪಡುತ್ತಿದ್ದನೆಂಬದು ಮಾತ್ರ ಫಲಿತವಾಗುವದು.

ನಂದವಂಶದ ನಾಶವನ್ನೂ, ಚಂದ್ರಗುಪ್ತನ ಸಾಮ್ರಾಜ್ಯಸ್ಥಾಪನೆಯನ್ನೂ ಅವಲಂಬಿಸಿ ಕ್ರಿ. ಆನೆಯ ಶತಮಾನದಲ್ಲಿ ಮುದ್ರಾರಾಕ್ಷಸವೆಂಬ † ಒಂದು ಐತಿಹಾಸಿಕ ನಾಟಕವು ರಚಿತವಾಗಿರುವದು. ೫೦ ವರ್ಷಗಳ ಪೂರ್ವದಲ್ಲಿ ಲ್ಯಾಸೇನ ಎಂಬವರು ಬೇರೆ ಬೇರೆ ದಂತಕಥೆಗಳಿಂದಲೂ, ಮುಖ್ಯವಾಗಿ ಆ ನಾಟಕದಿಂದಲೂ ಚಂದ್ರಗುಪ್ತನ ನಿಜವಾದ ಇತಿಹಾಸವನ್ನು ಬರೆಯುವದಕ್ಕೆ ಬಹಳ ಪರಿಶ್ರಮಮಾಡಿರುವರು.

ಚಂದ್ರಗುಪ್ತನು ತನ್ನ ಅಪೂರ್ವವಾದ ಪ್ರತಿಭೆಯಿಂದ ಏಕಚ್ಛತ್ರಸಾಮ್ರಾಜ್ಯವನ್ನು ಸ್ಥಾಪಿಸಿದನೆಂಬ ವಿಷಯವು ಈ ದೇಶದ ಗ್ರಂಥಗಳಲ್ಲಿಯೂ, ಪರದೇಶದ ಗ್ರಂಥಗಳಲ್ಲಿಯೂ ನಮಗೆ ದೊರೆಯುವದು. ಗ್ರೀಕವಕೀಲನಾದ ಮೆಗಾಸ್ಥಿನೀಸನು ಪಾಟಲಿಪುತ್ರ ರಾಜಧಾನಿಯಲ್ಲಿ ೬ ವರ್ಷ ವಾಸಮಾಡಿದ್ದನು. ಆತನು ಚಂದ್ರಗುಪ್ತನ ರಾಜ್ಯಶಾಸನಪದ್ಧತಿಯು ಎಷ್ಟು ಯೋಗ್ಯವಾಗಿಯೂ, ನಿಯಮಬದ್ಧವಾಗಿಯೂ ಇತ್ತೆಂಬದನ್ನು ನೋಡಿ ಸ್ವದೇಶಕ್ಕೆ ತಿರುಗಿ ಹೋದಬಳಿಕ ಬರೆದಿಟ್ಟಿದ್ದನು. ಅವನು ಬರೆದ ವಿವರಣವು ಈಗ ಉಪಲಬ್ಧವಿಲ್ಲ. ಆದರೂ ಬೇರೆ ಬೇರೆ ಗ್ರೀಕ ಐತಿಹಾಸಿಕರು ಆತನು ಬರೆದ ವಿವರಣದಿಂದ ಉದ್ಧರಿಸಿ ತೆಗೆದುಕೊಂಡ ಭಾಗಗಳೇ ಈ ಕಾಲಕ್ಕೆ ಮೂಲಭೂತಸಂಗತಿಗಳಾಗಿರುವವು.

× Buddhist India P. 270.

† ವಿಶಾಖದತ್ತ ಇಲ್ಲವೆ ವಿಶಾಖದೇವನೆಂಬವನು ಇದನ್ನು ರಚಿಸಿದನು. ಜಟ್ಟಸ್ ಟಿಲಾಂಗ್ ಎಂಬವರು ೭ನೆಯ ಶತಕದ ಕೊನೆಯಲ್ಲಿ ಇಲ್ಲವೆ ೮ನೆಯ ಶತಕದ ಆರಂಭದಲ್ಲಿ ಈ ನಾಟಕವು ರಚಿಸಲ್ಪಟ್ಟಿತೆಂದು ಬರೆದಿರುವರು.

ಮೆಗಾಸ್ಥಿನೀಸನು * ಬರೆದಿರುವದೇನಂದರೆ—ಭರತಖಂಡದ ಸರ್ವ ಶ್ರೇಷ್ಠ ನಗರವಾದ ಪಾಟಲಿಪುತ್ರವು ಭಾಗೀರಥೀ-ಹಿರಣ್ವತಿಗಳ ಸಂಗಮಸ್ಥಳದಲ್ಲಿರುವದು. ಈ ನಗರವು ೫ ಕ್ರೋಶ ಉದ್ದವಾಗಿಯೂ, ೨ ಕ್ರೋಶ ಅಗಲವಾಗಿಯೂ ಇರುವದು. ಪಟ್ಟಣದ ಸುತ್ತಲು ಕೋಟೆಯೂ, ಅಗಳತೆಯೂ ಇರುವವು. ಅಗಳತೆಯು ೪೦೦ಮೊಳ ವಿಶಾಲವಾಗಿಯೂ ೩೦ ಮೊಳ ಆಳವಾಗಿಯೂ ಇರುವದು. ಕೋಟೆಗೆ ೫೭೦ ಕೊತ್ತಳಗಳೂ, ೬೪ ಅಗಸೆಗಳೂ ಇರುವವು.

ರಾಜ್ಯಪದ್ಧತಿಯ ವಿಷಯವಾಗಿ ಮೆಗಾಸ್ಥಿನೀಸನು ಬರೆದಿರುವದೇನಂದರೆ—ರಾಜ್ಯದ ಮುಖ್ಯ ಮುಖ್ಯ ಕಾಮದಾರರಲ್ಲಿ ಕೆಲವರು ವ್ಯಾಪಾರದ ಪೇಟೆಗಳನ್ನು ನೋಡುವರು; ಕೆಲವರು ಸೈನ್ಯವ್ಯವಸ್ಥೆಯನ್ನು ನೋಡುವರು; ಕೆಲವರು ಹೊಳೆ ಕಾಲುವೆ ಮೊದಲಾದವುಗಳನ್ನು ನೋಡುತ್ತ ಸಂಚಾರಮಾಡಿ ಭೂಮಿಯ ಅಳೆಯುವ ಕೆಲಸವನ್ನೂ, ಭೂಮಿಗೆ ಯಾವಾಗಲೂ ಸಮವಾಗಿ ನೀರು ದೊರೆಯುವ ವ್ಯವಸ್ಥೆಯನ್ನೂ ಮಾಡುವರು.

ಕಂದಾಯವನ್ನೆತ್ತುವದಕ್ಕೆ ಬೇರೆ ಕಾಮದಾರರಿದ್ದರು. ಅವರು ಭೂಮಿಯ ಸ್ಥಿತಿಯನ್ನೂ, ಒಕ್ಕಲಿಗರು, ಬಡಗಿಗಳು, ಕಮ್ಮಾರರು, ಕಣಿಗಾರರು ಮೊದಲಾದವರ ಉದ್ಯೋಗಗಳನ್ನೂ ನೋಡುತ್ತ ದೇಶದಲ್ಲಿ ಸಂಚರಿಸುವರು. ಮಾರ್ಗ, ಸೇತುವೆ ಮೊದಲಾದವುಗಳನ್ನು ಮಾಡಿಸುವ ಕಾಮದಾರರು ಪ್ರತ್ಯೇಕವಾಗಿ ಇದ್ದರು. ಮಾರ್ಗದಲ್ಲಿ ಅರ್ಧಕ್ರೋಶಕ್ಕೊಂದರಂತೆ ಅಂತರವನ್ನು ತೋರಿಸುವ ಚಿಹ್ನಗಳಿದ್ದವು. ಪಟ್ಟಣದ ಅಭಿವೃದ್ಧಿಗಾಗಿ ನಿಯಮಿಸಲ್ಪಟ್ಟ ಕಾಮದಾರರಲ್ಲಿ ೬ ವಿಭಾಗಗಳಿದ್ದವು. ಅವು:—

(೧). **ಶ್ರಮ ಶಿಲ್ಪವಿಭಾಗ**—ಈ ವಿಭಾಗದ ಕಾಮದಾರರು ಕಸಬು ಶಿಲ್ಪಗಳ ಸಂಬಂಧವಾದ ಪ್ರತಿಯೊಂದು ವಿಷಯದ ಕಡೆಗೆ ಲಕ್ಷಕೊಡುತ್ತಿದ್ದರು.

(೨). **ಪರದೇಶದವರ ಆತಿಥ್ಯ**—ಈ ಕಾಮದಾರರು ಯಾವನೊಬ್ಬ ಪರದೇಶದ ಮನುಷ್ಯನು ಬಂದರೆ ಅವನಿಗೆ ಇಳಿಯುವ ಸ್ಥಳವನ್ನು ಕೊಡುವದಲ್ಲದೆ ಸೇವೆಗೆ ಆಳುಗಳನ್ನು ಕೊಡುತ್ತಿದ್ದರು. ಈ ಸೇವಕರು ಆ ಪರದೇಶದವನ ಕಾರ್ಯಗಳ ಕಡೆಗೆ ಲಕ್ಷಕೊಡುತ್ತಿದ್ದರು. ದೇಶವನ್ನು ಬಿಟ್ಟು ಹೋಗುವವರೆಗೆ ಈ ಸೇವಕರು ಅವನನ್ನು ಹಿಂಬಾಲಿಸಿರುವರು. ಯಾವನೊಬ್ಬ ಪರದೇಶದ ಮನುಷ್ಯನು ಮಡಿದರೆ ಆತನ ಆಸ್ತಿಯು ಅವನ ಉತ್ತರಾಧಿಕಾರಿಗೆ ಕೊಡಲ್ಪಡುತ್ತಿತ್ತು. ಆತನು ಬೇನೆಬಿದ್ದರೆ ಆತನ ಉಪಚಾರದ ವ್ಯವಸ್ಥೆಯೂ, ಸತ್ತರೆ ಶವಸಂಸ್ಕಾರದ ವ್ಯವಸ್ಥೆಯೂ ಮಾಡಲ್ಪಡುತ್ತಿದ್ದವು.

(೩). **ಜನನ ಮರಣವಿಭಾಗ**—ಈ ವಿಭಾಗದ ಕಾಮದಾರರು ರಾಜ್ಯದ ಎಲ್ಲ ಪ್ರಜೆಗಳ ಜನನಮರಣಗಳ ನಿಜವಾದ ಲೆಕ್ಕವನ್ನಿಡುವರು.

(೪). **ವಾಣಿಜ್ಯ (ವ್ಯಾಪಾರ) ವಿಭಾಗ**—ಈ ವಿಭಾಗದ ಕಾಮದಾರರು ತೂಕದ ಕಲ್ಲುಗಳ ಮತ್ತು ಅಳತೆಯ ಮಾಪುಗಳ ಕಡೆಗೆ ವಿಶೇಷವಾಗಿ ಲಕ್ಷವಿಡುತ್ತಿದ್ದರು. ಮಾರಾಟದ ಸರಕು ಕಾಲಕಾಲಕ್ಕೆ ಜಾಹೀರು ಮಾಡಿ ಮಾರಲ್ಪಡುತ್ತಿತ್ತು. ಒಂದಕ್ಕಿಂತ ಹೆಚ್ಚು ಸರಕುಗಳ ಮಾರಾಟ ಮಾಡುವದಾದರೆ ಇಮ್ಮಡಿ ಕರವನು ಕೊಡಬೇಕಾಗುತ್ತಿತ್ತು.

ಪಣ್ಯವಿಭಾಗ—ದೇಶದಲ್ಲಿ ಉತ್ಪನ್ನವಾಗುವ ಎಲ್ಲತರದ ಸರಕು ಹೆಚ್ಚಾಗಿ ಮಾರಾಟವಾಗುವಂತೆ ವ್ಯವಸ್ಥೆಯನ್ನು ಈ ವಿಭಾಗದ ಕಾಮದಾರರು ಮಾಡುವರು. ಯಾರೂ ಹೊಸ ಸರಕಿನಲ್ಲಿ ಹಳೆಯದನ್ನು ಮಿಶ್ರಮಾಡಿ ವ್ಯಾಪಾರ ಮಾಡದಂತೆಯೂ, ಮಾಡಿದರೆ ದಂಡವಾಗುವಂತೆಯೂ ವ್ಯವಸ್ಥೆಯಿತ್ತು.

(೬). **ವ್ಯಾಪಾರದ ಕರದ ವಿಭಾಗ**—ಮಾರಿದ ಸರಕಿನ ಬೆಲೆಯ ೧೦ ನೆಯ ಭಾಗವು ಕರರೂಪವಾಗಿ ತೆಗೆದುಕೊಳ್ಳಲ್ಪಡುತ್ತಿತ್ತು. ಈ ಕರವನ್ನು ಕೊಡುವಲ್ಲಿ ಯಾರಾದರೂ ವಂಚನೆ ಮಾಡಿದರೆ ಅವರಿಗೆ ದೇಹಾಂತಶಿಕ್ಷೆಯಾಗುತ್ತಿತ್ತು.

ಚಂದ್ರಗುಪ್ತನು ಸ್ಥಾಪಿಸಿದ ವಿಶಾಲವಾದ ಸಾಮ್ರಾಜ್ಯದ ಉತ್ತಮವಾದ ರಾಜ್ಯಪದ್ಧತಿಯನ್ನು ನೋಡಿ ಪರದೇಶದವರು ಬೆರಗಾಗುತ್ತಿದ್ದರು. ಬಲವಾದ ಕೋಟೆ ಕೊತ್ತಳಗಳಿಂದ ಭದ್ರವಾದ, ಮತ್ತು ಸುಂದರವಾದ ಪಾಟಲಿಪುತ್ರ ರಾಜಧಾನಿಯು ಈ ಸಾಮ್ರಾಜ್ಯಕ್ಕೆ ತಕ್ಕ ರಾಜಧಾನಿಯಾಗಿತ್ತು. ಅಲ್ಲಿ ೪ ಲಕ್ಷಜನರು ವಾಸಮಾಡುತ್ತಿದ್ದರು. ೬೦ ಸಾವಿರ ದಕ್ಷರಾದ ಕಾಲಾಳುಗಳ, ೫೦ ಸಾವಿರ ಸವಾರರ, ೮ ಸಾವಿರ ಆನೆಗಳ ಖರ್ಚನ್ನು ಮಹಾರಾಜನು ತಾನೇ ನೋಡಿಕೊಳ್ಳುತ್ತಿದ್ದನು. ಸಾಹಸಿಯಾದ ೬ ಲಕ್ಷ ಚತುರ ಸೈನ್ಯವು ಯಾವಾಗಲೂ ಯುದ್ಧದ ಸಲುವಾಗಿ ಸಜ್ಜಾಗಿರುತ್ತಿತ್ತು. ಈ ಅಪಾರವಾದ ಸೇನೆಯ ಸಹಾಯದಿಂದ ಅತನು ಭರತಖಂಡದಲ್ಲಿ ಎದುರಾಳಿಗಳಾದ ರಾಜರನ್ನು ಸೋಲಿಸಿ ಏಕಚ್ಛತ್ರಸಾಮ್ರಾಜ್ಯವನ್ನು ಸ್ಥಾಪಿಸುವದಕ್ಕೆ ಸಮರ್ಥನಾದನು. ಸೈನ್ಯವಿಭಾಗದಲ್ಲಿಯೂ ಆರು ಉಪಭಾಗಗಳಿದ್ದವು. ೧ ಯುದ್ಧನೌಕಾ ವಿಭಾಗ; ೨ ಯುದ್ಧಸಂಭಾರ ವಿಭಾಗ—ಈ ವಿಭಾಗದವರು ಗಾಡಿ ಮೊದಲಾದವುಗಳ ಸಹಾಯದಿಂದ ಶಸ್ತ್ರಾಸ್ತ್ರಗಳು, ಆಹಾರ ಪದಾರ್ಥಗಳು ಮೊದಲಾದವುಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸುವರು. ೩ ಪದಾತಿಗಳು ೪ ಸವಾರರು ೫ ಆನೆಗಳು ೬ ರಥಿಕರು. ಈ ಷಡಂಗ ಸೈನ್ಯದ ವ್ಯವಸ್ಥೆಗಾಗಿ ಬೇರೆ ಬೇರೆ ಕಾಮದಾರರು ನಿಯಮಿಸಲ್ಪಟ್ಟಿದ್ದರು. ದೇಶದಲ್ಲಿ ಶಾಂತತೆಯಿರುವಾಗ ಶಸ್ತ್ರಾಸ್ತ್ರಗಳನ್ನು ಅಸ್ತ್ರಶಾಲೆಯಲ್ಲಿ ಸಜ್ಜಾಗಿಡುತ್ತಿದ್ದರು. ಅಸ್ತ್ರಶಾಲೆಗಳ ಸುತ್ತಲು ಅಶ್ವಶಾಲೆಗಳೂ, ಗಜಶಾಲೆಗಳೂ ಇರುತ್ತಿದ್ದವು. ದಂಡೆತ್ತಿ ಹೋಗುವಾಗ ಕುದುರೆಗಳಿಗೆ ದಣುವಾಗಬಾರದೆಂದು ರಥಗಳಿಗೆ ಖೇಚರಗಳನ್ನು ಹೂಡುತ್ತಿದ್ದರು.

ರಥಗಳಿಗೆ ಎರಡಾಗಲಿ, ನಾಲ್ಕಾಗಲಿ ಕುದುರೆಗಳನ್ನು ಹೂಡುತ್ತಿದ್ದರು. ಪ್ರತಿಯೊಂದು ರಥಕ್ಕೆ ಇಬ್ಬರು ಯೋದ್ಧಾರರೂ, ಒಬ್ಬ ಸಾರಥಿಯೂ ಗೊತ್ತಾಗಿರುತ್ತಿದ್ದರು. ಅರಸನ ರಥಕ್ಕೆ ಕುದುರೆಗಳನ್ನು ಹೂಡುವರು. ಯುದ್ಧದ ಆನೆಗಳ ಮೇಲೆ ೩ ಜನ ಭಟರೂ ಒಬ್ಬ ಮಾವುತನೂ ಕುಳಿತುಕೊಳ್ಳುವರು. ಪದಾತಿಗಳು ಒಂದು ಆಳು ಉದ್ದವಾದ ಧನುಸ್ಸುಗಳನ್ನು ಧರಿಸುವರು; ಮತ್ತು ಎಡಗೈಯಲ್ಲಿ ಚರ್ಮದ ಬತ್ತಳಿಕೆಯನ್ನು ಉಪಯೋಗಿಸುವರು. ಎಲ್ಲರೂ ಖಡ್ಗಗಳನ್ನು ಧರಿಸುವರು. ಆ ಖಡ್ಗಗಳು ೩ ಮೊಳ ಉದ್ದವಾಗಿದ್ದವು. ದ್ವಂದ್ವಯುದ್ಧವು ನಡೆದಾಗ ಈ ಖಡ್ಗಗಳನ್ನು ಅವರು ಎರಡೂ ಕೈಗಳಿಂದ ಉಪಯೋಗಿಸಿಕೊಳ್ಳುವರು. ಗ್ರಾಮಗಳಲ್ಲಿಯೂ ಅವುಗಳ ಕಾರಭಾರವನ್ನು ನಡೆಸುವದಕ್ಕೆ ಮೊದಲು ಹೇಳಿದಂತೆ ಕಾಮದಾರರ ವರ್ಗಗಳಿದ್ದವು. ಮೆಗಾಸ್ಥಿನೀಸನು ಭರತಖಂಡದ ಕೃಷಿಯ ಉತ್ಕರ್ಷವನ್ನೂ, ಭೂಮಿಗಳ ಸಾರವನ್ನೂ ಸುವರ್ಣ, ಮಣಿ, ಮುಕ್ತಾ, ವಜ್ರಖಚಿತವಾದ ಶಿಲ್ಪಚಾತುರ್ಯವನ್ನೂ, ಜನರ ಸರಲವಾದ ಆಚರಣವನ್ನೂ, ಉತ್ಸಾಹದಿಂದ ಜರುಗುವ ಧಾರ್ಮಿಕ ಉತ್ಸವಗಳನ್ನೂ, ವಿದ್ಯಾನುರಾಗವನ್ನೂ ನೋಡಿ ಮರುಳಾಗಿದ್ದನು.

ಈ ರಾಜ್ಯಶಾಸನಪದ್ಧತಿಯಲ್ಲಿ ಸ್ವಾಯತ್ತಶಾಸನ (ಪ್ರಜಾತಂತ್ರ) ದ ವ್ಯವಸ್ಥೆಯೂ ಕಂಡುಬರುತ್ತಿತ್ತು. ಆ ಕಾಲದಲ್ಲಿ ಭರತಖಂಡದಲ್ಲಿ ಪಟ್ಟಣಗಳ ಸಂಖ್ಯೆಯು ಹೆಚ್ಚಾಗಿರಲಿಲ್ಲ. ಆದರೆ ಗ್ರಾಮಗಳು ಸಮೃದ್ಧವಾಗಿಯೂ, ಮನೋಹರವಾಗಿಯೂ ಇದ್ದವು. ಹೊಲಗಳ ಪ್ರದೇಶದ ಸುತ್ತಲು ಗ್ರಾಮಗಳು ನೆಲೆಗೊಂಡಿದ್ದವು. ಒಂದೊಂದು ಗ್ರಾಮಕ್ಕೆ ಕೆಲವು ಹಳ್ಳಿಗಳು ಸೇರಿರುತ್ತಿದ್ದವು. ಈ ಎಲ್ಲ ಹಳ್ಳಿಗಳಿಗೆ ಒಬ್ಬ ಮುಖ್ಯ ಮನುಷ್ಯನು ಆರಿಸಲ್ಪಡುತ್ತಿದ್ದನು. ಅವನು ಗ್ರಾಮಗಳ ಸ್ಥಿತಿಯನ್ನೂ ಪ್ರಜೆಗಳ ಸುಖದುಃಖಗಳನ್ನೂ ರಾಜನಿಗೆ ಇಲ್ಲವೆ ಮುಖ್ಯ ಕಾಮದಾರನಿಗೆ ತಿಳಿಸುವನು. ರಾಜನಾಗಲಿ, ಮುಖ್ಯ ಕಾಮದಾರನಾಗಲಿ ಗ್ರಾಮವನ್ನು ನೋಡುವದಕ್ಕೆ ಬಂದರೆ ಈ ಮುಖ್ಯ ಮನುಷ್ಯನೇ ದಾರಿಗಳನ್ನು ಸ್ವಚ್ಛಮಾಡಿಸುವದು, ಸರಿಪಡಿಸುವದು, ಅವರ ಆಹಾರಾದಿಗಳ ವ್ಯವಸ್ಥೆ ಈ ಎಲ್ಲ ಕೆಲಸಗಳನ್ನು ಮಾಡುವನು. ಗ್ರಾಮಸಭೆಗಳಿಗೆ ಅವನೇ ಅಧ್ಯಕ್ಷನು. ಗ್ರಾಮವಾಸಿಗಳು ಒಟ್ಟುಗೂಡಿ ಸಭಾಗೃಹಗಳನ್ನು ಇಲ್ಲವೆ ಧರ್ಮಶಾಲೆಗಳನ್ನು ಕಟ್ಟಿಸುವದು, ಕೆರೆಬಾವಿಗಳನ್ನು ಕಡಿಸುವದು, ತಮ್ಮ ಗ್ರಾಮದ ಇಲ್ಲವೆ ಸಮೀಪದ ಗ್ರಾಮಗಳ ದಾರಿ ಮೊದಲಾದವುಗಳನ್ನು ಸರಿಪಡಿಸುವದು ಈ ಕೆಲಸಗಳನ್ನು ಮಾಡುವರು. ಇದೇ ಮೇರೆಗೆ ಜನಸಾಮಾನ್ಯದ ಹಿತದ ಕೆಲಸಗಳಿಗೆ ಗ್ರಾಮದ *ಸ್ತ್ರೀಯರೂ ಸಹಾಯವಾಡುತ್ತಿದ್ದರು.

* Rhys Davids Buddhist India p. 49.

ಗ್ರಾಮಗಳು ಸುಂದರವಾಗಿಯೂ, ಸುವ್ಯವಸ್ಥಿತವಾಗಿಯೂ ಇರುತ್ತಿದ್ದವು. ಅಡವಿ ಇಲ್ಲವೆ ನದಿ ಇವುಗಳಿಂದ ಗ್ರಾಮಗಳ ಮೇರೆಯು ಗೊತ್ತುಮಾಡಲ್ಪಡುತ್ತಿತ್ತು. ಇಕ್ಕಟ್ಟಾದ ದಾರಿಗಳುಳ್ಳ ಸಣ್ಣ ಸಣ್ಣ ಗ್ರಾಮಗಳು, ಅವುಗಳಲ್ಲಿ ಅಚ್ಚುಕಟ್ಟಾದ ಜನರ ಮನೆಗಳು, ಸುತ್ತಲೂ ವಿಶಾಲವಾದ ಹೊಲಗಳು ಗ್ರಾಮದ ಬಳಿಯಲ್ಲಿರುವ ಉಪವನ ಗಳು ಇವುಗಳಿಂದ ಎಲ್ಲರಿಗೂ ಆನಂದವೆನಿಸುತ್ತಿತ್ತು. ಗ್ರಾಮದ ಉತ್ಕರ್ಷ, ನೀರಿನ ವ್ಯವಸ್ಥೆಯ ವ್ಯವಸ್ಥೆ, ಗ್ರಾಮದ ಮೇಲ್ವಿಚಾರಣೆ ಮೊದಲಾದ ಕೆಲಸಗಳೆಲ್ಲ ಗ್ರಾಮಸಭೆ ಗಳಿಂದ ಜರುಗಿಸಲ್ಪಡುತ್ತಿದ್ದವು. ಗ್ರಾಮದ ಸಭೆಗೆ ಇಲ್ಲವೆ ಗ್ರಾಮದ ಮುಖ್ಯನಿಗೆ ಎಲ್ಲವೂ ಅಂಕಿತವಾಗಿರುತ್ತಿತ್ತು. ಪ್ರಜಾಸತ್ತಾಕ ರಾಜ್ಯಪದ್ಧತಿಯಂತೆ ಈ ಗ್ರಾಮ ಸಭೆಯು ಪದ್ಧತಿಯಿತ್ತು. ಚಂದ್ರಗುಪ್ತಮಹಾರಾಜನು ಈ ಪದ್ಧತಿಗೆ ಉತ್ತೇಜನ ಕೊಟ್ಟಿದ್ದನು. ಆದರಿಂದಲೇ ಬೌದ್ಧವಾಙ್ಮಯದಲ್ಲಿ ಗ್ರಾಮಗಳ ವರ್ಣನೆಯು ಅಷ್ಟೊಂದು ಮನೋಹರವಾಗಿದ್ದದ್ದು ಕಂಡುಬರುವದು.

ಅತ್ಯಂತ ಪ್ರತಿಭಾಶಾಲಿಯೂ, ಅಸಾಧಾರಣ ವೀರ್ಯಶಾಲಿಯೂ ಆದ ಚಂದ್ರ ಗುಪ್ತನು ಭರತಖಂಡದಲ್ಲಿ ಮಗಧದ ಶ್ರೇಷ್ಠತೆಯನ್ನುಂಟುಮಾಡಿದನು. ರುದ್ರದಾಮ ನದ ತಾಮ್ರಶಾಸನದಿಂದ ಚಂದ್ರಗುಪ್ತನು ದೂರದಲ್ಲಿರುವ ಗುಜರಾಥವನ್ನು ಸಹ ಗೆದ್ದು ಅಲ್ಲಿ ಒಬ್ಬ ಕಾರಭಾರಿಯನ್ನು ನಿಯಮಿಸಿದ್ದನೆಂದು ತಿಳಿಯುವದು. ಈಗ ಅಫಗಾಣಿ ಸ್ತಾನವೆಂದು ಹೇಳುವ ಪ್ರದೇಶದವರೆಗಿನ ಎಲ್ಲ ರಾಜ್ಯವು ಚಂದ್ರಗುಪ್ತಮಹಾರಾಜನ ವಶದಲ್ಲಿತ್ತು. ಗ್ರೀಕ ಪಂಡಿತನಾದ ಪ್ಲಿನಿಯು ಮಗಧಸಾಮ್ರಾಜ್ಯವು ಆಗ ಸಿಂಧುಪ್ರದೇ ಶದವರೆಗೆ ವಿಸ್ತಾರವಾಗಿತ್ತೆಂದು ಬರೆದಿರುವನು. ಅಫಗಾನಿಸ್ತಾನದಿಂದ ಪಂಚನದದ ಪೂರ್ವದ ಮೇರೆಯಾದ ವಿಪಾಶಾನದಿಯ ದಂಡೆಯವರೆಗೆ ವೀರಶ್ರೇಷ್ಠನಾದ ಸೆಲ್ಯುಕ ಸನು ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿದ್ದನು. ಸೇಲ್ಯುಕಸನು ಚಂದ್ರಗುಪ್ತನ ಬಳಿಯಲ್ಲಿ ಪರಾಜಯವನ್ನು ಒಪ್ಪಿ ಅರಿಯಾನಿಯ ಬಹಳ ಭಾಗವನ್ನು ತಿರುಗಿ ಕೊಟ್ಟಿದ್ದನು. ಪಶ್ಚಿಮದಲ್ಲಿ ಹಿಂದುಕುಶ, ಆರಾಕೋಶಿಯಾ (ಪಶ್ಚಿಮಅಫಗಾಣಿಸ್ತಾನ) ಗೇಬ್ರಾ ಸಿಯಾ (ಮೆಕ್ರಾನ) ಕಾಬೂಲ, ಗಜನಿ, ಹಿರಾಟ ಇವೆಲ್ಲವು ಆಗ ಈಮೇರೆಗೆ ಮಗಧ ಸಾಮ್ರಾಜ್ಯಕ್ಕೆ ಸೇರಿದವು. ಪೂರ್ವಕ್ಕೆ ದೂರದಲ್ಲಿರುವ ತಾಮ್ರಲಿಪ್ತಿಯವರೆಗೆ ಮಗಧ ಸಾಮ್ರಾಜ್ಯವು ಹಬ್ಬಿತ್ತು. ತಾಮ್ರಲಿಪ್ತಿಯು ಆಕಾಲದ ಒಂದು ಮುಖ್ಯ ಬಂದರವು. ಸಿಂಹಲದ ಪ್ರವಾಸಿಗಳು ಭರತಖಂಡಕ್ಕೆ ಈ ಮಾರ್ಗದಿಂದಲೇ ಹೋಗಿಬರುತ್ತಿದ್ದರು.

ಮೈಸೂರುರಾಜ್ಯದ ಸಿದ್ದಾಪುರದ ತಾಮ್ರಶಾಸನದಿಂದ ತಿಳಿಯುವದೇನಂದರೆ, ಭರತಖಂಡದ ದಕ್ಷಿಣದಲ್ಲಿರುವ ಚೋಲ, ಪಾಂಡ್ಯರಾಜ್ಯ, ಸತಿಯಪುತ್ರ, ಕೇರಲ ಎಂಬ ದೇಶಗಳು ಆ ಕಾಲದಲ್ಲಿ ಸ್ವತಂತ್ರರಾಜ್ಯಗಳೆಂದು ಎಣಿಸಲ್ಪಡುತ್ತಿದ್ದವು. ಚೋಲರಾಜರು ಆಗ ತ್ರಿಚನಾಪಳ್ಳಿಯ ಬಳಿಯಲ್ಲಿರುವ ಉರಿಯಾರವನ್ನು ರಾಜಧಾನಿ ಯನ್ನು ಮಾಡಿಕೊಂಡಿದ್ದರು. ಈಗಿನ ಮಧುರೆಯು ಪಾಂಡ್ಯದೇಶದ ರಾಜಧಾನಿಯಾ

ಗಿತ್ತು. ಪಶ್ಚಿಮಘಟ್ಟದಿಂದ ಕನ್ಯಾಕುಮಾರಿಯವರೆಗಿನ ಮಲಬಾರದಂಡೆಯು ಕೇರಲ ದೇಶವೆಂದು ಕರೆಯಲ್ಪಡುತ್ತಿತ್ತು. ಮೇಲೆ ಹೇಳಿದ ಈ ನಾಲ್ಕು ರಾಜ್ಯಗಳು ಮಗಧ ಸಾಮ್ರಾಜ್ಯದ ದಕ್ಷಿಣದ ಮೇರೆಯೆಂದು ಎಣಿಸಲ್ಪಡುತ್ತಿದ್ದವು. ಒಂದು ತುದಿಗೆ ಪೂರ್ವ ತೀರಕ್ಕಿರುವ ಈಗಿನ ಪಾಂಡಿಚೆರಿಯೂ, ಇನ್ನೊಂದು ತುದಿಗೆ ಈಗಿನ ಕಾನಾನೂರಿಗೆ ಸೇರಿದ ಪ್ರದೇಶವೂ ಮಗಧಸಾಮ್ರಾಜ್ಯದ ದಕ್ಷಿಣದ ಮೇರೆಯೆಂದು ಹೇಳಬಹುದು. ಹಿಂದುಕುಶದಿಂದ ಹಿಮಾಲಯದ ಪೂರ್ವದ ತುದಿಯವರೆಗೆ ಮಗಧಸಾಮ್ರಾಜ್ಯದ ಉತ್ತರದ ಮೇರೆಯಿತ್ತು. ಈ ನಾಲ್ಕು ಮೇರೆಗಳ ನಡುವಿನ ಪ್ರದೇಶವೆಲ್ಲ ಮಗಧಸಾಮ್ರಾಜ್ಯದ ಆಧಿಪತ್ಯವನ್ನು ಒಡಂಬಡುತ್ತಿತ್ತು.

ಮಗಧ ಸಾಮ್ರಾಜ್ಯದಲ್ಲಿ ಮುಖ್ಯವಾಗಿ ೪ ಭಾಗಗಳಿದ್ದವು. ಅವು–ತಕ್ಷಶಿಲೆ, ಉಜ್ಜಯಿನಿ, ತೋಷಾಲಿ, ಸುವರ್ಣಗಿರಿ.* ತಕ್ಷಶಿಲೆಯು ಗಾಂಧಾರರಾಜ್ಯದ ರಾಜಧಾನಿಯಾಗಿತ್ತು. ಬುದ್ಧದೇವನ ಕಾಲದಲ್ಲಿ ಗಾಂಧಾರರಾಜನಾದ ಪುಷ್ಕಸತಿಯು ಮಗಧರಾಜನಾದ ಬಿಂಬಿಸಾರನ ಬಳಿಗೆ ಒಬ್ಬ ರಾಯಭಾರಿಯನ್ನೂ, ಒಂದು ಪತ್ರವನ್ನೂ ಕಳುಹಿದ್ದನು. ಬಹು ಪ್ರಾಚೀನಕಾಲದಲ್ಲಿಯೂ ಮಗಧದ ಪ್ರಭಾವವು ನೆಲೆಗೊಂಡಿತ್ತು. ಪಂಜಾಬಕ್ಕೆ ಸೇರಿದ ರಾವಲಪಿಂಡಿ ಪ್ರದೇಶವು ಪ್ರಾಚೀನ ತಕ್ಷಶಿಲೆಯ ಸ್ಥಾನವೆಂದು ಈಗಿನ ಐತಿಹಾಸಿಕರು ಹೇಳುವರು. ತಕ್ಷಶಿಲೆಯು ಬಹು ಸಮೃದ್ಧವಾದ ಪ್ರಾಚೀನ ನಗರಿಯು. ಇದು ಒಂದು ಕಾಲದಲ್ಲಿ ಭರತಖಂಡದ ಶಿಕ್ಷಣದ ಕೇಂದ್ರಸ್ಥಾನವಾಗಿತ್ತು. ಮೌರ್ಯರಾಜರ ಕಾಲದಲ್ಲಿ ಇಲ್ಲಿ ಒಬ್ಬ ರಾಯಭಾರಿಯು ಇರುತ್ತಿದ್ದನು. ಅವನು ಇಡಿ ಪಂಜಾಬ ಮತ್ತು ಕಾಶ್ಮೀರ ಪ್ರದೇಶಗಳ ಕಾರಭಾರವನ್ನು ನೋಡುತ್ತಿದ್ದನು. ಉಜ್ಜಯಿನೀನಗರಿಯು ಅವಂತೀಪ್ರದೇಶದ ರಾಜಧಾನಿಯಾಗಿತ್ತು. ಮೌರ್ಯರಾಜರ ಆಳಿಕೆಯ ಕಾಲದಲ್ಲಿ ಭರತಖಂಡದ ಪಶ್ಚಿಮಭಾಗಕ್ಕೆ ಇದೇ ರಾಜಧಾನಿಯೆನಿಸಿತ್ತು.

ಸುವರ್ಣಗಿರಿಯು ಎಲ್ಲಿತ್ತೆಂಬದು ಪೂರ್ಣವಾಗಿ ನಿಶ್ಚಯಿಸಲ್ಪಟ್ಟಿಲ್ಲ. ಖಾನದೇಶ ಜಿಲ್ಲೆಯೊಳಗಿನ ಸೋನಗಿರಿಯೇ ಪ್ರಾಚೀನ ಸುವರ್ಣಗಿರಿಯೆಂದು ಕೆಲವರು ಹೇಳುತ್ತಾರೆ. ಮತ್ತೆ ಕೆಲವರು ವರದಾರಾಜ್ಯದ ಪ್ರಾಚೀನ ರಾಜಧಾನಿಯಾದ ಸೋಣಗಡಕ್ಕೆ ಸುವರ್ಣಗಿರಿಯೆಂದು ಹೇಳುವರು. ಆದರೆ ಇದುವರೆಗೆ ಶೋಧಿಸಲ್ಪಟ್ಟ ಸಂಗತಿಗಳಿಂದ ಮೈಸೂರು ರಾಜ್ಯದ ಚಿತ್ರಕಲ್‌ದುರ್ಗ ಜಿಲ್ಲೆಯಲ್ಲಿ ಪ್ರಾಚೀನ ಸುವರ್ಣಗಿರಿಯಿತ್ತೆಂದು ನಾವು ಊಹಿಸುತ್ತೇವೆ. ತೋಷಾಲಿಯು ಕಲಿಂಗಪ್ರದೇಶದ ರಾಜಧಾನಿಯು. ಅಶೋಕಮಹಾರಾಜನು ಕಲಿಂಗಪ್ರದೇಶವನ್ನು ಜಯಿಸಿದ್ದನು. ಚಂದ್ರಗುಪ್ತ

*ಇದರ ವಿಸ್ತಾರವಾದ ವರ್ಣನೆಯು ಮುಂದಿನ ಅಧ್ಯಾಯದಲ್ಲಿ ಬಂದಿರುವದು.

ಮಹಾರಾಜನ ಆಳಿಕೆಯಲ್ಲಿ ಕಲಿಂಗದೇಶವು ಮಗಧದ ಪ್ರಾಧಾನ್ಯವನ್ನು ಒಪ್ಪಿದ್ದರೂ ನಿಜವಾಗಿ ಅಧೀನವಾಗಿರಲಿಲ್ಲ. ಈ ನಾಲ್ಕು ಪ್ರದೇಶಗಳ ಮೇಲೆ ರಾಜಪುತ್ರರಾಗಲಿ, ರಾಜನ ಸಮೀಪದ ಆಪ್ತರಾಗಲಿ ರಾಜಪ್ರತಿನಿಧಿಗಳಾಗಿ ನಿಯಮಿಸಲ್ಪಡುತ್ತಿದ್ದರು. ರಾಜಸಭೆಯಲ್ಲಿ ಎಲ್ಲ ಪ್ರಜೆಗಳಿಗೂ ಪ್ರವೇಶಿಸುವದಕ್ಕೆ ಅಡ್ಡಿಯಿರಲಿಲ್ಲ. ಬೇಕಾದಾಗ ಬೇಕಾದವನು ತನ್ನ ಕಷ್ಟವನ್ನು ರಾಜನ ಬಳಿಯಲ್ಲಿ ಅನಾಯಾಸವಾಗಿ ಹೇಳ ಬಹುದಾಗಿತ್ತು. ಕಾಮದಾರರು ಹೇಗೆ ಆಳುತ್ತಾರೆಂಬದೂ, ಪ್ರಜೆಗಳು ರಾಜಾಜ್ಞೆಯನ್ನು ಯಾವ ಮೇರೆಗೆ ಪಾಲಿಸುತ್ತಾರೆಂಬದೂ ಗುಪ್ತಚಾರರಿಂದ ಅರಸನ ಕಿವಿಗೆ ಮುಟ್ಟುತ್ತಿತ್ತು. ರಾಜ್ಯದಲ್ಲಿ ಯಾವದೊಂದು ಹೊಸ ಸಂಗತಿಯು ಜರುಗಿದರೆ ಕೂಡಲೆ ದೂತರು ಅರಸನಿಗೆ ಸುದ್ದಿಯನ್ನು ಹೇಳುವರು. ರಾಜ್ಯದಲ್ಲಿ ಹಲವು ಗುಪ್ತತಂತ್ರಗಳು ನಡೆದಿದ್ದವಾದದರಿಂದ ಚಂದ್ರಗುಪ್ತನು ಎಲ್ಲರನ್ನೂ ಸಂದಿಗ್ಧದೃಷ್ಟಿಯಿಂದ× ನೋಡುತ್ತಿದನು. ಈ ಸಂದೇಹದಿಂದ ಚಂದ್ರಗುಪ್ತನು ಹಗಲು ಮಲಗುತ್ತಿರಲಿಲ್ಲವೆಂದೂ, ರಾತ್ರಿಯಲ್ಲಿ ಕೂಡ ಪ್ರಹರ ಪ್ರಹರಕ್ಕೆ ಮಲಗುವ ಮನೆಯನ್ನು ಬದಲು ಮಾಡುತ್ತಿದ್ದನೆಂದೂ ಪ್ರವಾದವುಂಟು. ಮೌರ್ಯವಂಶದ ಅರಸರೂ, ಅಶೋಕಮಹಾರಾಜನೂ ಕೂಡ ಈ ನಿಯಮವನ್ನು ಪಾಲಿಸುತ್ತಿದ್ದರು. ರಾಜ್ಯದಲ್ಲಿ ಗುಪ್ತತಂತ್ರಗಳೂ ಅಂತಃಕಲಹಗಳೂ ನಡೆದಿರುವಾಗ ಚಂದ್ರಗುಪ್ತನು ಏಕಚ್ಛತ್ರಸಾಮ್ರಾಜ್ಯವನ್ನು ಸ್ಥಾಪಿಸಿದನೆಂಬದು ನಿಜವಾಗಿಯೂ ಆಶ್ಚರ್ಯಕರವಾಗಿರುವದು. ಆದದರಿಂದ ಈ ವಿಷಯದಲ್ಲಿ ಅವನು ಅಷ್ಟೊಂದು ಜಾಗರೂಕನಾಗಿದುದು ದೋಷವಲ್ಲ.

ಬೌದ್ಧಯುಗದಲ್ಲಿ ಭರತಖಂಡದಲ್ಲಿ ನಾಗರಿಕತೆಯು ಎಷ್ಟುಮಟ್ಟಿಗೆ ಬೆಳೆದಿತ್ತೆಂಬದನ್ನೂ, ಆದರೊಡನೆ ಶಿಲ್ಪ, ವಾಣಿಜ್ಯಗಳು ಎಷ್ಟುಮಟ್ಟಿಗೆ ಮೇಲನ್ನು ಹೊಂದಿದ್ದವೆಂಬದನ್ನೂ ಸಂಕ್ಷೇಪವಾಗಿ ಇಲ್ಲಿ ವಿವರಿಸುವದು ಅಪ್ರಾಸಂಗಿಕವಾಗಲಾರದು. ವೈದಿಕಯುಗವು ಗತಿಸಿ ಆಗ ಸಾವಿರಾರು ವರ್ಷಗಳು ಆಗಿದ್ದವು. ಆರ್ಯರ ಸರ್ವತೋಮುಖವಾದ ಪ್ರತಿಭೆಯಿಂದ ಭಾರತವು ಕ್ರಮವಾಗಿ ಏಳಿಗೆಯನ್ನು ಹೊಂದುತ್ತ ನಡೆದಿತ್ತು. ವೈದಿಕ ಕರ್ಮಗಳನ್ನೂ ಯಜ್ಞಯಾಗಾದಿಗಳನ್ನೂ ಮಾಡುವ ಉದ್ದೇಶದಿಂದಲೂ, ಸಮಾಜದ ನಿತ್ಯದ ಕೊರತೆಗಳನ್ನು ಪೂರೈಸುವ ಭಾವನೆಯಿಂದಲೂ ಪರಸ್ಪರ ಸಹಾಯಕಾರಿಗಳಾದ ಶಿಲ್ಪಿಗಳೂ, ಕಸಬುಗಾರರೂ ಆ ನಾಗರಿಕತೆಯುಳ್ಳ ಸಮಾಜದಲ್ಲಿ ಉಂಟಾಗುತ್ತ ನಡೆದಿದ್ದರು. ಆದರೆ ಬಹು ದೂರದ ಆ ಹಿಂದಿನ ಕಾಲದಲ್ಲಿ ಭಾರತವು ಹೇಗೆ ಮೆಟ್ಟು ಮೆಟ್ಟಿನಿಂದ ಉನ್ನತಿಯ ಶಿಖರವನ್ನೇರುತ್ತ ನಡೆದಿತ್ತೆಂಬದನ್ನು ಈಗ ನಿರ್ಣಯಿಸುವದು ಅಸಾಧ್ಯವು. ಧರ್ಮಶಾಸ್ತ್ರಗಳು, ವೇದವೇದಾಂತಗಳು ಮೊದಲಾದ ಗ್ರಂಥಗಳಲ್ಲಿ ನಡುನಡುವೆ ಪ್ರಸಂಗಾನುಸಾರವಾಗಿ ಬಂದ ಸಾಮಾಜಿಕಸ್ಥಿತಿಯ ಉಲ್ಲೇಖದಿಂದಲೇ

× Vincent Smith's Asoka P 76

ಆಗಿನ ಸ್ಥಿತಿಯನ್ನು ಸ್ವಲ್ಪಮಟ್ಟಿಗೆ ಊಹಿಸಬೇಕಾಗಿರುವದು, ಆರ್ಯರ ದೃಷ್ಟಿಯು ಕ್ಷಣಭಂಗುರವೂ ದುಃಖಮಯವೂ ಆದ ಈ ಲೋಕದಿಂದ ಬಹಳ ಮೇಲೆ, ಆ ಜರಾ ಮರಣಾತೀತವಾದ ಅಮೃತಲೋಕದ ಮೇಲೆ ಇತ್ತು. ಹಿಂದುಶಾಸ್ತ್ರಗಳು, ಜಾತಕ ಮೊದಲಾದ ಬೌದ್ಧ ಪಾಲಿ ಗ್ರಂಥಗಳು ಇವುಗಳಿಂದ ಈ ಸಾಮಾಜಿಕಸುಧಾರಣೆಯು ಜ್ಞಾನವು ಸ್ವಲ್ಪಮಟ್ಟಿಗೆ ಆಗುವದು.

ಭರತವರ್ಷದಲ್ಲಿ ಆ ಕಾಲಕ್ಕೆ ಶಿಲ್ಪ ಮತ್ತು ವಾಣಿಜ್ಯ ಇವು ಎಲ್ಲ ಬಗೆಯಿಂದ ಉನ್ನತಿಯನ್ನು ಹೊಂದಿದ್ದವು. ಸಮಾಜದಲ್ಲಿ ಬೇರೆ ಬೇರೆ ಶಿಲ್ಪಿಗಳೂ, ಕಸಬುಗಾರರೂ ತಮ್ಮ ತಮ್ಮ ಪಂಗಡಗಳನ್ನು ಮಾಡಿಕೊಂಡು ಇದ್ದರು. ಪ್ರತಿಯೊಂದು ಪಂಗಡಕ್ಕೆ ಒಬ್ಬೊಬ್ಬ ನಾಯಕನಿರುತ್ತಿದ್ದನು. ಹಲವು ತರದ ಚಕ್ಕಡಿಗಳು, ಗಾಡಿಗಳು, ಹಡಗಗಳು, ಇವುಗಳನ್ನು ರಚಿಸುವದರಲ್ಲಿ ನಿಪುಣರಾದ ಬಡಗಿಗಳೂ, ಕೆಲಸಕ್ಕೆ ಉಪಯೋಗವಾಗುವ ಹಲವು ತರದ ಆಯುಧಗಳನ್ನೂ ಶಸ್ತ್ರಾಸ್ತ್ರಗಳನ್ನೂ ಸೂಜಿ ಮೊದಲಾದ ಸೂಕ್ಷ್ಮ ಕೆಲಸಗಳನ್ನೂ ಮಾಡುವದರಲ್ಲಿ ನಿಪುಣರಾದ ಕಮ್ಮಾರರೂ, ಬೆಳ್ಳಿ ಬಂಗಾರಗಳಿಂದ ಹಲವು ತರದ ಸುಂದರ ವಸ್ತುಗಳನ್ನೂ ಅಲಂಕಾರಗಳನ್ನೂ ಮಾಡಬಲ್ಲ ಸೊನ್ನಗಾರರೂ, ಕಲ್ಲಿನಿಂದ ಮನೆ ಮೊದಲಾದವನ್ನು ಕಟ್ಟಬಲ್ಲ ಸ್ಥಪತಿಗಳೂ, ಸ್ವದೇಶದಲ್ಲಿಯೂ ಪರದೇಶಗಳಲ್ಲಿಯೂ ವೆಚ್ಚವಾಗುವ ನೂಲಿನ ಮತ್ತು ರೇಶಿಮೆಯ ನಾಜೂಕು ಬಟ್ಟೆಗಳನ್ನೂ ಬೇರೆ ತರದ ವಸ್ತ್ರಗಳನ್ನೂ ನೆಯ್ಯುವದರಲ್ಲಿ ನಿಪುಣರಾದ ನೇಕಾರರೂ, ಹಲವು ಬಗೆಯ ಬೆಲೆಯುಳ್ಳ ಜೋಡುಗಳನ್ನೂ ಸೂಕ್ಷ್ಮ ಜರದ ಕೆಲಸವುಳ್ಳ ಬೇರೆ ಚರ್ಮದ ಒಡವೆಗಳನ್ನೂ ಮಾಡಬಲ್ಲ ಸಮ್ಮಗಾರರೂ, ಹಲವು ಪಂಗಡದ ಕುಂಬಾರರೂ, ಹಸ್ತಿದಂತದಿಂದ ದಿನದ ಉಪಯೋಗದ ಮತ್ತು ಬೇರೆ ಸುಂದರವಾದ ಒಡವೆಗಳನ್ನು ಮಾಡಬಲ್ಲ ಜನರೂ, ರತ್ನಕಾರರೂ, ಬಲೆಗಾರರೂ, ಮಾಂಸವ್ಯವಸಾಯುಗಾರರೂ, ಬೇಟೆಯಿಂದ ಜೀವಿಸುವ ಬೇಡರೂ, ನಾಪಿತರೂ, ಮಾಲೆಗಾರರೂ, ಹೂಗಾರರೂ, ಸುಗಂಧದ್ರವ್ಯ ಮಾರುವವರೂ, ಸಮುದ್ರದಲ್ಲಿ ಸಂಚರಿಸುವ ನಾವಿಕರೂ, ಚಿತ್ರಗಾರರೂ, ಜೀನಗಾರರೂ ಮೊದಲಾದ ಕಸಬುಗಾರರು ಸಮಾಜದ ಕೊರತೆಗಳನ್ನು ಪೂರೈಸುವದಕ್ಕೂ ಸಮಾಜದ ಸುಖವನ್ನು ಹೆಚ್ಚಿಸಲಿಕ್ಕೂ ಗ್ರಾಮ ನಗರಾದಿಗಳ ಶೋಭೆಯನ್ನು ಹೆಚ್ಚಿಸಲಿಕ್ಕೂ ಕಾರಣವಾಗಿದ್ದರು. ಇದಲ್ಲದೆ ಅರಸರೂ, ಮಾಂಡಲಿಕರೂ ಇವರ ಆಶ್ರಯದಲ್ಲಿ ಇನ್ನೂ ಹಲವು ಜನ ಕಸಬುಗಾರರು ಇರುತ್ತಿದ್ದರು. ಮಾವುತರೂ, ಸಾರಥಿಗಳೂ, ಧಾನುಷ್ಕರೂ, ಪದಾತಿಗಳೂ, ಕ್ರೀತದಾಸರೂ, ಅಡಿಗೆಯವರೂ, ಸ್ನಾನಗೃಹ ಸೇವಕರೂ, ಅಗಸರೂ, ನೇಕಾರರೂ ಕುಂಬಾರರೂ, ಲೇಖಕರೂ, ಜಮಾಖರ್ಚು ಬರೆಯುವವರೂ, ಗಾಯಕರೂ, ನರ್ತಕರೂ ಮೊದಲಾದವರಿಗೆ ರಾಜಾಶ್ರಯವು ದೊರೆಯುತ್ತಿತ್ತು.

ಈ ಎಲ್ಲ ಶಿಲ್ಪಿಗಳೂ, ಕಸಬುಗಾರರೂ ಕ್ರಮದಿಂದ ಒಂದೊಂದು ಸಮಾಜವಾಗಿ ಇಲ್ಲವೆ ಒಂದೊಂದು ಜಾತಿಯಾಗಿ ವಿಭಾಗವಾಗುತ್ತ ನಡೆದರು. ಪ್ರತಿಯೊಂದು ಜಾತಿಗೆ ಒಬ್ಬ ನಾಯಕನು ಇರುವನು. ಪ್ರತಿಯೊಂದು ಜಾತಿಯ ವ್ಯಾಜ್ಯಗಳನ್ನು ಅವರವರ ನಾಯಕನೇ ತೀರಿಸುತ್ತಿದ್ದನು. ಎಲ್ಲ ಜಾತಿಗಳ ಮೇಲೆ ಒಬ್ಬ ಮಹಾಮೇತ್ತ (ಮಹಾ ಮಾತ್ರ Lord High Treasurer) ಎಂಬವನು ಸಭಾಧ್ಯಕ್ಷನಾಗಿರುತ್ತಿದ್ದನು. ಎಲ್ಲ ಜಾತಿಗಳ ಮೇಲೆ ಅವನ ಅಧಿಕಾರವು ನಡೆಯುತ್ತಿತ್ತು. ಇನ್ನು ಒಕ್ಕಲತನದ ದೇಶವಾದ ಭರತವರ್ಷದಲ್ಲಿ ಒಕ್ಕಲಿಗರ ಸಂಖ್ಯೆಯು ಎಲ್ಲಕ್ಕೂ ಹೆಚ್ಚಾಗಿತ್ತೆಂಬದನ್ನು ಹೇಳಬೇಕಾಗಿಲ್ಲ. ಈ ಒಕ್ಕಲಿಗರೂ ಕಸಬುಗಾರರೂ ಅಲ್ಲದೆ ಬೇರೆ ವ್ಯವಸಾಯಿಗಳೂ, ಶ್ರೀಷ್ಠಿಗಳೂ ಸಮಾಜದ ಐಶ್ವರ್ಯವನ್ನು ಹೆಚ್ಚಿಸುತ್ತಿದ್ದರು. ದೇಶದಲ್ಲಿ ಹುಟ್ಟಿದ ಎಲ್ಲ ಪ್ರಕಾರದ ಸರಕುಗಳು ರಾಜ್ಯದ ಎಲ್ಲ ಕಡೆಗಳಿಗೆ ಸ್ಥಲಮಾರ್ಗಗಳಿಂದಲೂ, ಜಲಮಾರ್ಗಗಳಿಂದಲೂ, ಚಕ್ಕಡಿ ನಾವೆ ಇವುಗಳ ಸಹಾಯದಿಂದ ಕಳಿಸಲ್ಪಡುತ್ತಿದ್ದವು. ಮತ್ತು ದೊಡ್ಡ ಹಡಗಗಳ ಸಹಾಯದಿಂದ ಸಮುದ್ರದ ಆಚೆಗಿರುವ ದೂರದೂರದ ದೇಶಗಳಿಗೆ ಕೂಡ ಅವು ಕಳುಹಿಸಲ್ಪಡುತ್ತಿದ್ದವು.* ಕ್ರಿಸ್ತ ಶಕದ ೩೦೦ ವರ್ಷಗಳಿಗಿಂತ ಮುಂಚೆ ಕಾಶಿಯಿಂದ ಭಾಗೀರಥಿಯ ಮಾರ್ಗವಾಗಿ ಹಲವು ತರದ ಸರಕುಗಳಿಂದ ತುಂಬಿದ ಹಡಗಗಳು ಸಮುದ್ರಸಂಗಮದ ಹತ್ತರ ಬಂದು ಮುಂದೆ ಹಿಂದೀ ಮಹಾಸಾಗರವನ್ನು ದಾಟಿ ದೂರದಲ್ಲಿ ಬ್ರಹ್ಮದೇಶಕ್ಕೂ, ಬರೋಚ (Baroch)ದಿಂದ ಕುಮಾರೀದ್ವೀಪವನ್ನು ಸುತ್ತುಹಾಕಿ ಸಿಂಹಲ ಮೊದಲಾದ ದ್ವೀಪಗಳಿಗೂ ಅನಾಯಾಸವಾಗಿ ಸಂಚಾರಮಾಡುತ್ತಿದ್ದವೆಂಬದಕ್ಕೂ ಸಮುದ್ರ ಮಾರ್ಗದಿಂದ ಬಾಬಿಲೋನದೊಡನೆ ವ್ಯಾಪಾರವು ನಡೆಯುತ್ತಿತ್ತೆಂಬದಕ್ಕೂ ಪ್ರಮಾಣಗಳು ದೊರೆಯುವವು. ಮಿಲಿಂದಪ್ರಶ್ನವೆಂಬ ಬೌದ್ಧ ಗ್ರಂಥದಲ್ಲಿ ಚೀನ ದೇಶದೊಡನೆ ಈ ದೇಶದ ವ್ಯಾಪಾರವು ನಡೆಯುತ್ತಿತ್ತೆಂದು ಉಲ್ಲೇಖವುಂಟು.

ಎತ್ತಿನ ಚಕ್ಕಡಿಗಳಲ್ಲಿ ನಾನಾಪ್ರಕಾರದ ಸರಕುಗಳನ್ನು ತುಂಬಿ ವ್ಯಾಪಾರಿಗಳು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗಿ ಬರುತ್ತಿದ್ದರು. ಮಾರ್ಗಗಳು ಸ್ವಲ್ಪ ವಿದ್ದವು. ಹೊಳೆಗಳಿಗೆ ಸೇತುವೆಗಳಿರಲಿಲ್ಲ. ಊರ ಮತ್ತು ಅಡವಿಯ ದಾರಿಗಳಿಂದ ಚಕ್ಕಡಿಗಳು ಸಾವಕಾಶವಾಗಿ ಹೋಗುತ್ತಿದ್ದವು. ದಾರಿಯಲ್ಲಿ ಪಟ್ಟಣಗಳು ಬಂದರೆ ಅಲ್ಲಿ ಎಲ್ಲರೂ ವಿಶ್ರಾಂತಿಯನ್ನು ಹೊಂದುತ್ತಿದ್ದರು. ರಾಜ್ಯದಲ್ಲಿ ಉಂಟಾಗುವ ಸರಕುಗಳ ಮೇಲೆ ಕರವು ಗೊತ್ತಾದದ್ದಿರುತ್ತಿತ್ತು. ಕಳ್ಳಕಾಕರಿಂದ ವ್ಯಾಪಾರದ ಸರಕುಗಳನ್ನು ಕಾಯುವದಕ್ಕೆ ಒಳ್ಳೆಯ ವ್ಯವಸ್ಥೆಯು ಇತ್ತು. ಬಂಗಾರದ ಇಲ್ಲವೆ ಬೆಳ್ಳಿಯ ನಾಣ್ಯಗಳು ಪ್ರಚಲಿತವಾಗಿರಲಿಲ್ಲವೆಂದು ತೋರುವದು. + ಕಾಹಾಪಣ ಎಂಬ ಒಂದು

* J. R. A S. 1901 P. 874.

+ Rhys Davids Buddhist Judia J. R. A. S. 1901 P. 871.

ತಾಮ್ರದ ನಾಣ್ಯವು ಮಾತ್ರ ಪ್ರಚಲಿತವಾಗಿತ್ತು. ಅದರ ಭಾರವು ೧೪೬ ಗ್ರೇನುಗಳಾಗಿತ್ತು. ಅದರ ಬೆಲೆಯು ಈಗಿನ ೧ ಶಿಲಿಂಗು ಆಗುತ್ತಿತ್ತು. ಬೇರೆ ಬೇರೆ ಕಾಹಾಪಣಗಳ ಮೇಲೆ ವ್ಯವಸಾಯಿಗಳ ಇಲ್ಲವೆ ಸಾವುಕಾರರ ಚಿಹ್ನಗಳು ಅಂಕಿತವಾಗಿರುತ್ತಿದ್ದವು. ಎಲ್ಲ ವ್ಯಾಪಾರದ ಸರಕುಗಳ ಬೆಲೆಯು ಒಬ್ಬ ಕಾಮದಾರನಿಂದ ನಿರ್ಧರಿಸಲ್ಪಡುತ್ತಿತ್ತು. ಆತನಿಗೆ ಮೂಲ್ಯ ನಿಯಾಮಕನೆಂದು ಹೆಸರು. ವ್ಯಾಪಾರಿಗಳಲ್ಲಿ ಹುಂಡಿಯ ವ್ಯವಹಾರವೂ ಇತ್ತು. ಈಗಿನ ಹ್ಯಾಂಡ್‌ನೋಟುಗಳಂಥ ಋಣಶೋಧಪ್ರತಿಜ್ಞಾಪತ್ರಗಳೂ ಪ್ರಚಲಿತವಾಗಿದ್ದವು. ಸಾಲ, ಮತ್ತು ಬಡ್ಡಿ ಇವುಗಳ ಉಲ್ಲೇಖವು ಬಹಳ ಕಡೆಗಳಲ್ಲಿರುವದು. ಬ್ಯಾಂಕುಗಳ ಅಸ್ತಿತ್ವದ ವಿಷಯವಾಗಿ ಪ್ರಮಾಣವು ಕಂಡುಬರುವದಿಲ್ಲ. ಆದರೆ ತಕ್ಷಶಿಲೆ, ಶ್ರಾವಸ್ತಿ, ವಾರಾಣಸಿ, ರಾಜಗೃಹ, ವೈಶಾಲಿ, ಕೌಶಾಂಬಿ ಮೊದಲಾದ ಪಟ್ಟಣಗಳಲ್ಲಿಯೂ, ಬೇರೆ ಕಡೆಗಳಲ್ಲಿಯೂ ಇದ್ದ ಎಷ್ಟೋ ಧನಾಢ್ಯ ಶ್ರೇಷ್ಠಿಗಳು ಬ್ಯಾಂಕುಗಳ ಕಾರ್ಯವನ್ನು ನಡಿಸುತ್ತಿದ್ದರು. ಈಗಿನ ಜಮೀನದಾರರು ಅಂದರೆ ಭೂಸ್ವಾಮಿಗಳು ಆಗ ಇರಲಿಲ್ಲ. ಶ್ರೀಮಂತರಾದ ಒಕ್ಕಲಿಗರೂ, ನಿಪುಣರಾದ ಶಿಲ್ಪಿಗಳೂ, ಕಸಬುಗಾರರೂ ಇವರಿಂದಲೇ ಸಮಾಜಗಳುಂಟಾಗಿದ್ದವು. ಭಾರತವರ್ಷದಲ್ಲಿ ಬಹುದೂರದ ಪ್ರಾಂತಗಳವರೆಗೆ ಮಾಡಿದ ಪ್ರಶಸ್ತವಾದ ಮಾರ್ಗಗಳಿಂದ ವ್ಯಾಪಾರವು ನಡೆಯುತ್ತಿತ್ತು. ಚಂಪಾನಗರದಿಂದ ಕೌಶಾಂಬಿಯವರೆಗೂ, ವಿದೇಹದಿಂದ ಗಾಂಧಾರದವರೆಗೂ, ಶ್ರಾವಸ್ತಿಯಿಂದ ರಾಜಗೃಹದವರೆಗೂ ಪ್ರಶಸ್ತವಾದ ರಾಜಮಾರ್ಗಗಳಿದ್ದವು.

ಕಾಲಚಕ್ರವು ತಿರುಗಿದಂತೆ ಕ್ರಮವಾಗಿ ಉಂಟಾದ ಜ್ಞಾನದ ಪ್ರಭಾವದಿಂದ ಧರ್ಮಪರಾಯಣವಾದ ಭಾರತವರ್ಷದಲ್ಲಿ ಕೂಡ ಆಗ ಹೊಸ ಹೊಸ ಭಾವಗಳು ಉತ್ಪನ್ನವಾಗಹತ್ತಿದವು. ವೈದಿಕ ಕರ್ಮಯುಗವು ಆಗ ಬಹುಶಃ ಲೋಪಹೊಂದಿದಂತೆ ಆಗಿತ್ತು. ದೇವತೆಗಳನ್ನು ಸಂತೋಷಬಡಿಸುವದಕ್ಕಾಗಿ ಸ್ವರ್ಗಾಪೇಕ್ಷಿಯಾದ ಯಜಮಾನನು ಮೊದಲಿನಂತೆ ಪುರೋಹಿತರಿಗೆ ಶರಣುಹೋಗಿ ಬಲಿಯನ್ನು ಕೊಟ್ಟು ದಕ್ಷಿಣೆ ಕೊಡುವದಕ್ಕೆ ಅಷ್ಟೊಂದು ಆತುರಬಡುತ್ತಿರಲಿಲ್ಲ. ಉದಾರವೂ ಸ್ವತಂತ್ರವೂ ಆದ ಮನೋವೃತ್ತಿಯು ಪುರೋಹಿತಪ್ರಭಾವದಿಂದ ಪಡುಗಡೆಹೊಂದುವದಕ್ಕೆ ಕ್ರಮದಿಂದ ಪ್ರಯತ್ನಿಸತೊಡಗಿತ್ತು. ಕರ್ಮಕಾಂಡವೆಂಬ ಆವರಣದಲ್ಲಿ ಬಚ್ಚಿಹೋದ ಅನಾದಿ-ಅನಂತ ಚೈತನ್ಯತತ್ವವು ಕ್ರಮದಿಂದ ಪ್ರಕಾಶಿಸಹತ್ತಿತು. ಆರ್ಯಋಷಿಗಳು ನಾನಾಪ್ರಕಾರಮಯವಾದ ಈ ಪ್ರಪಂಚದಲ್ಲಿ ಆ ಒಬ್ಬ ಅದ್ವಿತೀಯ ಪುರಾಣಪುರುಷನನ್ನು ಗೊತ್ತುಹಿಡಿದರು. ಸಾಂತದಲ್ಲಿ ಅನಂತವನ್ನು ಕಂಡರು. ಸಕಲ ದೇವತೆಗಳಲ್ಲಿ ಒಬ್ಬ ವಿರಾಟ್‌ಪುರುಷನಿರುವದನ್ನು ತಿಳಿದರು. ಬಹಿರ್ಮುಖವಾದ ದೃಷ್ಟಿಯು ಕ್ರಮದಿಂದ ಅಂತರ್ಮುಖವಾಯಿತು. ಜೀವಾತ್ಮ ಪರಮಾತ್ಮರ ಅಭೇದತತ್ವವೂ ಭಾವುಕರ

ಹೃದಯದಲ್ಲಿ ಉದಯವಾಯಿತು. ದಾರ್ಶನಿಕ ಋಷಿಗಳ ಸತ್ವಗುಣವು ತುಂಬಿದ ಹೃದಯದಲ್ಲಿ ವೈರಾಗ್ಯಭಾವನೆಯು ಬಲವಾಗಿ ಉಂಟಾಯಿತು. ಸೂರ್ಯ-ಚಂದ್ರ-ನಕ್ಷತ್ರ-ವಿದ್ಯುತ್ತುಗಳು ಯಾವದನ್ನು ಪ್ರಕಾಶಪಡಿಸಲಾರವೋ, ಯಾವದರ ಪ್ರಕಾಶವು ಸಮಗ್ರ ಚರಾಚರ ಜಗತ್ತನ್ನು ಪ್ರಕಾಶಪಡಿಸುವದೋ ಅಂಥ ಬ್ರಹ್ಮತತ್ವವನ್ನು ಸಾಮಾನ್ಯ ಯಜ್ಞಾಗ್ನಿಯು ಹೇಗೆ ಪ್ರಕಾಶಪಡಿಸಬೇಕು? ಈ ಹೊಸಭಾವನೆಯು ಸೆಳವಿಗೆ ಸಿಕ್ಕು ಪುರೋಹಿತರ ಏಕಚ್ಛತ್ರಪ್ರಭಾವವು ನಿರ್ವೀರ್ಯವಾಗಿ ಮುಳುಗಹತ್ತಿತು. ಇಂದ್ರಿಯ ನಿಗ್ರಹನಿರತರೂ ಭಿಕ್ಷಾಮಾತ್ರಜೀವಿಗಳೂ ಆದ ತಪಸ್ವಿಗಳಿಗೆ ಬ್ರಹ್ಮಜ್ಞಾನವೇ ಮುಖ್ಯ ಧ್ಯೇಯವಾಯಿತು. ಜನಾಂಗದ ಜೀವನದಲ್ಲಿ ಈ ಹೊಸ ಆಧ್ಯಾತ್ಮಿಕಭಾವನೆಯು ಉಂಟಾದುದನ್ನು ನೋಡಿ ಸಮಾಜದ ಶೀರ್ಷಸ್ಥಾನದಲ್ಲಿದ್ದ ಪುರೋಹಿತಗಣವು ಭಯ ಹೊಂದಿ ಮತ್ತೆ ದೃಢವಾದ ಪ್ರಯತ್ನದಿಂದ ತಮ್ಮ ಶ್ರೇಷ್ಠತೆಗೆ ಮೂಲವಾದ ಕರ್ಮಕಾಂಡದ ಪ್ರಾಧಾನ್ಯವನ್ನು ಸ್ಥಾಪಿಸುವದಕ್ಕೆ ಉದ್ಯುಕ್ತವಾಯಿತು. ಈ ಕಾಲದಲ್ಲಿಯೇ ತಪಸ್ಸು ಉಪವಾಸನೆ ಇವುಗಳ ಕಡೆಗೆ ಜನರ ದೃಷ್ಟಿಯನ್ನು ಎಳೆದೊಯ್ಯುವದಕ್ಕೂ, ಜನಸಮಾಜವು ಸ್ವತಂತ್ರವಿಚಾರದಕಡೆಗೆ ಮನಸ್ಸಿಡದಂತೆ ಮಾಡುವದಕ್ಕೂ ಅವರು ಹೊಸ ಹೊಸ ಉಪಾಯಗಳನ್ನು ಮಾಡತೊಡಗಿದರು. ಅವರ ಪ್ರಯತ್ನಕ್ಕೆ ಕೆಲ ಕಾಲದವರೆಗೆ ಯಶಸ್ಸು ದೊರೆಯಿತು; ಕಾಲಕ್ರಮದಿಂದ ಬ್ರಹ್ಮಜ್ಞಾನರೂಪವಾದ ಕೊನೆಯ ಧ್ಯೇಯದಕಡೆಗೆ ಜನರ ದೃಷ್ಟಿಯು ಮುಟ್ಟಿದಂತಾಗಿ ಅದರ ಪ್ರಾಪ್ತಿಗಾಗಿ ಭಿಕ್ಷಾವೃತ್ತಿ, ಶರೀರವನ್ನು ಕಷ್ಟಬಡಿಸುವದು, ಮೊದಲಾದ ಉಪಾಯಗಳನ್ನು ಮಾಡುವದೇ ಶ್ರೇಯಸ್ಕರವೆಂದು ಅವರ ಭಾವನೆಯಾಗಲಾರಂಭಿಸಿತು. ಈ ಮೇರೆಗೆ ಸತ್ಯ ತತ್ವವು ಮತ್ತೆ ಮರೆಯಾಯಿತು. ಉನ್ನತಿಯ ಮಾರ್ಗವು ಮತ್ತೆ ಕಟ್ಟಾಯಿತು. ಪುರೋಹಿತ ವರ್ಗವು ಮತ್ತೆ ಮೊದಲಿನ ಗೌರವವನ್ನು ಪಡೆಯುವದಕ್ಕೆ ಹಲವು ಉಪಾಯಗಳನ್ನು ಹುಡುಕತೊಡಗಿತು. ಅದರಿಂದ ಜನರಲ್ಲಿ ಪುರೋಹಿತರಿಗೆ ಶರಣುಹೋದರೆ ತಮ್ಮ ದುಃಖಗಳು ಇಲ್ಲದಂತಾಗುವವೆಂಬ ಆಶೆ ಹುಟ್ಟಿ ಪೂಜೆ, ಯಜ್ಞ, ಬಲಿಪ್ರದಾನ ಮೊದಲಾದವನ್ನು ಮತ್ತೆ ಮಾಡುವದಕ್ಕೆ ಆರಂಭವಾಯಿತು.

ಮತ್ತೆ ನಿರಂತರೋತ್ಪನ್ನವಾದ ಯಜ್ಞಧೂಮವು ಆಕಾಶವನ್ನು ಮುಸುಕಹತ್ತಿತು. ವಿಷಯಲಂಪಟರಾದ ಪಾಂಡಿತ್ಯಾಭಿಮಾನಿಗಳ ನಿಷ್ಫಲವಾದ ಕೂಟತರ್ಕದಿಂದ ನಿಜ ತತ್ವವು ಹೆಚ್ಚು ದುರ್ಬೋಧ್ಯವಾಗಿ ಸಂದೇಹಾಂಧಕಾರದಲ್ಲಿ ಹೆಚ್ಚು ಹೆಚ್ಚು ಮರೆಯಾಗತೊಡಗಿತು. ದ್ವೈತಾದ್ವೈತಗಳ ಸ್ವಕಪೋಲಕಲ್ಪಿತವಾದ ಅನುಮಾನಪ್ರಧಾನವಾದ ಶಾಸ್ತ್ರವ್ಯಾಖ್ಯಾನಗಳ ಕೋಲಾಹಲದಿಂದ ಕಿವಿಗಳು ಕಿವುಡಾಗಹತ್ತಿದವು. ಈ ಅನ್ವಾಭಾವಿಕವಾದ ಬದಲಾವಣೆಯಿಂದ ಧಾರ್ಮಿಕರಾಜ್ಯದಲ್ಲಿ ಭರದಿಂದ ಅಂದೋಲನವು (ಚಳವಳಿಯು) ಆರಂಭವಾಯಿತು. ಕರ್ಮಕಾಂಡಭಾರದಿಂದ ಪೀಡಿತವಾದ ಭಾರತ

ವರ್ಷವು ವ್ಯಾಕುಲಹೃದಯದಿಂದ ಆತ್ಮೋದ್ಧಾರಕ್ಕಾಗಿ ಭಗವಂತನ ಅವತಾರವಾಗ ಬೇಕೆಂದು ಬಯಸಹತ್ತಿತು. ಜ್ಞಾನಹೀನವಾದ ಕರ್ಮಕಾಂಡದಿಂದ ಪೀಡಿತರಾದ ಲಕ್ಷಾವಧಿ ಮಾನವರ ಗದ್ಗದಿತ ಕಂಠದಿಂದ ಹೊರಟ ಕರುಣಧ್ವನಿಯು ಭಗವಂತನ ಕಿವಿಗೆ ಹೋಗಿ ತಾಕಿತು; ಭಾರತವರ್ಷದ ಭಾಗ್ಯವು ಮತ್ತೆ ತೆರೆಯಿತು. ಶುಭಮು ಹೂರ್ತದಲ್ಲಿ ಶುದ್ಧೋದನ ಮಹಾರಾಜನ ಐಶ್ವರ್ಯವಿಲಾಸಪೂರ್ಣವಾದ ಮಂದಿರದ ಲ್ಲಿ ತ್ರಿಲೋಕಪಾವನಿಯೂ, ಸರ್ವಲೋಕಹಿತಕಾಂಕ್ಷಿಣಿಯೂ ಆದ ಒಂದು ಮಹಾಶ ಕ್ತಿಯು ಸಿದ್ಧಾರ್ಥನ ರೂಪದಿಂದ ಜಗತ್ತಿನಲ್ಲಿ ಅವಿರ್ಭವಿಸಿತು. ಭರತಖಂಡಕ್ಕೆ–ಕೇವಲ ಭರತಖಂಡಕ್ಕೇ ಏಕೆ, ಸಮಗ್ರ ಜಗತ್ತಿಗೇ ಆ ದಿನವು ಸ್ಮರಣೀಯ ದಿನವು. ಆ ಲೋ ಕಲಲಾಮಭೂತನಾದ ಮಹಾಪುರುಷನ ಅವತಾರದಿಂದ ವಸುಂಧರಾದೇವಿಯು ಧನ್ಯ ಳಾದಳು. ಮಾಯಾಮುಗ್ಧನಾದ ಶುದ್ಧೋದನ ಮಹಾರಾಜನು ಅತನನ್ನು ಹಲವು ಉಪಾಯಗಳಿಂದ ಸಂಸಾರದ ಆಶೆಗೊಳಗಾಗಿಸಬೇಕೆಂದು ಪ್ರಯತ್ನಿಸಿದನು. ಆದರೆ ಸ್ವತಃಸಿದ್ಧ ವೈರಾಗ್ಯವುಳ್ಳ, ಜೀವನ್ಮುಕ್ತನಾದ ಆ ಮಹಾಪುರುಷನನ್ನು ಯಾರು ತಡೆಯ ಬಲ್ಲರು? ಆಧಿವ್ಯಾಧಿಗಳಿಂದ ಪೀಡಿತವಾಗಿ ಜರಾಮರಣಗಳಿಗೆ ವಶವಾಗಿರುವ ಮಾನ ವರ ಕರುಣಧ್ವನಿಯು ನಡುನಡುವೆ ಅತನ ಮರ್ಮಸ್ಥಲಕ್ಕೆ ಮುಟ್ಟಲು ಸುಪ್ತಾಹತ ಕೇಸರಿಯೋಪಾದಿಯಲ್ಲಿ ಅತನು ವ್ಯಗ್ರನಾಗಿ ಹೋಗುತ್ತಿದ್ದನು. ವಿಶ್ವವ್ಯಾಪಿಯಾದ ದುಃಖಾಂಧಕಾರವು ಅತನ ಚಿತ್ತಾಕಾಶದಲ್ಲಿ ಪಸರಿಸಿ ಅತನಿಗೆ ಪೀಡೆಯನ್ನುಂಟು ಮಾ ಡಿತು. ಸಿದ್ಧಾರ್ಥನಿಗೆ ಜಗತ್ತಿನ ಜೀವರಾಶಿಯೆಲ್ಲ ಮಾಯಾಮೂಲಕವಾದ ಈ ಸಂಸಾ ರಸಾಗರದಲ್ಲಿ ಮುಳುಗಿರುತ್ತದೆಯೆಂದೂ, ಈ ಸಂಸಾರವು ಪ್ರವಾಹದ ನೀರಿನಂತೆ ನಿರಂ ತರಗತಿಶೀಲವೂ, ನೀರಮೇಲಿನ ಗುಳ್ಳೆಯಂತೆ ಕ್ಷಣಭಂಗುರವೂ ಆಗಿರುತ್ತದೆಯೆಂದೂ, ಜೀವರಾಶಿಯು ಸುಖದುಃಖರೂಪವಾದ ಚಕ್ರದ ಸುತ್ತಿನಲ್ಲಿ ಸಿಕ್ಕು ಬಿಬ್ಬಿಬಡಿಯುತ್ತಿ ರುವದೆಂದೂ ತೋರಿತು. ಆದದರಿಂದ ಈ ಅಸಹಾಯವಾದ ಮಾನವ ಸಮಾಜವನ್ನು ದುಃಖದ ಅಮರಿಕೆಯಿಂದ ಬಿಡಿಸಿ ಅದಕ್ಕೆ ಮುಕ್ತಿಯ ಮಾರ್ಗವನ್ನು ತೋರಿಸಬೇ ಕೆಂದು ಸಿದ್ಧಾರ್ಥನು ಸಂಕಲ್ಪಮಾಡಿದನು.

ಅರ್ಧಯುಗದ ವರೆಗಿನ ನಿರಂತರವಾದ ಸಾಧನದ ಬಲದಿಂದ ಅತನ ಸಮಸ್ತ ವಾಸನಾವೃತ್ತಿಗಳು ಸಮೂಲ ನಾಶವಾದವು. ಬಳಿಕ ಪೂರ್ಣ ಶಾಂತನೂ, ಉಪರತ ನೂ ಆಗಿ ಅತನು ಗಾಳಿಯಿಂದ ಹೊಯ್ದಾಡದ ದೀಪದಂತೆ ಇದ್ದುಕೊಂಡು ಬೋಧಿ ವೃಕ್ಷದ ಬುಡದಲ್ಲಿ ನಿರ್ವಾಣವನ್ನು ಇಲ್ಲವೆ ಬುದ್ಧತ್ವವನ್ನು ಪಡೆದನು. ಬಳಿಕ ಬುದ್ಧ ದೇವನು ಭಿಕ್ಷುಕನ ವೇಷದಿಂದ ಮನೆಮನೆಗೆ ಹೋಗಿ ಆ ಮಹಾರತ್ನವನ್ನು ದಾನ ಮಾಡಹತ್ತಿದನು. ತೇಜಃಪುಂಜನಾಗಿ, ಉರಿಯುವ ಅಗ್ನಿಯಂತೆ ಪ್ರಕಾಶಿಸುತ್ತಿರುವ ಆ ಮಹಾಗುರುವಿನ ಚರಣಗಳ ಮೇಲೆ ಲಕ್ಷಾವಧಿ ಜನರು ಭಕ್ತಿಭಾವದಿಂದ ಬಿದು

ಧನ್ಯರಾದರು. ಭಿಕ್ಷುಗಳು ಗುಂಪುಗುಂಪಾಗಿ ಆತನ ಶ್ರೀಮುಖ ಕೀರ್ತಿತವಾದ ಪವಿತ್ರ ಧರ್ಮವನ್ನು ವಿಶ್ವಾಸದಿಂದ ಸ್ವೀಕರಿಸಿ ದೇಶದಲ್ಲೆಲ್ಲ ಜನಸಾಮಾನ್ಯದಲ್ಲಿ ಸೇರಿಕೊಂಡು ಇರಲಾರಂಭಿಸಿದರು. ಉಚ್ಚನೀಚ ಭೇದವು ಅಡಗಿಹೋಯಿತು. ಪ್ರೇಮದ ಪ್ರವಾಹದಲ್ಲಿ ದೇಶವೆಲ್ಲ ಮುಳುಗಿಹೋಯಿತು. ಮೊದಲಿಂದ ನಡೆದುಬಂದ ಶುಷ್ಕಕರ್ಮಕಾಂಡ ಧರ್ಮವು ಉದಯಹೊಂದುತ್ತಿರುವ ಈ ಹೊಸ ಧರ್ಮದೆದುರಿಗೆ ಮಸಕಾಗಿ ಹೋಯಿತು. ಜನಸಾಮಾನ್ಯವು ಜಾತಿವರ್ಣಗಳ ಭೇದವಿಲ್ಲದೆ ಬುದ್ಧದೇವನ ಈ ಉದಾರವೂ ಜ್ಞಾನಮಯವೂ ಆದ ಧರ್ಮರಾಜ್ಯದಲ್ಲಿ ಆಶ್ರಯಹೊಂದಿ ಹೊಸಜೀವನವನ್ನು ಹೊಂದಿತು. ಮೆಲ್ಲಮೆಲ್ಲನೆ ಎಷ್ಟೋ ಶತಮಾನಗಳವರೆಗೆ ಆ ಸನ್ಯಾಸ ಮತ್ತು ನಿಷ್ಕಾಮ ಕರ್ಮ ಇವೇ ಮುಖ್ಯವಾಗಿ ಉಳ್ಳ ಪವಿತ್ರ ಧರ್ಮವು ಏಳಿಗೆಯನ್ನು ಹೊಂದಿ ಭರತ ಖಂಡದ ನಾಲ್ಕೂ ದಿಕ್ಕುಗಳಲ್ಲಿ ವ್ಯಾಪಿಸಿತು. ಇದೀಗ ಆ ಜಗತ್ಪ್ರಸಿದ್ಧವಾದ ಬೌದ್ಧಯುಗವು. ಈ ಯುಗದಲ್ಲಿಯೇ ಭಾರತವರ್ಷವು ಉನ್ನತಿಯ ಕೊನೆಯ ಮೆಟ್ಟಿನ್ನು ಏರಿತ್ತು. ಅಶೋಕನ ಆಳಿಕೆಯಲ್ಲಿ ಈ ಧರ್ಮವೇ ನಾಲ್ಕೂ ಕಡೆಗೆ ಹಬ್ಬಿತ್ತು.

ಕುಶೀನಗರದಲ್ಲಿ ಬುದ್ಧದೇವನು ದೇಹವಿಟ್ಟ ಬಳಿಕ ಮಗಧಕ್ಕೆ ಸೇರಿದ ವಿಭಾರ ಪರ್ವತದ ಸಪ್ತಪರ್ಣೀಗುಹೆಯ ಎದುರಿಗೆ ವಿಶಾಲವಾದ ಸಭಾಗೃಹದಲ್ಲಿ ಅಜಾತ ಶತ್ರುರಾಜನ ಆಳಿಕೆಯಲ್ಲಿ ಮೊದಲನೆಯ ಬೌದ್ಧಧರ್ಮದ ಮಹಾಸಭೆಯು ನೆರೆದಿತ್ತು. ಈ ಸಭೆಯಲ್ಲಿ ಬುದ್ಧದೇವನ ಅಮೂಲ್ಯವಾದ ಉಪದೇಶಗಳು ಸಂಗ್ರಹಿಸಲ್ಪಟ್ಟವು. ಈ ಲೋಕಹಿತಕರವಾದ ಉಪದೇಶಗಳು ಒಂದು ನೂರು ವರ್ಷಗಳವರೆಗೆ ಭಾರತವರ್ಷದ ಬೇರೆ ಬೇರೆ ಪ್ರದೇಶಗಳಲ್ಲಿ ಪ್ರಚಲಿತವಾಗಿದ್ದು ಒಂದು ಬಲವಾದ ಧರ್ಮವನ್ನುಂಟು ಮಾಡಿದವು. ಆದರೆ ಮುಂದೆ ಕಾಲಕ್ರಮದಿಂದ ಬುದ್ಧದೇವನ ಮಹಾಪರಿನಿರ್ವಾಣವಾದ ೧೦೦ ವರ್ಷಗಳ ತರುವಾಯ ಭಿಕ್ಷುಸಂಪ್ರದಾಯದಲ್ಲಿ ಮತಭೇದಗಳೂ ತನ್ಮೂಲಕವಾದ ಕಲಹಗಳೂ ಉಂಟಾದವು. ಅವುಗಳನ್ನು ನಾಶಮಾಡುವದಕ್ಕಾಗಿ ಸಂಸಾರತ್ಯಾಗಿಯೂ ಜಿತೇಂದ್ರಿಯನೂ ಪವಿತ್ರಾಚರಣೆಯುಳ್ಳವನೂ ಆದ ಸ್ಥವಿರ ರೇವತನು ವೈಶಾಲಿಯ ಮಹಾವನವಿಹಾರದಲ್ಲಿ ಎಲ್ಲ ಭಿಕ್ಷುಮಂಡಲಿಯನ್ನು ನೆರೆಯಿಸಿ ಎರಡನೆಯ ಮಹಾಸಭೆಯನ್ನು ಕೂಡಿಸಿದನು. ಆ ಮಹಾಸಭೆಯಲ್ಲಿ ಸರ್ವಸಮ್ಮತಿಯುಂದ ೧೦ ತರದ * ನಿಷಿದ್ಧವಸ್ತುಗಳ ಸಂಬಂಧವಾಗಿ ನಿಯಮಗಳುಂಟಾದವು. ಈ ಪ್ರಕಾರೆಗೆ ಮತ್ತೆ ಗೌತಮನು ತೋರಿಸಿದ ಧರ್ಮವು ಪರಿಶುದ್ಧವಾಗಿ ನೆಲೆಗೊಂಡು ದೇಶದೇಶಾಂತರಗಳಲ್ಲಿ ಹಬ್ಬುಗೊಂಡಿತು. ಈ ಮಹಾಧರ್ಮಕ್ಕೆ ಭಾರತವರ್ಷದ ಏಕಚ್ಛತ್ರ ಚಕ್ರವರ್ತಿಯಾದ ಅಶೋಕನು ಮುಖ್ಯ ಪೋಷಕನು. ಈ ಹೊಸ ಧರ್ಮದ ಉನ್ನತಿಯೂ,

* ಮುಂದೆ ಇದರ ವಿಸ್ತೃತ ವಿವರಣವು ಬರುವದು. (ಭಿಕ್ಷುಗಳ ಆಚಾರಕ್ಕೆ ಹೊರತಾದ ೧೦ ಯಮಗಳು)

ಅಭಿವೃದ್ಧಿಯೂ ಆತನಿಂದಲೇ ಮಾಡಲ್ಪಟ್ಟವು. ಅಶೋಕನ ವಿಚಿತ್ರವಾದ ಚರಿತ್ರವೂ ಅಪೂರ್ವವಾದ ಕೀರ್ತಿಯೂ ಗತಕಾಲದ ತೆರೆಯಲ್ಲಿ ಇದುವರೆಗೆ ಮರೆಯಾಗಿದ್ದವು. ಸಂಸ್ಕೃತ ಗ್ರಂಥಗಳಲ್ಲಿ ಅಶೋಕನ ವಿಷಯವಾಗಿ ಬಹುಸ್ವಲ್ಪ ಉಲ್ಲೇಖವುಂಟು. ಆದರೆ ಆತನು ಕಲ್ಲಿನಲ್ಲಿ ಕೊರೆಸಿದ ಲಿಪಿಗಳು ಈಗ ೨ ಸಾವಿರ ವರ್ಷಗಳ ಪೂರ್ವದ ಇತಿಹಾಸವನ್ನು ಎದೆಯಮೇಲಿಟ್ಟುಕೊಂಡು ನಿಃಶಬ್ದವಾಗಿ ನಿಂತಿರುವವು. ಭಾರತವಾಸಿಗಳು ಯಾರೂ ಆ ನಿಃಶಬ್ದವಾದ ಇತಿಹಾಸದ ಮೇಲೆ ಮೊದಲು ದೃಷ್ಟಿಯನ್ನಿಡಲಿಲ್ಲ. ಯಾವನು ಭರತವರ್ಷದ ಚಕ್ರವರ್ತಿಗಳಿಗೆ ಚೂಡಾಮಣಿಯೆನಿಸಿರುವನೋ, ಯಾವನ ರಾಜ್ಯಶಾಸನಪದ್ಧತಿಯು ಅತ್ಯುತ್ತಮವಾಗಿತ್ತೋ, ಯಾವನ ದಯೆಯೂ, ಧರ್ಮವೂ ಲಕ್ಷಾವಧಿ ಜನರಿಗೆ ನಿರ್ಮಲವಾದ ಆನಂದವನ್ನುಂಟುಮಾಡಿದವೋ ಆ "ದೇವಾನಾಂ ಪ್ರಿಯಃ ಪ್ರಿಯದರ್ಶೀ" ಅಶೋಕನ ವರ್ತಮಾನವು ಭಾರತವಾಸಿಗಳಿಗೆ ತಿಳಿದಿರಲಿಲ್ಲ. ಸರಸ್ವತಿಯು ವರಪುತ್ರರೆನಿಸಿದ ವ್ಯಾಸವಾಲ್ಮೀಕಿಗಳು ಅಶೋಕಚರಿತ್ರವನ್ನು ರಚಿಸಲಿಲ್ಲ. ಅಶೋಕನ ಆದರ್ಶಭೂತವಾದ ಜೀವನಚರಿತ್ರವನ್ನು ಭರತವರ್ಷದ ಜನಸಮಾಜವು ಸಮಾಲೋಚನೆಮಾಡಲಿಲ್ಲ. ಯಾವನು ರಾಜ್ಯದಲ್ಲಿ ಜೀವಹಿಂಸೆಯನ್ನು ಹೋಗಲಾಡಿಸಿ ಅಹಿಂಸಾಮೂಲಕವಾದ ಧರ್ಮವನ್ನು ಪ್ರಸಾರಗೊಳಿಸಿದನೋ, ಯಾವನು ಲೋಕಕಲ್ಯಾಣಕ್ಕಾಗಿ ಸಮುದ್ರಾಂಕಿತಪೃಥ್ವಿಯ ಪತಿಯಾಗಿದ್ದರೂ ವಿರಕ್ತನಂತೆ ಇದ್ದನೋ, ಯಾವನು ಮೂರ್ತಿಮಂತವಾದ ನ್ಯಾಯ-ಧರ್ಮ-ದಯೆಗಳೋ ಎಂಬಂತೆ ಒಪ್ಪುತ್ತಿದ್ದನೋ ಆ ಅಶೋಕನ ಜೀವನಚರಿತ್ರವು ಭಾರತೀಯರ ಕಂತದಿಂದ ಉಚ್ಚರಿಸಲ್ಪಡಲಿಲ್ಲ. ಭಾರತವಾಸಿಗಳು ಅವನನ್ನು ಮರೆತುಬಿಟ್ಟಿದ್ದರು. ಶುಭಮುಹೂರ್ತದಲ್ಲಿ ಯುರೋಪೀಯ ಐತಿಹಾಸಿಕರ ಶೋಧಕಬುದ್ಧಿಪ್ರವಾಹವು ಭರತಖಂಡಕ್ಕೆ ಅಭಿಮುಖವಾಗಿ ಹರಿದುಬಂದಿತು. ಆದದರಿಂದಲೇ ಈಗ ನಾವು ಮಹಾರಾಜ-ಚಕ್ರವರ್ತಿ-ಅಶೋಕನು ನಮ್ಮ ದೇಶದವನೆಂದು ತಿಳಿದು ಗೌರವಹೊಂದಲಹ- ರಾಗಿರುವೆವು.

ಇಂಗ್ಲಿಶ ಐತಿಹಾಸಿಕ ಪಂಡಿತರ ಪ್ರಯತ್ನದಿಂದ ನೇಪಾಲದಲ್ಲಿದ್ದ ಅಶೋಕಾವದಾನವು ಪ್ರಚಾರಕ್ಕೆ ಬಂದಿತು. ಸಿಂಹಲದಲ್ಲಿ ಪಾಲೀಭಾಷೆಯು ದ್ವೀಪವಂಶದಲ್ಲಿ ಅಶೋಕಚರಿತ್ರವು ವರ್ಣಿತವಾಗಿರುವದು. ವಿನಯದ ಭಾಷ್ಯದಲ್ಲಿ ಬುದ್ಧಘೋಷನು ಅಶೋಕಚರಿತ್ರದ ಸಮಾಲೋಚನೆ ಮಾಡಿರುವನು. ಸಿಂಹಲದ ಮಹಾವಂಶದಲ್ಲಿ ಹಲವು ಐತಿಹಾಸಿಕ ಮೂಲ ಸಂಗತಿಗಳು ಸಂಗ್ರಹಿಸಲ್ಪಟ್ಟಿರುವವು. ಈ ಎಲ್ಲ ವಿಷಯಗಳು ಇಷ್ಟು ದಿವಸಗಳವರೆಗೆ ಜನರ ಕಣ್ಣಿಗೆ ಮರೆಯಾಗಿದ್ದವು. ಯುರೋಪೀಯ ಐತಿಹಾಸಿಕರ ಪ್ರಯತ್ನದಿಂದಲೇ ಅವೆಲ್ಲವು ಜನಸಮೂಹದಲ್ಲಿ ಪ್ರಚಾರಕ್ಕೆ ಬಂದವು. ಅಸಾಧಾರಣ ಬುದ್ಧಿಶಕ್ತಿಯುಳ್ಳ ಜೇಮ್ಸ್ ಪ್ರಿನ್ಸೆಪನು ಭರತಖಂಡದ ಐತಿಹಾಸಿಕ ತತ್ವಗಳನ್ನು ಶೋಧಿಸುವದಕ್ಕಾಗಿ ಈ ದೇಶಕ್ಕೆ ಬಂದಿದ್ದನು. ಆ ಮಹಾರಾಯನು ಬಂದ ವೇಳೆಯು ಶುಭಮುಹೂರ್ತವೇ ಸರಿ. ಆತನ ಪ್ರತಿಭೆ, ಗಂಭೀರವಾದ ಅಂತರ್ದೃಷ್ಟಿ

ಇವುಗಳ ಪ್ರಭಾವದಿಂದ ಅಶೋಕಚರಿತ್ರದ ಹಲವು ವಿಷಯಗಳು ಸಂಗ್ರಹಿಸಲ್ಪಟ್ಟಿರುವವು. ಆತನು ಜಾರ್ಜ ಟರ್ನರನ ಸಹಾಯದಿಂದ ತಾಮ್ರಶಾಸನಗಳು, ನಾಣ್ಯಗಳು, ಶಿಲಾಲಿಪಿಗಳು, ಇವುಗಳಲ್ಲಿರುವ ವಿಷಯವನ್ನು ಕಂಡುಹಿಡಿಯಹತ್ತಿದನು. ಪ್ರಿಯದರ್ಶಿ ಮತ್ತು ಅಶೋಕ ಇವರಿಬ್ಬರೂ ಒಂದೇ ವ್ಯಕ್ತಿಯೆಂಬದನ್ನು ಜಗತ್ತಿನೆದುರಿಗೆ ಆವನೇ ಮೊದಲು ಪ್ರಕಟಿಸಿದನು. ಇದರಿಂದ ಬೌದ್ಧಯುಗದ ಇತಿಹಾಸವು ಹೊಸ ಪ್ರಕಾಶದಲ್ಲಿ ಬಂದಿತು. ಭಾರತವಾಸಿಗಳೇ, ಈಗ ನಿಮ್ಮ ಆ ಐತಿಹಾಸಿಕ ಮಹಾರತ್ನವನ್ನು ಸ್ವೀಕರಿಸಿರಿ. ನರಕುಲತಿಲಕನೆನಿಸಿದ ಅಶೋಕನು ಪ್ರಾಚೀನ ಭಾರತಕ್ಕೆ ಗೌರವಭೂತನಾಗಿ, ಸೂರ್ಯನಂತೆ ಪ್ರಕಾಶಿಸುತ್ತಿದ್ದನು. ಆತನನ್ನು ಭಾರತವಾಸಿಗಳು ತಿಳಿದೂ, ತಿಳಿಯದೆಯೂ ಬಹುದಿನಗಳಿಂದ ಪೂಜಿಸುತ್ತ ಬಂದಿರುವರು.

ನಾವು ಆ ಸೌಮ್ಯಸುಂದರ ಮೂರ್ತಿಯನ್ನು ಪ್ರತ್ಯಕ್ಷವಾಗಿ ಪೂಜಿಸಲಿಲ್ಲವೆಂಬದು ನಿಜವಾದರೂ ಪರೋಕ್ಷದಲ್ಲಿ ಆ ಸುಗುಣಮೂರ್ತಿಯ ಆರಾಧನೆಮಾಡುತ್ತ ಬಂದಿರುವೆವು. ಪ್ರಾಚೀನಭರತಖಂಡದಲ್ಲಿ ಏಕಚ್ಛತ್ರಚಕ್ರವರ್ತಿಯು ಯಾವನಿದ್ದನು, ಅದಕ್ಕೆ ಪ್ರಮಾಣವೇನು, ಎಂದು ಯಾರಾದರೂ ಕೇಳಿದರೆ ನಾವು ಉಚ್ಚಸ್ವರದಿಂದ ಅಶೋಕನು ಭಾರತದ ಏಕಚ್ಛತ್ರಾಧಿಪತಿಯೂ, ಆತನ ರಾಜನೀತಿ, ರಾಜ್ಯಶಾಸನಪದ್ಧತಿ, ಇತಿಹಾಸ, ಶಿಲಾಲಿಪಿ ಇವೇ ಅದಕ್ಕೆ ಪ್ರಮಾಣವೂ ಎಂದು ಉಚ್ಚಕಂಠದಿಂದ ಉತ್ತರ ಹೇಳುವೆವು.

ಸಾಗರವೇಷ್ಟಿತವಾಗಿಯೂ, ಶ್ಯಾಮಲವಾದ ಕೂಲಪ್ರದೇಶವುಳ್ಳದ್ದಾಗಿಯೂ ಸರ್ವಸಸ್ಯಸಂಪನ್ನವಾಗಿಯೂ ಇರುವ ಭಾರತಭೂಮಿಯು ಯಾವಾಗ ನಮ್ಮ ಮನಸ್ಸಿನಲ್ಲಿ ಬರುವದೋ, ಶುಭ್ರಕಿರೀಟಧಾರಿಯಾದ ಹಿಮಾಚಲನ ನಿತ್ಯಸೌಂದರ್ಯವು ಯಾವಾಗ ನಮ್ಮನ್ನು ಬೆರಗುವಡಿಸುವದೋ, ಪುಣ್ಯಕರವಾದ ತಪೋವನಗಳಲ್ಲಿ ರಾಮಚಂದ್ರ, ಯುಧಿಷ್ಠಿರ, ಹರಿಶ್ಚಂದ್ರ, ಭೀಷ್ಮ ಮೊದಲಾದ ಮಹಾಪುರುಷರ ಪವಿತ್ರವಾದ ಜೀವನಚರಿತ್ರದ ಕೀರ್ತನವು ನಡೆದದ್ದರ ಸ್ಮರಣವು ಯಾವಾಗ ನಮಗೆ ಆಗುವದೋ ಅದೇ ಕಾಲದಲ್ಲಿ ಎರಡುಸಾವಿರ ವರ್ಷಗಳ ಪೂರ್ವದಲ್ಲಿ ಭಾಗೀರಥಿಯು ತೀರದಲ್ಲಿ ಕೋಟೆಕೊತ್ತಳಗಳುಳ್ಳದ್ದಾಗಿ ಅತ್ಯಂತ ಶಿಲ್ಪಕೌಶಲ್ಯದಿಂದ ಮೆರೆಯುತ್ತಿದ್ದ ಪಾಟಲಿಪುತ್ರನಗರಿಯ ಸುವರ್ಣಸಿಂಹಾಸನದ ಮೇಲೆ ಕುಳಿತಂಥ ಚಕ್ರವರ್ತಿಕುಲತಿಲಕನಾದ ಅಶೋಕರಾಜರ್ಷಿಯ ಉಜ್ವಲವಾದ ಮೂರ್ತಿಯು ನಮ್ಮ ಕಣ್ಣಿದುರಿಗೆ ಬಂದು ನಿಲ್ಲುವದು. ಆಗ ನಾವು ಆ ರಾಜರ್ಷಿಯ ಉತ್ತಮವಾದ ರಾಜ್ಯಶಾಸನಪದ್ಧತಿಯನ್ನೂ, ಅಸಾಧಾರಣವಾದ ವೈರಾಗ್ಯವನ್ನೂ, ಉದಾರವಾದ ಲೋಕೋಪಕಾರವನ್ನೂ, ಪ್ರಬಲವಾದ ಧರ್ಮಾನುರಾಗವನ್ನೂ ನೆನಪಿಗೆ ತಂದುಕೊಂಡು ಆಶ್ಚರ್ಯಚಕಿತರಾಗುವೆವು; ಆನಂದಬಡುವೆವು; ಆ ಮಹಾಪುರುಷನ ಕೀರ್ತಿಯಿಂದ ಪವಿತ್ರ

ವಾದ ಭರತಖಂಡದಲಿ ಜನ್ಮಹೊಂದಿ ಕೃತಾರ್ಥರಾದೆವೆಂದು ಅಭಿಮಾನಬಡುವೆವು. ಮುಂದಿನ ಅಧ್ಯಾಯಗಳಲ್ಲಿ ನಾವು ಆ ಮಹಾರಾಜಚಕ್ರವರ್ತಿಯಾದ ಅಶೋಕನ ವಿಚಿತ್ರವಾದ ಚರಿತ್ರವನ್ನು ಅಲೋಚಿಸುವೆವು.

೧ನೆಯ ಅಧ್ಯಾಯ.



ಮೌರ್ಯರಾಜವಂಶಸ್ಥಾಪಕನಾದ ಚಂದ್ರಗುಪ್ತಮಹಾರಾಜನು ಮಗಧದ ರಾಜಧಾನಿಯಾದ ಪಾಟಲಿಪುತ್ರನಗರದಲ್ಲಿ* ಮಯೂರಾಂಕಿತ ಸಿಂಹಾಸನವನ್ನು ಸ್ಥಾಪಿಸಿದನು. ಶಿಲ್ಪಕೌಶಲ್ಯದಿಂದ ಕಂಗೊಳಿಸುವ ಅಲ್ಲಿಯ ಅರಮನೆಯನ್ನು ನೋಡಿ ಪ್ರೇಕ್ಷಕರು ಬೆರಗಾಗುತ್ತಿದ್ದರು. ಭಾಗೀರಥೀಶೋಣಗಳ ಸಂಗಮಸ್ಥಲದಲ್ಲಿ ಐದುನೂರೆಪ್ಪತ್ತು ಕೊತ್ತಳಗಳೂ, ಅರುವತ್ತುನಾಲ್ಕು ಅಗಸೆಗಳೂ ಉಳ್ಳ ಆ ರಾಜಧಾನಿಯು ಪರದೇಶದ ಪ್ರವಾಸಿಗಳ ಲಕ್ಷವನ್ನೆಳೆದುಕೊಳ್ಳುತ್ತಿತ್ತು. ಶಿಲ್ಪಕೌಶಲ್ಯದ ಗರ್ವವುಳ್ಳ ಗ್ರೀಕರು ಕೂಡ ಪಾಟಲಿಪುತ್ರದ ಸೌಂದರ್ಯವನ್ನು ಬಹಳವಾಗಿ ಹೊಗಳಿರುವರು. ವಿಶಾಲವಾದ ಕಲ್ಲಿನ ಉಪ್ಪರಿಗೆಗಳು, ವಿಚಿತ್ರವಾದ ಚಿತ್ರಗಳಿಂದ ಕಂಗೊಳಿಸುವ ಸ್ತಂಭಗಳು, ವಿಸ್ತೃತವಾದ ರಾಜಮಾರ್ಗಗಳು, ಇವುಗಳನ್ನು ಅವರು ಅತಿಶಯವಾಗಿ ವರ್ಣಿಸಿರುವರು. ಪುರಾಣಗಳಲ್ಲಿ, ಪಾಟಲಿಪುತ್ರಕ್ಕೆ ಕುಸುಮಪುರ ಇಲ್ಲವೆ ಪುಷ್ಪಪುರವೆಂಬ ಹೆಸರುಂಟು. ಪಟ್ಟಣದ ಸುತ್ತಲು ಇರುವ ಹೂದೋಟಗಳಲ್ಲಿ ಯಾವಾಗಲೂ ಅರಳಿರುವ ಹಲವು ತರದ ಹೂಗಳಿಂದ ಅಂದವಾಗಿದ್ದದರಿಂದಲೇ ಪ್ರಾಚೀನ ಕವಿಗಳು ಅದಕ್ಕೆ ಪುಷ್ಪಪುರವೆಂಬ ಹೆಸರಿಟ್ಟರೆಂದು ತೋರುವದು.

ಚಂದ್ರಗುಪ್ತಮಹಾರಾಜನು ೨೪ ವರ್ಷ ರಾಜ್ಯವಾಳಿ ದೇಹವಿಟ್ಟ ಬಳಿಕ ಬಿಂದುಸಾರ (ಅಮಿತ್ರಘಾತ) ನು ‡ ಕ್ರಿ. ಪೂ. ೨೯೭ರಲ್ಲಿ ಗೌರವವುಳ್ಳ ಪಾಟಲಿಪುತ್ರದ ಸಿಂಹಾಸನವನ್ನೇರಿದನು. ಬಿಂದುಸಾರನು ಅತ್ಯಂತ ಧಾರ್ಮಿಕನು. ಅತನ ರಾಜಧಾನಿಯಲ್ಲಿ ೬೦ ಸಾವಿರ ವಿದ್ವಾಂಸರಾದ ಪವಿತ್ರ-ಬ್ರಾಹ್ಮಣರಿಗೆ ನಿರಂತರವಾದ ಆಶ್ರಯವಿತ್ತು. ದಿನಾಲು ಸಾವಿರಾರು ಮುಖಗಳಿಂದ ಹೊರಟ ವೇದಧ್ವನಿಯಿಂದ ಅರಮನೆಯು ಶಬ್ದಾಯಮಾನವಾಗುತ್ತಿತ್ತು. ಧರ್ಮದ ಮೇಲೆ ಜೀವವುಳ್ಳ ಭರತಖಂಡದ ಪ್ರಜೆಗಳು ಇಂಥ ಧಾರ್ಮಿಕ ರಾಜನ ಆಳಿಕೆಯಲ್ಲಿ ಸುಖವಾಗಿ ಕಾಲಕಳೆಯುತ್ತಿದ್ದರು. ಬಿಂದುಸಾರನು

---

* Rhys David's Buddhist India P. 302.

‡ ವಿಷ್ಣು ಪುರಾಣ, ಜೈನ ಪರಿಶಿಷ್ಟಪರ್ವನ, ಮತ್ತು ಮಹಾವಂಶ.

ತಂದೆಯಂತೆ ರಾಜಕಾರ್ಯಗಳಲ್ಲಿ ಪ್ರತಿಭಾಶಾಲಿಯಾಗಿದ್ದನೆಂಬದು ಪ್ರಚಲಿತವಾಗಿರುವ ಕಥೆಗಳಿಂದಲೂ, ಐತಿಹಾಸಿಕರ ಲೇಖಗಳಿಂದಲೂ ಗೊತ್ತಾಗುವದು. ಆತನ ಆಳಿಕೆಯಲ್ಲಿ ಭರತಖಂಡದ ರಾಜಕೀಯವಾತಾವರಣದಲ್ಲಿ ಮೋಡಗಳಿರಲಿಲ್ಲ. ಸಿಕಂದರ ಶಹ, ಸೆಲ್ಯುಕಸರಂಥ ಮಹಾವೀರರು ಯಾರೂ ಆಗ ಭರತಖಂಡದ ಮೇಲೆ ಆಶಾದೃಷ್ಟಿಯನ್ನಿಟ್ಟಿರಲಿಲ್ಲ. ಎಲ್ಲ ಕಡೆಯಲ್ಲಿ ಶಾಂತಿಯು ನೆಲೆಗೊಂಡಿತ್ತು. ಬಿಂದುಸಾರನ ಆಳಿಕೆಯಲ್ಲಿ ಉಲ್ಲೇಖಿಸತಕ್ಕಂಥ ಯಾವ ರಾಜಕೀಯ ಪ್ರಸಂಗವೂ ಒದಗಲಿಲ್ಲ. ಚಂದ್ರಗುಪ್ತನು ಬಲವಾದ ತಳಹದಿಯ ಮೇಲೆ ರಾಜ್ಯಶಾಸನಪದ್ಧತಿಯನ್ನು ನೆಲೆಗೊಳಿಸಿದ್ದನು. ಆತನು ಐದುನೂರು ಜನ ಮಂತ್ರಿಗಳ ದೊಡ್ಡದೊಂದು ಸಭೆಯನ್ನು ಏರ್ಪಡಿಸಿದ್ದನು. ಆ ಸಭೆಯ ಮುಖ್ಯ ಮಂತ್ರಿಯು ರಾಜಕಾರ್ಯಗಳನ್ನು ಬಹಳ ದಕ್ಷತೆಯಿಂದ ಸಾಗಿಸುವನು. ರಾಜನ ಪ್ರಭಾವವೂ ಮಂತ್ರಿಮಂಡಲದ ಮೇಲೆ ಪೂರ್ಣವಾಗಿ ನಡೆಯುತ್ತಿತ್ತು. ಪೂರ್ವಪದ್ಧತಿಯಂತೆ ಬಿಂದುಸಾರನಿಗೆ ಹಲವು ಜನ ಅರಸಿಯರಿದ್ದರು. ಇವರಲ್ಲಿ ಅಶೋಕನ ತಾಯಿಯು ಇತಿಹಾಸವು ಬೇರೆ ಬೇರೆ ಕಡೆಯಲ್ಲಿ ಬೇರೆ ಬೇರೆ ವಿಧವಾಗಿರುವದು. ಮೂಲಕಥೆಯನ್ನು ಇತಿಹಾಸದೃಷ್ಟಿಯಿಂದ ಬರೆಯುವದಕ್ಕೆ ಮುಂಚೆ ನಾವು ಸಿಂಹಲದಲ್ಲಿಯೂ, ಭರತವರ್ಷದಲ್ಲಿಯೂ ಪ್ರಚಲಿತವಾಗಿರುವ ಅಶೋಕನ ಸಂಬಂಧವಾದ ಕಥೆಗಳನ್ನು ಪಾತಕರಿಗೋಸ್ಕರ ಸಂಕ್ಷೇಪವಾಗಿ ಬರೆಯುವೆವು.

ಸಿಂಹಲದೇಶದಲ್ಲಿಯ ಕಥೆಯು.

× ಅಜಾತಶತ್ರುರಾಜನಿಂದಾರಂಭಿಸಿ ನಾಗದಾಸಕನ ವರೆಗಿನ ಅರಸರು ಮಗಧದಲ್ಲಿ ರಾಜ್ಯವಾಳಿದ ತರುವಾಯ ಅದೇ ವಂಶದ ಧಾರ್ಮಿಕನೂ, ನಿಪುಣನೂ ಆದ ಶಿಶುನಾಗನೆಂಬ ಮಂತ್ರಿಯು ಪ್ರಜೆಗಳ ವಿಜ್ಞಾಪನೆಯಿಂದ ಮಗಧದ ಸಿಂಹಾಸನವೇರಿದನು. ಅವನು ೧೮ ವರ್ಷ ರಾಜ್ಯವಾಳಿದ ತರುವಾಯ ಅವನ ಮಗನಾದ ಕಾಲಾಶೋಕನು ೨೦ ವರ್ಷ ಆಳಿದನು. * ಈ ಕಾಲಾಶೋಕನಿಗೆ ೧೦ ಜನ ಮಕ್ಕಳಿದ್ದರು. ಕಾಲಾಶೋಕನ ತರುವಾಯ ಆತನ ಮಕ್ಕಳು ೨೨ ವರ್ಷ ರಾಜ್ಯವಾಳಿದರು. ಅವರು ಎಲ್ಲರೂ ಧಾರ್ಮಿಕರೂ, ಪ್ರಜಾರಂಜಕರೂ ಆಗಿದ್ದರು. ಕೊನೆಗೆ ನಂದವಂಶದ ೯ ಜನ ರಾಜರು ೨೨ ವರ್ಷ ಮಗಧದ ಸಿಂಹಾಸನದ ಮೇಲೆ ಇದ್ದರು. ಚಾಣಕ್ಯನೆಂಬ ಒಬ್ಬ ಬ್ರಾಹ್ಮಣನು ಪಾಟಲಿಪುತ್ರದಲ್ಲಿ ವಾಸಮಾಡುತ್ತಿದ್ದನು. ನಂದವಂಶದ ವಿಷಯವಾಗಿ ಈತನಲ್ಲಿ ಬಹಳ ತಿರಸ್ಕಾರವೂ ದ್ವೇಷವೂ ವಾಸವಾಡಿದ್ದವು. ಚಾಣಕ್ಯನು ಮಗಧರಾಜನಾದ ಧನನಂದನನ್ನು ತಂತ್ರದಿಂದ ಕೊಲ್ಲಿಸಿ ಮೌರ್ಯವಂಶದ ಚಂದ್ರಗುಪ್ತನನ್ನು ಪಾಟಲಿಪುತ್ರದ ಸಿಂಹಾಸನದ ಮೇಲೆ ಸ್ಥಾಪಿಸಿದನು.

× ಮಹಾವಂಶ ೪ ನೆಯ ಅಧ್ಯಾಯ. * ಮಹಾವಂಶ ೫ನೆಯ ಅಧ್ಯಾಯ.

ಚಂದ್ರಗುಪ್ತ ಚಕ್ರವರ್ತಿಯು *೩೪ ವರ್ಷ ರಾಜ್ಯವಾಳಿದನು. ಅವನ ಮಗನಾದ ಬಿಂದುಸಾರನು ೨೮ ವರ್ಷ ಆಳಿದನು. ಬಿಂದುಸಾರನಿಗೆ ಆತನ ೧೬ ಜನ ರಾಣಿಯರಲ್ಲಿ ಅಶೋಕನನ್ನು ಹಿಡಿದು ೧೦೧ ಜನ ಮಕ್ಕಳು ಹುಟ್ಟಿದರು. ಅವರಲ್ಲಿ ಸುಮನನು ಜ್ಯೇಷ್ಠನು. ತಿಷ್ಯನು ಕನಿಷ್ಠನು. ಕುಮಾರನಾದ ಅಶೋಕನು ಬಿಂದುಸಾರನ ಆಳಿಕೆಯಲ್ಲಿ ಭರತಖಂಡದ ಪಶ್ಚಿಮಭಾಗದ ರಾಜಪ್ರತಿನಿಧಿಯಾಗಿದ್ದನು. ಕೆಲವು ವರ್ಷಗಳು ಕಳೆದ ಬಳಿಕ ಬಿಂದುಸಾರನು ದೊಡ್ಡ ಬೇನೆಯಿಂದ ಹಾಸಿಗೆಹಿಡಿದನು. ಅಶೋಕನು ಈ ಸುದ್ದಿಯನ್ನು ಕೇಳಿದೊಡನೆ ಉಜ್ಜಯಿನಿಯಿಂದ ಪಾಟಲಿಪುತ್ರಕ್ಕೆ ಬಂದನು. ಮುಂದೆ ಬಿಂದುಸಾರನು ಮರಣಹೊಂದಲು ಅಶೋಕನು ರಾಜ್ಯಲೋಭದಿಂದ ಯುವರಾಜನಾದ ಸುಮನನನ್ನೂ ಉಳಿದ ೯೯ ಜನ ಅಣ್ಣತಮ್ಮಂದಿರನ್ನೂ ಕೊಂದನು. ಎಲ್ಲಕ್ಕೂ ಚಿಕ್ಕ ತಮ್ಮನಾದ ತಿಷ್ಯನನ್ನು ಮಾತ್ರ ಕೊಲ್ಲಲಿಲ್ಲ. ಈ ಪ್ರಕಾರ ರಕ್ತದ ಕಾಲುವೆಯನ್ನು ಹರಿಸಿ ಅಶೋಕನು ಮಗಧದ ಸಿಂಹಾಸನವನ್ನೇರಿದನು. ಕ್ರಮದಿಂದ ಆತನು ಭರತಖಂಡದಲ್ಲಿ ಏಕಚ್ಛತ್ರಸಾಮ್ರಾಜ್ಯವನ್ನು ಸ್ಥಾಪಿಸಿದನು. ಆದರೆ ಭ್ರಾತೃಹತ್ಯಾದೋಷದಿಂದ ಎಲ್ಲರೂ ಆತನಿಗೆ ಚಂಡಾಶೋಕನೆಂದು ಕರೆಯಲಾರಂಭಿಸಿದರು.

ಯುವರಾಜನಾದ ಸುಮನನ ಕೊಲೆಯಾದಾಗ ಆತನ ಹೆಂಡತಿಯು ಗರ್ಭಿಣಿಯಾಗಿದ್ದಳು. ಈ ಭಯಂಕರವಾದ ಕೊಲೆಯ ವರ್ತಮಾನವನ್ನು ಕೇಳಿ ಅಕೆಯು ಎದೆಯೊಡೆಯಿತು. ಜೀವದ ಅಂಜಿಕೆಯಿಂದಲೂ, ಗರ್ಭವನ್ನು ಕಾಯ್ದುಕೊಳ್ಳುವ ಆಶೆಯಿಂದಲೂ ಅವಳು ಯಾರಿಗೂ ತಿಳಿಯದಂತೆ ಅರಮನೆಯನ್ನು ಬಿಟ್ಟು ಪಟ್ಟಣದ ಪೂರ್ವದಿಕ್ಕಿನ ಅಗಸೆಯಿಂದ ಹೊರಬಿದ್ದು ಸಮೀಪದ ಒಂದು ಕಾಡನ್ನು ಸೇರಿದಳು. ಆ ಕಾಡಿನಲ್ಲಿ ಅಲ್ಲಲ್ಲಿ ಚಂಡಾಲರು ವಾಸಮಾಡಿಕೊಂಡಿದ್ದರು. ಅನಾಥಳೂ ನಿರಾಶ್ರಯಳೂ ಆದ ಯುವರಾಜಪತ್ನಿಯು ಅರಣ್ಯದಲ್ಲಿ ದಾರಿಯ ನಡೆದು ಬಳಲಿದಳು. ಎಂದೂ ಸೂರ್ಯದರ್ಶನವಿಲ್ಲದ ಯುವರಾಜಪತ್ನಿಯು ಮುಂದೆ ಒಬ್ಬ ಚಂಡಾಲನಾಯಕನ ಕಣ್ಣಿಗೆ ಬಿದ್ದಳು. ಚಂಡಾಲರೊಡೆಯನು ಆಕೆಯ ವರ್ತಮಾನವನ್ನು ಕೇಳಿಕೊಂಡು ಅತ್ಯಾದರದಿಂದ ಅವಳಿಗೆ ನಿನ್ನನ್ನು ಕಾಪಾಡುತ್ತೇನೆಂದು ಮಾತುಕೊಟ್ಟನು. ಈ ವಿಪನ್ನಾವಸ್ಥೆಯಲ್ಲಿ ಆಕೆಯು ಸರ್ವಲಕ್ಷಣಸಂಪನ್ನನಾದ ಕುಮಾರನನ್ನು ಹೆತ್ತಳು. ಚಂಡಾಲರಾಜನು ಕನಿಕರಬಟ್ಟು ಮನಃಪೂರ್ವಕವಾಗಿ ಆ ತಾಯಿಮಕ್ಕಳ ಪರಾಮರಿಕೆಯನ್ನು ಮಾಡತೊಡಗಿದನು. ಚಂಡಾಲರ ಆದರಪೂರ್ವಕವಾದ ಸೇವೆಯಿಂದ ಆ ಕೂಸು ದಿನದಿನಕ್ಕೆ ಬಿದಿಗೆಯ ಚಂದ್ರನಂತೆ ಬೆಳೆದು ತನ್ನ ಲಾವಣ್ಯದಿಂದ ವನಪ್ರದೇಶವನ್ನೆಲ್ಲ ಬೆಳಗಹತ್ತಿತು. ಚಂಡಾಲಬಾಲಕರೊಡನೆ ಆ ಕುಮಾರನು ಆಡಹತ್ತಿದನು.

*ನಿಜವಾದ ಆಳಿಕೆಯ ಕಾಲವು ೨೪ ವರ್ಷಗಳು.

ಆ ಕುಮಾರನಿಗೆ ಎಲ್ಲ ಹುಡುಗರು ಆದರದಿಂದ §ನಿಗ್ರೋಧನೆಂದು ಕರೆಯುತ್ತಿದ್ದರು. ಕಾಲಕ್ರಮದಿಂದ ಮಹಾವರುಣನೆಂಬ ಒಬ್ಬ ಬೌದ್ಧಸ್ಥವಿರನು ಶಿಶುವಿನ ಪವಿತ್ರಲಕ್ಷಣಗಳನ್ನು ಕಂಡು ಆತನು ಯಾರೆಂಬದನ್ನು ಗೊತ್ತುಹಚ್ಚಿದನು. ಈ ಹುಡುಗನು ೭ ವರ್ಷದ ವಯುಸ್ಸಿನಲ್ಲಿಯೇ ಆ ಸ್ಥಾವಿರನಿಂದ ಬೌದ್ಧಧರ್ಮದ ದೀಕ್ಷೆಯನ್ನು ಹೊಂದಿದನೆಂದು ಹೇಳಿದೆ. ಒಂದು ದಿವಸ ನಿಗ್ರೋಧನು ಪಾಟಲಿಪುತ್ರದ ಅರಮನೆಯ ಎದುರಿನ ರಾಜಮಾರ್ಗವನ್ನು ಹಿಡಿದು ಹೋಗುವಾಗ ಅಶೋಕಚಕ್ರವರ್ತಿಯು ಕಿಡಕಿಯಿಂದ ಆತನನ್ನು ನೋಡಿದನು. ಬಾಲಕನ ಗಂಭೀರವಾದ ಆಕಾರವನ್ನೂ, ಕಾಂತಿಯನ್ನೂ ಕಂಡು ಅರಸನು ಮರುಳಾಗಿ ಕೂಡಲೆ ಆ ಬಾಲಭಿಕ್ಷುವನ್ನು ಕರೆಸಿದನು. ಆ ಬಾಲಕನು ಮೆಲ್ಲಮೆಲ್ಲನೆ ರಾಜಸಭೆಯಲ್ಲಿ ಅರಸನ ಬಳಿಗೆ ಬಂದನು. ರಾಜನು ನಮ್ರಸ್ವಭಾವದ ಆ ಗಂಭೀರಮುಖಮುದ್ರೆಯ ಬಾಲಕನಿಗೆ ಬೇಕಾದ ಆಸನದಲ್ಲಿ ಕುಳ್ಳಿರಬಹುದೆಂದು ಹೇಳಿದನು. ನಿಗ್ರೋಧನು ರಾಜಸಭೆಯಲ್ಲಿ ಭಿಕ್ಷುಗಳಿಗೆ ತಕ್ಕ ಆಸನವಿಲ್ಲದ್ದನ್ನು ನೋಡಿ ಸಿಂಹಾಸನದ ಕಡೆಗೆ ಸಾಗಿದನು. ಅಶೋಕಮಹಾರಾಜನು ಪ್ರೇಮಪರವಶನಾಗಿ ಬಾಲಕನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ ಮರ್ಯಾದೆಮಾಡಿ ಬೌದ್ಧಧರ್ಮದ ವಿಷಯವಾಗಿ ಕೆಲವು ಪ್ರಶ್ನೆಗಳನ್ನು ಆತನಿಗೆ ಮಾಡಿದನು. ಆಗ ನಿಗ್ರೋಧನು ಇಂಪಾದ ದನಿಯಿಂದ—

"× अप्पमादो अमतपदं पमादो मच्चुनो पदम् ।
अप्पमत्ता न मीयन्ति ये पमत्ता यथा मता ।
एतं विसेसतो ञत्वा अप्पमादन्ति पण्डिता ।
अप्पमादे पमोदन्ति अरियानं गोचरे रता ।
ते झायिनो सातातिका निच्चं दल्ह परक्कमा ।
फुसन्ति धीरा निर्वाणं योगखेमं अनुत्तरम्" ॥

"ಅಪ್ರಮಾದವು ಅಮೃತದ (ಮೋಕ್ಷದ) ಮಾರ್ಗವು. ಪ್ರಮಾದವು ಮೃತ್ಯುವಿನ ದ್ವಾರವು. ಅಪ್ರಮತ್ತ (ಧರ್ಮಾಚರಣತತ್ಪರ)ರಾದವರು ಎಂದೂ ಸಾಯುವದಿಲ್ಲ. ಪ್ರಮತ್ತರು ಸತ್ತಂತೆಯೇ ಸರಿ. ಈ ಸತ್ಯವನ್ನು ಯಾರು ವಿಶೇಷವಾಗಿ ತಿಳಿದುಕೊಂಡು ಅಪ್ರಮತ್ತರಾಗಿರುವರೋ, ಮತ್ತು ಯಾವಾಗಲೂ ಆರ್ಯರ (ನಿರ್ವಾಣಮಾರ್ಗಾವಲಂಬಿಗಳ) ಜ್ಞಾನದಲ್ಲಿ ವಿಹರಿಸುವರೋ, ಯಾರು ಧ್ಯಾನನಿಷ್ಠರೂ, ಸತತ ಪ್ರಯತ್ನಶೀಲರೂ, ನಿತ್ಯ ದೃಢಪರಾಕ್ರಮವುಳ್ಳವರೂ ಆಗಿರುವರೋ ಆ ಎಲ್ಲ ವೀರ ಪುರುಷರು ಪರಮ ಶಾಂತಿರೂಪವಾದ ನಿರ್ವಾಣವನ್ನು ಪಡೆಯುವರು."

§ ಎಷ್ಟೋ ಕಡೆಗೆ ಈತನಿಗೆ ನ್ಯಗ್ರೋಧವೆಂದೂ ಕರೆದಿರುವರು.

× ಧಮ್ಮಪದ–ಅಪ್ಪಮಾದ ವಗ್ಗ.

ಆ ಬಾಲಭಿಕ್ಷುವು ಬೌದ್ಧಶಾಸ್ತ್ರದಿಂದ ಈ ಸೂತ್ರವನ್ನು ಉದ್ಧರಿಸಿ ಬೌದ್ಧಧರ್ಮದ ಸರಲವಾದ ಸ್ವರೂಪವನ್ನು ವಿವರಿಸಿದನು. ಆತನು ಸಮಿನುಡಿಗಳಿಂದ ಹೇಳಿದ ಈ ಉಪದೇಶಕ್ಕೆ ಅಶೋಕನು ಮೆಚ್ಚಿದನು. ಬುದ್ಧದೇವನ ಪವಿತ್ರವಾದ ಧರ್ಮತತ್ವಗಳನ್ನು ತಿಳಿದುಕೊಳ್ಳುವ ಇಚೆಯು ಅಶೋಕನಿಗೆ ಬಲವಾಗಿ ಉಂಟಾಯಿತು. ಮರುದಿನ ನಿಗ್ರೋಧನು ೩೨ ಜನ ಭಿಕ್ಷುಗಳೊಡನೆ ಅರಮನೆಗೆ ಬಂದನು. ತಥಾಗತನ ಜೀವನದ ಮತ್ತು ಧರ್ಮದ ಪವಿತ್ರ ತತ್ವಗಳನ್ನು ಕೇಳಿ ನೆರೆದ ಜನಸಮೂಹವು ಮರುಳಾಯಿತು. ಈ ಮೇರೆಗೆ ಅಶೋಕನು ಬುದ್ಧದೇವನು ತೋರಿಸಿದ ಆರ್ಯ * ಅಷ್ಟಾಂಗಿಕ ಮಾರ್ಗದ, ಮತ್ತು ಆರ್ಯ ‡ ಸತ್ಯಚತುಷ್ಟಯದ ಮಹಿಮೆಯನ್ನು ತಿಳಿದುಕೊಂಡು ಈ ನಿವೃತ್ತಿಮೂಲವಾದ ಧರ್ಮವನ್ನು ಸ್ವೀಕರಿಸಿದನು. ಸಿಂಹಾಸನವೇರಿದ ೪ ವರ್ಷಗಳ ತರುವಾಯ ಅಶೋಕನ ಧರ್ಮದಲ್ಲಿ ಈ ಬದಲಾವಣೆಯುಂಟಾಯಿತು. ಇದರಿದ ಭರತ ಖಂಡದ ಇತಿಹಾಸದಲ್ಲಿ ಬೌದ್ಧಯುಗವು ಗೌರವವುಳ್ಳದ್ದಾಗಿ ಪ್ರಕಾಶಿಸಿತು. ಚಕ್ರವರ್ತಿಯಾದ ಅಶೋಕನು ಈ ಧರ್ಮವನ್ನು ಸ್ವೀಕರಿಸಿದದರಿಂದ ಆ ಕಾಲದಲ್ಲಿ ಭರತಖಂಡದಲ್ಲೆಲ್ಲ ಒಂದು ತರದ ಹೊಸ ಜೀವನವು ತಲೆದೋರಿತು. ಶೀಲ, ಸಮಾಧಿ, ಪ್ರಜ್ಞೆ ಇವುಗಳ ಕಡೆಗೆ ಜನರ ಮನಸ್ಸು ತಿರುಗಿತು. ಶುಭದಿವಸದಲ್ಲಿ ಅಶೋಕನು ಈ ಪವಿತ್ರ ಧರ್ಮವನ್ನು ಸ್ವೀಕರಿಸಿದನು. ಅದೇ ವರ್ಷ ಆತನಿಗೆ ಪಟ್ಟಾಭಿಷೇಕವಾಯಿತು. ಚಿಕ್ಕ ತಮ್ಮನಾದ ತಿಷ್ಯನಿಗೆ ಯುವರಾಜಪಟ್ಟವನ್ನು ಕಟ್ಟಿದನು. ಪಟ್ಟಾಭಿಷೇಕವಾದ ನಾಲ್ಕು ವರ್ಷಗಳ ತರುವಾಯ ತಮ್ಮನಾದ ತಿಷ್ಯನೂ, ಒಬ್ಬ ಅಣ್ಣನ ಮಗನಾದ ಅಗ್ನಿಮಿತ್ರನೂ, ಮೊಮ್ಮಗನಾದ ಸುಮನನೂ ಈ ಹೊಸ ಧರ್ಮವನ್ನು ಸ್ವೀಕರಿಸಿದರು. ಈ ಕಾಲದಲ್ಲಿ ಲಕ್ಷಾವಧಿ ನರನಾರಿಯರು ತ್ಯಾಗವೈರಾಗ್ಯಗಳ ಮಹಿಮೆಯನ್ನು ಕೊಂಡಾಡಹತ್ತಿದರು. ಮುಂಡಿತಮಸ್ತಕರಾಗಿ ಕಾಷಾಯವಸ್ತ್ರಗಳನ್ನು ಧರಿಸಿದ ಶ್ರಮಣರಿಂದಲೂ, ಭಿಕ್ಷುಗಳಿಂದಲೂ ಸಮಗ್ರದೇಶವೆಲ್ಲ ತುಂಬಿಹೋಯಿತು.

ಬಿಂದುಸಾರನ ಕಾಲದಲ್ಲಿ ೬೦ ಸಾವಿರ ಬ್ರಾಹ್ಮಣರು ರಾಜಾಶ್ರಯದಲ್ಲಿದ್ದುಕೊಂಡು ರಾಜವಂಶದ ಕಲ್ಯಾಣಕ್ಕಾಗಿ ದೇವತಾರಾಧನೆಯನ್ನು ಮಾಡುತ್ತ, ವೇದಪಾಠದಿಂದ ರಾಜಧಾನಿಯನ್ನೆಲ್ಲ ಶಬ್ದಾಯಮಾನವಾಗಿ ಮಾಡುತ್ತ ಆನಂದದಿಂದ ಇದ್ದವರು ಈಗ ಅಪ್ಪಣೆಪಡೆದುಕೊಂಡರು. ಚಕ್ರವರ್ತಿಯ ಹೃದಯದಲ್ಲಿ ಹೊಸಪ್ರಕಾಶವು ಬಿದ್ದಿತು. ಆತನ ಮನಸ್ಸು ನಿರ್ವಾಣದಲ್ಲಿ ಸೇರಿ ಅದನ್ನೇ ಸಂಪಾದಿಸುವದರಲ್ಲಿ ತೊಡಗಿತು. ಈಗ ೬೦ ಸಾವಿರ ಬೌದ್ಧಭಿಕ್ಷುಗಳ ನಿರ್ವಾಣಗಾನದಿಂದ ಅರಮನೆಯು ಶಬ್ದಾಯಮಾನವಾಗಹತ್ತಿತು. ಈ ೬೦ ಸಾವಿರ ಬೌದ್ಧಭಿಕ್ಷುಗಳ ಸೇವೆಗಾಗಿ ಅರಸನ ಬೊಕ್ಕ

* ಸಮ್ಯಕ್‌ದೃಷ್ಟಿ, ಸಮ್ಯಕ್‌ಸಂಕಲ್ಪ, ಸಮ್ಯಕ್‌ವಾಕ್, ಸಮ್ಯಕ್‌ಕರ್ಮಾಂತ, ಸಮ್ಯಗಾಜೀವ, ಸಮಗ್‌ವ್ಯಾಯಾಮ, ಸಮ್ಯಕ್‌ಸ್ಮೃತಿ ಮತ್ತು ಸಮಾಧಿ.

‡ ದುಃಖ, ದುಃಖದ ಉತ್ಪತ್ತಿ, ದುಃಖಧ್ವಂಸ, ದುಃಖಧ್ವಂಸದ ಉಪಾಯ.

ಸವು ಮುಕ್ತದ್ವಾರವಾಯಿತು. ಪ್ರತಿದಿವಸ ಬೊಕ್ಕಸದಿಂದ ೪ ಲಕ್ಷ ರತ್ನಗಳು ಖರ್ಚಾಗುತ್ತಿದ್ದವೆಂದು ಪ್ರವಾದವುಂಟು. ಅಶೋಕನು ವಾಸನಾರಹಿತರಾದ ವಿರಕ್ತ ಭಿಕ್ಷುಗಳೊಡನೆ ಧರ್ಮವಿಚಾರದಲ್ಲಿ ಕಾಲಕಳೆಯತೊಡಗಿದನು. ಭಿಕ್ಷುಗಳು ಬುದ್ಧದೇವನ ಅಮೃತಮಯವಾದ ಉಪದೇಶಗಳನ್ನು ಚಕ್ರವರ್ತಿಗೆ ಶ್ರವಣಮಾಡಿಸಹತ್ತಿದರು. ಒಂದು ದಿವಸ ಅಶೋಕನು ನೆರೆದ ಭಿಕ್ಷುಗಳನ್ನೆಲ್ಲ ಏಕಾಂತದಲ್ಲಿ ಕರೆದು ಎಲೈ ಭಿಕ್ಷುಗಳೇ ತಾವು ನನ್ನ ಬಳಿಯಲ್ಲಿ ದಿನಾಲು ಶ್ರವಣಮಾಡಿಸುತ್ತಿರುವಂಥ, ಲೋಕಕಲ್ಯಾಣಕ್ಕಾಗಿ ಬುದ್ಧದೇವನು ಕೊಟ್ಟ ಉಪದೇಶಗಳ ಸಂಖ್ಯೆಯು ಎಷ್ಟು? ಎಂದು ಕೇಳಿದನು. ಅದಕ್ಕೆ ಅವರು " ಅವುಗಳನ್ನೆಣಿಸುವದು ಅಸಾಧ್ಯವು; ಕ್ಷುಬ್ಧವಾದ ಮಹಾಸಾಗರದಲ್ಲಿ ಮೇರೆಯಿಲ್ಲದೆ ಅಸಂಖ್ಯವಾಗಿ ಏಳುವ ಅಲೆಗಳನ್ನು ಯಾರಾದರೂ ಎಣಿಸಬಲ್ಲರೋ? ಮಹಾರಾಜರೇ, ಪ್ರಾಣಿಗಳ ಕಷ್ಟವನ್ನು ನೋಡಿ ವ್ಯಥೆಬಟ್ಟು ಸರ್ವಸಂಗವನ್ನು ತೊರೆದ ಕರುಣಾಮಯನಾದ ಬುದ್ಧದೇವನು ಎಷ್ಟು ಪ್ರಾಣಿಗಳನ್ನು ಎಷ್ಟು ಉಪದೇಶಗಳಿಂದ ಅಜ್ಞಾನಾಂಧಕಾರದಿಂದ ಬಿಡುಗಡೆಮಾಡಿದನೆಂಬದರ ಲೆಕ್ಕವನ್ನು ಯಾರು ಮಾಡಬಲ್ಲರು? ಆದರೂ ಭಾವಿ-ಮಾನವ-ಸಮಾಜದ ಕಲ್ಯಾಣಕ್ಕಾಗಿ ಸ್ಥವಿರರೇವತನೂ ಆನಂದನೂ ಪ್ರಯತ್ನದಿಂದ ಕಾಯ್ದಿಟ್ಟಂಥ ಆ ಉಪದೇಶಗಳ ಸಂಖ್ಯೆಯು ೮೪ ಸಾವಿರವಾಗುವದು. " ಎಂದು ಹೇಳಿದರು.

ಭಿಕ್ಷುಗಳು ಹೇಳಿದ ಈ ಮಾತನ್ನು ಕೇಳಿ ಅಶೋಕನು ಭರತಖಂಡದ ೮೪ ಸಾವಿರ ಗ್ರಾಮಗಳಲ್ಲಿ ಬುದ್ಧದೇವನ ೮೪೦೦೦ ಉಪದೇಶಗಳಲ್ಲಿ ಒಂದಕ್ಕೊಂದರಂತೆ ಸ್ತಂಭವನ್ನೂ ವಿಹಾರವನ್ನೂ ಕಟ್ಟಿಸುವ ಸಂಕಲ್ಪಮಾಡಿದನು. ರಾಜನೇ ನಿಶ್ಚಯಿಸಿದ ಬಳಿಕ ಕೇಳುವದೇನು? ಒಡನೆಯೆ ಪಾಟಲಿಪುತ್ರದಲ್ಲಿ " ಅಶೋಕಾರಾಮ "ವು ಕಟ್ಟಲ್ಪಟ್ಟಿತು. ಬೇರೆ ವಿಹಾರಗಳನ್ನು ಕಟ್ಟಿಸುವದಕ್ಕೆ ರಾಜಾಜ್ಞೆಯಾಯಿತು. ಮೂರು ವರ್ಷಗಳಲ್ಲಿ ಎಲ್ಲ ವಿಹಾರಗಳೂ, ಸ್ಮಾರಕ ಸ್ತಂಭಗಳೂ ಸಿದ್ಧವಾದವು. ಎಲ್ಲವೂ ಸಿದ್ಧವಾದ ಸುದ್ದಿಯು ಒಂದೇ ದಿವಸ ರಾಜನಿಗೆ ಮುಟ್ಟಿತು. ಆಗ ಅಶೋಕನು ದಿವ್ಯದೃಷ್ಟಿಯನ್ನು ಪಡೆದು, ಇದ್ದಲ್ಲಿಯೇ ತಾನು ಕಟ್ಟಿಸಿದ ವಿಹಾರಗಳನ್ನು ನೋಡಿ ರೋಮಾಂಚಿತನಾದನೆಂದು ದಂತಕಥೆಯುಂಟು. ಆಗ ಮಹಾರಾಜನು ಒಂದು ದೊಡ್ಡ ಸಭೆಯನ್ನು ಕರೆದನು. ಆ ಸಭೆಗೆ ಲಕ್ಷಾವಧಿ ಬೌದ್ಧಭಿಕ್ಷುಗಳೂ, ಭಿಕ್ಷುಣಿಗಳೂ ಬಂದಿದ್ದರು. ಅಶೋಕನು ತಾನೂ ಭಿಕ್ಷುಸಂಘದ ನಡುವೆ ಬಂದು ಕುಳಿತನು. ಆತನ ಆಶ್ಚರ್ಯಕರವಾದ ಧರ್ಮಾನುರಾಗವನ್ನು ನೋಡಿ ಎಲ್ಲರೂ ಆತನಿಗೆ " ಧರ್ಮಾಶೋಕ "ನೆಂದು ಕರೆದರು. ಅಶೋಕನು ತ್ರಿರತ್ನವನ್ನು ಆಶ್ರಯಿಸಿ ಸಂಪಾದಿಸಿದ ಗೌರವವು ಅಂತರಿಕ್ಷದಲ್ಲಿಯೂ, ಪಾತಾಲದಲ್ಲಿಯೂ ಸಾವಿರ ಯೋಜನಗಳವರೆಗೆ ಹಬ್ಬಿತು. * ಸ್ವರ್ಗವಾಸಿ

* ಮಹಾವಂಶ ೫ನೆಯ ಅಧ್ಯಾಯ.

ಗಳು ಆತನ ಸೇವೆಯನ್ನು ಮಾಡಿ ಪವಿತ್ರರಾದರು. ದೇವತೆಗಳು ಆತನ ಸಲುವಾಗಿ ಪುಣ್ಯತೀರ್ಥಗಳಿಂದ ನೀರನ್ನೂ, ಸ್ವಾದುಫಲಗಳನ್ನೂ, ಬೇರೆ ಪದಾರ್ಥಗಳನ್ನೂ ತಂದು ಅರಮನೆಯಲ್ಲಿ ಇಡುತ್ತಿದ್ದರು. ಅಶೋಕನು ನಿತ್ಯಯೋಗಿಯೂ, ವಿರಕ್ತನೂ ಆದ ಆ ಶಾಕ್ಯ ರಾಜಪುತ್ರನ ದಿವ್ಯಕಾಂತಿಯುಳ್ಳ ಮೂರ್ತಿಯನ್ನು ಪ್ರತ್ಯಕ್ಷ ನೋಡಬೇಕೆಂದು ವ್ಯಾಕುಲನಾದನು. ಆದರೇನು? ಆತನು ಪರಿನಿರ್ವಾಣವನ್ನು ಹೊಂದಿ ಎರಡುನೂರ ಹದಿನೆಂಟು ವರ್ಷಗಳಾಗಿ ಹೋಗಿವೆ! ಕರುಣಾಪೂರ್ಣನಾದ ಬುದ್ಧನ ಮೂರ್ತಿಯನ್ನು ಎಲ್ಲಿ ನೋಡೇನೆಂದು ಆತನು ಆತುರಪಡಲಾರಂಭಿಸಿದನು. ಅವನು ನಾಲ್ಕೂ ಕಡೆಗೆ ತಿರುಗಾಡಿ ಕೊನೆಗೆ ನಾಗರಾಜನಿಗೆ ಶರಣುಹೋದನು. ನಾಗರಾಜನು ತಾನು ಸ್ಥಾಪಿಸಿದ ಬುದ್ಧವಿಗ್ರಹವನ್ನು ಚಕ್ರವರ್ತಿಗೆ ತೋರಿಸಿದನು. ಅಶೋಕನು ದಿವ್ಯ ದೃಷ್ಟಿಯಿಂದ ಲೋಕಕಲ್ಯಾಣಕಾರಕನೂ, ನರದೇಹಧಾರಿಯೂ, ಸಾಕ್ಷಾತ್ ವೈರಾಗ್ಯದ ಮೂರ್ತಿಯೂ ಆದ ಬುದ್ಧದೇವನನ್ನೇ ಅಲ್ಲಿ ನೋಡಿದನು. ಪವಿತ್ರವಾದ ತೇಜೋರಾಶಿಯ ನಡುವೆ ತಾಪತ್ರಯದಿಂದ ಕ್ಲೇಶಬಡುವ ಮಾನವರಿಗೆ ವರದ ಹಸ್ತದಿಂದ ಆಶೀರ್ವಾದಮಾಡುವಂತೆ ಕುಳಿತಿರುವ ದಿವ್ಯಸುಂದರ ವಿಗ್ರಹವನ್ನು ಕಂಡನು. ಅಶೋಕನು ರೋಮಾಂಚಿತನಾದನು! ಆ ದಿವ್ಯಮೂರ್ತಿಯ ದರ್ಶನವನ್ನು ತೆಗೆದುಕೊಂಡು ಏಳು ದಿವಸಗಳ ಒಂದು ಉತ್ಸವವನ್ನು ಮಾಡುವದಕ್ಕೆ ಅಪ್ಪಣೆಯನ್ನಿತ್ತನು. ರಾಜ್ಯದಲ್ಲಿ ಮನೆಮನೆಗೆ ಬುದ್ಧದೇವನ ಮಹೋತ್ಸವದ ಗಾಯನವು ಆರಂಭವಾಯಿತು.

ಭರತಖಂಡದಲ್ಲಿಯ ಕಥೆಯು.

ಬಿಂಬಿಸಾರರಾಜನು ಮಗಧದ ಅಧಿಪತಿಯಾಗಿದ್ದನು. ರಾಜಗೃಹವು ಆತನ ರಾಜಧಾನಿಯು. ಅಜಾತಶತ್ರುವು ಆತನ ಮಗನು. ಅಜಾತಶತ್ರುವಿನ ಮಗನು ಉದಯಿಭದ್ರನು. ಆತನ ಮಗನು ಮುಂದನು. ಮುಂದನ ಮಗನು ಕಾಕವರ್ಣಿಯು. ಆತನ ಮಗನು ಸಹಾಲಿನನು. ಸಹಾಲಿನನ ಮಗನು ತೂಲಕೂಚಿಯು. ತೂಲಕೂಚಿಯ ಮಗನು ಮಹಾಮಂಡಲನು. ಮಹಾಮಂಡಲನ ಮಗನು ಪ್ರಸೇನಜಿತುವು. ಈತನ ಮಗನು ನಂದನು. ನಂದನ ಮಗನು ಬಿಂದುಸಾರನು. ಬಿಂದುಸಾರರಾಜನು ಪಾಟಲಿಪುತ್ರನಗರದಲ್ಲಿ ರಾಜ್ಯವಾಳಿದನು. ಆತನ ಹಿರಿಯ ಮಗನ ಹೆಸರು ಸುಷೀಮನು.

ಚಂಪಾನಗರದ ಒಬ್ಬ ಬ್ರಾಹ್ಮಣನಿಗೆ ಅತ್ಯಂತ ಸುಂದರಿಯಾದ ಒಬ್ಬ ಮಗಳಿದ್ದಳು. ತನ್ನ ಮಗಳ ಸೌಂದರ್ಯಾತಿಶಯದಿಂದ ಆತನ ಹೃದಯದಲ್ಲಿ ಮಹತ್ವಾಕಾಂಕ್ಷೆಯು ತಲೆದೋರಿತು. ಆ ಬ್ರಾಹ್ಮಣನು ಯಾವರೀತಿಯಿಂದಾದರೂ ಮಗಳನ್ನು ರಾಜಾಂತಃಪುರದಲ್ಲಿ ಸೇರಿಸಬೇಕೆಂದು ಸಂಕಲ್ಪಮಾಡಿದನು. ಬಿಂದುಸಾರಚಕ್ರವರ್ತಿಯು ಈ ಲಾವಣ್ಯವತಿಯಾದ ಕನ್ಯೆಯನ್ನು ನೋಡಿದರೆ ನಿಶ್ಚಯವಾಗಿ ಪಟ್ಟದರಸಿ

ಯನ್ನಾಗಿ ಮಾಡಿಕೊಳ್ಳುವನೆಂದು ಆಲೋಚಿಸಿ ಬ್ರಾಹ್ಮಣನು ತನ್ನ ಮಗಳನ್ನು ಯಾವದೋ ಒಂದು ರೀತಿಯಿಂದ ರಾಜಾಂತಃಪುರದಲ್ಲಿ ಸೇರಿಸಿದನು. ಅಂತಃಪುರ ಸ್ತ್ರೀಯರು ಬ್ರಾಹ್ಮಣಕನ್ಯೆಯಾದ ಸುಭದ್ರಾಂಗಿಯ ಅಸಾಧಾರಣ ಸೌಂದರ್ಯವನ್ನು ನೋಡಿ ಬೆರಗಾದರು. ಮುಂದೆ ಅಸೂಯೆಬಟ್ಟು ಅವರು ಆಕೆಗೆ ಕ್ಷೌರಕಾರ್ಯವನ್ನು ನಿಯಮಿಸಿದರು. ವಿಷಾದದಿಂದ ಸುಭದ್ರಾಂಗಿಯು ಕ್ಷೌರಕಾರಿಣಿಯ ಕೆಲಸವನ್ನು ಮಾಡತೊಡಗಿದಳು. ಕೆಲವು ಕಾಲವು ಕಳಿದು ಹೋದಬಳಿಕ ಒಂದುದಿನ ಸುಭದ್ರಾಂಗಿಯು ಬಿಂದುಸಾರನು ಅರಮನೆಯಲ್ಲಿ ಒಬ್ಬನೇ ತಿರುಗಾಡುತ್ತಿರುವದನ್ನು ಕಂಡು ಹೊತ್ತುಸಾಧಿಸಿ ಅವನ ಬಳಿಗೆ ಬಂದು ತನ್ನ ವರ್ತಮಾನವನ್ನೆಲ್ಲ ಹೇಳಿದಳು. ಶೋಕದಲ್ಲಿ ಅದ್ವಿತೀಯ ಸುಂದರಿಯಾದ ಈ ತರುಣಿಯನ್ನು ನೋಡಿ ರಾಜನು ಬೆರಗುವಡೆದನು. ಸುಭದ್ರಾಂಗಿಯು ಬ್ರಾಹ್ಮಣಕನ್ಯೆಯೆಂದು ತಿಳಿದು ಆಕೆಯನ್ನು ಮದುವೆಯಾಗಿ ಮುಖ್ಯ ಮಹಿಷಿಯನ್ನಾಗಿ ಮಾಡಿಕೊಂಡನು. ಕಾಲಕ್ರಮದಿಂದ ಆಕೆಯು ಪಟ್ಟಮಹಿಷಿಯಾದಳು. ಸುಭದ್ರಾಂಗಿಗೆ ಇಬ್ಬರು ಗಂಡುಮಕ್ಕಳು ಹುಟ್ಟಿದರು. ಅವರಲ್ಲಿ ಹಿರಿಯನಿಗೆ ಅಶೋಕನೆಂದೂ, ಕಿರಿಯನಿಗೆ ವಿಗತಾಶೋಕನೆಂದೂ ಹೆಸರು.

ಅಶೋಕನು ಬಾಲ್ಯದಲ್ಲಿ ಬಹಳ ಕುರೂಪಿಯಾಗಿದ್ದನು. ಆತನ ಕುರೂಪವನ್ನು ನೋಡಿ ಬಿಂದುಸಾರನು ಆತನು ರಾಜಪುತ್ರನೆಂದು ಹೇಳುವದಕ್ಕೆ ನಾಚುತ್ತಿದ್ದನು. ಬೇರೆ ರಾಜಕುಮಾರರೊಡನೆ ಅಶೋಕನು ಆಡುತ್ತಿದ್ದರೆ ಅರಸನು ಸಿಟ್ಟುಗೇಳುತ್ತಿದ್ದನು. ಒಂದು ದಿವಸ ಆತನು ಪ್ರಸಿದ್ಧ ದೈವಜ್ಞನಾದ ಪಿಂಗಲವತ್ಸಜೀವನನ್ನು ತನ್ನ ಮಕ್ಕಳ ಭವಿಷ್ಯವನ್ನು ಕೇಳುವದಕ್ಕಾಗಿ ಕರೆಸಿದನು. ಅರಸನು ಅಶೋಕನನ್ನು ಪ್ರೀತಿಸದಿರುವದನ್ನೂ ಆದರೆ ಆತನ ಶರೀರದ ಮೇಲೆಯೇ ರಾಜಲಕ್ಷಣಗಳೆಲ್ಲ ಇರುವದನ್ನೂ ದೈವಜ್ಞನು ನೋಡಿ ಅರಸನೆದುರಿಗೆ ನಿಜವನ್ನು ಹೇಳದೆ ಬಚ್ಚಿಟ್ಟು ಸುಭದ್ರಾಂಗಿಯ ಬಳಿಯಲ್ಲಿ ಅಶೋಕನೇ ಕೊನೆಯಲ್ಲಿ ಸಮುದ್ರಾಂಕಿತ ಪೃಥ್ವಿಯ ಏಕಚ್ಛತ್ರಚಕ್ರವರ್ತಿಯಾಗುವನೆಂದು ಹೇಳಿ ಹೋದನು.

ಬಿಂದುಸಾರನ ಆಳಿಕೆಯಲ್ಲಿ ತಕ್ಷಶಾಲೆಯಲ್ಲಿ ದಂಗೆಯೆದ್ದಿತು. ಆ ದಂಗೆಯನ್ನು ಅಡಗಿಸುವದಕ್ಕೆ ರಾಜನು ಅಶೋಕನನ್ನು ಕಳುಹಿದನು. ಆದರೆ ಅವನಿಗೆ ರಥ ಶಸ್ತ್ರಾಸ್ತ್ರ ಮೊದಲಾದ ಯಾವ ಯುದ್ಧಸಾಹಿತ್ಯವನ್ನೂ ಕೊಡಲಿಲ್ಲ. ಅಶೋಕನ ಕೊಲೆಯಾಗಬೇಕೆಂದೇ ಅರಸನ ಅಭಿಪ್ರಾಯವಿತ್ತು. ಅಶೋಕನು ತಂದೆಯ ಅಪ್ಪಣೆಯನ್ನು ತಲೆಯಲ್ಲಾಂತು ತಕ್ಷಶಿಲೆಗೆ ಪ್ರಯಾಣ ಮಾಡಿದನು. ಅಶೋಕನು ತಕ್ಷಶಿಲೆಗೆ ಸೈನ್ಯದೊಡನೆ ಮುತ್ತುವ ಎತ್ತುಗಡೆ ಮಾಡಲು ನಗರವಾಸಿಗಳು ಗುಂಪುಗುಂಪಾಗಿ ಆತನ ದರ್ಶನಕ್ಕೆ ಬಂದರು. ಅವರು ಎಲ್ಲರೂ ಒಟ್ಟಾಗಿ ಹೇಳಿದ್ದೇನಂದರೆ—" ನಮಗೆ ಅತ್ಯಾ

ಚಾರಿಗಳಾದ ಕಾಮದಾರರೊಡನೆ ಮಾತ್ರ ವಿರೋಧವುಂಟು. ರಾಜನೊಡನೆ ಇಲ್ಲವೆ ರಾಜಪುತ್ರರೊಡನೆ ಯಾವ ಪ್ರಕಾರದ ವಿರೋಧವೂ ಇಲ್ಲ." ಅಶೋಕನು ಸವಿನು ಡಿಗಳಿಂದ ಅವರನ್ನು ಸಮಾಧಾನಬಡಿಸಿದನು. ತಕ್ಷಶಿಲೆಯಲ್ಲಿ ಶಾಂತತೆಯನ್ನು ನೆಲೆಗೊ ಳಿಸಿ ರಾಜಕುಮಾರನು ರಾಜಧಾನಿಗೆ ಬಂದನು. ಯುವರಾಜನಾದ ಸುಷೀಮನು ಚಂಚಲನಾಗಿಯೂ ಉದ್ಧತನಾಗಿಯೂ ಇದ್ದದರಿಂದ ರಾಜ್ಯದ ಮುಖ್ಯ ಮುಖ್ಯ ಕಾಮದಾರರು ಆತನನ್ನು ಸೇರುತ್ತಿರಲಿಲ್ಲ ಅಶೋಕನು ತಿರುಗಿ ಬಂದ ಕೂಡಲೆ ಖಲ್ಲಾತಕ ರಾಧಾಗುಪ್ತರೆಂಬ ಮಂತ್ರಿಗಳು ಸುಷೀಮನನ್ನು ಪಟ್ಟದಿಂದ ತಳ್ಳಿ ಅಶೋ ಕನನ್ನು ಸಿಂಹಾಸನದಲ್ಲಿ ಕುಳ್ಳಿರಿಸಬೇಕೆಂದು ಸಂಕಲ್ಪವಾಡಿದರು.

ತಕ್ಷಶಿಲೆಯಲ್ಲಿ ಮತ್ತೆ ದಂಗೆಯೆದ್ದಿತು. ಆಗ ಯುವರಾಜನಾದ ಸುಷೀಮನು ಅಲ್ಲಿಗೆ ಕಳುಹಲ್ಪಟ್ಟನು. ಸುಷೀಮನಿಂದ ದಂಗೆಯನ್ನು ನಿಲ್ಲಿಸುವದು ಆಗಲೇ ಇಲ್ಲ. ಬಿಂದುಸಾರನು ತನ್ನ ಮರಣಕಾಲವು ಸವೀಪಿಸಲು ಸುಷೀಮನಿಗೆ ತಿರುಗಿ ಬರುವ ದಕ್ಕೂ, ಅಶೋಕನಿಗೆ ತಕ್ಷಶಿಲೆಗೆ ಹೋಗುವದಕ್ಕೂ ಅಪ್ಪಣೆ ಮಾಡಿದನು.

ಬಿಂದುಸಾರ ರಾಜನು ದೇಹವಿಟ್ಟ ಬಳಿಕ ಮಂತ್ರಿಗಳು ಅಶೋಕನನ್ನು ಸಿಂಹಾ ಸನದಲ್ಲಿ ಕುಳ್ಳಿರಿಸಿದರು. ಈ ಕಾಲದಲ್ಲಿ ಸುಷೀಮನು ತಾನೇ ಮಗಧದ ಸಿಂಹಾಸನವ ನ್ನಾಕ್ರಮಿಸಬೇಕೆಂದು ಪಾಟಲಿಪುತ್ರದ ಕಡೆಗೆ ಬಂದನು. ಅಶೋಕನು ಮಂತ್ರಿಗ ಳಿಂದಲೂ, ಸಜ್ಜಾಗಿದ್ದ * ರಾಕ್ಷಸ ಸೈನ್ಯದಿಂದಲೂ ಕೂಡಿಕೊಂಡು ಸುಷೀಮನ ಮಾರ್ಗವನ್ನು ಕಟ್ಟಿದನು. ರಾಜಧಾನಿಯ ಅಗಸೆಯಲ್ಲಿ ಸಶಸ್ತ್ರರಾದ ಸೈನಿಕರು ಕಾವ ಲಿಗೆ ನಿಂತರು; ಮತ್ತು ಅವರು ಕಂದಕದ ತುಂಬ ಭಯಂಕರವಾದ ಬೆಂಕೆಯನ್ನು ಸಿದ್ಧಪಡಿಸಿದರು. ದೈವಯೋಗದಿಂದ ಸುಷೀಮನು ಆ ಕಂದಕದಲ್ಲಿ ಬಿದ್ದು ಭಯಂಕ ರವಾದ ಯಾತನೆಯಿಂದ ಪ್ರಾಣಬಿಟ್ಟನು.

ತಿಬೇಟದಲ್ಲಿಯ ಕಥೆಯು. ×

ಮಗಧರಾಜನಾದ ಅಜಾತ ಶತ್ರುವು ೩೨ವರ್ಷ ರಾಜವಾಳಿದನು. ಆತನ ಆಳಿ ಕೆಯ ೫೬ನೆಯ ವರ್ಷ ಬುದ್ಧದೇವನು ದೇಹವಿಟ್ಟನು. ಅಜಾತ ಶತ್ರುವಿನ ತರುವಾಯ ೧೦ಜನ ಅರಸರು ಆಳಿಹೋದ ಬಳಿಕ ಧರ್ಮಾಶೋಕನು ಮಗಧದ ಸಿಂಹಾಸನವನ್ನೇ

* ರಾಕ್ಷಸನೆಂಬವನು ನಂದವಂಶದ ಮುಖ್ಯ ಅಮಾತ್ಯನೂ ಸೈನ್ಯಾಧ್ಯಕ್ಷನೂ ಆಗಿದ್ದನು. ಮುದ್ರಾ ರಾಕ್ಷಸದಲ್ಲಿ ಈತನ ಸಾಹಸ, ಶೌರ್ಯ, ಪ್ರಭುಭಕ್ತಿಗಳ ವರ್ಣನೆಯು ವಿಸ್ತಾರವಾಗಿ ಉಂಟು. ಈ ರಾಕ್ಷ ಸನ ಅಧೀನದಲ್ಲಿರುವ ಸೈನ್ಯಕ್ಕೇ ರಾಕ್ಷಸ ಸೈನ್ಯವೆಂದು ಹೇಳಿರಬೇಕೆಂದು ತೋರುತ್ತದೆ. ನಂದವಂಶದ ಲೋಪವಾದ ಬಳಿಕ ಆ ಸೈನ್ಯವು ಮೌರ್ಯರಾಜರ ವಶದಲ್ಲಿಯೇ ಇತ್ತು.

× Rockhill Life of Buddha.

ರಿದನು. ಅವನು ೫೪ ವರ್ಷ ರಾಜ್ಯವಾಳಿದನು. ಬುದ್ಧದೇವನ ನಿರ್ವಾಣವಾದ ತರುವಾಯ ೨೩೪ನೆಯ ವರ್ಷ ಧರ್ಮಾಶೋಕನು ಮಗಧದ ಸಿಂಹಾಸನದ ಮೇಲೆ ಇದ್ದನು. ಮೊದಮೊದಲು ಆತನು ಕ್ರೂರನೂ ನಿಷ್ಕರುಣಿಯೂ ಆಗಿದ್ದನು; ಎಷ್ಟೋ ಜನರ ಕೊಲೆಮಾಡಿದನು. ಮುಂದೆ ಆತನ ಜೀವನದಲ್ಲಿ ಆಶ್ಚರ್ಯಕರವಾದ ಬದಲಾವಣೆಯುಂಟಾಯಿತು. ದಯೆಯೂ, ಧರ್ಮವೂ ಆತನಲ್ಲಿ ನೆಲೆಗೊಂಡವು. ಅರ್ಹತ್-ಯಶನಿಂದ ಈ ಬದಲಾವಣೆಯುಂಟಾಯಿತು.

ಧರ್ಮಾಶೋಕನು ಪಟ್ಟವೇರಿದ ೩೦ ವರ್ಷಗಳ ತರುವಾಯ ಆತನ ಪಟ್ಟದರಸಿಯು ಒಬ್ಬ ಮಗನನ್ನು ಹಡೆದಳು. ಕೂಸು ಸರ್ವಲಕ್ಷಣ ಸಂಪನ್ನವಾಗಿತ್ತು. ದೈವಜ್ಞರು ಈ ಕೂಸಿನ ಶರೀರದಲ್ಲಿ ರಾಜಚಿಹ್ನಗಳು ಇರುವವೆಂದೂ, ಈ ಮಗನು ಮುಂದೆ ತಂದೆಯು ಬದುಕಿರುವಾಗಲೇ ಸಿಂಹಾಸನವೇರುವನೆಂದೂ ಹೇಳಿದರು. ಬಳಿಕ ಈ ಹುಡುಗನು ಕಾಲಕ್ರಮದಿಂದ ತನ್ನನ್ನೇ ಸಿಂಹಾಸನದಿಂದ ತಳ್ಳಿ ಅರಸನಾಗಬಹುದೆಂಬ ಭಯದಿಂದ ಆತನು ಮಗನನ್ನು ದೂರ ಬಿಟ್ಟು ಬರುವದಕ್ಕೆ ಆಜ್ಞಾಪಿಸಿದನು. ಆ ಬಾಲಕನಿಗೆ ಭೂದೇವಿಯು ತಾನೇ ಮೊಲೆಯುಣಿಸಿದಳೆಂದು ಪ್ರವಾದವುಂಟು. ಇದರಿಂದಲೇ ಆ ಬಾಲಕನಿಗೆ "ಕುಸ್ತನ" ಎಂಬ ಹೆಸರು ಬಿತ್ತು. (Kusthana).

ಈ ಕಾಲದಲ್ಲಿ ಗ್ಯಾರ್(Rgya) ಎಂಬ ಒಬ್ಬ ಅರಸನು ಚೀನದೇಶದಲ್ಲಿ ಆಳುತ್ತಿದ್ದನು. ಆತನಿಗೆ ೯೯ ಜನ ಗಂಡು ಮಕ್ಕಳಿದ್ದರು. ಆತನು ವೈಶ್ರವಣನ ಬಳಿಯಲ್ಲಿ ಇನ್ನೊಬ್ಬ ಮಗನನ್ನು ಕೇಳಿಕೊಂಡನು. ಯಾಕಂದರೆ ಆ ಒಬ್ಬ ಮಗನು ಕೂಡಿದರೆ ೧೦೦೦ ಜನ ಮಕ್ಕಳಾಗುತ್ತಿದ್ದರು. ವೈಶ್ರವಣನು ಬಿಡಲ್ಪಟ್ಟ ಆ ಹುಡುಗ (ಕುಸ್ತನ) ನನ್ನು ತೆಗೆದುಕೊಂಡು ಹೋಗಿ ಚೀನದ ರಾಜನಿಗೆ ಕೊಟ್ಟನು. ಆತನೂ ಮಗನಂತೆ ಆ ಬಾಲಕನನ್ನು ಕಾಪಾಡಿದನು. ಆ ಬಾಲಕನೇ ಮುಂದೆ ಖೋಟಾನ (Li-yul) ರಾಜ್ಯವನ್ನು ಸ್ಥಾಪಿಸಿ ಅಲ್ಲಿ ಆಳಿದನು. ಈ ಸ್ಥಳದಲ್ಲಿಯೇ ಧರ್ಮಾಶೋಕನ ಮಂತ್ರಿಯಾದ ಯಶನೆಂಬವನು ೭ಸಾವಿರ ಜನ ಅನುಚರರೊಡನೆ ಆತನನ್ನು ಕೂಡಿಕೊಂಡನು. ಕುಸ್ತನನು ಖೋಟಾನ ರಾಜನಾಗಿದ್ದನು. ಮತ್ತು ಆದೇ ಕಾಲದಿಂದ ವೈಶ್ರವಣ ಮತ್ತು ಶ್ರೀಮಹಾದೇವಿ ಇವರು ಅಲ್ಲಿಯ ಮುಖ್ಯ ದೇವದೇವಿಯರಾಗಿ ಪೂಜಿಸಲ್ಪಟ್ಟರು.

ಬ್ರಹ್ಮದೇಶದಲ್ಲಿಯ ಕಥೆಯು.*

ಚಂದ್ರಗುಪ್ತನು ೨೪ ವರ್ಷ ಅಪ್ರತಿಹತವಾಗಿ ಮಗಧವನ್ನಾಳಿಹೋದ ಬಳಿಕ ಅವನ ಮಗನಾದ ಬಿಂದುಸಾರನು ೧೬ ವರ್ಷದ ವಯಸ್ಸಿನಲ್ಲಿ ಸಿಂಹಾಸನವನ್ನೇರಿದನು. ಬಿಂದುಸಾರನು ೨೭ ವರ್ಷ ರಾಜ್ಯವಾಳಿದನು. ಆತನಿಗೆ ಒಟ್ಟಿಗೆ ೧೦೧ ಜನ ಗಂಡು

* Life of Gautama Buddha by Bishop Bigandet.

ಮಕ್ಕಳಿದ್ದರು. ಅತನ ಮುಖ್ಯ ಪಟ್ಟದರಸಿಯ ಹೆಸರು ಧರ್ಮಾ ಎಂಬದು. ಆಕೆಯ ಹೊಟ್ಟೆಯಲ್ಲಿ ಇಬ್ಬರು ಮಕ್ಕಳು ಹುಟ್ಟಿದರು. ಜ್ಯೇಷ್ಠಪುತ್ರನಾದ ಅಶೋಕನು ಗರ್ಭದಲ್ಲಿರುವಾಗ ರಾಣಿಯು ಒಂದು ದಿವಸ ಒಂದು ಸ್ವಪ್ನವನ್ನು ಕಂಡಳು; ಅದರಲ್ಲಿ ಅವಳು ಒಂದು ಪಾದವನ್ನು ಚಂದ್ರನಮೇಲೂ ಇನ್ನೊಂದನ್ನು ಸೂರ್ಯನಮೇಲೂ ಇಟ್ಟು ನಿಂತಂತೆಯೂ, ಆಕಾಶದಲ್ಲಿರುವ ನಕ್ಷತ್ರಪುಂಜವನ್ನು ಗ್ರಾಸಮಾಡುವಂತೆಯೂ, ಮೇಘಮಂಡಲವನ್ನು ಭಕ್ಷಣಮಾಡುವಂತೆಯೂ, ಒಮ್ಮೊಮ್ಮೆ ಗಿಡಗಳ ಎಲೆಗಳನ್ನು ಒಮ್ಮೊಮ್ಮೆ ಕೀಟಪತಂಗ ಮೊದಲಾದವುಗಳನ್ನು ತಿನ್ನುವಂತೆಯೂ ಕಂಡಳು. ಈ ಸ್ವಪ್ನವನ್ನು ಕೇಳಿ ದೈವಜ್ಞರು ಅದರ ಅರ್ಥವನ್ನು ಈ ಮೇರೆಗೆ ಹೇಳಿದರು:—ಗರ್ಭಸ್ಥಿತನಾದ ಮಗನು ಸಮಗ್ರ ಜಂಬೂದ್ವೀಪದ ಅಧಿಪತಿಯಾಗುವನು; ಅಣ್ಣತಮ್ಮಂದಿರನ್ನು ಕೊಲ್ಲುವನು. ಭ್ರಷ್ಟಾಚಾರವುಳ್ಳವರನ್ನು ಸಂಘದಿಂದ ದೂರಮಾಡುವನು. ಮೇಲೂ ಕೆಳಗೂ ಒಂದು ಯೋಜನದವರೆಗೆ ಅತನ ಪ್ರಭಾವವು ಪಸರಿಸುವದು.

೧೬ ವರ್ಷದ ವಯಸ್ಸಿನವನಾದಾಗ ಅಶೋಕನು ಉಜ್ಜಯಿನಿಯ ರಾಜಪ್ರತಿನಿಧಿಯಾಗಿ ನಿಯಮಿಸಲ್ಪಟ್ಟನು. ಅತನು ೯ ವರ್ಷ ಅಲ್ಲಿ ಇದ್ದನು. ಈ ಸಮಯದಲ್ಲಿ ಅಶೋಕನು ತಂದೆಗೆ ಬಹಳ ಜಡ್ಡಾಗಿರುವದೆಂದು ಕೇಳಿ ಕೂಡಲೆ ಪಿತೃಭಕ್ತಿಯಿಂದ ಪಾಟಲಿಪುತ್ರಕ್ಕೆ ಬಂದನು. ಅವನು ಬಂದ ಸ್ವಲ್ಪ ದಿವಸಗಳಲ್ಲಿಯೇ ಬಿಂದುಸಾರನು ಮಡಿದನು.

ತಂದೆಯ ಮರಣದ ತರುವಾಯ ಅರಸೊತ್ತಿಗೆಯ ವಿಷಯವಾಗಿ ಬಹಳ ಒಳತಂತ್ರಗಳು ನಡೆದವು. ಅಶೋಕನಿಗೆ ರಾಜಧಾನಿಯು ಶತ್ರುಪುರಿ ಎಂಬಂತಾಯಿತು. ಅವನ ಅಣ್ಣತಮ್ಮಂದಿರೆಲ್ಲ ಅವನಿಗೆ ವಿರೋಧವಾಗಿ ನಿಂತರು. ಹಿರಿಯನಾದ ಸುಮನನು ಅವರೆಲ್ಲರಿಗೂ ಮುಖ್ಯನಾಗಿದ್ದನು. ಕೊನೆಗೆ ಬಹುದಿವಸ ಯುದ್ಧಾದಿಗಳು ನಡೆದ ಬಳಿಕ ಜಯಲಕ್ಷ್ಮಿಯು ಅಶೋಕನನ್ನು ವರಿಸಿದಳು. ಸುಮನನು ಓಡಿಹೋಗಿ ಮರಣ ಹೊಂದಿದನು. ಕ್ರಮದಿಂದ ಉಳಿದ ಅಣ್ಣತಮ್ಮಂದಿರನ್ನು ಕೊಂದು ಅಶೋಕನು ಪಾಟಲಿಪುತ್ರ ಸಿಂಹಾಸನವನ್ನೇರಿದನು.

ಕಾಶ್ಮೀರದಲ್ಲಿ ಪ್ರಚಲಿತವಾಗಿರುವ ಕಥೆಯು.

ಕಲ್ಹಣರಚಿತವಾದ ರಾಜತರಂಗಿಣಿ* ಯು ಪ್ರಸಿದ್ಧವಾದ ಸಂಸ್ಕೃತ ಐತಿಹಾಸಿಕ ಗ್ರಂಥವು. ಈ ಗ್ರಂಥದಲ್ಲಿ ಕಾಶ್ಮೀರದ ಇತಿಹಾಸವು ವಿಸ್ತಾರವಾಗಿ ಹೇಳಲ್ಪಟ್ಟಿರು

* ಇದುವರೆಗೆ ಪ್ರಸಿದ್ಧವಾಗಿರುವ ಸಂಸ್ಕೃತ ಗ್ರಂಥಗಳಲ್ಲಿ ರಾಜತರಂಗಿಣಿಯೊಂದೇ ಇತಿಹಾಸವೆಂದು ಹೇಳುವದಕ್ಕೆ ಯೋಗ್ಯವಾಗಿರುವದು. ಅಕಬರನ ಪ್ರಸಿದ್ಧ ಮಂತ್ರಿಯಾದ ಅಬುಲ್‌ಫಜಲನೇ ಎಲ್ಲಕ್ಕೂ ಮೊದಲು ಜನರ ದೃಷ್ಟಿಯನ್ನು ಇದರ ಕಡೆಗೆ ಎಳೆದನು. ಅಕಬರನ ಆಜ್ಞೆಯ ಮೇರೆಗೆ ಪಾರ್ಸಿಭಾಷೆಯಲ್ಲಿ ಇದರ ಭಾಷಾಂತರವು ಪ್ರಕಟಿಸಲ್ಪಟ್ಟಿತು. ಅಬುಲ್‌ಫಜಲನು ಈ ಪಾರ್ಸೀ ಭಾಷಾಂತ

ವದು. ಮತ್ತು ಅದರೊಡನೆ ಪ್ರಸಂಗಾನುಸಾರವಾಗಿ ಅದಕ್ಕೆ ಸಂಬಂಧಪಟ್ಟ ಬೇರೆ ಹಿಂದು ದೇಶಗಳ ಅರಸರ ಚರಿತ್ರಗಳೂ ಸಂಕ್ಷೇಪವಾಗಿ ವರ್ಣಿಸಲ್ಪಟ್ಟವೆ. ಇದರಲ್ಲಿ ಅಶೋಕನ ಸಂಬಂಧವಾಗಿಯೂ ಸ್ವಲ್ಪ ಉಲ್ಲೇಖವುಂಟು. ಈ ಗ್ರಂಥದಲ್ಲಿ ಅಶೋಕನ ಬೌದ್ಧಧರ್ಮನಿಷ್ಠೆಯೂ, ಧರ್ಮಾನುರಾಗವೂ ವರ್ಣಿಸಲ್ಪಟ್ಟಿವೆ. ಕಾಶ್ಮೀರದ ಹಲವು ಇತಿಹಾಸಪ್ರಸಿದ್ಧ ಸ್ಥಲಗಳಲ್ಲಿ ಅಶೋಕನ ಕೀರ್ತಿಯ ಅವಶೇಷಗಳಿರುವವು. ಚೀನ ಪ್ರವಾಸಿಗಳು ಈ ವಿಷಯವಾಗಿ ವಿಶೇಷರೀತಿಯಿಂದ ಉಲ್ಲೇಖಿಸಿರುವರು. ಶುಷ್ಕಲೇತ್ರ× ಮತ್ತು ವಿತಸ್ತತ್ರ ಎಂಬ ಸ್ಥಳಗಳಲ್ಲಿ ಅಶೋಕನು ಕಟ್ಟಿಸಿದ ಸ್ತೂಪ. ಗಳೂ, ವಿಹಾರಗಳೂ ಎಷ್ಟೋ ದಿವಸಗಳವರೆಗೆ ಇದ್ದವು. ಅಶೋಕನ ಕಾಲದಲ್ಲಿ ಕಾಶ್ಮೀರವು ಮಗಧ ಸಾಮ್ರಾಜ್ಯಕ್ಕೆ ಸೇರಿತು. ಈ ಕಾಲದಲ್ಲಿ ಸುಮಾರು § ಐನೂರು.

ರದಿಂದ ಒಂದು ಸಂಕ್ಷಿಪ್ತ ಪುಸ್ತಕವನ್ನು ಪ್ರಕಟಿಸಿದನು. ಅಕಬರನನ್ನು ಅನುಸರಿಸಿ ಮುಂದಿನ ಚಕ್ರವರ್ತಿಗಳೂ ಆ ಗ್ರಂಥದ ಭಾಷಾಂತರವನ್ನು ಪ್ರಕಟಿಸುತ್ತ ಹೋದರು. ಮತ್ತು ಅವರು ತಮ್ಮ ಕಾಲದ ಸಂಗತಿಗಳನ್ನು ಕಾಶ್ಮೀರದ ಇತಿಹಾಸದಲ್ಲಿ ಸೇರಿಸಿದರು. ಬಾರ್ನಿಯರನು ಒಂದು ಸ್ಥಲದಲ್ಲಿ ಉಲ್ಲೇಖಿಸಿದ್ದೇನಂದರೆ—ಅಕಬರನ ಅಪ್ಪಣೆಯಿಂದ ರಾಜತರಂಗಿಣಿಯ ಒಂದು ಪಾರಸಿಭಾಷಾಂತರವು ಪ್ರಕಟಿಸಲ್ಪಟ್ಟಂತೆ ಜಹಾಂಗೀರನ ಆಳಿಕೆಯಲ್ಲಿ ಅವನ ಅಪ್ಪಣೆಯಿಂದಲೂ ಇನ್ನೊಂದು ಪಾರ್ಸಿಭಾಷಾಂತರವು ಪ್ರಕಟಿಸಲ್ಪಟ್ಟಿತು. ಬಾರ್ನಿಯರನು ಇವುಗಳಲ್ಲೊಂದು ಪಾರ್ಸಿಭಾಷಾಂತರವನ್ನು ತಾನು ಪ್ರಕಟಿಸ ಬೇಕೆಂದು ಮಾಡಿದ್ದನು. ಆದರೆ ಆ ವಿಷಯದಲ್ಲಿ ಹೆಚ್ಚಿಗೆ ಏನೂ ಗೊತ್ತಾಗಿಲ್ಲ. ಮುಂದಿನ ಕಾಲದಲ್ಲಿ ಮುಸಲ್ಮಾನ ಲೇಖಕರು ಬೇರೆ ಬೇರೆ ಕಾಲದಲ್ಲಿ ಇದರ ಬೇರೆ ಬೇರೆ ಪಾರ್ಸಿಭಾಷಾಂತರಗಳನ್ನು ಪ್ರಕಟಿಸಿದ್ದರು. Gladwin ಎಂಬವರು ಆಯಿನ್ ಅಕಬರಿಯ ಇಂಗ್ಲಿಶ್ ಭಾಷಾಂತರವನ್ನು ಪ್ರಕಟಿಸುವವರೆಗೆ ಹಿಂದುಸ್ತಾನದಲ್ಲಿರುವ ಇಂಗ್ಲಿಶ ಜನರಿಗೆ ಯಾರಿಗೂ ರಾಜತರಂಗಿಣಿಯ ವಿಷಯವಾಗಿ ಏನೂ ತಿಳಿದಿರಲಿಲ್ಲ. Sir William Jones ನಂಥ ಅಸಾಧಾರಣ ಪಂಡಿತನಿಗೆ ಕೂಡ ಮೂಲ ಸಂಸ್ಕೃತ ಗ್ರಂಥವನ್ನು ಸಂಪಾದಿಸುವದಾಗಿರಲಿಲ್ಲ. ಕೊನೆಗೆ ೧೮೦೫ರಲ್ಲಿ Mr. Colebrooke ನು ಕಲಕತ್ತೆಯ ಒಬ್ಬ ಬ್ರಾಹ್ಮಣನ ಬಳಿಯಲ್ಲಿದ್ದ ಒಂದು ಮೂಲಗ್ರಂಥವನ್ನು ಸಂಗ್ರಹಿಸಿದನು. ಮತ್ತು ಅದೇ ಕಾಲದಲ್ಲಿ Mr. Speke ಲಖನೌಪಟ್ಟಣದಲ್ಲಿ ಇನ್ನೊಂದು ಪ್ರತಿಯನ್ನು ಕೊಂಡಿದ್ದನು. ಹಲವರು ರಾಜತರಂಗಿಣಿಯು ಸಮಗ್ರ ಒಂದೇ ಗ್ರಂಥವೆಂದು ತಿಳಿದಿದ್ದರು. ಆದರೆ ಹಾಗಲ್ಲ. ಇದು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಲೇಖಕರಿಂದ ಬರೆಯಲ್ಪಟ್ಟಿದೆ. ಕಾಶ್ಮೀರದ ರಾಜಮಂತ್ರಿಯಾದ ಚಂಪಕನ ಮಗನಾದ ಕಲ್ಹಣನೆಂಬ ಪ್ರಸಿದ್ಧ ಪಂಡಿತನು ಮೊದಲನೆಯ ಭಾಗವನ್ನು ಬರೆದವನು. ಅವನೇ ಪೂರ್ಣವಾಗಿ ಬರೆದವನೆಂದು ಹಲವರು ನಂಬಿದ್ದರು. ಕಾಶ್ಮೀರದಲ್ಲಿ ಪ್ರಚಲಿತವಾಗಿರುವ ಉಪಾಖ್ಯಾನ ನೀಲಪುರಾಣ ಮೊದಲಾದ ಗ್ರಂಥಗಳೂ, ಪ್ರಾಚೀನ ಲೇಖಕರ ವಿವರಣೆಗಳೂ ಇವುಗಳಿಂದ ಕಲ್ಹಣನು ಈ ವಿಖ್ಯಾತ ಗ್ರಂಥವನ್ನು ಬರೆದನೆಂದು ಗೊತ್ತಾಗುತ್ತದೆ. ಅತಿ ಪ್ರಾಚೀನಕಾಲದಿಂದ ಆರಂಭಿಸಿ ಸಂಗ್ರಾಮದೇವನ ಕಾಲದವರೆಗೆ ಅಂದರೆ ಕ್ರಿ.ಶ.೧೧೮೯ರವರೆಗೆ ಸಂದ ಕಾಲವು ಈ ಗ್ರಂಥದ ವಿಷಯವು. ಕಲ್ಹಣನ ರಾಜತರಂಗಿಣಿಯ ಹೊರತು ಬೇರೆ ಒಂದೆರಡು ರಾಜತರಂಗಿಣಿಗಳೆಂಬ ಗ್ರಂಥಗಳುಂಟು. ಅವುಗಳಲ್ಲಿ ಶೈವರ ಪಂಡಿತಕೃತ ಶೈಜ್ಯೆನ ರಾಜತರಂಗಿಣಿಯು ಮುಖ್ಯವು.

× ರಾಜತರಂಗಿಣಿ. § Beal's Record of Western World. Vol. 1.

ಜನ ಅರ್ಹಂತರು ಈ ಪ್ರದೇಶದಲ್ಲಿ ವಾಸಿಸುತ್ತಿದ್ದರು. ಬೌದ್ಧಭಿಕ್ಷುಗಳ ಸಲುವಾಗಿ ಅಶೋಕನು ಇಲ್ಲಿ ಐನೂರು ಸಂಘಾರಾಮಗಳನ್ನು ಕಟ್ಟಿಸಿದ್ದನು. ಕಾಶ್ಮೀರದಲ್ಲಿ ಪ್ರಚಲಿತವಾಗಿರುವ ಕಥೆಯಿಂದ ಅಶೋಕನು ಉದಾರ ಧರ್ಮ (ಯಾವದೊಂದು ವಿಶಿಷ್ಟ ಪಂಥವನ್ನವಲಂಬಿಸದ) ವನ್ನವಲಂಬಿಸಿದ್ದನೆಂದು ತಿಳಿಯುವದು. ವಿಜಯೇಶ್ವರ* ವೆಂಬ ಪ್ರಾಚೀನ ಶೈವತೀರ್ಥದ ಸಲುವಾಗಿ ಅಶೋಕನು ಸಹಾಯ ಮಾಡಿದ ಕಥೆಯೂ ಗ್ರಂಥದಲ್ಲಿ ಉಂಟು. ಅಶೋಕನು ಈ ತೀರ್ಥದ ಹಳೆಯ ಇಟ್ಟಿಗೆಯ ಗೋಡೆಯನ್ನು ತೆಗೆಯಿಸಿ ಅದರ ಸ್ಥಳದಲ್ಲಿ ಒಂದು ಕಲ್ಲಿನ ಗೋಡೆಯನ್ನು ಕಟ್ಟಿಸಿದ ನೆಂದು ಪ್ರವಾದವುಂಟು. ಇದಲ್ಲದೆ ಕಾಶ್ಮೀರದಲ್ಲಿ ಅಶೋಕನು ಎರಡು ದೇವಾಲಯ ಗಳನ್ನು ಕಟ್ಟಿಸಿದ್ದನು. ಈ ಎರಡಕ್ಕೂ ಅಶೋಕೇಶ್ವರ ಎಂದು ಹೆಸರಿತ್ತು. ಅದರ ಲ್ಲೊಂದು ಕಲ್ಹಣನ ಕಾಲದವರೆಗೆ ಅಶೋಕೇಶ್ವರವೆಂಬ ಹೆಸರಿನಿಂದಲೇ ಇತ್ತು. ಅಶೋಕನು ಶಿವಭೂತೇಶ× ವೆಂಬ ಪ್ರಸಿದ್ಧ ಶೈವತೀರ್ಥದ ಒಬ್ಬ ಉಪಾಸಕನಾಗಿದ್ದ ನೆಂದು ಪ್ರವಾದವುಂಟು. ಕಾಶ್ಮೀರದ ಬ್ರಾಹ್ಮಣರು ಜ್ಯೇಷ್ಠರುದ್ರವೆಂಬ ಪ್ರಾಚೀನ ಶಿವಮಂದಿರವು ಅಶೋಕನ ಮಗನಾದ ಜಾಲೂಕನಿಂದ ಕಟ್ಟಿಸಲ್ಪಟ್ಟಿತೆಂದು ಹೇಳುತ್ತಿ ದ್ದರು. ಕಲ್ಹಣನು ಅಶೋಕನು ಪ್ರಾಚೀನ ಶ್ರೀನಗರದ ಸ್ಥಾಪಕನೆಂದು† ಉಲ್ಲೇಖಿಸಿ ರುವನು. ಕ್ರಿ. ಈನೆಯ ಶತಮಾನದವರೆಗೆ ಇದೇ ಕಾಶ್ಮೀರದ ರಾಜಧಾನಿಯಾಗಿತ್ತು. ಮುಂದಿನ ಕಾಲದ ರಾಜಧಾನಿಗೆ ಪ್ರವರಸೇನಪುರವೆಂಬ ಹೆಸರು ಇತ್ತು. ಇದು ೬ನೆಯ ಶತಮಾನದಲ್ಲಿ ೨ನೆಯ ಪ್ರವರಸೇನನೆಂಬ ರಾಜನ ಕಾಲದಲ್ಲಿ ಕಟ್ಟಿಸಲ್ಪಟ್ಟಿತು.

ಈ ಎಲ್ಲ ಪ್ರಸಂಗಗಳನ್ನಲ್ಲದೆ ಅಶೋಕನ ವಂಶಾವಲಿಯನ್ನೂ ಅದರಲ್ಲಿ ಉಲೇ ಖಿಸಿದ್ದು ಕಂಡು ಬರುವದು. ರಾಜತರಂಗಿಣಿಯಲ್ಲಿ ಅಶೋಕನ ಪ್ರಪಿತಾಮಹನ ಹೆಸರು ಶಾಕುನಿ § ಎಂದು ಹೇಳಿದೆ. ಆದರೆ ಬೇರೆ ಯಾವ ಗ್ರಂಥದಲ್ಲಿಯೂ ಈ ವಿಷಯದ ಉಲ್ಲೇಖವಿಲ್ಲದದರಿಂದ ಹಲವರು ಇದು ಐತಿಹಾಸಿಕ ಸತ್ಯವೆಂದು ನಂಬುವದಿಲ್ಲ. ರಾಜತರಂಗಿಣಿಯು ಭಾರತವರ್ಷದಲ್ಲಿ ಒಂದೇ ಐತಿಹಾಸಿಕ ಗ್ರಂಥವಾಗಿದ್ದರೂ ಅದ ರಲ್ಲಿ ಅಶೋಕನ ಏಕಚ್ಛತ್ರಸಾಮ್ರಾಜ್ಯದ ವಿಷಯವು ಸ್ವಲ್ಪವೂ ಉಲ್ಲೇಖಿಸಲ್ಪಟ್ಟಿಲ್ಲ ವೆಂಬದು ಆಶ್ಚರ್ಯದ ಸಂಗತಿಯು. ಆದರೂ ಮೇಲೆ ಹೇಳಿದ ಎಲ್ಲ ಕಥೆಗಳಿಂದ ಅಶೋಕನ ಸಾಮ್ರಾಜ್ಯದ ಪ್ರಭಾವವು ಮೇಲೆ ಹೇಳಿದ ಆ ಎಲ್ಲ ದೇಶಗಳಲ್ಲಿ ಹಬ್ಬಿ ತ್ತೆಂದು ಸ್ಪಷ್ಟವಾಗುವದು.

---

* Ancient Geography of India.

× ರಾಜತರಂಗಿಣಿ. † Ancient Geography of India. § ರಾಜತರಂಗಿಣಿ.

೨ನೆಯ ಅಧ್ಯಾಯ.

ಅಶೋಕಾವದಾನ ಮತ್ತು ಮಹಾವಂಶ ಇವುಗಳಲ್ಲಿರುವ ಅಶೋಕಚರಿತ್ರ ಭೇದವು.



ಅಶೋಕನ ವಿಷಯವಾಗಿ ಉಲ್ಲೇಖವಿರುವ ಬೇರೆ ಬೇರೆ ಗ್ರಂಥಗಳಲ್ಲಿ ಅಶೋಕಾವದಾನವೂ,* ಮಹಾವಂಶವೂ × ಮುಖ್ಯವಾದಂಥವು. ಐತಿಹಾಸಿಕರು ಈ ಎರಡು ಗ್ರಂಥಗಳನ್ನವಲಂಬಿಸಿ ಅಶೋಕಚರಿತ್ರದ ಚರ್ಚೆಯನ್ನು ಮಾಡುವರು. ಮೇಲೆ ಹೇಳಿದ ಗ್ರಂಥಗಳಲ್ಲಿ ಅಶೋಕನ

* ನೇಪಾಳದಲ್ಲಿದ್ದ ಬೌದ್ಧ ಪುಸ್ತಕಗಳಲ್ಲಿ ಅಶೋಕಾವದಾನವು ಒಂದು ಪ್ರಸಿದ್ಧ ಬೌದ್ಧಗ್ರಂಥವು. ಪ್ರಸಿದ್ಧ ಇತಿಹಾಸಜ್ಞನಾದ ಹಜಸನ್‌ಸಾಹೇಬನು ನೇಪಾಳದಲ್ಲಿ ಈ ಎಲ್ಲ ಪುಸ್ತಕಗಳ ಹಸ್ತಲಿಖಿತಪ್ರತಿಗಳನ್ನು ಸಂಗ್ರಹಿಸಿ ಅವುಗಳಲ್ಲಿಯ ಕೆಲವನ್ನು ಏಸಿಯಾಟಿಕ್ ಸೋಸಾಯಟಿಗೆ ಕೊಟ್ಟಿರುವನು. ಡಾ. ರಾಜೇಂದ್ರಲಾಲ ಮಿತ್ರರು ಈ ಎಲ್ಲ ಪುಸ್ತಕಗಳ ಸಾರಾಂಶವನ್ನು ಇಂಗ್ಲಿಷ ಭಾಷೆಯಲ್ಲಿ ಪರಿವರ್ತಿಸಿ "Nepalese Buddhist Literature" ಎಂಬ ಪುಸ್ತಕವನ್ನು ಬರೆದಿರುವರು. ಈ ಅವದಾನ ಪುಸ್ತಕದಲ್ಲಿ ೯೬೬೦ ಶ್ಲೋಕಗಳಿರುವವು. ನೆವಾರಿ ಲಿಪಿಯಲ್ಲಿ ಇದು ಬರೆಯಲ್ಪಟ್ಟಿರುವದು. ಇದರ ಅಕಾರವು ೧೬"×೫" ಇರುವದು. ಇದರಲ್ಲಿ ಅಶೋಕನ ಬಾಲ್ಯ, ಬೌದ್ಧಧರ್ಮದ ದೀಕ್ಷೆ, ಬೌದ್ಧ ನೀತಿ ಮೊದಲಾದ ವಿಷಯಗಳನ್ನು ಕುರಿತು ಉಪಗುಪ್ತನೊಡನೆ ಆದ ಸಂಭಾಷಣ ಮೊದಲಾದವು ವಿಸ್ತಾರವಾಗಿ ಹೇಳಲ್ಪಟ್ಟಿವೆ. ಗ್ರಂಥಕಾರನ ಹೆಸರು ಎಲ್ಲಿಯೂ ಇಲ್ಲ. ಆದರೂ ಪಾಟಲಿಪುತ್ರದ ಬಳಿಯಲ್ಲಿ ಗಂಗಾತೀರದಲ್ಲಿ ಉಪಕಂತಾರಾಮದೊಳಗಿನ ಕುಕ್ಕುಟವಿಹಾರದಲ್ಲಿರುವಾಗ ಜಯಶ್ರೀ ಎಂಬ ಭಿಕ್ಷುವು ತನ್ನ ಬಳಿಗೆ ಬಂದಿದ್ದ ಶ್ರೋತೃಗಳಿಗೆ ಹೇಳಿದ ಅಶೋಕ ಚರಿತ್ರವೇ ಗ್ರಂಥದ ಪ್ರತಿಪಾದ್ಯವಿಷಯವು. ನೇಪಾಲದಲ್ಲಿದ್ದ ಅವದಾನ ಗ್ರಂಥಗಳೆಲ್ಲ ಬಹುತರ ಪಾಲಿ ವಿನಯಪಿಟಕದಹಾಗೆಯೇ ಇರುವವು ಅವುಗಳಲ್ಲಿ ಬೌದ್ಧರೀತಿ, ನೀತಿ, ಆಚಾರ ವ್ಯವಹಾರಗಳು ಕಥೆಯರೂಪದಿಂದ ವರ್ಣಿತವಾಗಿರುವವು. ಬೌದ್ಧಧರ್ಮದ ಇತಿಹಾಸವೂ ಸ್ವಲ್ಪಮಟ್ಟಿಗೆ ಇವುಗಳಲ್ಲಿರುವದು. ಭಿಕ್ಷುಸಂಪ್ರದಾಯದ ಉತ್ಪತ್ತಿ, ಬೆಳವಣಿಗೆ ಈ ವಿಷಯಗಳೂ ಅವುಗಳಲ್ಲಿ ಉಂಟು. ಈ ಅವದಾನಗ್ರಂಥಗಳು ಪ್ರಕಟಿಸಲ್ಪಟ್ಟರೆ ಮಹಾಯಾನ ಸಾಂಪ್ರದಾಯದ ಎಷ್ಟೋ ಸಂಗತಿಗಳು ತಿಳಿಯಬಹುದು.

× ಮಹಾವಂಶವು ಸಿಂಹಲದ ಪ್ರಸಿದ್ಧ ಇತಿಹಾಸಗ್ರಂಥವು. ಪ್ರಾಚೀನಕಾಲದ ಸಂಗತಿಗಳು ಇದರಲ್ಲಿ ಅತಿ ಸ್ಪಷ್ಟವಾಗಿಯೂ ವಿಸ್ತಾರವಾಗಿಯೂ ವರ್ಣಿಸಲ್ಪಟ್ಟಿವೆ. ಐತಿಹಾಸಿಕ ಪಂಡಿತರೆಲ್ಲರೂ ಇದು ಪ್ರಮಾಣಭೂತವಾದ ಇತಿಹಾಸಗ್ರಂಥವೆಂದು ಒಪ್ಪುವರು. ಮಹಾವಂಶವು ಸಿಂಹಲದ ಇತಿಹಾಸಗ್ರಂಥವಾಗಿದ್ದರೂ ಭರತವರ್ಷದ ಹಲವು ಐತಿಹಾಸಿಕ ವಿಷಯಗಳು ಇದರಲ್ಲಿರುವವು. ಹಲವು ಹೊಸ ಸಂಗತಿಗಳನ್ನು ಇದರಿಂದ ತಿಳಿದುಕೊಳ್ಳಬಹುದು. ಈ ಗ್ರಂಥವು ಪಾಲಿಭಾಷೆಯಲ್ಲಿರುವದು. ಮಹಾನಾಮನೆಂಬವನು ಗ್ರಂಥಕಾರನು. ಕ್ರಿ. ಳರ್ಶದಿಂದ ಳಒರವರೆಗಿನ ಕಾಲದಲ್ಲಿ ಇದು ರಚಿತವಾಯಿತು. ಇದು ಬಹು ವಿಸ್ತಾರವಾದ ಗ್ರಂಥವು. ಐತಿಹಾಸಿಕರು ಇದರಲ್ಲಿ ೩ ವಿಭಾಗಗಳನ್ನು ಮಾಡುವರು. ಮೊದಲನೆಯ ಭಾಗವು ಕ್ರಿ. ಪೂ. ೫೪೩ರಿಂದ ಆರಂಭವಾಗಿ ಕ್ರಿ. ೩೦೨ರವರೆಗೆ ಈ ಭಾಗದ ಕರ್ತೃವೇ ಮಹಾನಾಮನು. ಮಹಾವಂಶಟೀಕೆ ಎಂಬ ಪ್ರಸಿದ್ಧವಾದ ಟೀಕಾಪುಸ್ತಕವೊಂದು ಉಂಟು. ಮೂಲದಲ್ಲಿ ಅತಿ ಸಂಕ್ಷೇಪವಾಗಿ ವರ್ಣಿತವಾದ ಐತಿಹಾಸಿಕ ವಿಷಯಗಳು ಈ ಟೀಕೆಯಲ್ಲಿ ಬಹು ವಿಸ್ತಾರವಾಗಿ ವರ್ಣಿಸಲ್ಪಟ್ಟಿವೆ.

ವಿಷಯವಾಗಿ ಹಲವು ಸಂಗತಿಗಳಿರುವವು. ಅಶೋಕಾವದಾನದಲ್ಲಿ ಹೇಳಿದ ವಿಷಯವು ಭರತಖಂಡದ್ದೆಂದೂ ಮಹಾವಂಶ, ದ್ವೀಪವಂಶಗಳಲ್ಲಿ ಹೇಳಿದ ವಿಷಯವು ಸಿಂಹಲದ್ದೆಂದೂ ಐತಿಹಾಸಿಕರು ಹೇಳುವರು. ಪ್ರಾಚೀನ ಗ್ರಂಥಗಳಲ್ಲಿ ಹಲವು ಬೆಳೆಸಿ ಹೇಳಿದ ವಿಷಯಗಳಿದ್ದರೂ ಸ್ಥೂಲಮಾನದಿಂದ ಅವುಗಳಲ್ಲಿ ಕೆಲಮಟ್ಟಿಗೆ ಐತಿಹಾಸಿಕ ಸತ್ಯವು ಇರುವದು. ಇನ್ನು ಯಾವ ವಿಷಯವು ಇತಿಹಾಸದೃಷ್ಟಿಯಿಂದ ನಿಜವೆಂದು ಗ್ರಹಿಸಲು ಅರ್ಹವಾಗಿರುವದೋ, ಆ ವಿಷಯದಲ್ಲಿಯೇ ಹಲವೆಡೆಯಲ್ಲಿ ಮತಭೇದವು ಕಂಡುಬರುವದು. ಆದದರಿಂದ ಈ ಎರಡು ಗ್ರಂಥಗಳ ವರ್ಣನೆಗಳಲ್ಲಿ ಬರುವ ಭೇದವನ್ನು ಆಲೋಚಿಸುವದು ಅವಶ್ಯವು.

ಮಹಾವಂಶದಲ್ಲಿ ಚಂದ್ರಗುಪ್ತನು ಮೌರ್ಯವಂಶಸ್ಥಾಪಕನೂ, ಅಶೋಕನ ಪಿತಾಮಹನೂ ಎಂದು ಹೇಳಿದೆ. ಹಿಂದುಪುರಾಣಗಳಲ್ಲಿಯೂ ಬೇರೆ ಸಂಸ್ಕೃತ ಗ್ರಂಥಗಳಲ್ಲಿಯೂ ಇದು ಹಲವೆಡೆಗಳಲ್ಲಿ ಉಲ್ಲೇಖಿಸಲ್ಪಟ್ಟಿರುವದು. ಆದರೆ ಅಶೋಕಾವದಾನದಲ್ಲಿ ಚಂದ್ರಗುಪ್ತನ ಹೆಸರೇ ಇಲ್ಲ. ಗ್ರೀಕ ವಕೀಲನಾದ ಮೆಗಾಸ್ಥಿನೀಸನೂ, ಬೇರೆ ಗ್ರೀಕ ಲೇಖಕರೂ ಮೌರ್ಯ ಚಂದ್ರಗುಪ್ತನ ಇತಿಹಾಸವನ್ನು ವಿಸ್ತಾರವಾಗಿ ಹೇಳಿರುವರು. ಆ ಎಲ್ಲ ವಿವರಣೆಯನ್ನೋದಲು ಚಂದ್ರಗುಪ್ತನ ಅಸ್ತಿತ್ವದ ವಿಷಯವಾಗಿ ಯಾರಿಗೂ ಸಂಶಯವು ಬರುವಂತೆ ಇಲ್ಲ.

ಮಹಾವಂಶದಲ್ಲಿ ಬಿಂದುಸಾರರಾಜನಿಗೆ ಸುಭದ್ರಾಂಗಿಯ ಹೊರತು ಬೇರೆ ೧೫ ಜನ ರಾಣಿಯರಿದ್ದರೆಂದು ಹೇಳಿದೆ. ಆದರೆ ಅಶೋಕಾವದಾನದಲ್ಲಿ ಅಶೋಕನ ತಾಯಿಯಾದ ಸುಭದ್ರಾಂಗಿಯು ಹೆಸರು ಮಾತ್ರ ಕಂಡುಬರುವದು. ಮಹಾವಂಶದ ಮತದಂತೆ ಬಿಂದುಸಾರನಿಗೆ ಒಟ್ಟಿಗೆ ೧೦೧ ಜನ ಮಕ್ಕಳಿದ್ದರು. ಹಿರಿಯನ ಹೆಸರು ಸುಮನನು. ಕಿರಿಯನ ಹೆಸರು ತಿಷ್ಯನು. ಆದರೆ ಅವದಾನದಲ್ಲಿ ಹಿರಿಯನ ಹೆಸರು ಸುಷೀಮನು. ಇದಲ್ಲದೆ ಅವದಾನದಲ್ಲಿ ಸುಭದ್ರಾಂಗಿಯು ಮಕ್ಕಳಾದ ಅಶೋಕ ಮತ್ತು ವಿಗತಾಶೋಕ ಇವರ ಹೆಸರುಗಳು ಕಂಡುಬರುವವು. ಮಹಾವಂಶದಲ್ಲಿ ಅಶೋಕನು ತಂದೆಯ ಮರಣಕಾಲದಲ್ಲಿ ಉಜ್ಜಯಿನಿಯಲ್ಲಿ ರಾಜಪ್ರತಿನಿಧಿಯಾಗಿ ಇದ್ದನೆಂದೂ, ತಂದೆಯ ಮರಣವಾರ್ತೆಯನ್ನು ಕೇಳಿ ಬೇಗನೆ ಪಾಟಲಿಪುತ್ರಕ್ಕೆ ಬಂದು ಸುಮನನನ್ನೂ ಬೇರೆ ೯೯ ಜನ ಅಣ್ಣತಮ್ಮಂದಿರನ್ನೂ ಕೊಂದು ಮಗಧದ ಸಿಂಹಾಸನವನ್ನೇರಿದನೆಂದೂ ಹೇಳಿರುವದು. ಆದರೆ ಅವದಾನದಲ್ಲಿ—ತಂದೆಯ ಮರಣ ಸಮಯದಲ್ಲಿ ಅಶೋಕನು ಪಾಟಲಿಪುತ್ರದಲ್ಲಿ ಇದ್ದನೆಂದೂ, ಸುಷೀಮನು ತಕ್ಷಶಿಲೆಯಿಂದ ಬರುತ್ತಾನೆಂಬದನ್ನು ಕೇಳಿ ಮಂತ್ರಿಗಳ ಸಹಾಯದಿಂದ ಸುಷೀಮನ ಮುತ್ತಿಗೆಯನ್ನು ವ್ಯರ್ಥಪಡಿಸಿದನೆಂದೂ ಹೇಳಿದೆ. ಮಹಾವಂಶ, ಅವದಾನ ಗ್ರಂಥಗಳ ವರ್ಣನೆಯಲ್ಲಿ ಈ ಮೇರೆಗೆ ಭೇದವು ಕಂಡುಬರುವದು. ಆದರೆ ಈ ಭೇದದಲ್ಲಿ ಅಶೋಕನು ವಿರೋಧವಿ

ಲ್ಲದೆ ಸಿಂಹಾಸನವನ್ನೇರಲಿಲ್ಲೆಂಬ ಸಂಗತಿಯು ಮಾತ್ರ ನಿಜವೆಂಬದನ್ನು ಕಂಡುಹಿಡಿಯಬಹುದು. ಮತ್ತು ಅಶೋಕನ ಮಲಅಣ್ಣನು ಸುಷೀಮನಾಗಲಿ, ಸುಮನನಾಗಲಿ; ಅತನು ತಂತ್ರದಿಂದ ಕೊಲ್ಲಲ್ಪಟ್ಟನೆಂದು ಗೊತ್ತಾಗುವದು. ಅಶೋಕನು ೯೯ ಜನ ತನ್ನ ಅಣ್ಣತಮ್ಮಂದಿರನ್ನು ಕೊಂದನೆಂದು ಮಹಾವಂಶದಲ್ಲಿ ಹೇಳಿದೆ. ಆದರೆ ಅವದಾನದಲ್ಲಿ ಈ ವಿಷಯವನ್ನು ಹೇಳಿರದಿದ್ದರೂ ಅತನ ಕ್ರೂರತನವು ಬೇರೆ ರೀತಿಯಿಂದ ಹೇಳಲ್ಪಟ್ಟಿದೆ. ಸ್ಥೂಲಮಾನದಿಂದ ಎರಡೂ ವರ್ಣನೆಗಳಿಂದ ಅಶೋಕನು ಮೊದಲು ನರಘಾತಕ ನಿರ್ದಯಸ್ವಭಾವದವನಿದ್ದನೆಂದು ವ್ಯಕ್ತವಾಗುತ್ತದೆ. ಮಹಾವಂಶದ ಮತದಂತೆ ಬಿಂದುಸಾರನ ಮರಣವಾದ ೪ವರ್ಷಗಳ ತರುವಾಯ ಅಶೋಕನ ಪಟ್ಟಾಭಿಷೇಕವಾಯಿತು. ಈ ನಾಲ್ಕು ವರ್ಷಗಳ ವಿಲಂಬಕ್ಕೆ ಕಾರಣವೇನೆಂಬದನ್ನು ಮಹಾವಂಶಕಾರನು ಏನೂ ಹೇಳಿಲ್ಲ. ಶಾಸನಗಳಲ್ಲಿಯೂ ಇದಕ್ಕೆ ಉತ್ತರವು ದೊರೆಯುವದಿಲ್ಲ. ಮಹಾವಂಶದಲ್ಲಿ ಅಶೋಕನು ರಾಜ್ಯಾಭಿಷೇಕ ಕಾಲಕ್ಕೆ ಬೌದ್ಧ ಧರ್ಮವನ್ನು ಸ್ವೀಕರಿಸಿದ್ದನೆಂದೂ ಯುವರಾಜನಾದ ಸುಮನನ ಮಗನಾದ ನಿಗ್ರೋಧನೆಂಬ ೭ವರ್ಷದ ಬಾಲಭಿಕ್ಷುವು ಅಶೋಕನಿಗೆ ಬೌದ್ಧಧರ್ಮದ ದೀಕ್ಷೆಯನ್ನು ಕೊಟ್ಟನೆಂದೂ ಹೇಳಿದೆ. ಅವದಾನದಲ್ಲಿ ಒಬ್ಬ ಅಲೌಕಿಕಶಕ್ತಿಯುಳ್ಳ ಭಿಕ್ಷುವಿನಿಂದ ಅಶೋಕನ ಜೀವನದಲ್ಲಿ ಬದಲಾವಣೆಯುಂಟಾಯಿತೆಂದು ಹೇಳಿದೆ. ಪ್ರಸಿದ್ಧ ಚೀನ ಪ್ರವಾಸಿಯಾದ ಹುಯೆನ್ ತ್ಸಾಂಗನು ಉಪಗುಪ್ತ ಭಿಕ್ಷುವು ಅಶೋಕನ ದೀಕ್ಷಾಗುರುವೆಂದು ವರ್ಣಿಸಿರುವನು. ಆದರೆ ಮಹಾವಂಶದಲ್ಲಿಯೂ, ಶಾಸನಗಳಲ್ಲಿಯೂ ಇದರ ಉಲ್ಲೇಖವೇನೂ ಇಲ್ಲ. ಮಹಾವಂಶದಲ್ಲಿ ಮೌದ್ಗಲಿ ಪುತ್ರ ತಿಷ್ಯನು ಬೌದ್ಧಸಂಪ್ರದಾಯದ ನಾಯಕನೆಂದು ವರ್ಣಿಸಲ್ಪಟ್ಟಿರುವನು. ಇವನು ಅಶೋಕಾರಾಮದಲ್ಲಿದ್ದಾಗ ಅಶೋಕನಿಗೆ ಬೌದ್ಧ ಧರ್ಮದ ಉಪದೇಶವನ್ನು ಕೊಟ್ಟಿದ್ದನೆಂದೂ ವರ್ಣಿಸಲ್ಪಟ್ಟಿದೆ. ಆದರೆ ಭರತಖಂಡದ ಗ್ರಂಥಗಳಲ್ಲಿ ಈ ಕಥೆಯ ಉಲ್ಲೇಖವೇ ಇಲ್ಲ.

ಅಶೋಕಾವದಾನದಲ್ಲಿ ಉಪಗುಪ್ತನೊಡನೆ ಅಶೋಕನು ತೀರ್ಥಯಾತ್ರೆಯನ್ನು ಮಾಡಿದನೆಂದು ಹೇಳಿದೆ. ಮಹಾವಂಶದಲ್ಲಿ ಇದರ ಉಲ್ಲೇಖವಿಲ್ಲ. ಭರತಖಂಡದ ಗ್ರಂಥಗಳಲ್ಲಿ ಮಹೇಂದ್ರನು ಅಶೋಕನ ತಮ್ಮನೆಂದು ಉಲ್ಲೇಖವಿದೆ. ಹುಯೆನ್ ತ್ಸಾಂಗನು ತನ್ನ ಪ್ರವಾಸವರ್ಣನೆಯಲ್ಲಿ ಮಹೇಂದ್ರನು ಅಶೋಕನ ತಮ್ಮನೆಂದು ಹೇಳಿರುವನು. ಆದರೆ ಮಹಾವಂಶ ಮತದಂತೆ ಮಹೇಂದ್ರನು ಅಶೋಕನ ಮಗನು. ಮಹೇಂದ್ರನು ಸಿಂಹಲಕ್ಕೆ ಹೋದದ್ದು ಎರಡೂ ಕಡೆಗಳಲ್ಲಿಯೂ ಹೇಳಲ್ಪಟ್ಟಿದೆ. ಮಹಾವಂಶದಲ್ಲಿ—ಅಶೋಕನ ರಾಜ್ಯಾಭಿಷೇಕವಾದ ಬಳಿಕ ಕ್ರಿ.ಪೂ. ೨೬೮ರಲ್ಲಿ ಅಶೋಕನ ತಮ್ಮನಾದ ತಿಷ್ಯನೂ, ಅಣ್ಣನ ಮಗನಾದ ಅಗ್ನಿಬ್ರಹ್ಮನೂ, ಮೊಮ್ಮಗನಾದ ಸುಮನನೂ ಬೌದ್ಧಧರ್ಮವನ್ನು ಸ್ವೀಕರಿಸಿದರೆಂದು ಹೇಳಿದೆ. ಅವದಾನದಲ್ಲಿ ಇದರ

ಉಲ್ಲೇಖವಿಲ್ಲ. ಕುನಾಲನ ಉಪಾಖ್ಯಾನವು ಕೇವಲ ಭರತಖಂಡದ ಗ್ರಂಥಗಳಲ್ಲಿಯೂ ಜೈನಗ್ರಂಥಗಳಲ್ಲಿಯೂ, ತಿಷ್ಯರಕ್ಷಿತೆಯ ಪ್ರಸಂಗವು ಎರಡೂ ಗ್ರಂಥನಿಗಳ ಲ್ಲಿಯೂ ದೊರೆಯುವದು. ಅಶೋಕನ ಆಳಿಕೆಯಲ್ಲಿ ಮಹತ್ತರವೆನಿಸಿದ ಬೌದ್ಧ ಮಹಾ ಸಭೆಯ ಉಲ್ಲೇಖವು ಸಿಂಹಲಗ್ರಂಥಗಳಲ್ಲಿಮಾತ್ರ ದೊರೆಯುವದು. ಈ ಮೇರೆಗೆ ಎರಡೂ ಪ್ರಕಾರದ ಗ್ರಂಥಗಳಲ್ಲಿರುವ ಹೆಚ್ಚುಕಡಿಮೆಯು ಸಂಕ್ಷೇಪವಾಗಿ ತೋರಿಸ ಲ್ಪಟ್ಟಿತು.

ಈ ಎಲ್ಲ ವಿಚಿತ್ರವಾದ ಭಿನ್ನ ಭಿನ್ನ ವರ್ಣನೆಗಳು, ಪರ್ವತಗಳ ಮೇಲೆ ಕೊರೆ ಯಿಸಿದ ಲಿಪಿಗಳು, ಸ್ತಂಭಗಳ ಮೇಲೆ ಕೊರೆಯಿಸಿದ ಲಿಪಿಗಳು, ಭರತಖಂಡದ ಗ್ರಂಥ ಗಳು, ಪರದೇಶದ ಐತಿಹಾಸಿಕರು ಬರೆದ ಇತಿಹಾಸಗಳು ಇವೆಲ್ಲವುಗಳ ಸಮಾಲೋಚ ನೆಯನ್ನು ಮಾಡಲು ನಿಜವಾದ ಇತಿಹಾಸವನ್ನು ಕಂಡುಹಿಡಿಯಬಹುದಾಗಿದೆ. ಮುಂದಿನ ಅಧ್ಯಾಯಗಳಲ್ಲಿ ಅದನ್ನೇ ವಿವರಿಸುವದಕ್ಕೆ ಪ್ರಯತ್ನಿಸುವೆವು.

೩ನೆಯ ಅಧ್ಯಾಯ.

ಅಂಗದೇಶ— ಸುಭದ್ರಾಂಗೀರಾಣಿಯು.



ಚಂಪಾನದೀ ತೀರದಲ್ಲಿದ್ದ ಚಂಪಕನಗರವು ಅಂಗದೇಶದ ಪ್ರಾಚೀನ ರಾಜಧಾನಿಯು. ಪ್ರಾಕೃತಿಕಸೌಂದರ್ಯವುಳ್ಳ, ಬಹು ರಮಣೀ ಯವಾದ ಈ ಚಂಪಕನಗರವು ಭರತಖಂಡಕ್ಕೆ ಚಂಪಕಪುಷ್ಪ ಮಾಲೆಯಂತೆ ಒಪ್ಪುತ್ತಿತ್ತು. ಗಗ್ಗರಾ*ರಾಣಿಯು ತನ್ನ ಹೆಸರಿ ನಿಂದ ಚಂಪಕನಗರದಲ್ಲಿ ಒಂದು ಸುಂದರವಾದ ಪುಷ್ಕರಿಣಿ ಯನ್ನು ಕಡಿಸಿದ್ದಳು. ಅದರ ದಂಡೆಯ ಮೇಲಿದ್ದ ಚಂಪಕಾದಿ ಪುಷ್ಪವೃಕ್ಷಗಳು ಮಂದಮಾರುತನಿಂದ ಸುತ್ತಲು ಸುಗಂಧವನ್ನು ಬೀರುತ್ತಿದ್ದವು. ಚಂಪಕನಗರದ ಈ ರಮಣೀಯವಾದ ಪ್ರದೇಶಕ್ಕೆ ಮೆಚ್ಚಿ ಎಷ್ಟೋ ಸನ್ಯಾಸಿಗಳೂ, ಸಾಧುಗಳೂ ಇಲ್ಲಿಗೆ ಬಂದು ಆರಾಮಗಳಲ್ಲಿ† ವಾಸಿಸುತ್ತಿದ್ದರು. ಈ ನಗರವು §ವಿುಥಿಲೆಯಿಂದ

---

* Rhys Daivds Buddhist India P. 35

† Dialogues of Buddha ಪರಿವ್ರಾಜಕರು ಮಳಿಗಾಲದಲ್ಲಿ ಈ ಚಂಪಕನಗರದ ಗಕೂರಾ ಸರೋವರದ ದಂಡೆಯ ಮೇಲೆ ಆಶ್ರಮಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದರು. ಈ ಆಶ್ರಮಗಳು ಬಹುಕಾಲ ಇದ್ದವು. ಕಾದಂಬರಿ, ದಶಕುಮಾರ ಚರಿತ್ರಗಳಲ್ಲಿ ಈ ಆಶ್ರಮಗಳ ಉಲ್ಲೇಖವಿರುವದು.

§ ಜಾತಕ ಉಪಾಖ್ಯಾನ.

೯ ಹರದಾರಿ ದೂರದಲ್ಲಿತ್ತು. ಈಗಿನ ಇತಿಹಾಸಜ್ಞರು ಭಾಗಲಪುರದ ಸಮೀಪದಲ್ಲಿರುವ ಈಗಿನ +ಚಂಪಾಗ್ರಾಮವು ಪ್ರಾಚೀನ ಚಂಪಕನಗರವೆಂದು ಹೇಳುವರು. ಅವರ ಈ ಮತವು ನಿಜವೆಂದು ನಿರ್ಣಯಿಸುವದು ಅಸಾಧ್ಯವು. ಬುದ್ಧದೇವನ ಕಾಲದ ವಿವರಣೆಯನ್ನು ನೋಡಿದರೆ ‡ಅಂಗದೇಶವು ಮಗಧದೇಶದ ಪೂರ್ವಕ್ಕೆ ಬಹು ದೂರದ ವರೆಗೆ ಹಬ್ಬಿತ್ತೆಂದೂ, ಶಿಶುನಾಗವಂಶದ ಅರಸರ ಕಾಲದಲ್ಲಿ ಅದು ಮಗಧ ಸಾಮ್ರಾಜ್ಯಕ್ಕೆ ಸೇರಿಸಲ್ಪಟ್ಟಿತೆಂದೂ ತಿಳಿಯುವದು. ಅಂಗರಾಜನು ಆ ಕಾಲಕ್ಕೆ ಮಗಧ ರಾಜರ ಮಾಂಡಲಿಕನಾಗಿದ್ದನು. ಆ ಕಾಲದಲ್ಲಿ ಅಂಗರಾಜನು . ಮಹಾನುಭಾವನಾಗಿಯೂ, ಔದಾರ್ಯ ದಯಾದಾಕ್ಷಿಣ್ಯಾದಿ ಗುಣಗಳುಳ್ಳವನಾಗಿಯೂ ಇದ್ದನೆಂಬದಕ್ಕೆ ಪ್ರಮಾಣಗಳುಂಟು. ಒಬ್ಬಾನೊಬ್ಬ ಬ್ರಾಹ್ಮಣನ ದುಃಖವನ್ನು ನೋಡಿ ಮರುಗಿ ಅಂಗರಾಜನು ನಿಷ್ಕರ-*ಬ್ರಹ್ಮೋತ್ತರ-ಭೂಮಿದಾನಮಾಡಿದ್ದನೆಂದು ಉಲ್ಲೇಖವಿದೆ. ಈ ಕಾಲದಲ್ಲಿ ಕಾಶ್ಮೀರದೇಶದಲ್ಲಿ ಸೃಷ್ಟಿಸೌಂದರ್ಯದಿಂದ ಪರಮಸುಂದರವೆನಿಸಿದ್ದ ಚಂಪಕನಗರದ ಹೆಸರಿನಿಂದ ಅಂಗಾಧಿಪತಿಯು ತನ್ನ ರಾಜಧಾನಿಗೆ ಚಂಪಕವೆಂಬ ಹೆಸರಿಟ್ಟನೆಂದು ಪ್ರವಾದವುಂಟು. ಪ್ರಾಚೀನೇತಿಹಾಸವನ್ನು ನೋಡಿದರೆ ಬಹುದೂರ

+ ಚಂಪಕನಗರದ ಈ ಪ್ರಾಚೀನ ವರ್ಣನೆಗೂ, ಭಾಗಲಪುರದ ಬಳಿಯಲ್ಲಿರುವ ಈಗಿನ ಚಂಪಾಗ್ರಾಮಕ್ಕೂ ಸರಿಬೀಳುವದಿಲ್ಲ. ಮೇಲೆ ಉಲ್ಲೇಖಿಸಿದ ಚಂಪಾನದಿಯ ಅಸ್ತಿತ್ವವು ಕೂಡ ಈಗ ಅಲ್ಲಿ ಇಲ್ಲ. ಕನಿಂಗಹ್ಯಾಮ್ ಹೇಳುವದೇನೆಂದರೆ—ಪ್ರಾಚೀನ ಚಂಪಾನಗರದ ಬದಿಯಲ್ಲಿ ಭಾಗೀರಥಿಯ ಒಂದು ಶಾಖೆಯು ಹರಿದಿತ್ತು. ಅದಕ್ಕೇ ಚಂಪಾನದಿಯೆಂಬ ಹೆಸರಿತ್ತೆಂದು ತೋರುವದು.

‡ ಅಂಗರಾಜ್ಯವು ಬಹು ಪ್ರಾಚೀನ ಪ್ರದೇಶವು. ರಾಮಾಯಣ, ಮಹಾಭಾರತಗಳಲ್ಲಿ ಹಲವೆಡೆಗಳಲ್ಲಿ ಇದರ ಉಲ್ಲೇಖವುಂಟು. ರಾಮಾಯಣದ ಬಾಲಕಾಂಡದಲ್ಲಿ—ದಶರಥಮಹಾರಾಜನು ತನ್ನ ಮಗಳಾದ ಶಾಂತೆಯನ್ನು ಅಂಗರಾಜನಾದ ಲೋಮಪಾದನಿಗೆ ಪಾಲನೆಗಾಗಿ ಕೊಟ್ಟಿದ್ದನೆಂದು ಹೇಳಿದೆ. ಮಾಲಿನಿ ಎಂಬದು ಅಂಗದೇಶದ ಪ್ರಾಚೀನ ರಾಜಧಾನಿಯು. ಮಹಾಭಾರತದ ಶಾಂತಿಪರ್ವದಲ್ಲಿ—ಮಗಧ ರಾಜನಾದ ಜರಾಸಂಧನು ಈ ಮಾಲಿನೀನಗರಿಯನ್ನು ಕರ್ಣನಿಗೆ ಕೊಟ್ಟನೆಂದು ಹೇಳಿದೆ. ಬಳಿಕ ಲೋಮಪಾದನ ಮಗನ ಮೊಮ್ಮಗನಾದ ಚಂಪನೆಂಬವನಿಂದ ಆ ನಗರಕ್ಕೆ ಚಂಪಕವೆಂಬ ಹೆಸರು ಬಂದಿತು. ಭಾಗವತ ಪುರಾಣದ ಸುತದಂತೆ ಇಕ್ಷ್ವಾಕುವಂಶದ ಹರಿತನ ಮಗನಾದ ಚಂಪನೆಂಬವನು ಚಂಪಾನಗರವನ್ನು ಸ್ಥಾಪಿಸಿದನು. ಮುಂದಿನ ಕಾಲದಲ್ಲಿ ಇದು ಜೈನರ ತೀರ್ಥವಾಯಿತು. ಬುದ್ಧದೇವನ ಕಾಲಕ್ಕೆ ಬ್ರಹ್ಮದತ್ತನು ಅಂಗದೇಶದ ರಾಜನಾಗಿದ್ದನು. ಈಗಿನ ಮೊಂಗೀರ ಮತ್ತು ಭಾಗಲಪುರ ಜಿಲ್ಲೆಗಳೇ ಪ್ರಾಚೀನ ಅಂಗರಾಜ್ಯವು. ಮೊಂಗೀರದ ಪ್ರಾಚೀನಕಾಲದ ಹೆಸರು ಮೋದಾಗಿರಿ. ಇದಕ್ಕೆ ಕೃಷ್ಣ ಹರಣಪರ್ವತವೆಂದೂ ಎಷ್ಟೋ ಕಡೆಗೆ ಉಲ್ಲೇಖವಿರುವದು. ಈ ದೇಶದಲ್ಲಿಯೇ ಸೂತನೆಂದ ಅಧಿರಥನು ಕುಂತೀಪುತ್ರನಾದ ಕರ್ಣನನ್ನು ಸಲಹಿದನು.

Journal, Asiatic Society. Bengal 1897.

* ಮುಜ್ಝಿಮನಿಕಾಯ; ಮತ್ತು Rhys Davids Buddhist India.

ದಲ್ಲಿರುವ ಕೋಚೀನಚೀನದಲ್ಲಿ† ಕೂಡ ಭಾರತೀಯರು ಉಪನಿವೇಶ (ವಸಾಹತು) ಮಾಡಿದಾಗ ಅಲ್ಲಿಯೂ ಚಂಪಕವೆಂಬ ಹೆಸರಿನಿಂದ ಒಂದು ನಗರವನ್ನು ಸ್ಥಾಪಿಸಿದ್ದರೆಂದು ಕಂಡುಬರುವದು. ಇದರಿಂದ ಅಂಗದೇಶವೂ, ಅದರ ರಾಜಧಾನಿಯಾದ ಚಂಪಕನಗರವೂ ಒಂದುಕಾಲದಲ್ಲಿ ಅತಿಸಮೃದ್ಧವಾದ ಪ್ರದೇಶವಾಗಿದ್ದವೆಂದು ತೋರುವದು.

ಅಶೋಕನ ತಾಯಿಯಾದ ಸುಭದ್ರಾಂಗೀರಾಣಿಯು ಈ ಚಂಪಕನಗರದ ಒಬ್ಬ ದರಿದ್ರ ಬ್ರಾಹ್ಮಣನ ಮಗಳಾಗಿದ್ದಳೆಂದು ಅಶೋಕಾವದಾನದಲ್ಲಿರುವ ಅಶೋಕ ಚರಿತ್ರೆಯಲ್ಲಿ ಹೇಳಿದೆ. ಒಬ್ಬಾನೊಬ್ಬ ಜೋಯಿಸನು ಈ ಸುಲಕ್ಷಣೆಯಾದ ಸುಭದ್ರಾಂಗಿಯನ್ನು ನೋಡಿ ಈಕೆಯು ಮುಂದೆ ಪಟ್ಟದರಸಿಯಾಗುವಳೆಂದೂ, ಈಕೆಯ ಇಬ್ಬರು ಮಕ್ಕಳಲ್ಲಿ ಒಬ್ಬನು ಸಮುದ್ರಾಂಕಿತ ಪೃಥ್ವಿಯ ಚಕ್ರವರ್ತಿಯೂ, ಇನ್ನೊಬ್ಬನು ಸಂಸಾರವನ್ನು ತೊರೆದು ವಿರಕ್ತನಾಗಿ ಕಾಲಕಳೆವವನೂ ಆಗುವರೆಂದೂ ಭವಿಷ್ಯ ಹೇಳಿದ್ದನು. ಸುಭದ್ರಾಂಗಿಗೆ ಪ್ರಾಯವು ಬಂದೊಡನೆಯೆ ಆ ಬ್ರಾಹ್ಮಣನು ಯಾವದೋ ಒಂದು ರೀತಿಯಿಂದ ಮಗಳನ್ನು ರಾಜಾಂತಃಪುರದಲ್ಲಿ ಸೇರಿಸಿದನು. ಮುಂದೆ ಬಿಂದುಸಾರರಾಜನು ಅವಳ ಪಾಣಿಗ್ರಹಣಮಾಡಿ ಮುಖ್ಯ ಮಹಿಷಿಯನ್ನಾಗಿ ಮಾಡಿಕೊಂಡನೆಂಬದರ ಹೊರತು ಸುಭದ್ರಾಂಗಿಯ ವಿಷಯವಾಗಿ ಇನ್ನಾವ ಸಂಗತಿಯೂ ಗೊತ್ತಾಗಿಲ್ಲ. ಕಾಲಕ್ರಮದಿಂದ ಸುಭದ್ರಾಂಗಿಗೆ ಇಬ್ಬರು ಮಕ್ಕಳು ಹುಟ್ಟಿದರು. ಹಿರಿಯನ ಹೆಸರು ಅಶೋಕ; ಕಿರಿಯನ ಹೆಸರು ವಿಗತಾಶೋಕ ಇಲ್ಲವೆ ವೀತಶೋಕ. ಈ ಇಬ್ಬರಲ್ಲದೆ ಬಿಂದುಸಾರನಿಗೆ ಬೇರೆ ಕೆಲವು ಜನ ಮಕ್ಕಳಿದ್ದರು. ಅಶೋಕನ ಮಲತಾಯಿಯ ಮಗನಾದ ಸುಷೀಮನೆಂಬವನು ಬಿಂದುಸಾರನ ಅತ್ಯಂತ ಪ್ರೀತಿಯ ಮಗನೆಂದು ಆದರಿಸಲ್ಪಡುತ್ತಿದ್ದನು. ರಾಜನು ಅವನಿಗೇ ಮಗಧದ ಯುವ ರಾಜಪಟ್ಟವನ್ನು ಕಟ್ಟಿದ್ದನು.

---

† I-Tsing's Travels.

೪ನೆಯ ಅಧ್ಯಾಯ.

ಅಶೋಕನ ಬಾಲ್ಯಜೀವನ—ತಕ್ಷಶಿಲೆಯಲ್ಲಿ ದಂಗೆಯನ್ನು ಶಾಂತಪಡಿಸಿದ್ದು.



ತಿಭಾಶಾಲಿಯಾದ ಯಾವ ಮಹಾಪುರುಷನ ವಿಜಯಪತಾಕೆಗಳು ಹಿಮಾಲಯದಿಂದ ಸಿಂಹಲದವರೆಗೆ ಹಾರಾಡುತ್ತಿದ್ದವೋ, ಯಾವಾತನು ಸ್ಥಾಪಿಸಿದ ಕೀರ್ತಿಸ್ತಂಭಗಳೂ, ಕಟ್ಟಡಗಳೂ ಪ್ರಾಚೀನೇತಿಹಾಸಕ್ಕೆ ಗೌರವವನ್ನುಂಟುಮಾಡಿರುವವೋ, ಯಾವನು ಪ್ರಾಣಿಮಾತ್ರದಲ್ಲಿ ತೋರಿಸಿದ ದಯೆಯೂ, ರಾಜ್ಯಶಾಸನದಲ್ಲಿ ತೋರಿಸಿದ ಸಮತೆಯೂ ಭರತಖಂಡಕ್ಕೆ ಶ್ರೇಷ್ಠತೆಯನ್ನುಂಟುಮಾಡಿದವೋ ಅಂಥ ಮಹಾತ್ಮನ ಬಾಲ್ಯಕಾಲದ ಯಾವ ವಿಶೇಷ ವಿಷಯಗಳೂ ಎಲ್ಲಿಯೂ ಉಲ್ಲೇಖಿಸಲ್ಪಡದಿರುವದಕ್ಕೆ ವಿಷಾದಿಸಬೇಕಾಗಿದೆ. ಅಶೋಕಾವದಾನದ ಹೊರತು ಹಿಂದುಪುರಾಣಗಳು, ಜೈನಗ್ರಂಥಗಳು, ತಿಬೇಟದ ಇತಿಹಾಸಗಳು ಚೀನಪ್ರವಾಸಿಗಳು ಬರೆದಿಟ್ಟ ವರ್ಣನೆಗಳು ಇವುಗಳಲ್ಲಿ ಅಶೋಕನ ವಿಷಯವಾಗಿ ಕೆಲವು ಸಂಗತಿಗಳು ಉಲ್ಲೇಖಿಸಲ್ಪಟ್ಟಿರುವವು. ಅವುಗಳಿಂದ ಗೊತ್ತಾಗುವ ಅಶೋಕನ ಬಾಲ್ಯಜೀವನ, ಯೌವನದಲ್ಲಿ ಮಾಡಿದ ಕಾರ್ಯ್ಯಗಳು ಇವುಗಳ ವಿಷಯವಾಗಿ ಕೆಳಗೆ ಸಂಕ್ಷೇಪವಾಗಿ ವಿವರಿಸಲ್ಪಡುವದು.

ಭಾಗೀರಥೀ ಶೋಣಗಳ ಸಂಗಮಸ್ಥಳದಲ್ಲಿ ಉನ್ನತವಾದ ಪ್ರಾಸಾದಗಳಿಂದ ಕಂಗೊಳಿಸುವ ಪಾಟಲಿಪುತ್ರ ರಾಜಧಾನಿಯಲ್ಲಿ ಅಶೋಕನು ಬೆಳೆದನು. ಆ ಕಾಲದ ವಿವರಣೆಯನ್ನು ಓದಲು ಅರಮನೆಗೆ ಸವಿೂಪವಾಗಿದ್ದ ದುರ್ಗದಲ್ಲಿ ಅಸಂಖ್ಯ ಸೈನಿಕರೂ, ನಾನಾಪ್ರಕಾರದ ಆಯುಧಗಳಿಂದ ತುಂಬಿದ ಶಸ್ತ್ರಾಗಾರಗಳೂ, ರಣೋನ್ಮತ್ತವಾದ ಆನೆಕುದುರೆಗಳೂ ಮೌರ್ಯ್ಯ ಸಾಮ್ರಾಜ್ಯದ ಪ್ರತಾಪವನ್ನು ವ್ಯಕ್ತಪಡಿಸುತ್ತಿದ್ದವೆಂದೂ, ಅರಮನೆಯಲ್ಲಿ ಸಾವಿರಾರು ಜನ ಬ್ರಾಹ್ಮಣರ ಕಂಠಗಳಿಂದ ಹೊರಡುವ ವೇದಘೋಷವು ಜನರ ಮನಸ್ಸಿನಲ್ಲಿ ಅತೀಂದ್ರಿಯವಾದ ಒಂದು ಶ್ರೇಷ್ಠಭಾವವನ್ನು ಉಂಟುಮಾಡುತ್ತಿತ್ತೆಂದೂ ತಿಳಿಯುವದು. ಮುಂದೆ ಬರೆದಿರುವ ಸಂಗತಿಗಳನ್ನು ಓದಲು ಅಶೋಕನು ಬಾಲ್ಯದಲ್ಲಿ ಉಳಿದ ರಾಜಕುಮಾರರೊಡನೆ ರಾಜಪುತ್ರೋಚಿತವಾದ ಶಿಕ್ಷಣವನ್ನು ಪಡೆದಿದ್ದನೆಂದೂ, ಪರ್ವತಗಳ ಮೇಲೆ ಕೊರೆದ ಶಿಲಾಲಿಪಿಗಳಿಂದ ಅಶೋಕನು ಬಹಳವಾಗಿ ಬೇಟೆಗೆ ಮೆಚ್ಚಿದವನೆಂದೂ ಗೊತ್ತಾಗುವದು.

ಅಶೋಕನು ಬಾಲ್ಯದಿಂದಲೂ ಬೇಟೆಗೆ ಮೆಚ್ಚಿದವನು. ಮೌರ್ಯರಾಜರ ಮೃಗಯಾ*ವಿಹಾರವು ಒಂದು ಅಪೂರ್ವವಾದ ಸಂಗತಿಯೆಂದು ಗ್ರೀಕ ಐತಿಹಾಸಿಕರು ಹಲವು ರೀತಿಯಿಂದ ವರ್ಣಿಸಿರುತ್ತಾರೆ. ಅವರು ಬೇಟೆಗೆ ಹೊರಡಲು ನೂರಾರು ಜನ ರಮಣಿಯರು ಅವರ ಸಂಗಡ ಹೋಗುತ್ತಿದ್ದರು. ಆ ರಮಣಿಯರ ಸುತ್ತಲು ಸಶಸ್ತ್ರರಾದ ಸೈನಿಕರು ಸಾಲಾಗಿ ನಡೆಯುವರು. ಅರಸನು ಈ ಮೇರೆಗೆ ಅನುಚರರೊಡನೆ ಹೊರಡುವ ಮಾರ್ಗವು ಹಗ್ಗದಿಂದ ಗುರುತಿಸಲ್ಪಡುವದು. ಗಂಡಸೇ ಆಗಲಿ, ಹೆಂಗಸೇ ಆಗಲಿ, ಆ ಗುರುತಿಸಿದ ಮಾರ್ಗದಲ್ಲಿ ಕಾಲಿಟ್ಟರೆ ಕೂಡಲೆ ಅವರಿಗೆ ದೇಹಾಂತಶಿಕ್ಷೆಯಾಗುತ್ತಿತ್ತು. ಈ ಮೃಗಯಾ ಯಾತ್ರೆಯಲ್ಲಿ ಎಲ್ಲಕ್ಕೂ ಮುಂದೆ ವಾದ್ಯಕಾರರು ಢಕ್ಕೆ ಘಂಟೆ ಮೊದಲಾದ ವಾದ್ಯಗಳನ್ನು ಬಾರಿಸುತ್ತ ಸಾಗುವರು. ಅರಸನು ಒಮ್ಮೊಮ್ಮೆ ಎತ್ತರವಾದ ಮಂಚಿಕೆಯ ಮೇಲೆ ನಿಂತು ಗುರಿಯಿಟ್ಟು ಬಾಣವ ಹೊಡೆಯುವನು. ಅವನ ಪಕ್ಕಗಳಲ್ಲಿ ಸಶಸ್ತ್ರರಾದ ರಮಣಿಯರು ನಿಲ್ಲುವರು. ಒಮ್ಮೊಮ್ಮೆ ಆನೆಯಿಂದ ಇಳಿದು ಕೆಳಗೆ ನಿಂತು ಗುರಿಹೊಡೆಯುವನು. ರಮಣಿಯರಲ್ಲಿ ಕೆಲವರು ರಥಗಳಲ್ಲಿ, ಕೆಲವರು ಕುದುರೆಗಳ ಮೇಲೆ ಕೆಲವರು ಆನೆಗಳ ಮೇಲೆ ಕುಳಿತು ಯುದ್ಧಕ್ಕೆ ಸಜ್ಜಾಗಿರುವಂತೆ ಹಲವು ತರದ ಆಯುಧಗಳಿಂದ ಯಾವಾಗಲು ಸಜ್ಜಾಗಿರುತ್ತಿದ್ದರು. ಈ ಪ್ರಕಾರದ ಮಹಾಸಮಾರಂಭದಿಂದ ಅಶೋಕನು ಬೇಟೆಗೆ ಹೊರಡುತ್ತಿದ್ದನು. ಈ ಮೃಗಯಾಸಕ್ತಿಯು ಮೌರ್ಯವಂಶಪ್ರತಿಷ್ಠಾಪಕನಾದ ಚಂದ್ರಗುಪ್ತಮಹಾರಾಜನ ಕಾಲದಿಂದ ನಡೆದುಬಂದಿತ್ತೆಂದು ಹಲವು ಗ್ರಂಥಗಳಲ್ಲಿ ಉಲ್ಲೇಖವುಂಟು.

ಅಶೋಕನು ಬಾಲ್ಯದಲ್ಲಿ ಕುರೂಪಿಯಾಗಿದ್ದನೆಂದು ಹಿಂದೆ ಹೇಳಿದೆಯಷ್ಟೇ. ಶರೀರಸೌಂದರ್ಯವಿಲ್ಲದುದರಿಂದ ಆತನು ತಂದೆಯ ಪ್ರೀತಿಗೆ ಪಾತ್ರವಾಗಿರಲಿಲ್ಲವೆಂದೂ ಅದರಿಂದ ಬಿಂದುಸಾರರಾಜನು ಉಳಿದ ರಾಜಪುತ್ರರೊಡನೆ ಈತನನ್ನು ತಿರುಗಾಡಗೊಡುತ್ತಿರಲಿಲ್ಲವೆಂದೂ ಪ್ರವಾದವುಂಟು. ಆದರೆ ಇದರಿಂದ ಅಶೋಕನ ಪಿತೃಭಕ್ತಿಯು ಸ್ವಲ್ಪವೂ ಕಡಿಮೆಯಾಗಿರಲಿಲ್ಲ. ಆತನು ಯಾವಾಗಲು ತಂದೆಯ ಅಪ್ಪಣೆಯನ್ನು ವಿಶ್ವಾಸದಿಂದ ಪಾಲಿಸುತ್ತಿದ್ದನು. ರಾಜ್ಯದ ದೂರದೂರದ ಭಾಗಗಳಲ್ಲಿ ದಂಗೆಗಳೆದ್ದರೆ ಅವುಗಳನ್ನಡಗಿಸುವ ಕೆಲಸವು ಅಶೋಕನ ಪಾಲಿಗೇ ಬರುತ್ತಿತ್ತು. ಅಶೋಕನು ಕ್ರೂರನೂ, ಉದ್ಧತನೂ, ಅತಿಶಯ ಸ್ವಾರ್ಥಪರನೂ ಆಗಿದ್ದನೆಂದು ಗ್ರಂಥಗಳಲ್ಲಿ ಉಲ್ಲೇಖವುಂಟು. ಆದರೆ ಬಾಲ್ಯದಲ್ಲಿ ಆತನಿಂದ ಅಂಥ ಕೃತಿಗಳು ಘಟಿಸಿದಂತೆ ಕಂಡುಬರುವದಿಲ್ಲ. ತಿರುಗಿ ನೋಡಿದರೆ ಆತನು ಸೌಮ್ಯಸ್ವಭಾವದವನೇ ಇದ್ದನೆಂಬದಕ್ಕೆ ಬೇಕಾದಷ್ಟು ಆಧಾರಗಳು ದೊರೆಯುವವು. ರಾಜ್ಯದ ಮುಖ್ಯ ಮುಖ್ಯ ಅಧಿಕಾರಿಗಳೆಲ್ಲ ಅಶೋಕನಿಗೆ ಮನ್ನಣೆಯನ್ನು ಮಾಡುತ್ತಿದ್ದರು. ಆತನು ಜನಸಾಮಾನ್ಯಕ್ಕೂ ಅತಿ

* ಮುದ್ರಾರಾಕ್ಷಸದಲ್ಲಿ ನೋಡಿರಿ.

ಪ್ರಿಯನಾಗಿದ್ದನು. ಅಶೋಕನ ಹೃದಯಕ್ಷೇತ್ರದಲ್ಲಿ ಅಸಾಧಾರಣ ಪ್ರತಿಭಾಬೀಜವು ಬಾಲ್ಯದಲ್ಲಿಯೇ ಅಂಕುರಿತವಾಗಿ ಯೌವನದಲ್ಲಿ ಬಹಳ ಬೆಳವಣಿಗೆಯನ್ನು ಹೊಂದಿತು.

ನಂದವಂಶದ ರಾಜರ ಕಾಲದಿಂದ ಮಗಧರಾಜ್ಯದ ಸಿಂಹಾಸನದ ವಿಷಯವಾಗಿ ಹಲವು ಕುತಂತ್ರಗಳು ನಡೆದಿದ್ದವು. ಶೂರನಾದ ಚಂದ್ರಗುಪ್ತನು ಆ ತಂತ್ರಗಳನ್ನೆಲ್ಲ ಭೇದಿಸಿ ಭರತಖಂಡದಲ್ಲಿ ಏಕಚ್ಛತ್ರಸಾಮ್ರಾಜ್ಯವನ್ನುಂಟುಮಾಡಿ ಮಗಧ ಸಿಂಹಾಸನವನ್ನು ಸ್ಥಿರವಾದ ತಳಹದಿಯಮೇಲೆ ಸ್ಥಾಪಿಸಿದ್ದನು. ಬಿಂದುಸಾರನ ಆಳಿಕೆಯಲ್ಲಿ ರಾಜ್ಯದಲ್ಲಿ ಸ್ವಲ್ಪವೂ ಅವ್ಯವಸ್ಥೆಯಿರಲಿಲ್ಲ. ಮೊದಲಿನಿಂದ ನಡೆದು ಬಂದಂತೆಯೇ ಅವನು ರಾಜ್ಯಭಾರವನ್ನು ಸಾಗಿಸಿದ್ದನು. ಆದರೂ ಅವನ ಆಳಿಕೆಯ ಕೊನೆಯ ಭಾಗದಲ್ಲಿ ತಕ್ಷಶಿಲೆಯ*ಲ್ಲಿ ಒಂದು ದಂಗೆಯು ಎದ್ದಿತು.

ತಕ್ಷಶಿಲೆಯ ಸ್ಥಾನವು ಬಹು ದಿವಸಗಳವರೆಗೆ ನಿಶ್ಚಿತವಾಗಿರಲಿಲ್ಲ. ಪ್ರಾಚೀನ ಪುಷ್ಕಲಾವತಿ ಇಲ್ಲವೆ ಹಸ್ತನಗರ ಎಂಬದರಿಂದ ಪೂರ್ವಕ್ಕೆ ೫೫ ಮೈಲಿನ ಮೇಲೆ ತಕ್ಷಶಿಲೆಯು ಇತ್ತೆಂದು 'ಪ್ಲಿನಿ'ಯ ಅಭಿಪ್ರಾಯವು. ಇದು ನಿಜವಾಗಿದ್ದರೆ ಹರನದಿಯ ದಂಡೆಯಲ್ಲಿರುವ ಹಾಸೆನ್‌ಅಬದಾಲಾ (Hasanabdala) ದ ಸಮೀಪದಲ್ಲಿ ತಕ್ಷಶಿಲೆಯು ಇರಬೇಕಾಗಿತ್ತು. ಆದರೆ ಕನಿಂಗ್‌ಹ್ಯಾಮ್ + ಮೊದಲಾದ ಇತಿಹಾಸಜ್ಞರು ಇದನ್ನು ಒಪ್ಪುವದಿಲ್ಲ. ಫಾಹಿಯಾನ, ಸಂಗುನ, ಹುಯೆನ್‌ತ್ಸಾಂಗ ಮೊದಲಾದ ಚೀನಪ್ರವಾಸಿಗಳು ಸಿಂಧುನದಿಯಿಂದ ಪೂರ್ವಕ್ಕೆ ಮೂರು ದಿವಸಗಳ ಹಾದಿಯನ್ನು ಸಾಗಿದ ಬಳಿಕ ಪ್ರಾಚೀನ ತಕ್ಷಶಿಲೆಯ ಅವಶೇಷವು ಹತ್ತುವದೆಂದು ಏಕಕಂಠವಾಗಿ ಹೇಳಿರುತ್ತಾರೆ. ಇದು ನಿಜವಿದ್ದರೆ "ಕಾಲಕಾಸರಾಯಿ" ಯ ಸಮೀಪದಲ್ಲಿದ್ದ ಸಾದೇರಿಯ ವಿಶಾಲವಾದ ಅವಶೇಷಸ್ಥಾನದಲ್ಲಿ ನಿಜವಾಗಿ ತಕ್ಷಶಿಲೆಯು ಇತ್ತೆಂದು ಊಹಿಸಬೇಕಾಗುವದು. ಕನಿಂಗ್‌ಹ್ಯಾಮ್ ಮೊದಲಾದ ಪ್ರಸಿದ್ಧ ಇತಿಹಾಸಜ್ಞರು ಈ ಮತವು ಯುಕ್ತಿಯುಕ್ತವೆಂದು ಒಪ್ಪುವರು.

ಅರಿಯಾನ್, ಸ್ಟ್ರಾಬೋ, ಪ್ಲಿನಿ ಮೊದಲಾದ ಐತಿಹಾಸಿಕರು ತಕ್ಷಶಿಲಾನಗರದ ಗೌರವ-ಸಮೃದ್ಧಿಗಳನ್ನು ಏಕವಾಕ್ಯವಾಗಿ ಉಲ್ಲೇಖಿಸಿರುವರು. ಈ ಎಲ್ಲ ವರ್ಣನೆಗಳಿಂದ ಸಾದೇರಿಯ ಅವಶೇಷಸ್ಥಳದಲ್ಲಿಯೇ ತಕ್ಷಶಿಲೆಯಿತ್ತೆಂದು ಸ್ಪಷ್ಟವಾಗಿ ತೋರುವದು. ಫಿಲಸ್‌ಟ್ರೇಟಸ್ (Philostratus) ಮೊದಲಾದ ಗ್ರೀಕಲೇಖಕರು ತಕ್ಷಶಿಲೆಯ ರಚನೆಯನ್ನು ಬಹಳ ಹೊಗಳಿರುವರು. ಕ್ರಿ. ಶ. ೪ನೆಯ ಶತಮಾನದಲ್ಲಿ

---

* ಮಗಧಸಾಮ್ರಾಜ್ಯದ ೫ ಭಾಗಗಳಲ್ಲಿ ತಕ್ಷಶಿಲೆಯು ಒಂದು. ಪಂಜಾಬಕ್ಕೆ ಸೇರಿದ ರಾವಲಪಿಂಡಿ ಜಿಲ್ಲೆಯಲ್ಲಿ ತಕ್ಷಶಿಲೆಯು ಇತ್ತೆಂದು ಐತಿಹಾಸಿಕರು ಹೇಳುವರು. ಶತದ್ರುವಿನ ಪಶ್ಚಿಮತೀರದಿಂದ ಹಿಂದುಕುಶದವರೆಗೆ ವಿಸ್ತೃತವಾದ ಪ್ರದೇಶವು ತಕ್ಷಶಿಲೆಗೆ ಸೇರಿತ್ತು.

+ Cunnigham ancient Geogrphy of India.

ಫಾಹಿಯಾನನು ತಕ್ಷಶಿಲೆಗೆ ಬಂದಿದ್ದನು. ಅವನು ಈ ಪಟ್ಟಣಕ್ಕೆ "ಚು-ಸಾ-ಸಿಲೋ" ಅಂದರೆ ಖಂಡಿತ ಮಸ್ತಕ ಎಂದು ಉಲ್ಲೇಖಿಸಿರುವನು. ಈ ಸ್ಥಾನದಲ್ಲಿಯೇ ಬುದ್ಧದೇವನು ಯಾವದೋ ಒಂದು ಪೂರ್ವಜನ್ಮದಲ್ಲಿ ತನ್ನ ಮಸ್ತಕವನ್ನು ಭಿಕ್ಷಾರ್ಥವಾಗಿ ದಾನ ಮಾಡಿದ್ದನು. ಚೂ-ಸಾ-ಸಿಲೋ ಎಂಬದು ಸಂಸ್ಕೃತ ಚ್ಯುತಶಿರ ಎಂಬ ಶಬ್ದದಿಂದ ಹುಟ್ಟಿದೆ. ಚ್ಯುತಶಿರ, ತಕ್ಷಶಿರ ಎಂಬಿವು ಒಂದೇ ಅರ್ಥದವು. ತಕ್ಷಶಿಲೆಯು ಪ್ರಾಚೀನ ಬೌದ್ಧಗ್ರಂಥಗಳಲ್ಲಿ ತಕ್ಷಶಿರ ಎಂದೇ ಹೇಳಲ್ಪಟ್ಟಿದೆ. ಕ್ರಿ. ಶ. ೫೧೮ರಲ್ಲಿ ಚೀನಪ್ರವಾಸಿಯಾದ ಸಂಗುನನು ಈ ಸ್ಥಾನಕ್ಕೆ ಬಂದಿದ್ದನು. ಸಿಂಧುನದಿಯಿಂದ ಈ ಸ್ಥಳಕ್ಕೆ ಬರುವದಕ್ಕೆ ಅವನಿಗೆ ೩ ದಿವಸಗಳು ಹಿಡಿದಿದ್ದವು. ಪ್ರಸಿದ್ಧ ಚೀನಪ್ರವಾಸಿಕನಾದ ಹುಯೆನ್‌ತ್ಸಾಂಗನು ಕ್ರಿ. ೬೩೦ರಲ್ಲಿಯೂ, ಸ್ವದೇಶಕ್ಕೆ ತಿರುಗಿ ಹೋಗುವಾಗ ಕ್ರಿ. ೬೪೩ರಲ್ಲಿಯೂ ಈ ಪಟ್ಟಣಕ್ಕೆ ಬಂದಿದ್ದನು. ಅವನು ಈ ಪಟ್ಟಣದ ಸುತ್ತಳತೆಯು ಸುಮಾರು ೧೫ ಕ್ರೋಶವಿತ್ತೆಂದು ಹೇಳಿರುವನು. ಒಂದು ಕಾಲದಲ್ಲಿ ಈ ಪ್ರದೇಶವು ಕಪಿಶ ದೇಶಕ್ಕೆ ಒಳಪಟ್ಟಿತ್ತು. ಆದರೆ ಹುಯೆನ್‌ತ್ಸಾಂಗನ ಕಾಲದಲ್ಲಿ ಇದು ಕಾಶ್ಮೀರ ರಾಜ್ಯದ ಮಾಂಡಲಿಕ ರಾಜ್ಯವಾಗಿತ್ತು. ಇಲ್ಲಿಯ ಭೂಮಿಯು ಬೆಳೆಯುಳ್ಳದ್ದು. ಗುಡಿಗಳಿಂದಲೂ, ವಿಹಾರಗಳಿಂದಲೂ ನಗರವು ತುಂಬಿಹೋಗಿತ್ತು. ಆದರೆ ಎಲ್ಲವೂ ಧ್ವಂಸೋನ್ಮುಖವಾಗಿದ್ದವು. ಪಟ್ಟಣದಿಂದ ಒಂದು ಕ್ರೋಶದ ಮೇಲೆ ಅಶೋಕನು ಕಟ್ಟಿಸಿದ ಒಂದು ಸ್ತೂಪವಿತ್ತು; ಈ ಸ್ಥಳದಲ್ಲಿ ಬುದ್ಧದೇವನು ತನ್ನ ಮಸ್ತಕವನ್ನು ದಾನಮಾಡಿದ್ದನೆಂದು ಪ್ರವಾದವುಂಟು. ಆ ದಾನಪರಮ ಕಾಷ್ಠೆಯ ಸ್ಮಾರಕವೆಂದು ಅಶೋಕನು ಈ ಸ್ತೂಪವನ್ನು ಕಟ್ಟಿಸಿದ್ದನು. ಆದರೆ ಯಾವ ಕಾಲದಲ್ಲಿ ಯಾರಿಗೆ ಮಸ್ತಕದಾನಮಾಡಿದ್ದನೆಂಬದರ ಉಲ್ಲೇಖವನ್ನು ಮಾಡಿಲ್ಲ. ಹಲವರು ಹೇಳುವದೇನಂದರೆ ಒಂದು ಹೆಣ್ಣುಹುಲಿ ಮತ್ತು ಅದರ ಏಳು ಮರಿಗಳು ಉಪವಾಸದಿಂದ ಬಳಲುತ್ತಿರುವದನ್ನು ನೋಡಿ, ಆ ಮಹಾಪುರುಷನು ತನ್ನ ಮಸ್ತಕವನ್ನು ದಾನಮಾಡಿದನು. ಬುದ್ಧನು ಬೇರೊಬ್ಬ ಮನುಷ್ಯನ ಪ್ರಾಣರಕ್ಷಣೆಗಾಗಿ ಮಸ್ತಕ ದಾನಮಾಡಿದನೆಂದು ಸಂಗುನನು* ಹೇಳುತ್ತಾನೆ. ಆದರೆ ಕನಿಂಗ್‌ಹ್ಯಾಮ್ ಮೊದಲಿನ ಪ್ರವಾದವೇ ಯುಕ್ತಿಯುಕ್ತವಾದದ್ದೆಂದು ಹೇಳುತ್ತಾರೆ. ಯಾಕಂದರೆ ಈಗಲೂ ಪಟ್ಟಣದ ಉತ್ತರದಲ್ಲಿ "ಬಾಬರಖಾನಾ" (ವ್ಯಾಘ್ರಾವಾಸ) ಎಂಬ ಒಂದು ಸ್ಥಳವೂ, ದಕ್ಷಿಣದಲ್ಲಿ "ಮಾರ್‌ಗಲ್" (ಕುತ್ತಿಗೆ ಕೊಯ್ಯುವದು) ಎಂಬ ಒಂದು ಪರ್ವತ ಶ್ರೇಣಿಯೂ ಇರುವವು. ಮೇಲೆ ಹೇಳಿದ ಪ್ರವಾದಕ್ಕೆ ಈ ಎರಡೂ ಸ್ಥಾನಗಳ ನಿಕಟ ಸಂಬಂಧವಿರಬೇಕೆಂದು ಕನಿಂಗ್‌ಹ್ಯಾಮ್ ಮೊದಲಾದ ಇತಿಹಾಸಜ್ಞರ ಅಭಿಪ್ರಾಯವು. ಇದೇ ಸಾದೇರಿಯ ಅವಶೇಷಸ್ಥಾನದಲ್ಲಿಯೇ ಎಷ್ಟೋ ಪ್ರಾಚೀನ ಸ್ತೂಪಗಳು, ವಿಹಾರಗಳು, ದುರ್ಗವೇಷ್ಟಿತವಾದ ಒಂದು ಪಟ್ಟಣವು ಇವುಗಳ ಚಿಹ್ನಗಳು ಕಾಣುವವು. ತಕ್ಷಶಿಲೆಯ ವಾಯ

* Beal's Records of western world VOL I.

ಋಭಾಗದಲ್ಲಿ ನಾಗರಾಜನಾದ ಇಳಾಪುತ್ರನ ಒಂದು ಮನೋಹರವಾದ ಸರೋವರ ವಿತ್ತು. ಸ್ವಚ್ಛವಾದ ನೀರಿನಿಂದಲೂ, ಹಲವು ತರದ ಕಮಲಗಳಿಂದಲೂ ಆ ಸರೋವರವು ಅಂದವಾಗಿತ್ತು. ತಕ್ಷಶಿಲೆಯು ಪೂರ್ವಕಾಲದಲ್ಲಿ ಭರತಖಂಡದ ಮುಖ್ಯ ವಿದ್ಯಾಪೀಠವು. ಆತ್ರೇಯ ಮೊದಲಾದ ನಾನಾಶಾಸ್ತ್ರಪಂಡಿತರಾದ ಋಷಿಗಳು ತಕ್ಷಶಿಲೆಯ ವಿಶ್ವವಿದ್ಯಾಲಯದಲ್ಲಿ ಅಧ್ಯಾಪನ ಮಾಡಿಸುತ್ತಿದ್ದರು. ನಾನಾದೇಶಗಳಿಂದ ವಿದ್ಯಾರ್ಥಿಗಳು ಅಧ್ಯಯನಕ್ಕೆ ಇಲ್ಲಿಗೆ ಬರುತ್ತಿದ್ದರು. ಬೌದ್ಧಗ್ರಂಥಗಳಲ್ಲಿ ಜೀವಕನೆಂಬ ಒಬ್ಬ ಸುಪ್ರಸಿದ್ಧ ಚಿಕಿತ್ಸಾಶಾಸ್ತ್ರ ಪಂಡಿತನ ಹೆಸರು ಬಂದಿರುವದು. ಅವನು ಈ ವಿಶ್ವವಿದ್ಯಾಲಯದ ಶಿಷ್ಯನು. ಅವನು ಮಗಧದೇಶದಿಂದ ಇಲ್ಲಿಗೆ ಅಧ್ಯಯನಕ್ಕೆ ಬಂದು ಆತ್ರೇಯ ಮಹರ್ಷಿಯ ಬಳಿಯಲ್ಲಿ ಚಿಕಿತ್ಸಾಶಾಸ್ತ್ರವನ್ನು ಕಲಿತನು. ಪಾಣಿನಿಮಹರ್ಷಿಯೂ ಇದೇ ಸ್ಥಳದಲ್ಲಿ ಅಧ್ಯಯನ ಮಾಡಿದನೆಂದು ಹೇಳಿರುವದು. ಚಾಣಕ್ಯಪಂಡಿತನು ಪುಷ್ಪಪುರಕ್ಕೆ ಬರುವ ಮುಂಚೆ ತಕ್ಷಶಿಲೆಯಲ್ಲಿ ಶಿಕ್ಷಣಪಡೆದಿದ್ದನು.

ಗ್ರೀಕವೀರನಾದ ಸಿಕಂದರನು ಈ ತಕ್ಷಶಿಲೆಗೆ ಬಂದಾಗ ಅಲ್ಲಿಯ ರಾಜನು ಯುದ್ಧವಿಲ್ಲದೆ ಅವನಿಗೆ ಅಂಕಿತನಾದನು. * ಅಲೆಕ್ಸಂದರನು ಪಂಜಾಬವನ್ನು ಬಿಟ್ಟು ಹೋದ ಬಳಿಕ ಯುಡಿಮ್ಸ ಎಂಬ ಸೇನಾಪತಿಯು ಹಿಂದುಸ್ತಾನದಲ್ಲಿದ್ದ ಗ್ರೀಕಸಾಮ್ರಾಜ್ಯದ ರಾಜ್ಯಭಾರವನ್ನು ನಾಗಿಸುತ್ತಿದ್ದನು. ತಕ್ಷಶಿಲಾರಾಜನೂ ಪುರುರಾಜನೂ ಅವನ ಸಹಾಯಕ್ಕಾಗಿ ನಿಯಮಿಸಲ್ಪಟ್ಟಿದ್ದರು. ಕ್ರಿ. ಪೂ. ೩೧೭ ರವರೆಗೆ ಅವನು ಇದೇ ಕೆಲಸದಲ್ಲಿ ಇದ್ದನು. ಮುಂದೆ ಅಂಟಿಗೋನಾಸನೊಡನೆ ಯುದ್ಧವು ಒದಗಲು ಯುಡಿಮ್ಸನು ಪುರುರಾಜನನ್ನು ಕೊಂದು ಅವನ ೧೫೦ ಆನೆಗಳನ್ನು ತೆಗೆದುಕೊಂಡು ಯುಮಿನಿಸನಿಗೆ ಸಹಾಯಮಾಡುವದಕ್ಕೆ ಹೋದನು. ಈ ಸುಯೋಗವನ್ನು ಸಾಧಿಸಿ ಚಂದ್ರಗುಪ್ತನು ತನ್ನ ಸ್ವಾತಂತ್ರ್ಯವನ್ನು ಸ್ಥಾಪಿಸುವದಕ್ಕಾಗಿ ಸುಶಿಕ್ಷಿತವಾದ ಸೇನೆಯೊಡನೆ ಗ್ರೀಕರಾಜ್ಯವನ್ನು ಮುತ್ತಿದನು. ಜಯಶೀಲನಾದ ಚಂದ್ರಗುಪ್ತನು ಪಂಜನದದಲ್ಲಿ ಗ್ರೀಕರನ್ನು ಸೋಲಿಸಲು ಗ್ರೀಕಸಾಮಂತರು ಭರತಖಂಡವನ್ನು ಬಿಟ್ಟು ಹೊರಟುಹೋದರು. ಈ ಕಾಲದಿಂದ ತಕ್ಷಶಿಲೆಯು ಮಗಧಸಾಮ್ರಾಜ್ಯಕ್ಕೆ ಒಳಪಟ್ಟಿತ್ತು.

ತಕ್ಷಶಿಲೆಯಲ್ಲಿ ದಂಗೆಯು ಹುಟ್ಟಲು ಬಿಂದುಸಾರ ಮಹಾರಾಜನು ಅದನ್ನು ಅಡಗಿಸುವ ಭಾರವನ್ನು ಅಶೋಕನಿಗೇ ಒಪ್ಪಿಸಿದನು. ರಾಜನು ಅಶೋಕನನ್ನು ಒಳೆಯ ದೃಷ್ಟಿಯಿಂದ ನೋಡುತ್ತಿರಲಿಲ್ಲವಾದದರಿಂದ ದಂಗೆಯೆದ್ದ ತಕ್ಷಶಿಲೆಗೆ ಆತನನ್ನು ಕಳುಹಿದನೆಂದು ಹೇಳುತ್ತಾರೆ. ಆದರೆ ಈ ಸಂಗತಿಯನ್ನು ನಂಬಲಾಗುವದಿಲ್ಲ. ಯಾಕಂದರೆ ರಾಜಪುತ್ರನು ರಣಕ್ಷೇತ್ರದಲ್ಲಿ ಹತನಾದರೆ ಮಗಧ ಸಾಮ್ರಾಜ್ಯಕ್ಕೇ ಕುಂದಲ್ಲವೇ? ಸಹಜವಾಗಿ ತಿಳಿಯಬಹುದಾದ ಈ ಮಾತನ್ನು ಕೂಡ ಬಿಂದುಸಾರನು ತಿಳಿಯಲಿಲ್ಲವೆಂದು

* Early His tory of India by Vincent Smith.

ಹೇಗೆ ನಂಬುವದು? ಮಗನು ಕುರೂಪಿಯಾದ ಮಾತ್ರಕ್ಕೆ ಆತನನ್ನು ದೂರದಲ್ಲಿರುವ ಪಂಚನದದಲ್ಲಿ ಸಾಯಿಸುವದಕ್ಕಾಗಿ ಕಳುಹಿಸುವ ಸಂಭವವುಂಟೆಂದು ತೋರುವದಿಲ್ಲ. ಯಾಕಂದರೆ ತನ್ನ ಕೀರ್ತಿಯನ್ನು ಚಕ್ರವರ್ತಿಯು ಮಲಿನಮಾಡುವದಕ್ಕೆ ಪ್ರಯತ್ನಿಸಿದನೆಂಬದು ಅಸಂಗತವೇ ಸರಿ.

ಸೇನೆ ಮೊದಲಾದ ಸಹಾಯವಿಲ್ಲದೆ ಅಶೋಕನು * ಏಕಾಕಿಯಾಗಿ ತಕ್ಷಶಿಲೆಗೆ ಕಳುಹಲ್ಪಟ್ಟನೆಂದು ಪ್ರವಾದವುಂಟು. ಪುತ್ರನು ಕೊಲ್ಲಲ್ಪಡಬೇಕೆಂದೇ ಮಹಾರಾಜನು ಈ ಉಪಾಯವನ್ನು ಮಾಡಿದನೆಂದೂ ಹೇಳುವರು. ಮಗಧದ ಆ ಕಾಲದ ಸ್ಥಿತಿಯನ್ನು ವಿಚಾರಿಸಿದರೆ ಮಗಧದಿಂದ ಸೇನೆಯೊಡನೆ ಅಶೋಕನನ್ನು ತಕ್ಷಶಿಲೆಗೆ ಕಳಿಸುವದರಲ್ಲಿ ಬಹಳ ತೊಂದರೆಯಿತ್ತು. ಹಲವು ಕಾರಣಗಳಿಂದ ರಾಜಪರಿವಾರದಲ್ಲಿ ಅಂತಃಕಲಹಗಳೂ, ತಂತ್ರಗಳೂ ನಡೆದಿದ್ದವು. ಬಿಂದುಸಾರನಿಗೆ ಈ ಸಂಗತಿಯು ಗೊತ್ತಾಗಿತ್ತು. ಈ ತಂತ್ರಗಾರರ ಕೃತಿಗಳಲ್ಲಿ ರಾಜನಿಗೆ ಬಹಳ ಸಂಶಯವಿತ್ತು. ಇದೂ ಅಲ್ಲದೆ ಬಿಂದುಸಾರನಿಗೆ ಅಶೋಕನ ಶೌರ್ಯ, ವೀರ್ಯ, ಪ್ರತಿಭೆಗಳನ್ನು ನೋಡಿ ಆತನು ತಕ್ಷಶಿಲೆಗೆ ಸೇನಾದಿ ಸಹಾಯವಿಲ್ಲದೆ ಏಕಾಕಿಯಾಗಿ ಹೋದರೂ ಅಲ್ಲಿಯ ದಂಗೆಯನ್ನು ಶಾಂತಮಾಡಿ ಬರುವನೆಂಬದಾಗಿ ಪೂರ್ಣ ವಿಶ್ವಾಸವಿತ್ತು. ಅಶೋಕಾವದಾನದಲ್ಲಿ ಭೂಮಾತೆಯು ಈ ಕಾಲದಲ್ಲಿ ದಯಾಪರವಶಳಾಗಿ ಅಶೋಕನಿಗೆ ಯುದ್ಧಸಾಮಗ್ರಿಗಳನ್ನು ಒದಗಿಸಿದಳೆಂದು ವರ್ಣನೆಯುಂಟು. ಇತಿಹಾಸದೃಷ್ಟಿಯಿಂದ ಇದರಲ್ಲಿ ಏನಾದರೂ ಸತ್ಯಾಂಶವು ಉಂಟೋ ಇಲ್ಲವೋ ತಿಳಿಯದು. ಅಶೋಕನು ತಕ್ಷಶಿಲೆಗೆ ಬಂದೊಡನೆಯೆ ಪ್ರಜೆಗಳು ಗುಂಪು ಗುಂಪಾಗಿ ಅವನ ಬಳಿಗೆ ಬಂದರು. ಪಟ್ಟಣವಾಸಿಗಳು ಅಶೋಕನ ನಡತೆಯನ್ನು ನೋಡಿ ಮರುಳಾಗಿ ಆತನಿಗೆ–"ಒಡೆಯರೇ ನಾವು ದ್ರೋಹಿಗಳಲ್ಲ; ರಾಜನ ಇಲ್ಲವೆ ರಾಜ ಪರಿವಾರದ ವಿಷಯವಾಗಿ ನಮ್ಮಲ್ಲಿ ದ್ವೇಷಬುದ್ಧಿಯಿಲ್ಲ. ಅತ್ಯಾಚಾರಿಗಳಾದ ಅಧಿಕಾರಿಗಳ ನಡತೆಯಿಂದ ನಾವು ಅನಿರ್ವಾಹ ಈ ಮಾರ್ಗವನ್ನು ಹಿಡಿದೆವು" ಎಂದು ಹೇಳಿದರು. ದಂಗೆಮಾಡಿದ ಪ್ರಜೆಗಳ ಅಂತರಂಗವನ್ನು ತಿಳಿದು ಅಶೋಕನು ಸವಿಮಾತುಗಳಿಂದ ಅವರನ್ನು ಸಮಾಧಾನಬಡಿಸಿದನು. ಮತ್ತು ಅಪರಾಧಿಗಳಿಗೆ ಯೋಗ್ಯವಿಚಾರ ಮಾಡಿ ತಕ್ಕ ಶಿಕ್ಷೆಯನ್ನು ಕೊಡಹತ್ತಿದನು. ಅಶೋಕನ ಆಶ್ವಾಸನವನ್ನು ಕೇಳಿ ತಕ್ಷಶಿಲೆಯ ದಂಗೆಗಾರರು ಯುದ್ಧವಿಲ್ಲದೆ ಶಾಂತರಾದರು. ಅಲ್ಲಿ ಕೆಲವು ದಿವಸ ನಿಂತು ಅಶೋಕನು ಪ್ರಜೆಗಳ ಮನೋನುರಾಗವನ್ನು ಸಂಪಾದಿಸಿದನು. ಈ ಮೇರೆಗೆ ರಕ್ತಪಾತವಿಲ್ಲದೆ

---

* ಸುಷೀಮನೇ ಮೊದಲು ತಕ್ಷಶಿಲೆಗೆ ದಂಗೆಯನ್ನಡಗಿಸುವದಕ್ಕಾಗಿ ಕಳಿಸಲ್ಪಟ್ಟನೆಂದೂ ಅವನಿಂದ ಆ ಕೆಲಸವಾಗದ್ದರಿಂದ ಅಶೋಕನು ಬಳಿಕ ಕಳಿಸಲ್ಪಟ್ಟನೆಂದೂ ಕೆಲವರ ಮತವು. ದಂಗೆಯನ್ನಡಗಿಸಿ ಶಾಂತತೆಯನ್ನುಂಟುಮಾಡಿದ ಬಳಿಕ ಅಶೋಕನು ಕೆಲವು ದಿವಸ ಅಲ್ಲಿ ಕಾರಭಾರಿಯಾಗಿ ನಿಯಮಿಸಲ್ಪಟ್ಟಿದ್ದನು.

* Beal's Records of western world; VOL I.

ರಾಜ್ಯದಲ್ಲಿ ದಂಗೆಯನ್ನಡಗಿಸುವದು ಎಂಥ ಧೈರ್ಯದ ಮತ್ತು ಬುದ್ಧಿಯ ಕೆಲಸವಿರುತ್ತ ದೆಯೆಂಬದನ್ನು ಸಹಜವಾಗಿ ಊಹಿಸಬಹುದು. ಸಮರ್ಥರಾದ ರಾಜನೀತಿಜ್ಞರಿಗೇ ಇದು ಸಾಧ್ಯವು.

ಅಶೋಕನು ತಕ್ಷಶಿಲೆಯ ದಂಗೆಯನ್ನು ಮುರಿಯುವದಕ್ಕೆ ಹೋದಾಗ ಅತನ ಮಲತಾಯಿಯ ಮಗನಾದ ಯುವರಾಜ ಸುಷೀಮನ ವಿರುದ್ಧವಾಗಿ ಒಂದು ಒಳತಂತ್ರವು ನಿರ್ಮಾಣವಾಯಿತು. ಮುಖ್ಯ ಮಂತ್ರಿಯಾದ ಖಲ್ಲಾತಕನೆಂಬವನು ವೃದ್ಧನಾಗಿಯೂ ಮಹಾ ಪ್ರತಾಪಶಾಲಿಯಾಗಿಯೂ ಇದ್ದನು. ಚಂದ್ರಗುಪ್ತನು ಸ್ಥಾಪಿಸಿದ ಮಂತ್ರಿಸಭೆಯ ಐನೂರು ಜನ ಮಂತ್ರಿಗಳು ರಾಜ್ಯಭಾರವನ್ನು ಸಾಗಿಸುತ್ತಿದ್ದರು. ಬಿಂದುಸಾರನ ಕಾಲ ದಲ್ಲಿ ಖಲ್ಲಾತಕನು ಆ ಮಂತ್ರಿಮಂಡಲಕ್ಕೆ ಮುಖ್ಯನಾಗಿದ್ದನು. ಒಂದಾನೊಂದು ಸಮ ಯದಲ್ಲಿ ಸುಷೀಮನು ಪ್ರಮೋದೋದ್ಯಾನದಿಂದ ಅರಮನೆಗೆ ತಿರುಗಿ ಬರುವಾಗ ಚೇಷ್ಟೆ ಯಿಂದ ಖಲ್ಲಾತಕನ ತಲೆಯ ಮೇಲೆ ತನ್ನ ಅಂಗುಲಿ ತ್ರಾಣವನ್ನು ಒಗೆದನು. ಇದರಿಂದ ಆ ಮುಖ್ಯಮಂತ್ರಿಗೆ ಅಪಮಾನವಾಯಿತು. ಮಂತ್ರಿಸಭೆಯೆಲ್ಲವೂ ಈ ವಿಷಯದಲ್ಲಿ ಸಿಟ್ಟು ಗೆದ್ದಿತು. ಬಿಂದುಸಾರ ಚಕ್ರವರ್ತಿಯ ವಿಶಾಲವಾದ ಸಾಮ್ರಾಜ್ಯಕ್ಕೆ ಒಬ್ಬ ಚಂಚಲ ಸ್ವಭಾವದ ಉದ್ಧತನಾದ ಯುವಕನು ಉತ್ತರಾಧಿಕಾರಿಯಾಗಬೇಕಾಯಿತೇ? ಇವನು ಸಿಂಹಾಸನದ ಮೇಲೆ ಕುಳಿತರೆ ಸಭಾಸದರಾದ ಮಂತ್ರಿಗಳ ಮತ್ತು ರಾಜ್ಯದ ಮುಖ್ಯ ಮುಖ್ಯ ಅಧಿಕಾರಿಗಳ ಮರ್ಯಾದೆಯು ಉಳಿಯುವದು ಕಠಿಣವಾಗುವದು, ಎಂದು ಅವ ರಿಗೆ ತೋರಿತು. ಈ ರೀತಿಯಿಂದ ಸುಷೀಮನ ವಿರುದ್ಧವಾಗಿ ಒಳತಂತ್ರವು ಆರಂಭವಾ ಯಿತು. ಇದೇ ಸಮಯಕ್ಕೆ ಅಶೋಕನು ತಕ್ಷಶಿಲೆಯ ದಂಗೆಯನ್ನು ಅನಾಯಾಸವಾಗಿ ಮುರಿದು ಜಯಶೀಲನಾಗಿ ಪಾಟಲಿಪುತ್ರಕ್ಕೆ ತಿರುಗಿಬಂದನು.

ಬಿಂದುಸಾರನಿಗೆ ಹಲವರು ರಾಣಿಯರು ಇದ್ದರು. ಮತ್ತು ಅವರ ಹೊಟ್ಟೆಯಲ್ಲಿ ಹಲವು ಜನ ಮಕ್ಕಳು ಹುಟ್ಟಿದ್ದರು. ಅಶೋಕನ ಕೀರ್ತಿಯನ್ನೂ, ಶೌರ್ಯವನ್ನೂ, ಜನಾನುರಾಗವನ್ನೂ ನೋಡಿ ಅವನ ಮಲ ಅಣ್ಣತಮ್ಮಂದಿರು ಅಸೂಯೆಪಡುತ್ತಿದ್ದರು. ಅಶೋಕನ ತಾಯಿಯಾದ ಸುಭದ್ರಾಂಗಿಯು ಕ್ಷೌರಕಾರಿಣಿಯಾಗಿದ್ದು ಕ್ರಮದಿಂದ ಮುಖ್ಯ ಮಹಿಷಿಯಾಗಿದ್ದಳು. ಇದರಿಂದ ಅಂತಃಪುರದಲ್ಲಿಯೂ ವೈಮನಸ್ಯವುಂಟಾಗಿತ್ತು. ಅಮಾತ್ಯನಾದ ರಾಧಾಗುಪ್ತನೂ ಖಲ್ಲಾತಕನಿಗಾದ ಅಪಮಾನವನ್ನು ನೋಡಿ ಬಹಳ ಸಿಟ್ಟಾಗಿದ್ದನು. ಇವನು ಅಶೋಕನಲ್ಲಿ ಬಹಳ ಅನುರಕ್ತನಾಗಿಯೂ ಗುಣಗ್ರಾಹಿಯಾಗಿ ಯೂ ಇದ್ದನು. ಸುಷೀಮನ ವಿರುದ್ಧವಾಗಿ ಒಳತಂತ್ರವನ್ನು ಮಾಡಿದವರಲ್ಲಿ ರಾಧಾ ಗುಪ್ತನೇ ಪ್ರಮುಖನು.

ಈ ಕಾಲದಲ್ಲಿ ಬಿಂದುಸಾರನು ಅಶೋಕನನ್ನು ಉಜ್ಜಯಿನಿಯ ರಾಜ್ಯಕಾರಭಾರದ ಮೇಲೆ ನಿಯಮಿಸಿದ್ದನು. ರಾಜನು ಅಶೋಕನನ್ನು ಪ್ರೇಮದೃಷ್ಟಿಯಿಂದ ನೋಡುತ್ತಿರ

ಲಿಲ್ಲವಾದದರಿಂದ ಆತನನ್ನು ಮಗಧದಿಂದ ದೂರದೇಶಕ್ಕೆ ಕಳಿಸಿದನೆಂಬ ಜನವಾರ್ತೆಯು ಈ ಪ್ರಸಂಗವನ್ನು (ಉಜ್ಜಯಿನಿಗೆ ನಿಯಮಿಸಿದ್ದನ್ನು) ನೋಡಿದರೆ ನಿಜವೆಂದು ಎಂದೂ ತೋರುವದಿಲ್ಲ. ಉಜ್ಜಯಿನಿಯು ಅತಿ ಸಮೃದ್ಧವಾದ ದೊಡ್ಡ ಪಟ್ಟಣವು. ವಿದ್ಯಾ-ಶಿಲ್ಪ-ಸೌಂದರ್ಯಗಳಲ್ಲಿ ಅದು ಭರತಖಂಡದ ತಲೆವಣಿಯೆನಿಸುತ್ತಿತ್ತು. ಬಿಂದುಸಾರನಂಥ ರಾಜನು ಮಗಧಸಾಮ್ರಾಜ್ಯದ ಒಂದು ಮುಖ್ಯಭಾಗದ ಕಾರಭಾರವನ್ನು ತನ್ನ ಮನಸ್ಸಿಗೆ ಬಾರದ ಒಂದು ಅಯೋಗ್ಯವ್ಯಕ್ತಿಗೆ ನಿಯಮಿಸಿದ್ದನೆಂಬದನ್ನು ನಂಬಲಾದೀತೇ?

೫ನೆಯ ಅಧ್ಯಾಯ.

ಉಜ್ಜಯಿನಿ.

ಶಿಪ್ರಾನದಿಯ ದಂಡೆಯ ಮೇಲೆ ಪ್ರಾಸಾದ ಸೌಧಗಳಿಂದ ಶೋಭಿಸುವ ಉಜ್ಜಯಿನಿಯು ಅರಳಿದ ಹೂದೋಟದಂತೆ ಕಂಗೊಳಿಸುತ್ತಿತ್ತು. ಚಿತ್ತಾಕರ್ಷಿಯಾದ ಪ್ರಾಕೃತಿಕ ಸೌಂದರ್ಯದಿಂದ ಉಜ್ಜಯಿನಿಯು ಭೂಸ್ವರ್ಗದಂತೆ ತೋರುತ್ತಿತ್ತು. ಎಲ್ಲಿ ನೋಡಿದರೂ ಮಣಿಖಚಿತವಾದ ಉನತ ಪ್ರಾಸಾದಶಿಖರಗಳು, ಎಲ್ಲಿನೋಡಿದರೂ ಪೌರಾಂಗನೆಯರ "ವಿದ್ಯುದ್ದಾಮಸ್ಫುರಿತ ಚಕಿತ ದೃಷ್ಟಿಕ್ಷೇಪಗಳು" ಎಲ್ಲಿ ನೋಡಿದರೂ ಪುಲಿನ ಪ್ರದೇಶಗಳು ಕಂಗೊಳಿಸುವವು. ಅಲ್ಲಲ್ಲಿ ಸೇವಂತಿಗೆ, ಸಂಪಿಗೆ, ಮಲ್ಲಿಗೆ, ಕೇದಗಿ ಮೊದಲಾದ ನಾನಾವರ್ಣ ಪುಷ್ಪರಾಜಿಯಿಂದ ಶೋಭಿಸುವ, ಗೀತ-ವಾದ್ಯಗಳಿಂದ ಶಬ್ದಾಯಮಾನವಾದ ಪ್ರಮೋದ ವಿಹಾರಗಳು ಪಥಿಕರ ಮನೋರಂಜನವನ್ನು ಮಾಡುವವು. "**उज्जयिनी स्याद्विशालावन्ती पुष्पकारिणी**" ಉಜ್ಜಯಿನಿಯ ಈ ನಾಲ್ಕು ಹೆಸರುಗಳು ಎಲ್ಲ ಕಡೆಗೆ ಪ್ರಚಲಿತವಾಗಿದ್ದವು. ಪುರಾಣಕಾರರು—

अयोध्यामथुरामाया काशी कांची अवन्तिका।
पुरी द्वारावती चैव सप्तैता मोक्षदायकाः॥ (ಸ್ಕಂದಪುರಾಣ)

ಎಂದು ಹೇಳಿರುವರು. ಅವಂತೀ ಪ್ರದೇಶದ ರಾಜಧಾನಿಯೇ ಉಜ್ಜಯಿನಿಯು. ಕ್ರಿ. ೨ನೆಯ ಶತಮಾನದ ವರೆಗೆ ಈ ಪ್ರದೇಶವು ಅವಂತಿಯೆಂದೇ ಪ್ರಸಿದ್ಧವಾಗಿತ್ತು. ಮುಂದೆ ೭ನೆಯ ಇಲ್ಲವೆ ೮ನೆಯ ಶತಮಾನದಿಂದ ಇದಕ್ಕೆ ಮಾಲವವೆಂಬ ಹೆಸರು ಬಂದಿತು. ನಾವು ಈಗ ವರ್ಣಿಸುವ ಕಾಲದ ಮುಂದಿನ ಕಾಲದಲ್ಲಿ, ಅಂದರೆ ಸುಮಾರು ೨ಸಾವಿರ ವರ್ಷಗಳ ಪೂರ್ವದಲ್ಲಿ ಭರತಖಂಡದಲ್ಲಿ ಪ್ರಸಿದ್ಧನಾದ ವಿಕ್ರಮಾದಿತ್ಯ ಮಹಾರಾಜನು ಈ ಉಜ್ಜಯಿನಿಯಲ್ಲಿ ಆಳುತ್ತಿದ್ದನು. ಬೌದ್ಧಧರ್ಮವು ಅಡಗಿಹೋದ ಬಳಿಕ ಈ ದೇಶ

ದಲ್ಲಿ ಶೈವಧರ್ಮವು ನೆಲೆಗೊಂಡಿತು. ಈ ಶೈವಧರ್ಮದ ಅಭ್ಯುದಯ ಕಾಲದಲ್ಲಿ ವಿಕ್ರಮಾದಿತ್ಯ ರಾಜನು ಉದಯಹೊಂದಿದ್ದನು. ಉಜ್ಜಯಿನಿಯು ಅತಿ ಪ್ರಾಚೀನನಗರಿಯಾದರೂ ವಿಕ್ರಮಾದಿತ್ಯ ಮಹಾರಾಜನ ಕಾಲದಿಂದಲೇ ಅದು ಸಮೃದ್ಧವಾದ ಪಟ್ಟಣವಾಯಿತು. ಉಜ್ಜಯಿನಿಯ ಪ್ರಸಿದ್ಧವಾದ ಮಹಾಕಾಲೇಶ್ವರನ ಮಂದಿರವು ಬಹಳ ಪ್ರಾಚೀನವೆಂದು ತೋರುತ್ತದೆ. ಯಾಕಂದರೆ, ಮಹಾಭಾರತ—ವನಪರ್ವದಲ್ಲಿ ಮಹಾಕಾಲೇಶ್ವರನ ಉಲ್ಲೇಖವುಂಟು. ಆ ಕಾಲದಲ್ಲಿ ಈ ಸ್ಥಳವು ಕೋಟಿತೀರ್ಥವೆಂದು ಕರೆಯಲ್ಪಡುತ್ತಿತ್ತು. ಮಹಾಕವಿ ಕಾಲಿದಾಸನೂ, ಬೇರೆ ಪ್ರಸಿದ್ಧ ಕವಿಗಳೂ ವಿಕ್ರಮಾದಿತ್ಯ ಮಹಾರಾಜನ ಸಭೆಯನ್ನು ಅಲಂಕರಿಸಿದ್ದರು.

ಉಜ್ಜಯಿನೀ ಪ್ರದೇಶದ ಕಾರಭಾರವನ್ನು ಅಶೋಕನು ಯಾವ ಪ್ರಕಾರ ಸಾಗಿಸಿದನೆಂಬದರ ವಿಸ್ತೃತವಿವರಣವು ಎಲ್ಲಿಯೂ ದೊರೆಯುವದಿಲ್ಲ. ಆತನ ನಿಸ್ಸೀಮವಾದ ಪ್ರತಿಭೆಯು ಇಲ್ಲಿಯೇ ವಿಕಾಸಗೊಂಡಿತೆಂದು ತೋರುವದು. ಅಶೋಕನ ಅಧಿಕಾರ ಕಾಲದಲ್ಲಿ ಇಲ್ಲಿ ಯುದ್ಧ, ದುರ್ಭಿಕ್ಷ ಮೊದಲಾದವೇನೂ ಒದಗಿದಂತೆ ತೋರುವದಿಲ್ಲ. ಉಜ್ಜಯಿನಿಯಲ್ಲಿರುವಾಗ ಆತನು ವಿದಿಶಾನಗರಿಯ ಒಬ್ಬ ಶ್ರೇಷ್ಠಿಯ 'ದೇವಿ' ಎಂಬ ಕನ್ಯೆಯ ರೂಪಲಾವಣ್ಯಗಳಿಗೆ ಮರುಳಾಗಿ ಆಕೆಯ ಪಾಣಿಗ್ರಹಣಮಾಡಿದನು. ಈ ವಿದಿಶಾನಗರಿಯು ವ್ಹಿಲಸಾದ ಸಮೀಪದಲ್ಲಿರುವ ಈಗಿನ ವೇಶ ನಗರವು. ದೇವಿಯನ್ನು ಮದುವೆಯಾಗಿ ಉಜ್ಜಯಿನಿಗೆ ಕರೆತಂದನು. ಕಾಲಕ್ರಮದಿಂದ ಅವಳ ಹೊಟ್ಟೆಯಲ್ಲಿ ಒಬ್ಬ ಮಗನೂ ಒಬ್ಬ ಮಗಳೂ ಹುಟ್ಟಿದರು. ಮಗನಿಗೆ ಮಹೇಂದ್ರನೆಂದೂ, ಮಗಳಿಗೆ ಸಂಘಮಿತ್ರೆಯೆಂದೂ ಹೆಸರು. ಬುದ್ಧದೇವನ ಪರಿನಿರ್ವಾಣವಾಗಿ ೨೦೪ ವರ್ಷಗಳಾದ ತರುವಾಯ ಮಹೇಂದ್ರನ ಜನ್ಮವಾಯಿತು. ಸಂಘಮಿತ್ರೆಯು ಮಹೇಂದ್ರನಿಗೆ ೨ ವರ್ಷಕ್ಕೆ ಕಿರಿಯಳು. ಅಶೋಕನು ಸಿಂಹಾಸನಾರೋಹಣಕ್ಕಾಗಿ ಪಾಟಲಿಪುತ್ರಕ್ಕೆ ಹೋಗಲು ಮಕ್ಕಳೂ ಆತನ ಸಂಗಡ ಅಲ್ಲಿಗೆ ಹೋದರು.

ಈ ಕಾಲಕ್ಕೆ ತಕ್ಷಶಿಲೆಯಲ್ಲಿ ಮತ್ತೆ ದಂಗೆಯೆದ್ದಿತು. ಯುವರಾಜನಾದ ಸುಷೀಮನು ಅಸಂಖ್ಯ ಸೈನ್ಯದೊಡನೆ ಅಲ್ಲಿಗೆ ಕಳಿಸಲ್ಪಟ್ಟನು. ಬಿಂದುಸಾರನ ಬೇನೆಯು ದಿನದಿನಕ್ಕೆ ಹೆಚ್ಚುತ್ತ ನಡೆಯಿತು. ಮಂತ್ರಿಗಳು ಏನಾದರೂ ಮಾಡಿ ಅಶೋಕನನ್ನು ಪಾಟಲಿಪುತ್ರದ ಸಿಂಹಾಸನದ ಮೇಲೆ ಕುಳ್ಳಿರಿಸಬೇಕೆಂದು ಸಂಕಲ್ಪಮಾಡಿದರು. ಆದರೆ ಅಶೋಕನು ರಾಜಧಾನಿಯಲ್ಲಿಲ್ಲದಾಗ ಸುಷೀಮನನ್ನು ಸಿಂಹಾಸನದಿಂದ ತಳ್ಳುವದು ಕಠಿಣವು. ಆದದರಿಂದ ಅಮಾತ್ಯ ರಾಧಾಗುಪ್ತನು ಬಿಂದುಸಾರನು ರೋಗಪೀಡಿತನಾಗಿರುವದನ್ನು ಉಜ್ಜಯಿನಿಗೆ ಹೇಳಿಕಳುಹಿದನು. ತಂದೆಯ ಬೇನೆಯ ಸುದ್ದಿಯನ್ನು ತಿಳಿದು ಅಶೋಕನು ಅದೇ ಕ್ಷಣಕ್ಕೆ ಉಜ್ಜಯಿನಿಯನ್ನು ಬಿಟ್ಟು ಪಾಟಲಿಪುತ್ರಕ್ಕೆ ಪ್ರಯಾಣವನ್ನು ಬೆಳೆಯಿಸಿದನು.

೬ನೆಯ ಅಧ್ಯಾಯ.

ಬಿಂದುಸಾರ—ಅಶೋಕನು ರಾಜ್ಯಭಾರವನ್ನು ಸ್ವೀಕರಿಸಿದ್ದು.



ಕ್ರಿ. ಪೂ. ೨೯೧ ರಲ್ಲಿ ವೀರಶ್ರೇಷ್ಠನಾದ ಚಂದ್ರಗುಪ್ತನು ದೇಹತ್ಯಾಗ ಮಾಡಲು ಆತನ ಮಗನಾದ ಬಿಂದುಸಾರನು ಮಗಧದ ಸಿಂಹಾಸನವನ್ನೇರಿದನು. ಗ್ರೀಕಇತಿಹಾಸಿಕರು ಬಿಂದುಸಾರನ ಹೆಸರನು ಎಲ್ಲಿಯೂ ಉಲ್ಲೇಖಿಸಿಲ್ಲ. ಚಂದ್ರಗುಪ್ತನ ಮಗನನ್ನು ಅವರು ಅಮಿತ್ರಘಾತ (ಶತ್ರುಹಂತೃ) ಎಂಬ ಹೆಸರಿನಿಂದಲೇ ಕರೆದಿರುವರು. ಚಂದ್ರಗುಪ್ತನು ಸೆಲ್ಯುಕಸ ಮೊದಲಾದ ಗ್ರೀಕರಾಜರ ಸಂಗಡ ಉಂಟು ಮಾಡಿಕೊಂಡಿದ್ದ ಬಂಧುತ್ವವು ಇವನ ಕಾಲದಲ್ಲಿ ಪೂರ್ಣವಾಗಿ ಉಳಿದಿತ್ತು. ಪ್ರಸಿದ್ಧ ಗ್ರೀಕ ವಕೀಲನಾದ ಮೆಗಾಸ್ಥಿನೀಸನು ಸ್ವದೇಶಕ್ಕೆ ತಿರುಗಿ ಹೋದ ಬಳಿಕ ಇವನ ಆಳಿಕೆಯಲ್ಲಿಯೇ ಡಾಯಮೇಕನ್ ಎಂಬ ಮತ್ತೊಬ್ಬ ವಕೀಲನು ಮಗಧರಾಜಸಭೆಗೆ ಬಂದನು. ಅವನೂ ಮೆಗಾಸ್ಥಿನೀಸನಂತೆ ತನ್ನ ಪ್ರವಾಸದ ವೃತ್ತಾಂತವನ್ನು ಬರೆದಿಟ್ಟಿದ್ದನು. ಆದರೆ ಅದು ಈಗ ಉಪಲಬ್ಧವಿಲ್ಲ. ಸೆಲ್ಯುಕಸನಿಕೇತರನು ಕ್ರಿ. ಪೂ. ೨೮೦ ರಲ್ಲಿ ಕೊಲೆಗಡಿಕರಿಂದ ಹತನಾಗಲು ಅವನ ಮಗನಾದ ಆಂಟಿ ಓಕಸೋಟರನು ಸಿರಿಯಾರಾಜ್ಯದ ಪಟ್ಟದ ಮೇಲೆ ಕುಳಿತನು. ಇವನೊಡನೆ ಬಿಂದುಸಾರನ ಪತ್ರವ್ಯವಹಾರಾದಿಗಳು ನಡೆಯುತ್ತಿದ್ದವು. ಮಿಸರದ ರಾಜನಾಗಿದ್ದ ಟಲೇಮಿಫಿಲೆಡಲ್‌ಫಸನು ಈ ಕಾಲದಲ್ಲಿ ಡಾಯಟಿನಿಸನ್ ಎಂಬ ಗ್ರೀಕ ವಕೀಲನನ್ನು ಪಾಟಲಿಪುತ್ರದ ರಾಜಸಭೆಗೆ ಕಳುಹಿದ್ದನು. ಈ ದೇಶದಲ್ಲಿರುವಾಗ ದೊರಕಿಸಿದ ಜ್ಞಾನವನ್ನು ಆತನು ಬರೆದಿಟ್ಟಿರುವನು. ಬಿಂದುಸಾರನ ಆಳಿಕೆಯಲ್ಲಿ ರಾಜ್ಯದ ಅಂತರ್ವ್ಯವಸ್ಥೆಯು ಯಾವತರದಿಂದಿತ್ತೆಂಬದರ ವಿವರಣವು ಎಲ್ಲಿಯೂ ವಿಶೇಷವಾಗಿ ದೊರೆಯುವದಿಲ್ಲ. ಉಪಲಬ್ಧವಿರುವ ಅಲ್ಪ ಸ್ವಲ್ಪ ಸಂಗತಿಗಳಿಂದ ಬಿಂದುಸಾರನಾದರೂ ತಂದೆಯಂತೆ ಒಂದೊಂದೇ ರಾಜ್ಯವನ್ನು ಜಯಿಸಿ ಮಗಧ ಸಾಮ್ರಾಜ್ಯಕ್ಕೆ ಸೇರಿಸುತ್ತ ನಡೆದಿದ್ದನೆಂದು ತಿಳಿಯುತ್ತದೆ.

ಬಿಂದುಸಾರನು ೨೫ ವರ್ಷಗಳ ವರೆಗೆ ಮಗಧ ರಾಜ್ಯಭಾರವನ್ನು ನಾಗಿಸಿ ಕ್ರಿ. ಪೂ. ೨೭೨ರಲ್ಲಿ ದೇಹವಿಟ್ಟನು. ಅವನ ತರುವಾಯ ಖಲ್ಲಾತಕ, ರಾಧಾಗುಪ್ತ ಎಂಬ ಮುಖ್ಯ ಮಂತ್ರಿಗಳ ಸಹಾಯದಿಂದಲೂ, ಅನುಮತಿಯಿಂದಲೂ ಅಶೋಕನು ಮಗಧ ರಾಜ್ಯಭಾರವನ್ನು ವಹಿಸಿದನು. ಬಿಂದುಸಾರನ ಆಳಿಕೆಯಲ್ಲಿ ಮಹತ್ವದ ಯಾವ ಸಂಗತಿಯೂ ಸಂಭವಿಸಲಿಲ್ಲ.

ಅಶೋಕನು ಪಾಟಲಿಪುತ್ರದಲ್ಲಿ ರಾಜ್ಯಸೂತ್ರವನ್ನು ವಹಿಸಿದಾಗ ಅತನ ಅಣ್ಣನಾದ ಸುಷೀಮನು ತಕ್ಷಶಿಲೆಯಲ್ಲಿ ದಂಗೆಯನ್ನಡಗಿಸುವದರಲ್ಲಿ ತೊಡಗಿದ್ದನು. ಅವನು ಅಲ್ಲಿ ಅಪಜಯ ಹೊಂದಿ ನಿರಾಶನಾಗಿ ಪಾಟಲಿಪುತ್ರಕ್ಕೆ ತಿರುಗಿ ಬಂದನು. ದಾರಿಯಲ್ಲಿ ಅವನು ಬಿಂದುಸಾರನು ಮರಣ ಹೊಂದಿದನೆಂದೂ, ಅಶೋಕನು ಸಿಂಹಾಸನವನ್ನೇರಿರುವನೆಂದೂ, ರಾಜ್ಯದ ಪ್ರಜೆಗಳೂ ರಾಜಕೀಯ ಅಧಿಕಾರಿಗಳೂ ಇವರಲ್ಲಿ ಎರಡು ಪಂಗಡಗಳಾಗಿವೆಯೆಂದೂ ಕೇಳಿದನು. ಕೂಡಲೆ ಸುಷೀಮನು ಪಾಟಲಿಪುತ್ರದ ಸೀಮಾಂತದಲ್ಲಿ ಸೇನೆಯೊಡನೆ ಬಂದಿಳಿದನು. ಮತ್ತು ತನ್ನ ವಿರುದ್ಧವಾಗಿ ತಂತ್ರ ನಡೆಸಿದವರನ್ನು ಸೋಲಿಸಿ ಮಗಧ ಸಿಂಹಾಸನವನ್ನು ಆಕ್ರಮಿಸಬೇಕೆಂದು ಸಂಕಲ್ಪಮಾಡಿದನು. ಇತ್ತ ರಾಧಾಗುಪ್ತನೂ ರಾಜಧಾನಿಯ ಕಾವಲಿಗೆ ಬಲಿಷವಾದ ಸೈನ್ಯವನ್ನು ದುರ್ಗದಲ್ಲಿ ಕ್ರಮಗೊಳಿಸಿ ನಿಲ್ಲಿಸಿದನು. ಮತ್ತು ಕಟ್ಟಿಗೆ ಮೊದಲಾದ ದಾಹ್ಯಪದಾರ್ಥಗಳಿಂದ ಅಗಳತೆಯನ್ನು ತುಂಬಿಸಿ ಬೆಂಕೆಯ ಹಚ್ಚಿಸಿದನು. ಅದರಿಂದ ಅಗಳತೆಯನ್ನು ದಾಟಿಹೋಗುವದು ಅಸಾಧ್ಯವೆನಿಸಿತು. ಆಗ ಸುಷೀಮನು ಯಾವದೋ ಒಂದು ರೀತಿಯಿಂದ ಅಗಳತೆಯನ್ನು ದಾಟಿ ಕೋಟೆಯ ಗೋಡೆಯೊಳಗೆ ದುಮುಕಬೇಕೆಂದು ಆಲೋಚಿಸಿದನು. ಆದರೆ ದೈವಾನುಕೂಲ್ಯವಿಲ್ಲದ್ದರಿಂದ ಗೋಡೆಗೆ ಕೈ ಹಚ್ಚಿದೊಡನೆಯೆ ಅಗಳತೆಯಲ್ಲಿ ಪ್ರಜ್ವಲಿಸುತ್ತಿದ್ದ ಬೆಂಕೆಯಲ್ಲಿ ಬಿದ್ದು ಅಗ್ನಿನಾರಾಯಣನಿಗೆ ಆಹುತಿಯಾದನು. ಸುಷೀಮನ ಈ ಶೋಚನೀಯ ಮರಣದಿಂದ ಹಲವರು ಅಶೋಕನ ಮೇಲೆ ಸಿಟ್ಟಾದರು. ಮತ್ತು ಅತನಿಗೆ ಚಂಡಾಶೋಕನೆಂದು ಕರೆಯಹತ್ತಿದರು.

೭ನೆಯ ಅಧ್ಯಾಯ.

ಅಶೋಕನ ಮೇಲೆ ಅಪವಾದವು.

ಅಶೋಕನು ರಕ್ತಪ್ರವಾಹವನ್ನು ಹರಿಯಿಸಿ, ಅಣ್ಣತಮ್ಮಂದಿರ ರಕ್ತದಲ್ಲಿ ಪಿಡ್ಡವನ್ನು ಮುಳುಗಿಸಿ ಮಗಧ ಸಿಂಹಾಸನವನ್ನೇರಿದನೆಂದು ಪ್ರವಾದವುಂಟು. ಬೌದ್ಧಧರ್ಮವನ್ನು ಸ್ವೀಕರಿಸುವದಕ್ಕೆ ಮುಂಚೆ ಭರತಖಂಡದಲ್ಲಿಯೂ, ಸಿಂಹಲದ್ವೀಪದಲ್ಲಿಯೂ ಎಲ್ಲ ಕಡೆಗಳಲ್ಲಿ ಅಶೋಕನು ಕ್ರೂರನಾದ ನರಪಿಶಾಚನಾಗಿದ್ದನೆಂದು ವರ್ಣಿಸಲ್ಪಟ್ಟಿದೆ. ಮಹಾವಂಶದಲ್ಲಿ ಅಶೋಕನು ಹಿರಿಯ ಅಣ್ಣನನ್ನು ಕ್ರೂರತನದಿಂದ ಕೊಂದದ್ದಲ್ಲದೆ ಬೇರೆ ೯೯ ಜನ ಮಲ ಅಣ್ಣತಮ್ಮಂದಿರನ್ನು ಕೊಂದನೆಂದೂ, ಸ್ನೇಹವಶನಾಗಿ ಎಲ್ಲಕ್ಕೂ ಚಿಕ್ಕ ತಮ್ಮನನ್ನು ಮಾತ್ರ ಕೊಲ್ಲಲಿಲ್ಲವೆಂದೂ ಹೇಳಿರುವದು. ಭಾರತೀಯ-ಇತಿಹಾಸದಲ್ಲಿಯೂ ಅಶೋಕನ

ಎಷ್ಟೋ ಕ್ರೂರ ಕೃತ್ಯಗಳ ಉಲ್ಲೇಖವುಂಟು. ಒಂದು ದಿನ ಅತನು ಮಂತ್ರಿಗಳಿಗೆ— ನೀವು ಫಲಪುಷ್ಪಭರಿತವಾದ ವೃಕ್ಷವನ್ನು ಕಡಿದು ಮುಳ್ಳಿನ ಮರಕ್ಕೆ ನೀರೆರೆಯುತ್ತೀರಿ ಎಂದು ಅಂದದ್ದಕ್ಕೆ ಅವರು ನಿರಾಕರಣಮಾಡಿ ಪ್ರತ್ಯುತ್ತರವನ್ನೀಯಲು ಅಶೋಕನು ಕ್ರೋಧಾಂಧನಾಗಿ ಖಡ್ಗವನ್ನು ಒರೆಯಿಂದ ಹಿರಿದು ಐನೂರು ಜನ ಮಂತ್ರಿಗಳ ಶಿರ ಶ್ಛೇದ ಮಾಡಿದನಂತೆ. ಅಂತಃಪುರದ ಮಹಿಳೆಯರು ಅಶೋಕನ ಕುರೂಪಕ್ಕೆ ಹೇಸಿ ಹೂದೋಟದಲ್ಲಿರುವ ಒಂದು ಅಶೋಕವೃಕ್ಷದ ಎಲೆಗಳನ್ನೆಲ್ಲ ಹರಿದು ಅದಕ್ಕೆ ಅಣಕಿಸಿ ಚೇಷ್ಟೆಮಾಡುತ್ತಿರುವದನ್ನು ಅಶೋಕನು ಕೇಳಿ ಆ ಎಲ್ಲ ಮಹಿಳೆಯರನ್ನು ಸುಟ್ಟುಬಿಟ್ಟನು. ಮಂತ್ರಿಗಳು ಈ ಅಸಹ್ಯವಾದ ನಡತೆಯನ್ನು ನೋಡಿ ಮಹಾರಾಜರೆ, ತಾವು ಸ್ವಹಸ್ತ ದಿಂದ ಇಂಥ ಭಯಂಕರ ಕೃತ್ಯಗಳನ್ನು ಮಾಡಿ ರಾಜಹಸ್ತವನ್ನು ದೂಷಿತ ಮಾಡಬಾರದು; ತಮ್ಮ ಅಪ್ಪಣೆಯನ್ನು ತಪ್ಪದೆ ನಡೆಯಿಸುವ ಒಬ್ಬ ಕೊಲೆಗಡಿಕನನ್ನು ಈ ಕೆಲಸಕ್ಕೆ ನಿಯಮಿಸಬೇಕು; ಎಂದು ಬೇಡಿಕೊಂಡರು. ಅಶೋಕನು ಮಂತ್ರಿವರ್ಗದ ಈ ಬಿನ್ನಹಕ್ಕೆ ಮಾನವಿತ್ತು ಚಂಡಗಿರಿಕನೆಂಬ ಒಬ್ಬ ಅತಿ ಕ್ರೂರನಾದ ನೇಕಾರನ ಮಗನನ್ನು ಈ ಕೆಲ ಸಕ್ಕೆ ನಿಯಮಿಸಿದನು. ಪಾಪಿಷ್ಠನಾದ ಚಂಡಗಿರಿಕನ ಕ್ರೌರ್ಯವು ಲೋಕಪ್ರಸಿದ್ಧ ವಾಗಿತ್ತು ಅಶೋಕನು ಕೊಲೆಯ ಕೆಲಸಕ್ಕಾಗಿಯೇ ಬಹು ಸುಂದರವಾದ ಒಂದು ದೊಡ್ಡ ವಧಾಗಾರ (ಕೊಲೆ-ಮನೆ)ವನ್ನು ಕಟ್ಟಿಸಿದ್ದನು. ಈ ಕಟ್ಟಡದ ಹೊರಭಾಗದ ಶಿಲ್ಪವು ಬಹು ಮನೋಹರವಾಗಿತ್ತು. ಆ ಶಿಲ್ಪಚಾತುರ್ಯವನ್ನು ನೋಡಿದೊಡನೆ ಯಾರಿಗಾದರೂ ಒಳಗೆ ಪ್ರವೇಶಿಸಬೇಕೆಂದು ಮನಸ್ಸಾಗುತ್ತಿತ್ತು. ಆದರೆ ಈ ಭಯಂಕರ ವಾದ ಮಂದಿರದಲ್ಲಿ ಪ್ರವೇಶಿಸಿದವನು ಬದುಕಿ ತಿರುಗಿ ಬರುತ್ತಿರಲಿಲ್ಲ!

ಈ ವಧಾಗಾರದಲ್ಲಿ ಯಾರಾದರೂ ಪ್ರವೇಶಿಸಿದರೆ ಅವರ ಶಿರಶ್ಛೇದ ಮಾಡಬೇ ಕೆಂದು ಕೊಲೆಗಡಿಕರಿಗೆ ರಾಜನ ಕಟ್ಟಪ್ಪಣೆಯೇ ಆಗಿತ್ತು. ಈ ವಧಭೂಮಿಗೆ "ನರಕ" ಎಂದು ಹೆಸರಿಟ್ಟಿದ್ದನು. ಈ ಸ್ಥಾನದಲ್ಲಿ ನಿಜವಾಗಿಯೂ ಭಯಂಕರ ನರಕಯಾತನೆಯನ್ನು ಅನುಭವಿಸಬೇಕಾಗುತ್ತಿತ್ತು. ಈ ನರಕವು ಎಷ್ಟುಜನ ನಿರಪರಾಧಿಗಳ ರಕ್ತದಿಂದ ತೊಯ್ದಿ ತ್ತೆಂಬದರ ಇಯತ್ತೆಯೇ ಇಲ್ಲ.

ಒಂದು ದಿವಸ ಬಾಲಪಂಡಿತಸಮುದ್ರನೆಂಬ ಒಬ್ಬ ಭಿಕ್ಷುವು "ನರಕ"ದ ಅಪೂರ್ವ ಶಿಲ್ಪಕ್ಕೆ ಮರುಳಾಗಿ ತಿಳಿಯದೆ ಅದರಲ್ಲಿ ಪ್ರವೇಶಿಸಿದನು. ಕೂಡಲೆ ನೀಚತಮನಾದ ಚಂಡಗಿರಿಕನು ಅನುಚರರೊಡನೆ ಆ ಭಿಕ್ಷುವಿನ ಮೇಲೆ ಸಾಗಿಬಂದನು. ಸಂಸಾರವಾಸನಾ ವಿಮುಕ್ತನಾದ ಆ ಸನ್ಯಾಸಿಯನ್ನು ನೋಡಿ, ಆ ಕೊಲೆಗಡಿಕನು ೭ ದಿವಸಗಳಾದ ತರು ವಾಯ ನಿನ್ನನ್ನು ಕೊಲ್ಲುತ್ತೇನೆಂದು ಹೇಳಿ ಅತನಿಗೆ ೭ ದಿವಸಗಳ ಅವಧಿಯನ್ನು ಕೊಟ್ಟನು. ಅವಧಿಯು ಮುಗಿದ ಬಳಿಕ ಉರಿಯುವ ಅಗ್ನಿಕುಂಡದ ಮೇಲೆ ಇಟ್ಟಣ ಕೊಪ್ಪರಿಗೆಯಲ್ಲಿ ಅತನನ್ನು ಚಲ್ಲಿದನು. ಆಗ ಚಂಡಗಿರಿಕನು ಆಶ್ಚರ್ಯದಿಂದ ನೋಡು

ತ್ತಾನೆ--ಭಿಕ್ಷುವು ಅರಳಿದ ಕಮಲದ ಮೇಲೆ ಕುಳಿತುಕೊಂಡಿರುತ್ತಾನೆ! ಅತನ ಅರ್ಧ ಶರೀರದಿಂದ ಹೊರಟ ನೀರಿನಿಂದ ಬೆಂಕೆಯು ಅರಹತ್ತಿದೆ! ಅಸಂಭವನೀಯವಾದ ಈ ಅದ್ಭುತ ದೃಶ್ಯವನ್ನು ನೋಡಿ ಕೊಲೆಗಡಿಕನ ಅತಿ ಕ್ರೂರ ಹೃದಯವೂ ಕೂಡ ನಡುಗಿ ಹೋಯಿತು. ಕೂಡಲೆ ಅವನು ರಾಜನ ಬಳಿಗೆ ಹೋಗಿ ನಡೆದ ವರ್ತಮಾನವನ್ನೆಲ್ಲ ಹೇಳಿದನು. ಅಶೋಕನು ಅಲ್ಲಿಗೆ ಬಂದು ಆ ಭಿಕ್ಷುವಿನ ಆಶ್ಚರ್ಯಕರವಾದ ಸ್ಥಿತಿಯನ್ನು ನೋಡಿ ಬೆರಗುವಡೆದು ನಿಂತನು. ಅಶೋಕನ ರಕ್ತನಾಡಿಗಳ ಪ್ರವಾಹವು ನಿಂತು ಹೋದಂತಾಯಿತು! ಆಗ ಅಶೋಕನು ಭಯಭಕ್ತಿಗಳಿಂದ— ಮಹಾತ್ಮರೇ, ತಾವು ಯಾರು? ಎಂದು ಪ್ರಶ್ನಮಾಡಿದನು. ಆಗ ಸಮುದ್ರನು ಹಸನ್ಮುಖನಾಗಿ—ಮಹಾರಾಜರೇ, ನಾನು ಪರಮ ಕಾರುಣಿಕನಾದ ಬುದ್ಧದೇವನ ಧರ್ಮಪುತ್ರನು. ಅತನ ಕೃಪೆಯಿಂದ ಈ ಭಯಂಕರವಾದ ಸಂಸಾರದಿಂದ ಮುಕ್ತನಾಗಿರುವೆನು. ಬುದ್ಧದೇವನು ಹೇಳಿರುವದೇನಂದರೆ—ನನ್ನ ಪರಿನಿರ್ವಾಣವಾದ * ೧೦೦ ವರ್ಷಗಳ ತರುವಾಯ ಅಶೋಕನೆಂಬ ಹೆಸರಿನಿಂದ ಪಾಟಲಿಪುತ್ರದಲ್ಲಿ ಒಬ್ಬ ಅರಸನು ಉದಯಹೊಂದುವನು. ಆ ಚಕ್ರವರ್ತಿಯು ದೇಶದೇಶಗಳಲ್ಲಿ ನನ್ನ ಅಸ್ಥಿಗಳನ್ನು ಇಟ್ಟು ಸನಾತನ ಪವಿತ್ರಧರ್ಮವನ್ನು ಹಬ್ಬಿಸುವನು. ಅತನು ನಗರನಗರಕ್ಕೆ ಒಟ್ಟು ಲಳ೦೦೦ ಧರ್ಮಾರಾಮಗಳನ್ನು † ಕಟ್ಟಿಸುವನು. ಎಲೈ ನರಪತಿಯೇ ನೀನೇ ಆ ಅಶೋಕಚಕ್ರವರ್ತಿಯು. ತ್ರಿರತ್ನಗಳನ್ನು ಆಶ್ರಯಿಸಿ ಅತನ ಪವಿತ್ರಧರ್ಮವನ್ನು ಜಗತ್ತಿನಲ್ಲಿ ಹಬ್ಬಿಸು. " ಎಂದು ನುಡಿದನು. ಅಶೋಕನು ತನ್ನ ಕ್ರೂರತನಕ್ಕೆ ಪಶ್ಚಾತ್ತಾಪಬಟ್ಟಿದ್ದನು. ಆಗ ಭಿಕ್ಷುವಿಗೆ ಕ್ಷಮೆಯನ್ನು ಬೇಡಿಕೊಂಡನು. ಮತ್ತು ಆ ದಿವಸವೇ ಬುದ್ಧ, ಧರ್ಮ ಮತ್ತು ಸಂಘ ಇವುಗಳ ಆಶ್ರಯವನ್ನು ಪಡೆದನು. ವಧಾಗಾರವನ್ನು ಕೆಡವುವದಕ್ಕೂ, ಚಂಡಗಿರಿಕನನ್ನು ಜೀವಂತ ಸುಡುವದಕ್ಕೂ ಅಪ್ಪಣೆಯಿತ್ತನು. ಈ ಕಥೆಯಲ್ಲಿ ಎಷ್ಟುಮಟ್ಟಿಗೆ ಸತ್ಯವಿರುವದೆಂಬದನ್ನು ಆಲೋಚಿಸಬೇಕಾಗಿರುವದು. ದುರಾಚಾರನೂ, ಭ್ರಾತೃದ್ರೋಹಿಯೂ, ನರಹತ್ಯಾಕಾರಿಯೂ ಕ್ರೂರನೂ ಆದ ಚಂಡಾಶೋಕನು ಧರ್ಮಾಶೋಕನಾದ ಬಗೆ ಹೇಗೆ ಎಂಬದನ್ನು ಚೆನ್ನಾಗಿ ವಿಚಾರಿಸುವದು ತಕ್ಕದ್ದಾಗಿದೆ.

---

* ಮಹಾಯಾನವೆಂಬ ಬೌದ್ಧಗ್ರಂಥದಲ್ಲಿಯೂ, ಅಶೋಕಾವದಾನದಲ್ಲಿಯೂ ಬುದ್ಧನ ಪರಿನಿರ್ವಾಣವಾದ ೧೦೦ ವರ್ಷಗಳ ತರುವಾಯ ಅಶೋಕನು ಉದಯಹೊಂದುವನೆಂದು ಹೇಳಿದೆ. ಮಹಾಯಾನಗ್ರಂಥವು ಕಾಳಾಶೋಕನೆಂಬ ಅರಸನಿದ್ದನೆಂಬದನ್ನು ಸ್ವೀಕರಿಸುವದಿಲ್ಲ. ಮಹಾಯಾನಸಾಂಪ್ರದಾಯದ ಮತದಂತೆ ಬುದ್ಧದೇವನ ತರುವಾಯ ಧರ್ಮಾಶೋಕನೆಂಬ ಒಬ್ಬ ಅರಸನು ಮಾತ್ರ ಮಗಧ ಸಿಂಹಾಸನವನ್ನೇರಿದನು. ಆದರೆ ಬೇರೆ ಗ್ರಂಥಗಳಲ್ಲಿ ಬುದ್ಧದೇವನ ತರುವಾಯ ಮಗಧದಲ್ಲಿ ಕಾಳಾಶೋಕ, ಧರ್ಮಾಶೋಕ ಎಂಬ ಇಬ್ಬರು ರಾಜ್ಯವಾಳಿದರು. ಮೊದಲಿನವನು ಬುದ್ಧನ ನಿರ್ವಾಣದ ತರುವಾಯ ೧೮೦ ವರ್ಷಗಳ ಮೇಲೆ ೨೩ನೆಯವನು ೨೧೫ ವರ್ಷಗಳ ಮೇಲೆ ಆಳಿದನು.

† ಭಿಕ್ಷುಗಳು ವಾಸಮಾಡುವ ಸ್ಥಳಗಳು.

ಅಶೋಕನ ಗಿರಿಲಿಪಿಗಳಲ್ಲಿಯೂ ಶಾಸನಗಳಲ್ಲಿಯೂ ಆತನ ಅಣ್ಣತಮ್ಮಂದಿರ ಮತ್ತು ಅಕ್ಕತಂಗಿಯರ ಉಲ್ಲೇಖವು ಕಂಡುಬರುವದು. ಎಲ್ಲಕ್ಕೂ ಚಿಕ್ಕ ತಮ್ಮನು ಮಾತ್ರ ಬದುಕಿದ್ದರೆ " ಅಣ್ಣತಮ್ಮಂದಿರ " ಮತ್ತು " ಅಕ್ಕತಂಗಿಯರ " ಎಂಬ ಅರ್ಥದ ಶಬ್ದಗಳು ಕಲ್ಲಮೇಲೆ ಕೊರೆದ ಶಾಸನಗಳಲ್ಲಿ ಕಂಡುಬರುತ್ತಿರಲಿಲ್ಲ. ಸುಷೀಮನ ಶೋಚನೀಯವಾದ ಮೃತ್ಯುವಿನ ತರುವಾಯ ಅಶೋಕನ ವಿಷಯವಾಗಿ ಮನೆಮನೆಗಳಲ್ಲಿ ಭ್ರಾತೃದ್ರೋಹಿ ಎಂಬ ಅಪವಾದವುಂಟಾದದ್ದೇ ಕ್ರಮವಾಗಿ ಬೆಳೆದು ಈ ಎಲ್ಲ ಕಥೆಗಳು ಹುಟ್ಟುವದಕ್ಕೆ ಕಾರಣವಾಯಿತೆಂದು ತೋರುವದು. ಇಲ್ಲವೆ ಮುಂದಿನ ಕಾಲದ ಬೌದ್ಧಧರ್ಮ ಗ್ರಂಥಕಾರರು * ಬೌದ್ಧಧರ್ಮ ಗ್ರಹಣಮಾಡುವದಕ್ಕೆ ಮುಂಚೆ ಅಶೋಕನಲ್ಲಿದ್ದ ಕ್ರೂರವಾದ ಪೈಶಾಚಿಕ ಆಚರಣೆಯು ಒಮ್ಮೆಲೆ ಬದಲಾವಣೆಹೊಂದಿದ್ದನ್ನು ತೋರಿಸಿ ಬೌದ್ಧಧರ್ಮದ ಪ್ರಭಾವವನ್ನು ಪ್ರಕಟಿಸುವದಕ್ಕಾಗಿ ಈ ರೀತಿಯಾಗಿ ಬೆಳೆಯಿಸಿರುವರೆಂಬದು ಅಸಂಗತವೆಂದು ತೋರುವದಿಲ್ಲ. ಈ ಕಥೆಗಳಲ್ಲಿ ಸತ್ಯಾಂಶವು ಸ್ವಲ್ಪವೂ ಇಲ್ಲವೆಂದು ಹೇಳುವದಕ್ಕೂ ಆಗುವದಿಲ್ಲ. ಅಶೋಕನು ರಾಜ್ಯಲೋಭದಿಂದ ಸುಷೀಮನನ್ನು ಇಲ್ಲವೆ ಬೇರೆ ಅಣ್ಣತಮ್ಮಂದಿರನ್ನು ಮತ್ತು ಅವರ ಪರಿವಾರದವರನ್ನು ಪೀಡಿಸಿರಬಹುದು; ಇಲ್ಲವೆ ಕೊಂದಿರಬಹುದು. ಆದಗೆ ಸಾಮಾನ್ಯವಾದ ಒಂದು ಕಾರಣದಿಂದ ಸಭೆಯೊಳಗಿನ ಮಂತ್ರಿಗಳನ್ನು ಏಕೆ ಕೊಲ್ಲಬೇಕು? ಇದನ್ನು ಸಹಜವಾಗಿ ನಿರ್ಣಯಿಸುವದಾಗುವದಿಲ್ಲ. ಅಶೋಕನ ಗಿರಿಲಿಪಿಗಳಲ್ಲಿ ಎಲ್ಲಿಯೂ ಅವನ ಪೂರ್ವಜೀವನದ ಇಂಥ ಕ್ರೂರವಾದ ಆಚರಣೆಯ ಇಲ್ಲವೆ ಅದರಿಂದುಂಟಾದ ಪಶ್ಚಾತ್ತಾಪದ ಉಲ್ಲೇಖವಿಲ್ಲ. ಒಂದುವೇಳೆ ಆ ಸಂಗತಿಗಳೆಲ್ಲ ನಿಜವಿದ್ದರೆ ಅಣ್ಣತಮ್ಮಂದಿರು, ಹೆಂಗಸರು, ನಿರಪರಾಧಿಗಳು ಇವರನ್ನು ಕೊಂದ ಪಾಪದಿಂದ ಕಲುಷಿತಮನಸ್ಸುಳ್ಳ ಅಶೋಕನು ಪಶ್ಚಾತ್ತಾಪದಿಂದ ಅದನ್ನು ಒಪ್ಪಿಕೊಳ್ಳುತ್ತಿದ್ದನು. ಬೌದ್ಧಧರ್ಮಗ್ರಹಣದಿಂದ ಹೊಸಜೀವನವುಂಟಾಗಿ ಆತನು ತಾನು ಮಾಡಿದ ದುಷ್ಕೃತಿಗಳನ್ನು ನಿಷ್ಕಪಟವಾಗಿ ಒಪ್ಪಿಕೊಳ್ಳುವದಕ್ಕೆ ಸಂಕೋಚಪಡುತ್ತಿರಲಿಲ್ಲವೆಂದು ತೋರುವದು. ಆತನು ತನ್ನ ಜೀವನದಲ್ಲಿ ಒದಗಿದ ಈ ವಿಶಿಷ್ಟ ಸಂಗತಿಗಳನ್ನು ಅನುಶಾಸನಗಳಲ್ಲಿ ಎಲ್ಲಿಯೂ ಉಲ್ಲೇಖಿಸದಿರುವದರಿಂದ ಹಲವರು ಈ ಕಥೆಗಳ ಸತ್ಯತೆಯ ವಿಷಯವಾಗಿ ಸಂದೇಹಪಡುವರು. ಏನೇ ಇರಲಿ, ಚಂಡಗಿರಿಕನೆಂಬ ದುಷ್ಟನ ಪಾಪದೊಡನೆ ಅಶೋಕನ ಹೆಸರು ಸಂಬಂಧಪಟ್ಟಿರುವದರಿಂದಾಗಲಿ, ತಂದೆಯು ತೀರಿದ ಬಳಿಕ ಅಣ್ಣನು ಶೋಚನೀಯ ಮರಣಹೊಂದಿದ್ದರಿಂದಾಗಲಿ ಅಶೋಕನ ಹೆಸರಿಗೆ ಈ ಮಹಾಕಲಂಕರಾಶಿಯು ಈ ಕಾಲದವರೆಗೂ ಸಂಬಂಧಿಸಿ ಬಂದಿರುವದು. ಈ ಸಂಗತಿಗಳಲ್ಲಿ ಐತಿಹಾಸಿಕ ‡ ಸತ್ಯವು ಎಷ್ಟುಮಟ್ಟಿಗೆ ಇರುವದೆಂಬದನ್ನು ಹೇಳುವದು

---

* Vincent Smith, Asoke

‡ R. C. Dutt's Ancient Civilization Vol. III.

ಕಠಿಣವು. ತನ್ನ ಪಕ್ಷವಾಗಿ ಬೇಕಾದಷ್ಟು ಕಾರಸ್ಥಾನವನ್ನು ನಡೆಯಿಸಿ ತನಗೆ ಸಿಂಹಾಸನವನ್ನು ದೊರಕಿಸಿಕೊಟ್ಟ ಮಂತ್ರಿಮಂಡಲದ ಪರಾಕ್ರಮಶಾಲಿಗಳಾದ ಮಂತ್ರಿಗಳನ್ನು ಅವನು ಅವಿಚಾರದಿಂದ ಕೊಂದನೆಂಬದೂ, ಅವರೂ ನಿಶ್ಶಬ್ದವಾಗಿ ಆ ಅತ್ಯಾಚಾರ ಅಪಮಾನಗಳನ್ನು ಸಹಿಸಿದರೆಂಬದೂ ವಿಶ್ವಾಸಾರ್ಹವಾಗಿಲ್ಲ. ಪ್ರಜೆಗಳನ್ನು ಕೊಲ್ಲುವದಕ್ಕಾಗಿ ಮಂತ್ರಿಸಭೆಯು ಕೊಲೆಗಡಿಕನನ್ನು ನಿಯಮಿಸುವದಕ್ಕೆ ಹೇಳಿತೆಂಬದೂ ಅಸಂಭವವೆಂದೇ ತೋರುವದು. ಅಶೋಕನು ಪಟ್ಟಾಭಿಷಿಕ್ತನಾಗದಿದ್ದರೂ ಸಾಮ್ರಾಜ್ಯಭಾರವನ್ನು ಸಾಗಿಸಹತ್ತಿದನು.

ನೋಡನೋಡುತ್ತ ನಾಲ್ಕು ವರ್ಷಗಳು ಸಂದುಹೋದವು. ಕ್ರಮದಿಂದ ದೇಶದಲ್ಲಿ ಶಾಂತತೆಯು ನೆಲೆಗೊಂಡಿತು. ಅಶೋಕನ ಆಚರಣೆಗೂ, ಅತನ ಅಸಾಧಾರಣ ಬುದ್ಧಿಶಕ್ತಿಗೂ ರಾಜ್ಯದ ಪ್ರಜೆಗಳೆಲ್ಲ ಮೆಚ್ಚಿದರು. ಮೆಲ್ಲಮೆಲ್ಲನೆ ಪ್ರಕೃತಿವರ್ಗವು ಅತನ ಮೇಲೆ ಬಂದ ಅಪವಾದವನ್ನು ಮರೆಯಹತ್ತಿತು. ಮಂತ್ರಿಮಂಡಲವೂ, ಪ್ರಜೆಗಳೂ ಅಶೋಕನ ಪಟ್ಟಾಭಿಷೇಕಕ್ಕಾಗಿ ಆತುರಬಡಹತ್ತಿದರು. ಅಶೋಕನು ಕೊನೆಗೆ ಶುಭದಿವಸ ಶುಭಮುಹೂರ್ತದಲ್ಲಿ * ಪಟ್ಟಾಭಿಷಿಕ್ತನಾಗುವದಕ್ಕೆ ಸಮ್ಮತಿಯಿತ್ತನು. ಕ್ರಿ. ಪೂ. ೨೬೮ ಜೇಷ್ಠಮಾಸ ಶುಕ್ಲಪಂಚಮಿಯ ದಿವಸ ಅತನಿಗೆ ಪಟ್ಟಾಭಿಷೇಕವಾಯಿತು. ಐತಿಹಾಸಿಕರು ಒಂದು ಸಂಗತಿಯನ್ನು ನಿಃಸಂಶಯವಾಗಿ ನಿರ್ಣಯಿಸಿರುವರು. ಅದೇನಂದರೆ—ಅಶೋಕನಿಗೆ ಸಿಂಹಾಸನವೇರಿ ನಾಲ್ಕು ವರ್ಷಗಳಾದ ತರುವಾಯ ಅತನಿಗೆ ಪಟ್ಟಾಭಿಷೇಕವಾಯಿತು. ಆದರೆ ಈ ನಾಲ್ಕು ವರ್ಷ ವಿಲಂಬವಾಗುವದಕ್ಕೆ

---

* ಅಶೋಕನ ಪಟ್ಟಾಭಿಷೇಕ ಕಾಲದ ವಿಷಯವಾಗಿ ಮತಭೇದವುಂಟು. ಕೆಳಗೆ ೪|೫ ಜನ ಐತಿಹಾಸಿಕರ ಬೇರೆ ಬೇರೆ ಮತಗಳನ್ನು ಉದ್ಧರಿಸಿ ಬರೆಯುತ್ತೇವೆ.

	ಬುದ್ಧದೇವನ ಪರಿನಿರ್ವಾಣ ಕಾಲ.	ಚಂದ್ರಗುಪ್ತನು ಸಿಂಹಾಸನವೇರಿದ ಕಾಲ.	ಅಶೋಕನು ಸಿಂಹಾಸನವೇರಿದ ಕಾಲ,
ಕನಿಂಗ್‌ಹ್ಯಾಮ್.	ಕ್ರಿ. ಪೂ ೪೭೮.	ಕ್ರಿ. ಪೂ ೩೧೬	ಕ್ರಿ. ಪೂ. ೨೬೦.
ಮ್ಯಾಕ್ಸಮುಲರ.	,, ೪೭೭.	,, ೩೧೫	,, ೨೫೯.
ಸಿಂಹಲದಲ್ಲಿ ಪ್ರಚಲಿತವಾದ ಕಾಲ.	,, ೫೪೩.	,, ೩೮೨.	,, ೩೨೬.
ವಿನ್ಸೆಂಟ್‌ಸ್ಮಿಥ್.	,, ೪೮೩.	,, ೩೨೯.	,, ೨೬೮.
ಫ್ಲೀಟ್.	,, ೪೮೩.	,, ೩೨೧.	,, ೨೬೫.

ಈ ಎಲ್ಲ ಮತಗಳಲ್ಲಿ ವಿನ್ಸೆಂಟ್‌ಸ್ಮಿಥ್ (Vincent Smith) ಇವರ ಅಭಿಪ್ರಾಯವೇ ಯುಕ್ತವೆಂದು ತೋರುತ್ತದೆ. ವಿನ್ಸೆಂಟ್‌ಸ್ಮಿಥ್ ಮತ್ತು ಫ್ಲೀಟ್ ಇವರಿಬ್ಬರ ಅಭಿಪ್ರಾಯಗಳೂ ಬಹುತರ ಒಂದೇ ಇರುವವು ಅವರಿಬ್ಬರ ಮತಗಳಲ್ಲಿ ಭೇದವೇನಂದರೆ—ವಿನ್ಸೆಂಟ್‌ಸ್ಮಿಥನು ಬಿಂದುಸಾರನ ಅಳಿಕೆಯ ಕಾಲವು ೨೫ ವರ್ಷಗಳಿಂದು ಹೇಳಿರುವನು. ಫ್ಲೀಟನು ೨೮ ವರ್ಷಗಳಿಂದು ಹೇಳಿರುವನು. ೧೯೦೯ ರ Royal Asiatic Society ಯ ಪತ್ರಿಕೆಯ ೧೧ನೆಯ ಖಂಡದಲ್ಲಿ Mr. Fleet ಈ ಮತವನ್ನು ಸ್ಥಾಪಿಸುವದಕ್ಕೆ ವಿಶೇಷ ಪ್ರಯಾಸಬಟ್ಟಿರುವನು.

ಕಾರಣಗಳನ್ನು ಮಾತ್ರ ಯಾರೂ ತೃಪ್ತಿಕರವಾಗಿ ಕೊಟ್ಟಿಲ್ಲ. ಬಿಂದುಸಾರನ ಮರಣದ ತರುವಾಯ ೪ ವರ್ಷಗಳಾದ ಮೇಲೆ ಅಶೋಕನಿಗೆ ಪಟ್ಟಾಭಿಷೇಕವಾಯಿತೆಂಬ ಸಂಗತಿಯು ಸಿಂಹಲದೇಶದ ಉಪಾಖ್ಯಾನಗಳಲ್ಲಿ ವರ್ಣಿಸಲ್ಪಟ್ಟಿರುವದು. ಮಹಾವಂಶದಲ್ಲಿ ವಿನಯಪಿಟಕಾಂತರ್ಗತ ಸಾಮಂತಪಾಸಾದಿಕೆಯ ಉಪಕ್ರಮಣಿಕೆಯಲ್ಲಿ ಬುದ್ಧದೇವನ ಪರಿನಿರ್ವಾಣವಾದ ಬಳಿಕ ೨೧೮ ವರ್ಷಗಳಾದ ಮೇಲೆ ಅಶೋಕನಿಗೆ ಪಾಟಲಿಪುತ್ರದಲ್ಲಿ ಪಟ್ಟಾಭಿಷೇಕವಾಯಿತೆಂದು ಬುದ್ಧಘೋಷನು ಹೇಳಿರುವನು. ಅಮಿತ್ರಘಾತನು ಕ್ರಿ. ಪೂ. ೨೭೨ ರಲ್ಲಿ ಅಂದರೆ ಬುದ್ಧದೇವನ ಪರಿನಿರ್ವಾಣವಾದ ೨೧೪ ವರ್ಷಗಳ ತರುವಾಯ ದೇಹವಿಟ್ಟನು. ಇದರಿಂದ ನಡುವೆ ಈ ನಾಲ್ಕು ವರ್ಷ ಅಶೋಕನು ಪಟ್ಟಾಭಿಷಿಕ್ತನಾಗಲಿಲ್ಲವೆಂಬದು ಸಹಜವಾಗಿ ಸಿದ್ಧವಾಗುವದು.

ಅಶೋಕನು ಮಗಧದ ಚಕ್ರವರ್ತಿಪದದಲ್ಲಿ ಅಭಿಷಿಕ್ತನಾಗಿ ಯೋಗ್ಯವಾಗಿ ರಾಜ್ಯಭಾರವನ್ನು ಸಾಗಿಸಹತ್ತಿದನು. ಅವನ ಆಳಿಕೆಯ ಆರಂಭದಿಂದ ೯ ವರ್ಷಗಳ ವರೆಗಿನ ಕ್ರಮವಾದ ಇತಿಹಾಸವು ದೊರೆಯುವದಿಲ್ಲ. ಪಟ್ಟಾಭಿಷೇಕ, ಮತ್ತು ಬೌದ್ಧ ಧರ್ಮಗ್ರಹಣ ಈ ಎರಡು ಪ್ರಸಂಗಗಳ ನಡುವಿನ ಕಾಲದಲ್ಲಿ ಕಲಿಂಗವಿಜಯವು ಅವನ ಆಳಿಕೆಯಲ್ಲಿಯೂ, ಜೀವನದಲ್ಲಿಯೂ ಒದಗಿದ ಮುಖ್ಯ ಸಂಗತಿಯು. ಮುಂದಿನ ಅಧ್ಯಾಯದಲ್ಲಿ ಕಲಿಂಗವಿಜಯದ ವರ್ಣನೆಯನ್ನು ವಿಸ್ತಾರವಾಗಿ ಬರೆಯುವೆವು.

೮ನೆಯ ಅಧ್ಯಾಯ.

ಕಲಿಂಗವಿಜಯ.

ಕಲಿಂಗ ರಾಜ್ಯವು ಭರತಖಂಡದಲ್ಲಿ ಅತಿ ಪ್ರಸಿದ್ಧವಾದ ಪುರಾತನ ದೇಶವು. ಅತಿ ಪ್ರಾಚೀನ ಸಂಸ್ಕೃತ ಗ್ರಂಥಗಳಲ್ಲಿಯೂ ಪಾಲಿ-ಬೌದ್ಧಗ್ರಂಥಗಳಲ್ಲಿಯೂ, ಗ್ರೀಕ ಐತಿಹಾಸಿಕರ ವಿವರಣೆಗಳಲ್ಲಿಯೂ ಈ ದೇಶದ ಉಲ್ಲೇಖವುಂಟು. ಹಿಂದು ಜನರ ಅತಿ ಪ್ರಾಚೀನ ಗ್ರಂಥವಾದ ಋಗ್ವೇದದಲ್ಲಿ ಕಲಿಂಗದೇಶದ* ಉಲ್ಲೇಖವಿಲ್ಲದಿದ್ದರೂ ಕಲಿಂಗರಾಜನ ದಾಸಿಯ ಗರ್ಭದಲ್ಲಿ ಹುಟ್ಟಿದ ಕಕ್ಷೀವಾನನೆಂಬ ಮಗನ ಸಂಬಂಧವಾದ ವರ್ಣನೆಯು ಪ್ರಾಚೀನ ಸಂಸ್ಕೃತ ಗ್ರಂಥಗಳಲ್ಲಿ ಉಂಟು. ಮಹಾಭಾರತದ ಆದಿಪರ್ವದಲ್ಲಿ ಕ್ಷೇಮ, ಅಗ್ರತೀರ್ಥ, ಕುಹರ ಎಂಬ ರಾಜರು ಕಲಿಂಗದಲ್ಲಿ ಆಳುತ್ತಿದ್ದರೆಂದೂ, ಅವರಿಗೂ ಅವರ ಹೆಣ್ಣುಮಕ್ಕಳಿಗೂ, ಮತ್ತು ಚಂದ್ರ

---

* List of Antiquities of madros, sewell. ದೀರ್ಘತಮಸನೆಂಬ ಋಷಿಯ ದಾಸನೂ ಬಲಿರಾಜನ ದಾಸಿಯ ಗರ್ಭದಲ್ಲಿ ಹುಟ್ಟಿದವನೂ ಆದ ಮಗನ ಹೆಸರು ಕಕ್ಷೀವಾನ. * ಮಹಾಭಾರತ ಸಭಾಪರ್ವ,

ವಂಶದ ಅರಸರಿಗೂ ಶರೀರಸಂಬಂಧವಿತ್ತೆಂದೂ ಉಲ್ಲೇಖವುಂಟು. ಕೌರವರಾಜನಾದ ದುರ್ಯೋಧನನು ಒಬ್ಬ ಕಲಿಂಗ ರಾಜಕುಮಾರಿಯ ಸ್ವಯಂವರಸಭೆಗೆ ಹೋಗಿದ್ದನು. ಮತ್ತು ವೀರಶ್ರೇಷ್ಠನಾದ ಕರ್ಣನ ಸಹಾಯದಿಂದ ಅವಳನ್ನು ಹರಣಮಾಡಿಕೊಂಡು ಒಯ್ದನು.

ಅರ್ಜುನನ ದಿಗ್ವಿಜಯವರ್ಣನೆಯು ಈ ಮೇರೆಗೆ ಇರುವದು:—ಅಂಗ, ವಂಗ, ಕಲಿಂಗ ಮೊದಲಾದ ದೇಶಗಳಲ್ಲಿರುವ ತೀರ್ಥಗಳು, ದೇವಾಲಯಗಳು, ಸಿದ್ಧಾಶ್ರಮಗಳು ಇವುಗಳ ದರ್ಶನವನ್ನು ಅರ್ಜುನನು ತೆಗೆದುಕೊಂಡು ಬಂದಬಳಿಕ ಸಂಗಡ ಬಂದ ಬ್ರಾಹ್ಮಣರು ಕಲಿಂಗರಾಜ್ಯದ ದ್ವಾರದವರೆಗೆ ಬಂದು ಆತನ ಸಮ್ಮತಿಯನ್ನು ಪಡೆದು ತಿರುಗಿ ಹೋದರು. ವೀರಶ್ರೇಷ್ಠನಾದ ಧನಂಜಯನು ಅತಿ ಸ್ವಲ್ಪ ಸಾಹಾಯ್ಯದೊಡನೆ ಸಮುದ್ರ ತೀರಕ್ಕೆ ಸಾಗಿದನು. ಅವನು ಅಲ್ಲಿಯ ತೀರ್ಥ ಮೊದಲಾದವನ್ನು ನೋಡುತ್ತ ನೋಡುತ್ತ ಮುಂದೆ ನಡೆದನು. ಬಳಿಕ ತಾಪಸಗಣದಿಂದ ಶೋಭಿಸುವ ಮಹೇಂದ್ರಪರ್ವತವನ್ನು

×

ನೋಡಿ, ಸಮುದ್ರತೀರದ ಮಾರ್ಗದಲ್ಲಿ ಮಣಿಪುರಕ್ಕೆ ಹೋದನು.

ಮಹಾಭಾರತದ ವನಪರ್ವದಲ್ಲಿ ಹೇಳಿದ್ದೇನಂದರೆ—ಯುಧಿಷ್ಠಿರ ಮೊದಲಾದ ಐವರು ಗಂಗಾಸಾಗರಸಂಗಮವನ್ನು ದಾಟಿ ಸಮುದ್ರತೀರದಗುಂಟ ಕಲಿಂಗದಕಡೆಗೆ ಪ್ರಯಾಣಮಾಡಿದರು.

स सागरं समासाद्य गङ्गाया सङ्गमे नृप ।
नदीशतानां पञ्चानां मध्ये चक्रे समाप्लवम् ॥
ततः समुद्रतीरेण जगाम वसुधाधिपः ।
भ्रातृभिःसहितो वीरःकलिंगान् प्रतिभारत ॥

ಮತ್ತೊಂದೆಡೆಗೆ ಲೋಮಶಮುನಿಯು ಕಲಿಂಗವರ್ಣನಾಪ್ರಸಂಗದಲ್ಲಿ ಈ ಮೇರೆಗೆ ಹೇಳಿರುತ್ತಾನೆ:—

एते कलिङ्गाः कौन्तेय यत्र वैतरिणी नदी ।
यत्रायजत धर्मोपि देवाञ्शरणमेत्यवै ॥
ऋषिभिःसमुपायुक्तं यज्ञियं गिरिशोभितम् ।
उत्तरं तीर्ममेतद्धि सततं द्विजशोभितम् ॥
(म भारत वनपर्व).

ಅರ್ಥ—ಎಲೈ ಕೌಂತೇಯನೇ ಇದು ಕಲಿಂಗವೆಂಬ ಪ್ರಸಿದ್ಧದೇಶವು. ಈ ದೇಶದಲ್ಲಿ ವೈತರಣಿ ಎಂಬ ನದಿಯಿರುವದು. ಧರ್ಮರಾಜನು ಇಲ್ಲಿ ದೇವತೆಗಳಿಗೆ ಶರಣು

× ಪ್ರಾಚೀನ ಕಲಿಂಗದೇಶದೊಳಗಿನ ಒಂದು ಪಟ್ಟಣವು; ಬಭ್ರುವಾಹನನ ರಾಜಧಾನಿಯಾದ ಮಣಿಪುರವಲ್ಲ.

ಹೋಗಿ ಯಜ್ಞವನ್ನು ಮಾಡಿರುವನು. ಪರ್ವತಗಳಿಂದ ಶೋಭಿತವಾಗಿಯೂ, ಋಷಿಗಳಿಂದಲೂ ಬ್ರಾಹ್ಮಣರಿಂದಲೂ ಯುಕ್ತವಾಗಿಯೂ ಇರುವ ಈ ಯಜ್ಞಭೂಮಿಯು ವೈತರಣಿಯ ಉತ್ತರತೀರದಲ್ಲಿರುವದು.

ಮಹಾಭಾರತದ ವರ್ಣನೆಯಲ್ಲಿ ಗಂಗಾಸಾಗರಸಂಗಮಕ್ಕೆ ಸ್ವಲ್ಪ ದೂರದಲ್ಲಿಯೇ ಕಲಿಂಗರಾಜ್ಯದ ಮೇರೆ ಇರುವಂತೆ ಹೇಳಿದೆ. ಬಹು ಪ್ರಾಚೀನಕಾಲದಲ್ಲಿ ಉತ್ತರಕ್ಕೆ ವೈತರಣಿ, ದಕ್ಷಿಣಕ್ಕೆ ರಾಜಮಹೇಂದ್ರಿ, ಪೂರ್ವಕ್ಕೆ ವಂಗೋಪಸಾಗರ, ಪಶ್ಚಿಮಕ್ಕೆ ಮಹೇಂದ್ರಗಿರಿ ಈ ಮೇರೆಗಳ ನಡುವಿನ ಪ್ರದೇಶವು ಕಲಿಂಗವೆಂದು ಹೇಳಲ್ಪಡುತ್ತಿತ್ತು. ಹರಿವಂಶದಲ್ಲಿ ತಾಮ್ರಲಿಪ್ತಿಯಿಂದ ಕಲಿಂಗರಾಜ್ಯದ ಸೀಮೆಯು ಆರಂಭವಾಯಿತೆಂದು ಹೇಳಿದೆ. ಟಲೇಮಿಯು (Ptolemy) ಗಂಗಾಸಾಗರಸಂಗಮದ ಸಮೀಪಪ್ರದೇಶಕ್ಕೆಲ್ಲ ಕಲಿಂಗವೆಂದು ಹೆಸರು ಕೊಟ್ಟಿರುವನು.

ಮಹಾಕವಿ ಕಾಲಿದಾಸನು ರಘುರಾಜನ ದಿಗ್ವಿಜಯವರ್ಣನೆಯಲ್ಲಿ ಕಲಿಂಗದ ಉಲ್ಲೇಖಮಾಡಿರುವನು.

स तीर्त्वा कपिशां सैन्यैःबद्धद्विरदसेतुभिः । *
उत्कलादर्शितपथः कलिङ्गाभिमुखोययौ ॥

×

[ರಘುರಾಜನು ತನ್ನ ಸೈನ್ಯದಿಂದ ರಚಿಸಲ್ಪಟ್ಟ ಗಜಸೇತುವಿನಿಂದ ಕಪಿಶಾನದಿಯನ್ನು ದಾಟಿ ಅಲ್ಲಿಂದ ಉತ್ಕಲದೇಶವಾಸಿಗಳು ತೋರಿಸಿದ ಮಾರ್ಗದಿಂದ ಕಲಿಂಗದೇಶಕ್ಕೆ ಹೋದನು.]

ಪ್ರಸಿದ್ಧ ಚೀನ ಪ್ರವಾಸಿಯಾದ ಹುಯೆನ್‌ತ್ಸಾಂಗನು ಕ್ರಿ. ಪೂ. ೭ನೆಯ ಶತಕದಲ್ಲಿ ಹಿಂದುಸ್ತಾನದಲ್ಲಿ ಪ್ರವಾಸ ಮಾಡುವಾಗ ಕಲಿಂಗದೇಶಕ್ಕೆ ಬಂದಿದ್ದನು. ಅವನು ಕೋನ್ಯೋಧಪ್ರದೇಶವನ್ನು ದಾಟಿ ಕಲಿಂಗವನ್ನು ಸೇರಿದ್ದನು. ಚೀನೀ ಭಾಷೆಯನ್ನು ಬಲ್ಲ ಮನಸ್ಯೂಕ ಸ್ಟಾನಿಸ್‌ಲಾಜ್ಯೂಲೆಯು ಕೋಂಗ್-ಯು-ಲೋ ಎಂಬದು ಹಿಂದುಸ್ತಾನದ ಕೋನ್ಯೋಧ ಎಂದು ಹೇಳಿರುವನು. ಹಲವರು ಈಗಿನ + ಗಂಜಾಮಪ್ರದೇಶವೆ ಕೋನ್ಯೋಧವೆಂದು ಹೇಳುವರು. ಹುಯೆನ್‌ತ್ಸಾಂಗನ ಪ್ರವಾಸಕಾಲದಲ್ಲಿ ಲಲಿತೇಂದ್ರ

---

* ರಘುವಂಶ ೪ನೆಯ ಸರ್ಗ.

× ಲ್ಯಾಸೆನ್ ಎಂಬ ಪಂಡಿತನು ಈಗಿನ ಸುವರ್ಣರೇಖಾನದಿಯು ಪ್ರಾಚೀನ ಕಪಿಶಾನದಿಯೆಂದು ಹೇಳುವನು. ಆದರೆ ಮೇದಿನೀಪುರ ಜಿಲ್ಲೆಯಲ್ಲಿದ್ದ ಕಾಂಸಾಯೀ ನದಿಯು ಕಪಿಶಾನದಿಯೆಂದು ನಮಗೆ ತೋರುವದು. ಕಾಂಸಾಯಿ ಇದರ ಶುದ್ಧರೂಪವು ಕಂಸಾವತಿ. ಕಪಿಶಾವತಿ ಎಂಬದರಿಂದ ಕಂಸಾವತಿ ರೂಪವು ಹುಟ್ಟಿರಬೇಕೆಂದು ತೋರುವದು.

+ ಕನಿಂಗ್‌ಹ್ಯಾಮ್ ಮೊದಲಾದ ಐತಿಹಾಸಿಕರು ಈಗಿನ ಗಂಜಾಮು (Ganjam) ಪ್ರದೇಶಕ್ಕೇ ಪ್ರಾಚೀನ ಕೋನ್ಯೋಧ (Konyodha) ಎಂದು ಹೇಳುವರು.

×ಕೇಸರಿಯು ಈ ಪ್ರದೇಶವನ್ನಾಳುತ್ತಿದ್ದನು. ಮುಂದೆ ೪ ವರ್ಷಗಳಲ್ಲಿ ಕಾನ್ಯಕುಬ್ಜದ ರಾಜನಾದ ಹರ್ಷವರ್ಧನನು ಈ ಅರಸನನ್ನು ಸೋಲಿಸಿದನು. ಅದರಿಂದ ಕೊನ್ಯೋಧ ರಾಜ್ಯವು ಕಾನ್ಯಕುಬ್ಜಕ್ಕೆ ಸೇರಿತು. ಕ್ರಿ. ೭ನೆಯ ಶತಮಾನದಲ್ಲಿ ಕಲಿಂಗರಾಜ್ಯವು ಈಗಿನ ಗಂಜಾಮ ಪ್ರದೇಶದ ನೈಋತ್ಯದಲ್ಲಿ ಸುಮಾರು ೧೦೦೦ ಚೌ. ಮೈಲು ವ್ಯಾಪಿಸಿತ್ತು. ರಾಜಧಾನಿಯು ಸುಮಾರು ೮ ಚೌ. ಮೈಲು ಇತ್ತು. ಪ್ಲಿನಿಯು ಈ ಕಲಿಂಗರಾಜ್ಯದಲ್ಲಿ* ಮೂರು ಭಾಗಗಳನ್ನು ಮಾಡಿರುವನು. ಅವು–ಕಲಿಂಗ, ಮಧ್ಯಕಲಿಂಗ, ಮಹಾಕಲಿಂಗ; ಟಲೇಮಿಯು ತ್ರಿಗಲ್ಪಿಟನ ಇಲ್ಲವೆ ತ್ರಿಲಿಂಗನ ಎಂಬ ಒಂದು ದೇಶವನ್ನು ಉಲ್ಲೇಖಿಸಿರುವನು. ಡಾಕ್ಟರ್ ರಾಜೇಂದ್ರಲಾಲ ಮಿತ್ರ ಎಂಬವರು ತ್ರಿಕಲಿಂಗ ಎಂಬದಕ್ಕೆ ಮೂರು ಕಲಿಂಗಗಳೆಂದು ನಿರ್ಣಯಿಸಿರುವರು. ಅವು–ಕಲಿಂಗ, ಮಧ್ಯಕಲಿಂಗ, ಉತ್ಕಲಿಂಗ, ಉತ್ಕಲಿಂಗದ ವಿಕೃತರೂಪವು ಉತ್ಕಲ ಎಂದಾಯಿತು.

ಕಾಲಚ್ಛವಿಯ ಶಾಸನವನ್ನು ಓದಿದರೆ ಚೇದಿಯ ಹೈಹಯರಾಜವಂಶದವರು ಕಾಲಾಂಜರಪುರ ಮತ್ತು ತ್ರಿಕಲಿಂಗ ಇವುಗಳ ಅಧಿಪತಿಗಳಿದ್ದರೆಂದು ತಿಳಿಯುವದು. ಪಾಶ್ಚಾತ್ಯ-ಇತಿಹಾಸಜ್ಞರಲ್ಲಿ§ ಕೆಲವರು ಕೃಷ್ಣಾನದೀತೀರಶೋಭಿತವಾದ ಅಮರಾವತಿ ಇಲ್ಲವೆ ಧಾನಕರಾಜ್ಯವೂ, ಪ್ರಾಚೀನ ಆಂಧ್ರರಾಜ್ಯವೂ ಕಲಿಂಗ ಇಲ್ಲವೆ ರಾಜಮಹೇಂದ್ರಿಯೂ ಕೂಡಿ ತ್ರಿಕಲಿಂಗವೆಂದು ಹೇಳಲ್ಪಡುತ್ತಿದ್ದವೆಂದು ಅಭಿಪ್ರಾಯಪಡುತ್ತಾರೆ. ಕನಿಂಗ್‌ಹ್ಯಾಮ್ ಸಾಹೇಬರು ತ್ರಿಕಲಿಂಗ ಮತ್ತು ತೇಲಿಂಗನ (Telingan) ಇವೆರಡೂ ಒಂದೇ ಪ್ರದೇಶವೆಂದು ಹೇಳುವರು.

ಮಹಾಭಾರತ, ಹರಿವಂಶ, ಕಾಲಿದಾಸವರ್ಣನೆ ಇವುಗಳಿಂದ ತೋರುವದೇನಂದರೆ–ಒಂದು ಕಾಲದಲ್ಲಿ ಸಮಗ್ರ ಉತ್ಕಲಪ್ರದೇಶವು ಕಲಿಂಗರಾಜ್ಯಕ್ಕೆ ಸೇರಿತ್ತು. ಆದರೆ ಕಾಲಕ್ರಮದಿಂದ ಈ ಮೇರೆಯು ಕಡಿಮೆಯಾಗುತ್ತ ನಡೆದಿತ್ತು. ಕಲಿಂಗ ರಾಜ್ಯದ ಪ್ರಾಚೀನ ರಾಜಧಾನಿಯು ÷ರಾಜಪುರವು. ಶ್ರೀಕಾಕೋಲಾ, ಇಲ್ಲವೆ ಚಿಕಾಕೋಲಾ ಎಂಬದೂ ಪ್ರಾಚೀನ ರಾಜಧಾನಿಯೆಂದು ಹೇಳಿದೆ. ಈ ರಾಜಧಾನಿಯು ಯಾವಕಾಲದಲ್ಲಿ ಕಲಿಂಗ ಪಟ್ಟಣಕ್ಕೆ ಸ್ಥಾನಾಂತರವಾಯಿತೆಂಬದರ ಉಲ್ಲೇಖವು ಇಲ್ಲ. ಕ್ರಿ. ೭ನೇಯಲ್ಲಿ ಕಲಿಂಗ ರಾಜನು ವೇಂಜಿಯ (Vengi) ರಾಜನಿಗೆ ಸೋಲಲು ಆಗ ರಾಜಧಾನಿಯು ರಾಜಮಹೇಂದ್ರಿ ಎಂಬ ಸ್ಥಾನಕ್ಕೆ ತರಲ್ಪಟ್ಟಿತು. ಮಹಾಭಾರತದಲ್ಲಿ ಮಣಿಪುರ, ರಾಜಪುರಗಳ ಮತ್ತು ಬೌದ್ಧಗ್ರಂಥಗಳಲ್ಲಿ ದಂತಪುರ ಕುಂಭವತಿ ಎಂಬ ಪಟ್ಟಣಗಳ ಉಲ್ಲೇಖವು ಕಂಡು ಬರುವದು.

× Ancient Geography of India. (Cunningham).

* Sewell. Antiquities of madras.

§ Cunningham, Ancient Geography of India.

÷ ಬೌದ್ಧ ಗ್ರಂಥಗಳಲ್ಲಿ ರಾಜಧಾನಿಯ ಹೆಸರು ಸಿಂಹಪುರವೆಂದು ಹೇಳಿದೆ.

ಮೇಲಿನ ವಿವರಣೆಯಿಂದ ಕಲಿಂಗರಾಜ್ಯವು ಅತಿಪ್ರಾಚೀನ ಪ್ರದೇಶವೆಂದು ಸ್ಪಷ್ಟವಾಗುವದು. ಹಿಂದು, ಬೌದ್ಧಗ್ರಂಥಗಳಲ್ಲಿ+ ಹಲವೆಡೆಗಳಲ್ಲಿ ಇದರ ಉಲ್ಲೇಖವುಂಟು. ಕಲಿಂಗದೇಶದ ಧರ್ಮಾನುರಾಗ, ಶೌರ್ಯ, ಶಿಲ್ಪ, ವ್ಯಾಪಾರಗಳು ಒಂದಾನೊಂದು ಕಾಲದಲ್ಲಿ ಪ್ರಸಿದ್ಧವಿದ್ದವು. ಆದರೆ ಇದರ ಕಾಲಾನುಕ್ರಮವಾದ ಇತಿಹಾಸವು, ಇಲ್ಲವೆ ಇಲ್ಲಿಯ ರಾಜವಂಶದ ಇತಿಹಾಸವು ಎಲ್ಲಿಯೂ ಸಿಗುವದಿಲ್ಲ. ಕುರುಕ್ಷೇತ್ರದ ಮಹಾಯುದ್ಧದಲ್ಲಿ ಕಲಿಂಗದೇಶದ ರಾಜನಾದ ಶ್ರುತಾಯು ಎಂಬವನು ಕೌರವಪಕ್ಷದಿಂದ ಯುದ್ಧ ಮಾಡಿದ್ದನೆಂದೂ, ಅವನು ಶಕ್ರದೇವ ಮತ್ತು ಕೇತುಮಾನ್ ಎಂಬ ಇಬ್ಬರು ಮಕ್ಕಳೊಡನೆ ವೀರಶ್ರೇಷ್ಠನಾದ ಭೀಮಸೇನನ ಕೈಯ್ಯಿಂದ ಹತನಾದನೆಂದೂ ಮಹಾಭಾರತದಲ್ಲಿ ಹೇಳಿದೆ. ಮಹಾವಂಶದಲ್ಲಿಯೂ ಕಲಿಂಗದ ಉಲ್ಲೇಖವುಂಟು. ಕಲಿಂಗರಾಜಕುಮಾರಿಯು* ವಂಗರಾಜನ ಪಟ್ಟದರಸಿಯಾಗಿದ್ದಳು. ಬುದ್ಧದೇವನ ಪರಿನಿರ್ವಾಣದ ತರುವಾಯ ಕಲಿಂಗರಾಜನಾದ ಬ್ರಹ್ಮದತ್ತನು ಆತನ ಒಂದು ದಂತವನ್ನು ಹುಗಿದು ಅದರ ಮೇಲೆ ಒಂದು ದೊಡ್ಡ ಸ್ತಂಭವನ್ನು ಕಟ್ಟಿಸಿದ್ದನು. ಈ ಸ್ಥಾನವೇ ಮುಂದೆ ಕಲಿಂಗರಾಜಧಾನಿಯಾಗಿ ದಂತಪುರವೆಂದು ಕರೆಯಲ್ಪಟ್ಟಿತು. ಬುದ್ಧದೇವನ ಕಾಲದಲ್ಲಿ ಅತಿ ಸುಂದರವಾದ ಸೂಕ್ಷ್ಮವಸ್ತ್ರಗಳ ಕೈಗಾರಿಕೆಗಾಗಿ ಕಲಿಂಗವು ಪ್ರಸಿದ್ಧವಾಗಿತ್ತು. ಕ್ರಿ. ಪೂ ೨ನೆಯ ಶತಕದಲ್ಲಿ ಕಲಿಂಗದೇಶದ ಪ್ರಸಿದ್ಧಿಯು ಬಹಳವಿತ್ತು. ನೂರಾರು ದೇವಾಲಯಗಳು ಆ ದೇಶವನ್ನಲಂಕರಿಸಿದ್ದವು. ಎಷ್ಟೋ ಸಂಘಾರಾಮಗಳೂ× ಅಲ್ಲಿ ಇದ್ದವು. ಅವುಗಳಲ್ಲಿ ಐನೂರುಜನ ಬೌದ್ಧಭಿಕ್ಷುಗಳು ವಾಸವಾಗಿದ್ದರು. ಇದೇ ಕಾಲದಲ್ಲಿ ನಿರ್ಗ್ರಂಥಸಾಂಪ್ರದಾಯದ ಅಸಂಖ್ಯಜನರು ಅಲ್ಲಿ ವಾಸಿಸುತ್ತಿದ್ದರು.

ಕಲಿಂಗವಿಜಯವು ಅಶೋಕಚಕ್ರವರ್ತಿಯ ಪೂರ್ವಾಪರಜೀವನಗಳಲ್ಲಿ ಪರಿವರ್ತನವನ್ನುಂಟುಮಾಡಿದ ಒಂದು ಅಪೂರ್ವಸಂಧಿಕಾಲವು. ಮನುಷ್ಯಜೀವಮಾನದಲ್ಲಿ ಇಂಥ ಒಂದು ಸಮಯವು ಬರುವದುಂಟು; ಆಗ ಒಂದು ಸಾಮಾನ್ಯಸಂಗತಿಯಿಂದ ಬಹುಕಾಲದ ಪ್ರಾಚೀನ ಸಂಸ್ಕಾರಗಳೆಲ್ಲ ಸ್ವಪ್ನದಂತೆ ಎಲ್ಲಿಯೋ ಅಡಗಿಹೋಗುವವು; ಮತ್ತು ಕೂಡಲೆ ಮನಸ್ಸಿನಲ್ಲಿ ಭಯಂಕರವಾದ ಕ್ರಾಂತಿಯುಂಟಾಗಿ ಒಂದು ಹೊಸ ಮಾರ್ಗದಲ್ಲಿ ಜೀವನಕ್ರಮವು ಆರಂಭವಾಗುವದು. ಮುಪ್ಪಿನ ಮುದುಕನನ್ನೂ ಹೆಣವನ್ನೂ ನಾವು ಯಾವಾಗಲೂ ನೋಡುತ್ತಿರಬಹುದು; ಮತ್ತು ಬೇನೆಯವರ ನರಳುವಿಕೆಯಿಂದ ಕ್ಷಣಕಾಲ ನಾವು ವ್ಯಸನಬಡುವದೂ ಉಂಟು. ಆದರೆ ಅದೇ ಮುಪ್ಪಿನ ಮುದುಕನನ್ನೂ, ಹೆಣವನ್ನೂ, ರೋಗಪೀಡಿತನನ್ನೂ ನೋಡಿ ರಾಜಪುತ್ರನಾದ ಶಾಕ್ಯಸಿಂಹನು

+ ವೇಶಾಂತರಜಾತಕ ಮೊದಲಾದ ಅತಿ ಪ್ರಾಚೀನ ಪಾಲೀ ಗ್ರಂಥದಲ್ಲಿಯೂ ಕಲಿಂಗದ ವರ್ಣನೆಯುಂಟು.

* ರಾಜಕುಮಾರಿ—ತಿಲಕಸುಂದರಿ. Cunningham.

× Beal's Records of western world Vol II.

ರಾಜೈಶ್ವರ್ಯವನ್ನೂ ಹೆಂಡಿರುಮಕ್ಕಳನ್ನೂ ತೊರೆದು ದೀನವಾದ ಭಿಕ್ಷುವೇಷದಿಂದ ಜಗತ್ತಿನೆದುರಿಗೆ ಬಂದು ನಿಂತನು! ಮತ್ತು ತಾಪತ್ರಯದಿಂದ ಬಳಲುತ್ತಿರುವ ನರನಾರಿಯರಿಗೆ ಮೋಕ್ಷಮಾರ್ಗವನ್ನು ತೋರಿಸುವದಕ್ಕಾಗಿ ಘನತರವಾದ ಸಾಧನಮಾರ್ಗದಲ್ಲಿ ತೊಡಗಿದನು; ಆ ಸಾಧನೆಗೆ ಫಲವೆನಿಸಿ ಒಂದು ನೂತನ ಮಹಾಸತ್ಯವನ್ನು ಕಂಡು ಹಿಡಿದು ಲೋಕಕಲ್ಯಾಣಕ್ಕಾಗಿ ಅದನ್ನು ದಾನಮಾಡಬೇಕೆಂದು ಮನೆಮನೆಗೆ ತಿರುಗಾಡಿದನು! ಈ ಕಾರಣದಿಂದಲೇ ಶಾಕ್ಯಸಿಂಹನು ಕೋಟ್ಯವಧಿ ನರನಾರಿಯರ ಹೃದಯ ಪೀಠದಲ್ಲಿ ಕುಳಿತಿರುವನು. ಮಹಾಪುರುಷರ ಜೀವನದಲ್ಲಿ ಈ ತರದ ಯೋಗವು ಬಹುಶಃ ಒದಗುವದುಂಟು. ಅಶೋಕನ ಜೀವನದಲ್ಲಿಯೂ ಕಲಿಂಗವಿಜಯವು ಈ ಪ್ರಕಾರದ ಒಳ್ಳೆಯ ಪರಿವರ್ತನವನ್ನುಂಟುಮಾಡಿದ ಸಂಧಿಯಾಗಿರುವದು.

ಅಶೋಕನು ಸಿಂಹಾಸನವೇರಿದ ೧೩ನೆಯ ವರ್ಷ ಇಲ್ಲವೆ ಆತನ ಪಟ್ಟಾಭಿಷೇಕವಾದ ೮ ವರ್ಷಗಳ ತರುವಾಯ ಕ್ರಿ. ಪೂ. ೨೬೧ನೆಯ ವರ್ಷ ಆತನ ಸಂಬಂಧವಾಗಿ ಬರೆದಿಟ್ಟ ಎಲ್ಲಕ್ಕೂ ಮೊದಲಿನ ಸಂಗತಿಯು ದೊರೆಯುವದು. ಬಂಗಾಲ ಉಪಸಾಗರದ ದಂಡೆಗೆ ಗೋದಾವರೀ ಮಹಾನದಿಗಳ ನಡುವಿನ ಕಲಿಂಗ ಇಲ್ಲವೆ ಕಲಿಂಗತ್ರಯ ಎಂದು ಹೆಸರುಗೊಂಡ ವಿಶಾಲ ರಾಜ್ಯವನ್ನು ಜಯಿಸಿ ತನ್ನ ಸಾಮ್ರಾಜ್ಯವನ್ನು ಸುತ್ತಲು ಬೆಳೆಯಿಸುವದಕ್ಕೆ ಆತನು ಅದೇ ವರ್ಷ ಮೊದಲುಮಾಡಿದನು. ಜಯಲಕ್ಷ್ಮಿಯು ಆತನಿಗೆ ಅನುಕೂಲೆಯಾದಳು. ಕಲಿಂಗರಾಜ್ಯವು ಆತನ ಸಾಮ್ರಾಜ್ಯಕ್ಕೊಳಪಟ್ಟಿತು. ಆದರೆ ರಣಾಂಗಣದ ಹೃದಯದ್ರಾವಕವಾದ ಭಯಂಕರ ದೃಶ್ಯವು ವಿಜಯಿಯಾದ ಚಕ್ರವರ್ತಿಯ ಹೃದಯಪಟದ ಮೇಲೆ ಬಹುದಿನಗಳವರೆಗೆ ನಿಲ್ಲುವಂತೆ ಮೂಡಿತು. ಅಲ್ಲಿ ನೋಡಿದ ದುಃಖದ ಘೋರವಾದ ಅಂಧಕಾರವು ಆತನ ಚಿತ್ತವನ್ನು ವ್ಯಾಪಿಸಿತು. ವಿಜಯದ ಪ್ರಕಾಶವು ಆ ಅಂಧಕಾರವನ್ನು ಭೇದಿಸಲು ಸಮರ್ಥವಾಗಲಿಲ್ಲ. ಪರ್ವತಗಳ ಶಿಲಾತಲಗಳ ಮೇಲೆ ಅಪುರವಾಣಿಯಿಂದ ಪರಾಜಿತರ ಹೃದಯದ್ರಾವಕವಾದ ಯಾತನೆ, ಜೇತಾರನ ಅಸಹ್ಯವಾದ ಅನುತಾಪ ಇವುಗಳನ್ನು ಚಕ್ರವರ್ತಿಯು ಮನಸ್ಸು ಕರಗಿ ಕೊರೆಯಿಸಿರುವನು. ಯುಗಾಂತರವಾಗಿ ಹೋಗಿದೆ; ಆದರೂ ಈವೊತ್ತಿಗೆ ಆ ಲಿಪಿಯನ್ನು ಓದಿದರೆ ಒಬ್ಬ ವ್ಯಥಿತನಾದ ಮನುಷ್ಯನ ದುಃಖನಿಶ್ವಾಸವು ಕಿವಿಯಲ್ಲಿ ಪ್ರತಿಧ್ವನಿತವಾಗುತ್ತಿರುವದು! ಆ ಭಾಷೆಯು ನಿಜವಾಗಿ ಆ ಚಕ್ರವರ್ತಿಯ ಹೃದಯದ ಭಾಷೆಯೇ. ಅಶೋಕನ ಹೃದಯದ ಅನುತಾಪದುಃಖಗಳನ್ನು ವರ್ಣಿಸುವದು ಯಾರಿಗೂ ಸಾಧ್ಯವಿಲ್ಲ. ಶಿಲೆಗಳು ಸಜೀವವಾಗಿದ್ದಂತೆ ಕೆಳಗೆ ಬರೆದ ಅಪೂರ್ವವಾದ ಇತಿಹಾಸವನ್ನು ಉದ್ಘೋಷಿಸುತ್ತಿರುವವು.

"ಪವಿತ್ರ ಚರಿತ್ರವುಳ್ಳ ಉದಾರಮನಸ್ಸಿನ ಚಕ್ರವರ್ತಿಯು ತನ್ನ ಪಟ್ಟಾಭಿಷೇಕವಾದ ೮-ನೆ ವರ್ಷಗಳ ತರುವಾಯ ಕಲಿಂಗರಾಜ್ಯವನ್ನು ಜಯಿಸಿದನು. ಆ ಮಹಾಯುದ್ಧದಲ್ಲಿ ಒಂದುವರೆ ಲಕ್ಷ ಜನರು ಸೆರೆ ಹಿಡಿಯಲ್ಪಟ್ಟರು. ಮೂರು ಲಕ್ಷ ಜನರು ಹತರಾದರು. ಎಷ್ಟು ಲಕ್ಷ ಜನರು ಗಾಯಹೊಂದಿದರೆಂಬದಕ್ಕೆ ಲೆಕ್ಕವೇ ಇಲ್ಲ.

"ಕಲಿಂಗವನ್ನು ಜಯಿಸಿದ ತರುವಾಯ ಸ್ವಲ್ಪ ದಿವಸಗಳಲ್ಲಿ ಚಕ್ರವರ್ತಿಯು ಮೈತ್ರೀಧರ್ಮವನ್ನು ಪಾಲಿಸುವದಕ್ಕೂ, ಪ್ರೀತಿಸುವದಕ್ಕೂ ಅಭ್ಯಾಸಿಸುವದಕ್ಕೂ ಆರಂಭಮಾಡಿದನು. ಯಾವದೊಂದು ಸ್ವತಂತ್ರರಾಜ್ಯವನ್ನು ವಶಪಡಿಸಿಕೊಳ್ಳಬೇಕಾದರೆ ಅಸಂಖ್ಯ ಪ್ರಾಣಿಗಳನ್ನು ಕೊಲ್ಲುವದೂ, ಸೆರೆಹಿಡಿಯುವದೂ ಅವಶ್ಯವಲ್ಲವೇ? ಇದು ಪವಿತ್ರಸ್ವಭಾವದ ಚಕ್ರವರ್ತಿಗೆ ಅಸಹ್ಯವಾಯಿತು. ಕಲಿಂಗಯುದ್ಧದಲ್ಲಿ ಮಡಿದ ಮತ್ತು ಸೆರೆಸಿಕ್ಕ ಮತ್ತು ಗಾಯಹೊಂದಿದ ಜನರ ನೂರರಲ್ಲೊಂದುಪಾಲು ಇಲ್ಲವೆ ಸಾವಿರದ ಲ್ಲೊಂದುಪಾಲು ಜನರು ನಾಶಹೊಂದಿದರೂ ಈಗ ಕರುಣಾರಸಪೂರ್ಣನಾದ ಚಕ್ರವರ್ತಿಯ ಅಸಹ್ಯವಾದ ದುಃಖಕ್ಕೆ ಕಾರಣವಾಗುವದು" ಮುಂದೆ ಚಕ್ರವರ್ತಿಯು ಯುದ್ಧದ ಭಯಂಕರ ಪ್ರಸಂಗಗಳನ್ನೆಲ್ಲ ವರ್ಣಿಸಿ ಕೊನೆಗೆ "ಪ್ರೇಮದ ಜಯವೇ ನಿಜವಾದ ಜಯವು" ಎಂಬ ಮಹಾಸತ್ಯವನ್ನು ಉಪದೇಶಿಸಿರುವನು.

ಈ ಮಹಾಯುದ್ಧವು ಮುಗಿದ ಬಳಿಕ ಕಲಿಂಗರಾಜ್ಯದ ಪ್ರಜೆಗಳನ್ನೂ, ಸಮೀಪದ ಅಡವಿಯಲ್ಲಿ ವಾಸಿಸುವ ಕಾಡುಕುಲಗಳನ್ನೂ ಯಾವ ಪದ್ಧತಿಯಿಂದ ಆಳಬೇಕೆಂಬ ವಿಷಯದಲ್ಲಿ ನಿಯಮಗಳನ್ನು ಮಾಡಿ ಚಕ್ರವರ್ತಿಯು ಕಲಿಂಗಕ್ಕೆ ಮಾತ್ರ ಸಂಬಂಧಪಟ್ಟ ಎರಡು ಶಾಸನಗಳನ್ನು ಪ್ರಚಾರಪಡಿಸಿದನು. ಈ ಶಾಸನಗಳು ಜೌಗಡ ಮತ್ತು ಧೌಲಿ ಎಂಬ ಸ್ಥಳಗಳಲ್ಲಿ ಇದುವರೆಗೆ ಕಾದಿಡಲ್ಪಟ್ಟಿರುವವು. ಈ ಗೆದ್ದ ಕಲಿಂಗ ಪ್ರದೇಶಕ್ಕೆಲ್ಲ ಒಬ್ಬ ರಾಜವಂಶದ ಯುವರಾಜನನ್ನು ಮುಖ್ಯಾಧಿಕಾರಿಯನ್ನು ಮಾಡಿದನು. ತೋಸಾಲಿ ಎಂಬದು ಅವನ ರಾಜಧಾನಿಯು. ಈಗಿನ ಯಾವ ಸ್ಥಾನಕ್ಕೆ ತೋಸಾಲಿ ಎಂದು ಹೇಳುತ್ತಿದ್ದರೆಂಬದನ್ನು ನಿರ್ಣಯಿಸುವ ಸಾಧನವಿಲ್ಲ; ಆದರೂ ಓಡಿಸಾಕ್ಕೆ ಸೇರಿದ ಪುರಿ ಜಿಲ್ಲೆಯಲ್ಲಿ ಯಾವದೊಂದು ಸ್ಥಾನವಾಗಿರಬಹುದೆಂದು ಹೇಳಬಹುದು.

ಕಲಿಂಗವನ್ನು ಜಯಿಸಿದ ಬಳಿಕ ಅಶೋಕನು ಬೇರೆ ಯಾವ ಹೊಸ ಯುದ್ಧವನ್ನೂ ಮಾಡಿರಲಾರನು. ಮೇಲೆ ಹೇಳಿದ ಶಾಸನದಲ್ಲಿ ಅಶೋಕಮಹಾರಾಜನ ಸಮರಯಾತ್ರಾ ನಾಯಕ (Wardens of the Marches) ರೆಂಬ ಸೇನಾಪತಿಗಳ ಉಲ್ಲೇಖವುಂಟು. ಬಹುಶಃ ಬಹಿಃಶತ್ರುಗಳಿಂದ ತನ್ನ ವಿಸ್ತೀರ್ಣವಾದ ರಾಜ್ಯದ ದೂರದೂರದ ಪ್ರದೇಶಗಳನ್ನು ಕಾಪಾಡುವದಕ್ಕಾಗಿ ಅವರನ್ನು ಆಗಾಗ ಅಲ್ಲಿಗೆ ಕಳಿಸಬೇಕಾಗುತ್ತಿರಬಹುದು. ಆದರೆ ಅತನ ಮುಂದಿನ ಜೀವನೇತಿಹಾಸವನ್ನು ನೋಡಿದರೆ ಅವನು ಪವಿತ್ರವಾದ ಮೈತ್ರೀಧರ್ಮವನ್ನು ಕಾಪಾಡುವದಕ್ಕೂ, ಪ್ರಚಾರಪಡಿಸುವದಕ್ಕೂ ಆರಂಭಿಸಿದಂದಿನಿಂದ ರಾಜ್ಯಪ್ರಾಪ್ತಿಯ ಆಶೆಗೆ ಇಲ್ಲವೆ ಲೋಭಕ್ಕೆ ವಶನಾಗಿ ಯುದ್ಧದಲ್ಲಿಯೂ ಹಿಂಸೆಯಲ್ಲಿಯೂ ತೊಡಗಿದ್ದು ಕಂಡುಬರುವದಿಲ್ಲ. ಕಲಿಂಗಯುದ್ಧವು ಅಶೋಕನು ಮಾಡಿದ ಮೊದಲನೆಯ ಯುದ್ಧವಾಗಿರದಿದ್ದರೂ ಅವನು ತನ್ನ ಮನಸ್ಸಿನಿಂದ ಮಾಡಿದ ಯುದ್ಧಗಳಲ್ಲಿ ಕೊನೆಯದೆಂದು ಹೇಳಲು ಅಡ್ಡಿಯಿಲ್ಲ.

೯ನೆಯ ಅಧ್ಯಾಯ.

ಅಶೋಕನು ಬೌದ್ಧಧರ್ಮದ ದೀಕ್ಷೆಯನ್ನು ಸ್ವೀಕರಿಸಿದುದು.



ಕಲಿಂಗ ಯುದ್ಧದಲ್ಲಾದ ಅಸಂಖ್ಯ ಪ್ರಾಣಿವಧೆಯನ್ನು ನೋಡಿ ಅಶೋಕನ ಹೃದಯವು ವ್ಯಥೆಬಟ್ಟಿತು. ಆತನ ಗಿರಿಲಿಪಿಗಳನ್ನೂ ಬೇರೆ ಬೇರೆ ಶಾಸನಗಳನ್ನೂ ನೋಡಿದರೆ ಅವುಗಳ ಪ್ರತಿಪಂಕ್ತಿಯೂ, ಪ್ರತ್ಯಕ್ಷರವೂ ಕಣ್ಣೀರಿನಿಂದ ತೊಯ್ದು ಲೇಖಣಿಯಿಂದ ಬರೆದಂತೆ ಇರುವವು. ಅಶೋಕನು ಕಲಿಂಗ ಯುದ್ಧದಲ್ಲಿ ತನ್ನ ಕಣ್ಣಾರೆ ಆ ಭಯಂಕರ ದೃಶ್ಯವನ್ನು ನೋಡಿ ಪರರಾಜ್ಯಗಳನ್ನು ಜಯಿಸುವ ಇಚ್ಛೆಯನ್ನು ಪೂರ್ಣವಾಗಿ ಬಿಟ್ಟುಬಿಟ್ಟನು. ಮತ್ತು ಪವಿತ್ರವಾದ ಧರ್ಮಸಾಮ್ರಾಜ್ಯವನ್ನು ಸ್ಥಾಪಿಸುವ ಸಂಕಲ್ಪಮಾಡಿದನು. ಜೀವನದ ಈ ಸಂಧಿಕಾಲದಲ್ಲಿ ಬೌದ್ಧಧರ್ಮವೆಂಬ ಚಂದ್ರನ ಶಾಂತೋಜ್ವಲಕಿರಣಗಳಿಂದ ಅಶೋಕನ ಹೃದಯಸಾಗರದಲ್ಲಿ ಭೂತದಯೆಯ ತೆರೆಗಳು ಮೇರೆದಪ್ಪಿ ಬರುತ್ತಿದ್ದವು. ಶಾಂತಿಮಯವಾದ ಧರ್ಮಸಾಮ್ರಾಜ್ಯವನ್ನು ಸ್ಥಾಪಿಸುವದೇ ನಿಜವಾದ ಗೆಲುವೆಂದು ಆತನು ತಿಳಿದನು. ಯಾವ ಧರ್ಮವನ್ನು ಪ್ರಚಾರಪಡಿಸುವದರಿಂದ ಲಕ್ಷಾವಧಿ ಪ್ರಾಣಿಗಳು ಸನ್ಮಾರ್ಗವನ್ನವಲಂಬಿಸುವವೋ, ದುಷ್ಟವಾದ ಮನೋವೃತ್ತಿಗಳು ಅಡಗಿ ಪರಮಶಾಂತಿಯು ಸುಗಮವಾಗುವದೋ, ಯಾವ ಧರ್ಮವನ್ನು ಪರಿಶೀಲಿಸುವದರಿಂದ ಹಿಂಸೆ, ದ್ವೇಷ ಮೊದಲಾದ ದುಃಖಜನಕವಾದ ಮನೋಭಾವನೆಗಳು ಬಯಲಾಗಿ ಮನುಷ್ಯನಿಗೆ ಮಾನವರೆಲ್ಲ ಪರಸ್ಪರಬಂಧುಗಳೆಂಬ ಭಾವನೆಯಾಗುವದೋ ಅಂಥ ಪವಿತ್ರಧರ್ಮವನ್ನು ಅಶೋಕನು ತಾನು ಮೊದಲು ಸ್ವೀಕರಿಸಿ ಬಳಿಕ ಜಗತ್ತಿನ ಎಲ್ಲ ನರನಾರಿಯರ ರಾಗದ್ವೇಷ ಮೋಹಾಂಧಕಾರದಿಂದ ವ್ಯಾಪ್ತವಾದ ಹೃದಯದಲ್ಲಿ ಅಹಿಂಸಾಮೂಲವಾದ ಆ ಧರ್ಮಜ್ಯೋತಿಯನ್ನು ಪಸರಿಸುವದರಲ್ಲಿ ಅತಿಶಯ ಉತ್ಸಾಹವುಳ್ಳವನಾದನು.

ಕಲಿಂಗವಿಜಯವಾದೊಡನೆಯೆ ಅಶೋಕನಿಗೆ ಮೈತ್ರೀಧರ್ಮದಲ್ಲಿ ಅತಿಶಯ ಅನುರಾಗವುಂಟಾಯಿತು. ಮತ್ತು ಉತ್ಸಾಹದಿಂದ ಅದನ್ನು ಪ್ರಚಾರಪಡಿಸಹತ್ತಿದನು. ಅಶೋಕನು ತನ್ನ ಒಂದು ಸಣ್ಣ ಗಿರಿಲಿಪಿಯಲ್ಲಿ ‡—"ನಾನು ಎರಡುವರೆ ವರ್ಷ ಗೃಹಸ್ಥ–ಶಿಷ್ಯನಾಗಿ ಇದ್ದೆನು. ಆಗ ಧರ್ಮವೃದ್ಧಿಗಾಗಿ ಅಷ್ಟೊಂದು ಪ್ರಯಾಸಬಡಲಿಲ್ಲ. ಆದರೆ ಈ ಲಿಪಿಯನ್ನು ಪ್ರಚಾರಪಡಿಸುವ ಮೊದಲು ಸುಮಾರು ೧ ವರ್ಷದಿಂದ ನಾನು ಪವಿತ್ರವಾದ ಬೌದ್ಧಧರ್ಮದ ಆಶ್ರಯಮಾಡಿದೆನು. ಆ ವೇಳೆಯಿಂದ ಎಲ್ಲ ಮನುಷ್ಯಜಾತಿಯಲ್ಲಿ ಆ

‡ Minor Roek Ediet, ಕ್ಷುದ್ರಗಿರಿಲಿಪಿ. ರೂಪನಾಥ.

ಧರ್ಮದ ಮೇಲೆ ಪ್ರೀತಿವಿಶ್ವಾಸಗಳು ಉಂಟಾಗುವಂತೆ ದೃಢಪ್ರಯತ್ನ ಮಾಡಿದೆನು" ಎಂದು ಪ್ರಕಟಿಸಿರುವನು. ಈ ಮೇರೆಗೆ ಅಶೋಕನ ಜೀವನದ ೪ ವರ್ಷಗಳ ಇತಿಹಾಸವು ದೊರೆಯುವದು. ಕ್ರಿ. ಪೂ. ೨೬೧ ರಲ್ಲಿ ಅಥವಾ ಪಟ್ಟಾಭಿಷೇಕವಾದ ೯ ವರ್ಷಗಳ ತರುವಾಯ ಕಲಿಂಗರಾಜ್ಯವು ಜಯಿಸಲ್ಪಟ್ಟಿತು. ಮುಂದೆ ೪ ವರ್ಷಗಳ ತರುವಾಯ ಇಲ್ಲವೆ ಅಭಿಷೇಕವಾದ ೧೩ ವರ್ಷಗಳ ತರುವಾಯ ಕ್ರಿ. ಪೂ. ೨೫೭ ರಲ್ಲಿ ಕಲಿಂಗರಾಜ್ಯವನ್ನಾಕ್ರಮಿಸಿದ ಮತ್ತು ಜಯಿಸಿದ ವರ್ಣನೆಯುಳ್ಳ ಶಿಲಾಲಿಪಿಯು + ಪ್ರಕಟಿಸಲ್ಪಟ್ಟಿತು. ಈ ಲಿಪಿಯನ್ನೂ ಮೇಲೆ ಹೇಳಿದ ಲಿಪಿಯನ್ನೂ ಏಕಕಾಲದಲ್ಲಿ ಆಲೋಚಿಸಿ ನೋಡಿದರೆ— ಅಶೋಕನು ತನ್ನ ಪಟ್ಟಾಭಿಷೇಕವಾದ ೯ನೆಯ ವರ್ಷ ಅಥವಾ ಕಲಿಂಗವಿಜಯವಾದ ಸ್ವಲ್ಪಕಾಲದಲ್ಲಿಯೆ ಗೃಹಸ್ಥಶಿಷ್ಯನಾಗಿ ಬೌದ್ಧಧರ್ಮವನ್ನು ಸ್ವೀಕರಿಸಿದನೆಂದು ಸಿದ್ಧಾಂತ ಮಾಡಬಹುದು. ಆದರೆ ಆಗ ಆ ಧರ್ಮದಲ್ಲಿ ಅವನ ಆಸ್ಥೆಯೂ, ಪ್ರೀತಿಯೂ ಪ್ರಬಲ ವಾಗಿರಲಿಲ್ಲ. ಮುಂದೆ ಕ್ರಮವಾಗಿ ಅತನ ಧರ್ಮಾನುರಾಗವು ಹೆಚ್ಚಾಗುತ್ತ ಪೂರ್ಣ ವಿಕಾಸಹೊಂದಿತು. ಅಷ್ಟುಹೊತ್ತಿಗೆ ಪಟ್ಟಾಭಿಷೇಕವಾಗಿ ೧೦ ವರ್ಷಗಳು ಸಂದಿದ್ದವು. ಕ್ರಿ. ಪೂ. ೨೫೭ ರಲ್ಲಿ ಇಲ್ಲವೆ ಪಟ್ಟಾಭಿಷೇಕವಾಗಿ ೧೩ ವರ್ಷಗಳಾದ ಬಳಿಕ ಅತನು ತನ್ನ ಪ್ರಸಿದ್ಧವಾದ ಧರ್ಮಶಾಸನ ಲಿಪಿಗಳನ್ನು ಒಂದೊಂದನ್ನಾಗಿ ಜಗತ್ತಿನಲ್ಲಿ ಪ್ರಕಟಿಸಿ ದನು. ಆ ವರ್ಷದಿಂದಲೇ ಕಲ್ಲಿನಲ್ಲಿ ಲಿಪಿಗಳನ್ನು ಕೊರೆಯುವದಕ್ಕೆ ಆರಂಭವಾಯಿತೆಂದು ಅತನೇ ಪ್ರಕಟಿಸಿರುವನು. ಮೇಲೆ ಹೇಳಿದ ಸಣ್ಣ ಗಿರಿಲಿಪಿಯು ಹೊಸದಾಗಿ ಧರ್ಮ ದೀಕ್ಷೆಯನ್ನು ಹೊಂದಿದ ಚಕ್ರವರ್ತಿಯ ಧರ್ಮಾನುರಾಗದ ಮೊದಲನೆಯ ಗುರುತು. ಅತನು ಆ ಧರ್ಮದ ವಿಷಯವಾಗಿ ತನ್ನಲ್ಲಿ ಉಂಟಾದ ಅನುರಾಗವನ್ನೂ, ಉತ್ಸಾಹ ವನ್ನೂ, ಸಮಸ್ತ ನರನಾರಿಯರಲ್ಲಿ ಉಂಟುಮಾಡುವದಕ್ಕೂ, ಬೌದ್ಧಧರ್ಮದ ಜಗದ್ವ್ಯಾಪಿ ಯಾದ ಮಹಿಮೆಯನ್ನು ಚಿರಸ್ಮರಣೀಯವಾಗುವಂತೆ ಮಾಡುವದಕ್ಕೂ ಬದ್ಧಕಂಕಣ ನಾಗಿ ನಿಂತನು. ಸಮೀಪದಲ್ಲಿಯೂ, ದೂರದಲ್ಲಿಯೂ ಪರ್ವತಗಳ ಮೇಲೂ ಶಿಲಾಸ್ತಂಭ ಗಳ ಮೇಲೂ ಎಲ್ಲೆಲ್ಲಿಯೂ ತನ್ನ ಮನಸ್ಸಿನಲ್ಲಿ ಮೂಡಿದ ಭಾವವನ್ನು ಪ್ರತ್ಯಕ್ಷರದಲ್ಲಿ ಕೊರೆಯಿಸಿರುವನು. ಇಂಥ ಲಿಪಿಗಳು ಈಗ ಎಷ್ಟೋ ದೊರೆತಿರುವವು. ಇನ್ನೂ ಎಷ್ಟೋ ದೊರೆಯಬಹುದು. ಅಶೋಕನ ಬೌದ್ಧಧರ್ಮಗ್ರಹಣವಿಷಯದಲ್ಲಿ ಬೇರೆ ಬೇರೆ ಕಥೆಗಳು ಪ್ರಚಲಿತವಾಗಿರುವವು. ಮಹಾವಂಶದಲ್ಲಿ ಈ ಮೇರೆಗೆ ಹೇಳಿದೆ:—" ಯುವರಾಜನಾದ ಸುಮನನ ಮಗನಾದ ನಿಗ್ರೋಧನೆಂಬ ಶ್ರಮಣನು ಒಂದು ದಿವಸ ಅರಮನೆಯ ಮುಂದಿನ ಮಾರ್ಗದಿಂದ ಹೋಗುತ್ತಿದ್ದನು. ಆಗ ಅಶೋಕನ ದೃಷ್ಟಿಯು ಅತನ ಮೇಲೆ ಬಿತ್ತು. ತಲೆಗೂದಲುಗಳನ್ನೆಲ್ಲ ಪರಿದು, ಕಾಷಾಯ ವಸ್ತ್ರವನ್ನು ಧರಿಸಿ ಕಂಗೊಳಿಸುತ್ತಿದ್ದ ಆ ಬಾಲ ಸನ್ಯಾಸಿಯ ಸುಂದರ ಮೂರ್ತಿಯನ್ನು ನೋಡಿದೊಡನೆ ಅತನ ಹೃದಯದಲ್ಲಿ ಅತ್ಯಂತ ಪ್ರೀತಿಯೂ, ವಿಶ್ವಾಸವೂ ಉಂಟಾದವು. ಮಹಾರಾಜನು ಮರುಳಾಗಿ ಅತನನ್ನು ರಾಜ ಸಭೆಗೆ ಕರೆಯಿಸಿದನು. ಆ ಬಾಲಭಿಕ್ಷುವಿನ ಮುಖದಿಂದ ಅಮೃತಸಿಕ್ತವಾದ ಬುದ್ಧದೇವನ

ಉಪದೇಶಗಳನ್ನು ಕೇಳಿ ಮಹಾರಾಜನಿಗೆ ಬಹಳ ಸಂತೋಷವಾಯಿತು. ಬಳಿಕ ಜನರನ್ನೆಲ್ಲ ಒಟ್ಟುಗೂಡಿಸಿ ಈ ಪವಿತ್ರಧರ್ಮವನ್ನು ಪ್ರಚುರಗೊಳಿಸಬೇಕೆಂಬ ಅಭಿಪ್ರಾಯದಿಂದ ನಿಗ್ರೋಧನ ಮತ್ತು ಅವನ ಸಂಗಡಿಗರಾದ ಬೇರೆ ಭಿಕ್ಷುಗಳ ಮುಖದಿಂದ ಬುದ್ಧನ ಉಪದೇಶಗಳನ್ನು ಕೇಳತೊಡಗಿದನು. ಕ್ರಮದಿಂದ ಮಹಾರಾಜನು ಬಹಳ ಪ್ರೇಮದಿಂದ ಆ ಸನಾತನ ಧರ್ಮವನ್ನು ಅಂಗೀಕರಿಸಿದನು. ಒಂದೇ ದಿವಸದಲ್ಲಿ ಆತನ ಧರ್ಮದೀಕ್ಷೆಯೂ, ಪಟ್ಟಾಭಿಷೇಕವೂ ಜರುಗಿದವು. ಬಿಂದುಸಾರನ ಮರಣದ ತರುವಾಯ ೪ ವರ್ಷಗಳಾದ ಮೇಲೆ ಈ ಸಂಗತಿಯು ಒದಗಿತು.” ಅಶೋಕನ ಧರ್ಮಗ್ರಹಣವನ್ನು ಕುರಿತು ಮಹಾವಂಶದಲ್ಲಿ ಈ ಮೇರೆಗೆ ಹೇಳಿದ್ದರೂ ಅದು ಸತ್ಯವೆಂದು ನಂಬುವದು ಕಠಿಣವಾಗಿರುವದು. ಮಹಾವಂಶದಲ್ಲಿಯೇ ಅಶೋಕನು ಬಿಂದುಸಾರನ ಮರಣವಾದೊಡನೆಯೇ ಸಿಂಹಾಸನವೇರಿದನೆಂದೂ, ಬಳಿಕ ನಾಲ್ಕು ವರ್ಷಗಳ ಮೇಲೆ ಆತನ ಪಟ್ಟಾಭಿಷೇಕವಾಯಿತೆಂದೂ ಹೇಳಿರುವದು. ಇದು ನಿಜವಿದ್ದರೂ ಇರಬಹುದು. ಆದರೆ ಏಕಕಾಲದಲ್ಲಿ ಬೌದ್ಧಧರ್ಮದೀಕ್ಷೆಯೂ, ಅಭಿಷೇಕೋತ್ಸವವೂ ಅಸಂಭವವೆಂದು ತೋರುವದು. ಅಶೋಕನು ಸಿಂಹಾಸನವನ್ನೇರಿದಾಗ ಯುವರಾಜನಾದ ಸುಮನನ ಹೆಂಡತಿಯು ಗರ್ಭಿಣಿಯಿದ್ದಳು. ಮಹಾವಂಶದಲ್ಲಿಯೇ ಇದನ್ನು ಹೇಳಿದೆ. ಈ ಸಂಗತಿಯೂ ನಿಜವೆಂದು ನಂಬಿದರೆ ಪಟ್ಟಾಭಿಷೇಕ ಕಾಲದಲ್ಲಿ ನಿಗ್ರೋಧನ ವಯಸ್ಸು ೪ ವರ್ಷಗಳು ಮಾತ್ರ ಇತ್ತೆಂದು ಒಪ್ಪಬೇಕಾಗುವದು. ಆದರೆ ಆ ಕಾಲದಲ್ಲಿ ನಿಗ್ರೋಧನು ೭ ವರ್ಷದವನಿದ್ದನೆಂದು ಅದೇ ಗ್ರಂಥದಲ್ಲಿ ಹೇಳಿದೆ. ನಾಲ್ಕು ವರ್ಷದ ಬಾಲಕನು ಧರ್ಮದ ಉಚ್ಚತತ್ವಗಳನ್ನು ಪ್ರಚಾರಪಡಿಸಲು ಶಕ್ತನಾಗಿದ್ದನೆಂದು ಹೇಳುವದು ಇತಿಹಾಸದೃಷ್ಟಿಯಿಂದ ವಿಶ್ವಾಸಾರ್ಹವಲ್ಲ. ಇದು ಬಹುಶಃ ಮುಂದಿನ ಕಾಲದ ಬೌದ್ಧಲೇಖಕರು ಬರೆದ ಕಥೆಯೆಂದು ತೋರುವದು. ಧರ್ಮಗ್ರಹಣವಿಷಯವಾಗಿ ಅಶೋಕಾವದಾನದಲ್ಲಿ ಹೇಳಿರುವದೇನಂದರೆ:—“ಅಶೋಕನು ರಾಜಧಾನಿಯಲ್ಲಿ ನರಕಪುರಿ ಎಂಬ ಒಂದು ಮನೋಹರವಾದ ವಧಾಗಾರವನ್ನು ಕಟ್ಟಿಸಿ ಅಲ್ಲಿ ಚಂಡಗಿರಿಕನೆಂಬವನನ್ನು ಕೊಲೆಗಡಿಕನನ್ನಾಗಿ ನಿಯಮಿಸಿದ್ದನು. ಈ ಕೊಲೆವನೆಯಲ್ಲಿ ಸಮುದ್ರಗುಪ್ತನೆಂಬ ಭಿಕ್ಷುವು ತನ್ನ ಅಲೌಕಿಕ ಶಕ್ತಿಯನ್ನು ತೋರ್ಪಡಿಸಿ ಆಶ್ಚರ್ಯವಿಶ್ವಾಸಗಳು ಹುಟ್ಟುವಂತೆ ಮಾಡಿ ಬೌದ್ಧಧರ್ಮದ ಕಡೆಗೆ ಆತನ ಮನಸ್ಸನ್ನೆಳೆದುಕೊಂಡನು.” ಮಹಾವಂಶದಲ್ಲಿ † ಅಶೋಕ, ಆತನ ಪತ್ನಿ ಅಸಂಧಿಮಿತ್ರೆ, ನಿಗ್ರೋಧ, ಸಿಂಹಲರಾಜನಾದ ತಿಷ್ಯ ಇವರ ವಿಷಯವಾಗಿ ಒಂದು ವಿಚಿತ್ರವಾದ ಕಥೆಯುಂಟು:—“ಪೂರ್ವದಲ್ಲಿ ವಾರಾಣಸಿಯಲ್ಲಿ ಮೂರು ಜನ ಅಣ್ಣತಮ್ಮಂದಿರು ಜೀನುತುಪ್ಪದ ವ್ಯಾಪಾರವನ್ನು ಮಾಡುತ್ತಿದ್ದರು. ಅವರಲ್ಲೊಬ್ಬನು ಅಂಗಡಿಯಲ್ಲಿ ಕುಳಿತು ಮಾರುವವನು, ಉಳಿದ ಇಬ್ಬರು ಜೇನುತುಪ್ಪವನ್ನು ಸಂಗ್ರಹಿಸಿಕೊಂಡು ಬರುವವರು. ಒಬ್ಬ ಪ್ರತ್ಯೇಕ

+ ೧೩ನೆಯ ಗಿರಿಲಿಪಿ ಸಾಹಾರಾಜಗಿರಿ

† ಮಹಾವಂಶ ೫ನೆಯ ಅಧ್ಯಾಯ.

ಬುದ್ಧನು* ವಾರಾಣಸಿಗೆ ಪ್ರತಿದಿವಸ ಭಿಕ್ಷೆಗೆ ಹೋಗುತ್ತಿದ್ದನು. ಒಂದು ದಿವಸ ಆತನಿಗೆ ಜೇನತುಪ್ಪವು ಬೇಕಾಯಿತು. ಆದರೆ ವಾರಾಣಸಿಯಲ್ಲಿ ಅದು ಎಲ್ಲಿ ಸಿಗಬಹುದೆಂಬದು ಆತನಿಗೆ ಗೊತ್ತಿರಲಿಲ್ಲ. ರಾಜಮಾರ್ಗದಲ್ಲಿ ಹೋಗುವಾಗ ಆತನು, ದಾರಿಯಲ್ಲಿ ಒಬ್ಬ ತರುಣಿಯು ಬಾವಿಗೆ ನೀರಿಗೆ ಹೋಗುವದನ್ನು ಕಂಡು ಆಕೆಯ ಬಳಿಯಲ್ಲಿ ಜೇನತುಪ್ಪವನ್ನು ಬೇಡಿದನು. ಆ ತರುಣಿಯು ಭಿಕ್ಷುವು ಜೇನುತುಪ್ಪವನ್ನು ಬೇಡುತ್ತಿರುವದನ್ನು ತಿಳಿದು ಕೈಯಿಂದ ಪೇಟೆಯನ್ನು ತೋರಿಸಿ ಇತ್ತಕಡೆಗೆ ಪೇಟೆಯಿದೆ, ಅಲ್ಲಿ ಹೋಗಿರಿ, ಜೇನುತುಪ್ಪವು ಸಿಕ್ಕುವದು; ಎಂದು ಹೇಳಿದಳು. ಪ್ರತ್ಯೇಕಬುದ್ಧನು ಪೇಟೆಗೆ ಹೋಗಿ ಜೇನುತುಪ್ಪದ ಅಂಗಡಿಯನ್ನು ಕಂಡು ಅಂಗಡಿಕಾರನ ಬಳಿಯಲ್ಲಿ ಜೇನುತುಪ್ಪವನ್ನು ಬೇಡಿದನು.

ಅಂಗಡಿಕಾರನು ಜೇನುತುಪ್ಪ ಬೇಡುವವನು ಸಾಧುಪುರುಷನೆಂದು ತಿಳಿದು ಆತನಿಂದ ವರವನ್ನು ಪಡೆದುಕೊಳ್ಳುವ ಆಶೆಯಿಂದ ಆ ಪ್ರತ್ಯೇಕಬುದ್ಧನ ಭಿಕ್ಷಾಪಾತ್ರೆಯ ತುಂಬ ಜೇನುತುಪ್ಪವನ್ನು ದಾನಮಾಡಿದನು. ಆ ಪ್ರತ್ಯೇಕಬುದ್ಧನಿಗೆ ತಾನು ಬಯಸಿದ್ದಕ್ಕಿಂತ ಹೆಚ್ಚಿಗೆ ಜೇನುತುಪ್ಪವು ದೊರೆತದ್ದನ್ನು ನೋಡಿ ಮೈಮೇಲೆ ರೋಮಾಂಚಗಳೆದ್ದವು. ಆಗ ಅಂಗಡಿಕಾರನು ತಲೆವಾಗಿ—ತಾನು ಈ ಪುಣ್ಯದಿಂದ ಜಂಬೂದ್ವೀಪದ ಏಕಚ್ಛತ್ರಾಧಿಪತಿಯಾಗಬೇಕೆಂದೂ, ತನ್ನ ಆಧಿಪತ್ಯವು ಭೂಮಿಯ ಮೇಲೂ ಆಕಾಶದ ಮೇಲೂ ಸಹಸ್ರಯೋಜನಗಳವರೆಗೆ ನಡೆಯಬೇಕೆಂದೂ ಬೇಡಿಕೊಂಡನು. ಇಷ್ಟರಲ್ಲಿ ಉಳಿದ ಇಬ್ಬರು ಅಣ್ಣತಮ್ಮಂದಿರು ಅಲ್ಲಿಗೆ ಬಂದರು. ಅವರಲ್ಲಿ ಹಿರಿಯ ಅಣ್ಣನು ಪ್ರತ್ಯೇಕಬುದ್ಧನ ಕಮಂಡುಲು ಜೇನುತುಪ್ಪದಿಂದ ತುಂಬಿದ್ದನ್ನು ನೋಡಿ ಬಹಳ ಸಿಟ್ಟುಗೆದ್ದನು. ಆದರೆ ಜೇನುತುಪ್ಪ ಮಾರುವವನು–ನಾನು ಈ ಸಾಧುವಿಗೆ ದಾನಮಾಡಿರುವೆನು; ಬಂದ ಪುಣ್ಯದಲ್ಲಿ ನೀವೂ ಭಾಗಿಗಳು ಎಂದು ಅಣ್ಣನಿಗೆ ಹೇಳಿದನು. ಆದರೆ ಅಣ್ಣನು ಸಿಟ್ಟನ್ನು ತಾಳಲಾರದೆ—" ಬಹುಶಃ ಈ ಮನುಷ್ಯನು ಪತಿತನಾದ ಚಂಡಾಲನಾಗಿರಬೇಕು; ಯಾಕಂದರೆ ಚಂಡಾಲರೇ ಪೀತವಸ್ತ್ರಗಳನ್ನು ಧರಿಸುವರು " ಎಂದು ಅಂದನು. ನಡುವಿನವನು ಅಣ್ಣನ ಮಾತನ್ನು ಅನುಮೋದಿಸಿ—ಈ ವಂಚಕನಾದ ಭಂಡನನ್ನು ಮಹಾಸಾಗರದ ಆಚೆಗೆ ದಾಟಿಸತಕ್ಕದ್ದು ಎಂದು ಅಂದನು. ಆದರೆ ಚಿಕ್ಕವನು ಇಬ್ಬರನ್ನೂ ಸಮಾಧಾನಗೊಳಿಸಿ ಆ ಪ್ರತ್ಯೇಕಬುದ್ಧನ ಬಳಿಯಲ್ಲಿ ಬಹು ನಮ್ರತೆಯಿಂದ ವರವನ್ನು ಬೇಡಿದನು.

---

* ಪಾಲಿಭಾಷೆಯಲ್ಲಿ ಇವರಿಗೆ ಪಚ್ಚೇಕಬುದ್ಧ ಎಂದು ಅನ್ನುವರು ಮಹಾಯಾನ ಬೌದ್ಧಗ್ರಂಥದಲ್ಲಿ ನಿರ್ವಾಣಮಾರ್ಗಾನುಯಾಯಿಗಳಲ್ಲಿ ೩ ವರ್ಗಗಳುಂಟು. ಶ್ರಾವಕಬುದ್ಧರು, ಪ್ರತ್ಯೇಕಬುದ್ಧರು, ಸಮ್ಯಕ್ ಬುದ್ಧರು. ಯಾರು ಪರರ ಸಹಾಯವಿಲ್ಲದೆಯೆ ನಿರ್ವಾಣಲಾಭವನ್ನು ಮಾಡಿಕೊಳ್ಳಲು ಸಮರ್ಥರೋ ಅವರೇ ಪ್ರತ್ಯೇಕಬುದ್ಧರೆನಿಸಿಕೊಳ್ಳುವರು ಯಾರಿಗೂ ಉಪದೇಶಕೊಡುವ ಅಧಿಕಾರವು ಇವರಿಗೆ ಇಲ್ಲ. ಇವರು ತಮಗೆ ತಾನೇ ನಿರ್ವಾಣವನ್ನು ಸಂಪಾದಿಸುವರು. ಅದರಿಂದ ಇವರಿಗೆ ಪ್ರತ್ಯೇಕಬುದ್ಧರೆಂದೆನ್ನುವರು. ಪ್ರತ್ಯೇಕಬುದ್ಧರು ಈ ಜನ್ಮದಲ್ಲಿಯೇ ನಿರ್ವಾಣವನ್ನು ಹೊಂದುವರು. ಇವರು ಎಲ್ಲ ವಿಷಯಗಳಲ್ಲಿಯೂ ಸಮ್ಯಕ್‌ಬುದ್ಧರಿಗಿಂತ ಕೆಳಗಿನ ತರಗತಿಯವರು.

ಚಿಕ್ಕವನು ವರವ ಪಡೆದನು. ಇದನ್ನು ಕಂಡು ಅವರಿಬ್ಬರೂ ಪ್ರತ್ಯೇಕಬುದ್ಧನ ಬಳಿಯಲ್ಲಿ ತಮ್ಮ ಅಪರಾಧವನ್ನು ಕ್ಷಮಿಸಬೇಕೆಂದು ಬೇಡಿಕೊಂಡು ತಾವೂ ವರವನ್ನು ಬೇಡಿದರು. ಹಿರಿಯವನು ಮೋಕ್ಷವನ್ನು ಬೇಡಿದನು. ಬಳಿಕ ಪ್ರತ್ಯೇಕಬುದ್ಧನು ಸಂತೋಷದಿಂದ ತಿರುಗಿ ಬರುತ್ತಿರುವಾಗ ಮೊದಲು ಮಾರ್ಗವನ್ನು ತೋರಿಸಿದ ತರುಣಿಯು ಆತನಿಂದ ಎಲ್ಲ ವರ್ತಮಾನವನ್ನು ಕೇಳಿಕೊಂಡಳು; ಮತ್ತು ಆ ವ್ಯಾಪಾರಿಯು ಯಾವಾಗ ಜಂಬೂದ್ವೀಪದ ಅಧಿಪತಿಯಾಗುವನೋ ಆಗ ತಾನು ಆತನ ಮುಖ್ಯ ಪಟ್ಟದ ರಾಣಿಯಾಗಬೇಕೆಂದೂ, ತನ್ನ ಸೌಂದರ್ಯದಲ್ಲಿ ಸ್ವಲ್ಪವೂ ಕುಂದುಕೊರತೆಗಳಿರಬಾರದೆಂದೂ ವರವನ್ನು ಬೇಡಿಕೊಂಡಳು. ಪ್ರತ್ಯೇಕಬುದ್ಧನು ವರವನ್ನು ಕೊಟ್ಟು ಹೊರಟುಹೋದನು. ಜೇನುತುಪ್ಪ ಮಾರುವವನು ಮುಂದಿನ ಜನ್ಮದಲ್ಲಿ ಮಗಧಾಧಿಪತಿ ಅಶೋಕನಾಗಿ ಹುಟ್ಟಿದನು. ಅಶೋಕನ ಮಹಿಷಿಯಾದ ಅಸಂಧಿಮಿತ್ರೆಯೇ ಆ ತರುಣಿಯು. ಹಿರಿಯ ಅಣ್ಣನು ಪ್ರತ್ಯೇಕಬುದ್ಧನನ್ನು ಚಂಡಾಲನೆಂದು ತಿರಸ್ಕರಿಸಿದ್ದರಿಂದ ಆತನು ಚಂಡಾಲರ ಆಶ್ರಯದಲ್ಲಿ ಜನ್ಮಹೊಂದಿ ನಿಗ್ರೋಧನೆಂಬ ಹೆಸರಿನವನಾದನು. ಮತ್ತು ಮೋಕ್ಷದ ವರವನ್ನು ಬೇಡಿಕೊಂಡದ್ದರಿಂದ ಏಳೇ ವರ್ಷಗಳಲ್ಲಿ ಅರ್ಹತ್ಪದವನ್ನು ಹೊಂದಲು ಸಮರ್ಥನಾದನು. ನಡುವಿನವನು ಪ್ರತ್ಯೇಕಬುದ್ಧನನ್ನು ಸಮುದ್ರದಾಚೆಗೆ ಬಿಸುಟಬೇಕೆಂದು ಅಂದದರಿಂದ ಆತನು ಸಿಂಹಲಾಧಿಪತಿ ತಿಷ್ಯನಾದನು" ಈ ಕಥೆಯೆಲ್ಲ ಮುಂದಿನಕಾಲದ ಲೇಖಕರಿಂದ ಬರೆಯಲ್ಪಟ್ಟು ಪ್ರಚಲಿತವಾಗಿರುವದೆಂಬ ವಿಷಯದಲ್ಲಿ ಸಂಶಯವಿಲ್ಲ. ಏನೇ ಇರಲಿ, ಯಾವದರಿಂದ ಅಶೋಕಮಹಾರಾಜನ ಜೀವನದಲ್ಲಿಯೂ, ಚರಿತ್ರದಲ್ಲಿಯೂ, ರಾಜನೀತಿಯಲ್ಲಿಯೂ ಬದಲಾವಣೆಯುಂಟಾಯಿತೋ ಅದರ ನಿಜವಾದ ವಿವರಣವು ಎಲ್ಲಿಯೂ ದೊರೆಯುವದಿಲ್ಲ. ಅಶೋಕನ ತಂದೆಯಾದ ಬಿಂದುಸಾರನು ಹಿಂದು ಧರ್ಮದವನು. ೬೦ ಸಾವಿರ ಬ್ರಾಹ್ಮಣರು ಆತನ ಆಶ್ರಯದಲ್ಲಿದ್ದರು. ಅಶೋಕನು ಬೌದ್ಧ ಧರ್ಮವನ್ನು ಸ್ವೀಕರಿಸುವದಕ್ಕೆ ಮುಂಚೆ ಆತನೂ ಆ ಬ್ರಾಹ್ಮಣರಿಗೆ ಆಶ್ರಯ ಕೊಟ್ಟಿದ್ದನು. ಬೌದ್ಧಧರ್ಮವನ್ನು ಸ್ವೀಕರಿಸುವದಕ್ಕೆ ಮುಂಚೆ ಆತನು ಬೇಟೆಗೆ ಬಹಳವಾಗಿ ಮೆಚ್ಚಿದವನೂ, ಮಾಂಸಾಹಾರಿಯೂ ಆಗಿದ್ದನು. ಯುದ್ಧದಲ್ಲಿ ಗೆಲವು ಸಿಗಬೇಕೆಂದು ಕಲಿಂಗದೇಶವನ್ನು ಮುತ್ತಿದ್ದನು. ಆದರೆ ಕೊನೆಗೆ ಬೇಟೆಯ ಮೇಲಿನ ಪ್ರೀತಿಯೂ, ಜೀವಹಿಂಸಾಪ್ರವೃತ್ತಿಯೂ, ದೇಶವನ್ನು ಗೆಲ್ಲುವ ಆಕಾಂಕ್ಷೆಯೂ ಒಮ್ಮೆಲೆ ಹೇಗೆ ಇಲ್ಲದಂತಾದವು, ಜಗತ್ತಿನಲ್ಲಿ ಮೈತ್ರೀಧರ್ಮವನ್ನು ಪ್ರಚಾರಪಡಿಸುವ ಇಚ್ಛೆಯು ಹೇಗೆ ಉತ್ಪನ್ನವಾಯಿತು ಎಂಬ ಪ್ರಶ್ನೆಗಳಿಗೆ ಸಮಾಧಾನಕಾರಕವಾದ ಉತ್ತರಗಳು ದೊರೆಯುವದಿಲ್ಲ. ಯಾವನು ಯೌವನದ ಆರಂಭದಲ್ಲಿ ಅಸಾಧಾರಣವಾದ ಪರಾಕ್ರಮದಿಂದ ಭರತಖಂಡದ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ವಿಜಯಪತಾಕೆಯನ್ನು ಮೆರೆಯಿಸುವದಕ್ಕೆ ಸಮರ್ಥನಾದನೋ ಅವನೇ ಮುಂದೆ ಅದನ್ನೆಲ್ಲ ಬಿಟ್ಟು ಧರ್ಮದ ಮಹಿಮೆಯನ್ನು ಜಗತ್ತಿನಲ್ಲಿ ಪ್ರಚಾರಗೊಳಿಸುವ ಕೆಲಸದಲ್ಲಿ ಯಾಕೆ ತೊಡಗಿದನೆಂಬ ಪ್ರಶ್ನಕ್ಕೆ

ಐತಿಹಾಸಿಕರು ಮೌನವನ್ನವಲಂಬಿಸಿರುವರು. ಈ ಬದಲಾವಣೆಯು ಒಬ್ಬ ಬಾಲಭಿಕ್ಷುವಿನ ಉಪದೇಶದಿಂದಾಗಲಿ, ಅಲೌಕಿಕ ಶಕ್ತಿಯುಳ್ಳ ಒಬ್ಬ ಭಿಕ್ಷುವಿನ ಪ್ರಭಾವವನ್ನು ನೋಡಿದ್ದರಿಂದಾಗಲಿ, ಬುದ್ಧದೇವನ ಭವಿಷ್ಯವಾಣಿಯನ್ನು ಕೇಳಿದ್ದರಿಂದಾಗಲಿ, ಉಂಟಾಯಿತೆಂಬದು ವಿಚಾರಣೀಯವಾಗಿರುವದು. ಒಬ್ಬ ೭ ವರ್ಷದ ಬಾಲಸನ್ಯಾಸಿಯು ಧರ್ಮದ ತಾತ್ಪರ್ಯವನ್ನು ಚೆನ್ನಾಗಿ ಗ್ರಹಿಸಿ ಅರ್ಹತ್ಪದವನ್ನು ಹೊಂದಿದನೆಂಬದೂ, ಧರ್ಮೋಪದೇಶದಿಂದ ಅಶೋಕನಂಥ ರಾಜನು ಹೊಸ ಧರ್ಮವನ್ನು ಸ್ವೀಕರಿಸುವಂತೆ ಮಾಡಿದನೆಂಬದೂ ಎಷ್ಟುಮಟ್ಟಿಗೆ ನಿಜವಿರುವದೆಂಬದನ್ನು ನಿರ್ಣಯಿಸುವದು ಕಠಿಣವಾಗಿರುವದು.

ಐತಿಹಾಸಿಕವಿಚಾರವೆಂಬ ಒರೆಗಲ್ಲಿಗೆ ಹಚ್ಚಿನೋಡಿದರೆ ಈ ತರದ ಕಥೆಗಳಿಗೆ ಏನೂ ಬೆಲೆಯಿಲ್ಲ. ಅಂಥ ಅಲೌಕಿಕವ್ಯಾಪಾರದಿಂದ ಅಶೋಕನ ಮನಸ್ಸು ಎಳೆಯಲ್ಪಟ್ಟಿದ್ದರೆ ಅವನು ಅದನ್ನು ಬಹುಶಃ ಶಿಲಾಲಿಪಿಗಳಲ್ಲಿ ಬರೆದಿಡುತ್ತಿದ್ದನು. ಇನ್ನು ಮಹಾವಂಶವು ಒಂದು ಪ್ರಸಿದ್ಧ ಐತಿಹಾಸಿಕಗ್ರಂಥವು. ಇದರ ಪ್ರಾಮಾಣ್ಯವು ಬೇರೆ ಗ್ರಂಥಗಳಿಗಿಂತ ಹೆಚ್ಚಾಗಿರುವದೆಂಬದನ್ನು ಎಲ್ಲ ಇತಿಹಾಸಜ್ಞರು ಒಪ್ಪುವರು. ವಿಶೇಷವಾಗಿ ಸಿಂಹಲದ ಭಿಕ್ಷುಗಳು ಪ್ರಯತ್ನಪೂರ್ವಕವಾಗಿ ಈ ಗ್ರಂಥವನ್ನು ಕಾದಿಡುತ್ತ ಬಂದಿರುವರು. ಮಹಾವಂಶದಲ್ಲಿ ಬೆಳೆಸಿ ಹೇಳಿದ ಅಲೌಕಿಕಸಂಗತಿಗಳು ಇದ್ದರೂ ಅವುಗಳಲ್ಲಿ ಕೆಲವು ಮಟ್ಟಿಗೆ ಸತ್ಯವು ಬೆರೆತುಕೊಂಡಿರುವದೆಂಬ ವಿಷಯದಲ್ಲಿ ಸಂಶಯವಿಲ್ಲ. ಶ್ರಮಣನಾದ ನಿಗ್ರೋಧನು ೭ ವರ್ಷದವನಾಗಲಿ, ಇಲ್ಲವೆ ಆಗದಿರಲಿ ಅತನ ಉಪದೇಶವಾಣಿಯು ಅಶೋಕನ ಜೀವನದ ಮೇಲೆ ತನ್ನ ಕಾರ್ಯವನ್ನು ನಡೆಯಿಸಿತೆಂಬದನ್ನು ನಂಬಬಹುದಾಗಿದೆ. ಏನೇ ಇರಲಿ; ಅಶೋಕನು ಈ ವಿಷಯದಲ್ಲಿ ತಾನೇ ಏನಾದರೂ ಉಲ್ಲೇಖಿಸಿರುವನೋ ಎಂಬದನ್ನು ಈಗ ವಿಚಾರಿಸಬೇಕಾಗಿರುವದು. ೧೩ನೆಯ ಶಿಲಾಲಿಪಿಯನ್ನು ಓದಿನೋಡಿದರೆ ಕಲಿಂಗವಿಜಯದಲ್ಲಿ ಅಶೋಕನು ನೋಡಿದ ರೋಮಾಂಚಜನಕವಾದ ಶೋಚನೀಯ ಪ್ರಸಂಗದಿಂದಲೇ ಆತನು ಈ ಪವಿತ್ರಧರ್ಮವನ್ನು ಗ್ರಹಿಸಿದನೆಂದು ಗೊತ್ತಾಗುವದು. ಅವನು ಯಾವ ಉಪದೇಶಕನ ಉಲ್ಲೇಖವನೂ ಮಾಡಿಲ್ಲ. ಈ ಸಮಯದಲ್ಲಿ ಬೌದ್ಧಧರ್ಮವೂ, ಜೈನಧರ್ಮವೂ ನಾಲ್ಕೂ ದಿಕ್ಕಿಗೆ ಹಬ್ಬಿದ್ದವು. ಭಿಕ್ಷುಗಳು, ಆಜೀವ*ಕರು ಇವರ ಪವಿತ್ರಜೀವನಮಾರುತವು ಸುತ್ತಲೂ ನಿರ್ಮಲವಾದ ಸುಗಂಧವನ್ನು ಬೀರುತ್ತಿತ್ತು. ವಿಶೇಷವಾಗಿ ಈ ಕಾಲಕ್ಕೆ ಬೌದ್ಧಭಿಕ್ಷುಗಳು ಬುದ್ಧದೇವನ ಪವಿತ್ರವಾದ ಮಹಿಮೆಯನ್ನೂ ಅತನ ಸಮಸ್ತ ಪ್ರಾಣಿವಿಷಯಕ ದಯಾ-ಪ್ರೇಮಗಳನ್ನೂ ಜನಸಾಮಾನ್ಯದಲ್ಲಿ ಪ್ರಚಾರಪಡಿಸುತ್ತಿದ್ದದರಿಂದ ಸಮಾಜವೆಲ್ಲ ಒಂದು ತರದ ದೈವಿಕಶಕ್ತಿಯಿಂದ ಸ್ಫೂರ್ತಿಗೊಳ್ಳುತ್ತಿತ್ತು. ಈ ಸಂಗತಿಗಳೆಲ್ಲ ಅಶೋಕನ ಮನಸ್ಸಿನಲ್ಲಿ ಬೌದ್ಧಧರ್ಮದ ಮಹಿಮೆಯನ್ನು ಮೂಡಿಸ ತೊಡಗಿರಬಾರದೇಕೆ? ಕಲಿಂಗವಿಜಯವಾದ ತರುವಾಯ ಯಾವರೀತಿಯಿಂದಲೇ ಆಗಲಿ,

* ಜೈನ ಸಂಪ್ರದಾಯದ ಸನ್ಯಾಸಿಗಳು.

ಅಶೋಕನು ಅಹಿಂಸಾಪ್ರಧಾನವಾದ ಬೌದ್ಧಧರ್ಮದ ಉಪದೇಶವನ್ನು ಹೊಂದಿ ಆ ಹೊಸಧರ್ಮದ ಪರಿಶೀಲನದಲ್ಲಿ ವಿಶೇಷವಾದ ಆಗ್ರಹದಿಂದ ತೊಡಗಿದನೆಂದು ತೋರುವದು.

ಮಹಾವಂಶದಲ್ಲಿ ಹೇಳಿರುವದೇನಂದರೆ—ನಿಗ್ರೋಧ ಶ್ರಮಣನಿಂದ ಬೌದ್ಧಧರ್ಮ ದೀಕ್ಷೆಯನ್ನು ಸ್ವೀಕರಿಸಿ ಅಶೋಕನು ೬೦ ಸಾವಿರ ಭಿಕ್ಷುಕರನ್ನು ಕರೆಯಿಸಿ ಪಾಟಲಿಪುತ್ರದಲ್ಲಿ ಒಂದು ವಿಶಾಲವಾದ ಮಠವನ್ನು ಸ್ಥಾಪಿಸಿದನು. ಅದಕ್ಕೆ ಅಶೋಕಾರಾಮವೆಂದು ಹೆಸರಿತ್ತು.× ಅಶೋಕನು ಪ್ರಾಯಶಃ ಅರ್ಹಂತರು, ಮತ್ತು ಭಿಕ್ಷುಗಳು ಇವರ ಪವಿತ್ರವಾದ ಸಹವಾಸಕ್ಕೋಸ್ಕರ ಅಶೋಕಾರಾಮಕ್ಕೆ ಹೋಗುತ್ತಿದ್ದನು. ಕ್ರಮದಿಂದ ಆತನ ಹೃದಯದಲ್ಲಿ ಈ ಹೊಸಧರ್ಮದ ವಿಷಯಕ್ಕೆ ಪ್ರಬಲವಾದ ಅನುರಾಗವುಂಟಾಯಿತು. ಒಂದು ದಿವಸ ಆತನು ಅಲ್ಲಿ ಇದ್ದ ಎಲ್ಲ ಭಿಕ್ಷುಗಳಿಗೆ ಒಂದುಕಡೆಗೆ ಒಟ್ಟುಗೂಡುವದಕ್ಕೆ ಪ್ರಾರ್ಥಿಸಿದನು. ಅಶೋಕಾರಾಮದ ವಿಸ್ತಾರವಾದ ವಿಹಾರದಲ್ಲಿ ೬೦ ಸಾವಿರ ಭಿಕ್ಷುಗಳು ಒಟ್ಟುಗೂಡಿದರು. ಅಶೋಕನು ಅವರನ್ನು ಕುರಿತು ವಿನಯದಿಂದ ಈ ಮೇರೆಗೆ ಪ್ರಶ್ನ ಮಾಡಿದನು:—ಮಹಾತ್ಮರೇ, ಬುದ್ಧದೇವನು ತೋರಿಸಿದ ಧರ್ಮವು ಯಾವದು? ಆತನು ಮಾಡಿದ ಉಪದೇಶಗಳು ಎಷ್ಟು? ಭರತಖಂಡದ ಯಾವ ಯಾವ ಭಾಗಗಳಲ್ಲಿ ಆ ಧರ್ಮವು ಹಬ್ಬಿರುವದು? ಆಗ ಸಂಘನಾಯಕನಾದ ಮೌದ್ಗಲಿಪುತ್ರ ತಿಷ್ಯನು ಈ ಪ್ರಶ್ನಗಳಿಗೆ ಉತ್ತರಗಳನ್ನು ಹೇಳಿದನು:—ತಥಾಗತನ ಉಪದೇಶಗಳ ಸಂಖ್ಯೆಯು ಅಪರಿಮಿತವಾದದ್ದು; ಆದರೆ ಮಾನವರ ಕಲ್ಯಾಣಕ್ಕಾಗಿ ೮೪೦೦ ಉಪದೇಶಗಳು ಸಂಗೃಹೀತವಾಗಿ ಪ್ರಚಾರ ಪಡಿಸಲ್ಪಟ್ಟಿವೆ. ಆ ಬಳಿಕ ಮೌದ್ಗಲಿಪುತ್ರ ತಿಷ್ಯನು ಸರಿಯಾಗಿ ಬೌದ್ಧಧರ್ಮದ ಸ್ವರೂಪವನ್ನು ವಿವರಿಸಿದನು. ಅಶೋಕನು ಆತನ ವಾಕ್ಸುಧೆಯನ್ನು ಸಾವಧಾನವಾಗಿ ಪಾನಮಾಡಹತ್ತಿದನು. ಬುದ್ಧದೇವನು ತೋರಿಸಿದ ಉದಾರವಾದ ಧರ್ಮತತ್ವಗಳನ್ನು ಕೇಳಿ ಅಶೋಕನು ಸಂತುಷ್ಟನಾದನು. ಆತನ ಮಾನಸಪಟದಲ್ಲಿ ನಿರ್ವಾಣಧ್ಯಾನಮಗ್ನನಾದ ಶಾಕ್ಯ ರಾಜಪುತ್ರನ ಉಜ್ವಲವಾದ ಚಿತ್ರವು ಮೂಡಿತು.

ತ್ರಿರತ್ನದ+ ಸ್ವರೂಪವನ್ನು ಶ್ರವಣಮಾಡುತ್ತ ಮಾಡುತ್ತ ಆತನ ಹೃದಯವು ಕರಗಿತು. ನೂತನವಾದ ಭಕ್ತಿರಸವು ಆತನ ಹೃದಯದಲ್ಲಿ ಪ್ರವಹಿಸತೊಡಗಿತು. ಈ ನೂತನಧರ್ಮವು ಸತ್ಯವೆಂದು ಆತನಲ್ಲಿ ದೃಢವಾದ ನಂಬಿಗೆ ಹುಟ್ಟಿತು. ಅಂದಿನಿಂದಾರಂಭಿಸಿ ಅಶೋಕನು ಬುದ್ಧ, ಧರ್ಮ, ಸಂಘ ಎಂಬೀ ತ್ರಿರತ್ನದ ಆಶ್ರಯವನ್ನು ಹೊಂದಿದನು. ಬುದ್ಧದೇವನ ೮೪ ಸಾವಿರ ಉಪದೇಶಗಳು ಲೋಕಪ್ರಸಿದ್ಧವಿದ್ದವು. ಈಗ ಅಶೋಕನು ಲೋಕಕಲ್ಯಾಣಕ್ಕಾಗಿ ತನ್ನ ಸಾಮ್ರಾಜ್ಯದಲ್ಲಿ ೮೪ ಸಾವಿರ ಚೈತ್ಯಗಳನ್ನು ನಿರ್ಮಿಸುವ ಸಂಕಲ್ಪಮಾಡಿದನು. ಅಶೋಕನ ಈ ಅಭೂತಪೂರ್ವವಾದ ಸಂಕಲ್ಪವನ್ನು

× ಮಹಾವಂಶ. + ಬುದ್ಧ, ಧರ್ಮ, ಸಂಘ.

ಕೇಳಿ ಅಲ್ಲಿ ನೆರೆದ ಭಿಕ್ಷುಸಮುದಾಯವೆಲ್ಲ ಆನಂದಸಾಗರದಲ್ಲಿ ಓಲಾಡಿತು. ಮೌದ್ಗಲಿಪುತ್ರನಾದ ತಿಷ್ಯನು—ಮಹಾರಾಜರೆ, ಬುದ್ಧದೇವನ ಪರಿನಿರ್ವಾಣದ ತರುವಾಯ ಮಗಧಚಕ್ರವರ್ತಿಯಾದ ಅಜಾತಶತ್ರುವು ಆತನ ಶರೀರ* ಧಾತುಗಳನ್ನು ರಾಜಗೃಹದಲ್ಲಿ ಸಮಾಧಿಮಾಡಿ ಕಾದಿಟ್ಟಿರುವನು. ತಾವು ಕಟ್ಟಿಸಬೇಕೆಂದು ಸಂಕಲ್ಪಮಾಡಿದ ಚೈತ್ಯಗಳಲ್ಲಿ ಅವುಗಳ ಅಂಶಗಳನ್ನು ಸ್ಥಾಪಿಸಿದರೆ ಮಾನವಜಾತಿಯ ಕಲ್ಯಾಣವಾಗುವದು ಎಂದು ಹೇಳಿದನು. ಅಶೋಕನು ಮಹಾಸ್ಥವಿರನ ಅಪ್ಪಣೆಯನ್ನು ತಲೆವಾಗಿ ಸ್ವೀಕರಿಸಿ ಶರೀರಧಾತುಗಳನ್ನು ಹುಡುಕಿ ತರುವದಕ್ಕೋಸ್ಕರ ರಾಜಗೃಹಕ್ಕೆ ಜನರನ್ನು ಕಳುಹಿದನು. ಮತ್ತು ಲಳ ಸಾವಿರ ಚೈತ್ಯಗಳನ್ನು ಕಟ್ಟುವದಕ್ಕೆ ಶಿಲ್ಪಿಗಳಿಗೆ ಅಪ್ಪಣೆಯಿತ್ತನು. ಇತ್ತ ರಾಜಗೃಹದಲ್ಲಿ ಬುದ್ಧನ ಸಮಾಧಿಸ್ಥಳವನ್ನು ನಾವಧಾನವಾಗಿ ಹುಡುಕಿದರೂ ಎಲ್ಲ ಶ್ರಮವು ವ್ಯರ್ಥವಾಯಿತು. ಇತ್ತ ಲಳ ಸಾವಿರ ಚೈತ್ಯಗಳು ನಿರ್ಮಿಸಲ್ಪಟ್ಟವು. ಆದರೆ ಶರೀರಧಾತುಗಳು ಇನ್ನೂ ಸಿಗಲಿಲ್ಲ. ಬಳಿಕ ಅಶೋಕನು ಪಾಟಲಿಪುತ್ರದಲ್ಲಿ ಆನೆಯ ಮೇಲೆ ಸಹಸ್ರ ಸುವರ್ಣಮುದ್ರೆಗಳನ್ನು ಹೇರಿಸಿ "ಯಾವನು ಅಜಾತಶತ್ರು ಚಕ್ರವರ್ತಿಯು ಸಮಾಧಿಮಾಡಿದ ಬುದ್ಧಶರೀರಧಾತುಗಳನ್ನು ಹುಡುಕಿಕೊಡುವನೋ ಇಲ್ಲವೆ ಅವುಗಳ ಸ್ಥಳವನ್ನು ತೋರಿಸುವನೋ ಅವನು ಈ ಪಾರಿತೋಷಿಕವನ್ನು ಹೊಂದುವನು." ಎಂದು ಡಂಗುರ ಹೊಡೆಯಿಸಿದನು. ೭ನೆಯ ದಿವಸ ಒಬ್ಬ ಭಿಕ್ಷುಣಿಯು ಆ ಆನೆಯನ್ನು ಮುಟ್ಟಿದಳು. ರಾಜಕೀಯ ಅಧಿಕಾರಿಗಳು ಅವಳನ್ನು ಸಮ್ಮಾನಪೂರ್ವಕವಾಗಿ ಅರಸನ ಬಳಿಗೆ ಕರೆದೊಯ್ದರು. ಆ ಭಿಕ್ಷುಣಿಯು ಮಹಾರಾಜರನ್ನು ಸಂಬೋಧಿಸಿ ಮಹಾರಾಜರೇ, ನಾನು ಆ ಪವಿತ್ರಸ್ಥಾನವನ್ನು ಬಲ್ಲೆನು; ಆ ಸ್ಥಾನವನ್ನು ಅಗೆಯಿಸಿ ತಾವು ಆ ಪವಿತ್ರಾಸ್ಥಿಗಳನ್ನು ಹೊರದೆಗೆಯಬಹುದು ಎಂದು ಹೇಳಿದಳು. ರಾಜನು ಆ ಕ್ಷಣಕ್ಕೆ ಆ ಭಿಕ್ಷುಣಿಯೊಡನೆ ಜನರನ್ನು ಕಳುಹಿದನು. ಬಳಿಕ ಶರೀರಾಸ್ಥಿಗಳು ದೊರೆತವೆಂಬ ಸುದ್ದಿಯು ಬರಲು ಕೇಳಿ ಅಶೋಕನಿಗೆ ಪರಮಾನಂದವಾಯಿತು. ಮತ್ತು ಎಲ್ಲ ಚೈತ್ಯಗಳಲ್ಲಿ ಅವುಗಳನ್ನು ಸಮವಾಗಿ ವಿಭಾಗಿಸಿ ಸ್ಥಾಪಿಸಿದನು. ಚೈತ್ಯಗಳ ಬಳಿಯಲ್ಲಿ ಜಲಾಶಯಗಳನ್ನು ಕಟ್ಟಿಸಿದನು. ಈ ಲಳ ಸಾವಿರ ಚೈತ್ಯಗಳನ್ನೂ ವಾಪೀಕೂಪಗಳನ್ನೂ ಕಟ್ಟಿಸುವದು ಮುಗಿದ ಬಳಿಕ ಅವುಗಳನ್ನು ಲೋಕಕಲ್ಯಾಣಕ್ಕೋಸ್ಕರ ಅರ್ಪಣಮಾಡುವದಕ್ಕೆ ೭ ದಿವಸಗಳ ಒಂದು ಮಹೋತ್ಸವವನ್ನು † ಮಾಡಬೇಕೆಂದು

---

* ಅಸ್ಥಿ.

† ಮಹಾವಂಶದಲ್ಲಿ ಕೇವಲ ಚೈತ್ಯಗಳ ಉಲ್ಲೇಖವು ಮಾತ್ರ ಉಂಟು ಬಾವಿ, ಇಲ್ಲವೆ ಬೇರೆ ಜಲಾಶಯಗಳ ಉಲ್ಲೇಖವಿಲ್ಲ. ಆದರೆ ಬೇರೆ ವರ್ಣನೆಗಳಲ್ಲಿ ಬಾವಿ, ಮತ್ತು ಬೇರೆ ಜಲಾಶಯಗಳನ್ನು ಕಟ್ಟಿಸಿದ್ದರ ಉಲ್ಲೇಖವು ಕಂಡುಬರುವದು. ಮಹಾವಂಶದ ಮತದಂತೆ ಈ ಉತ್ಸವವು ೭ ದಿವಸಗಳವರೆಗೆ ಇತ್ತು. ಕೆಲವು ಕಡೆಯಲ್ಲಿ ಈ ಉತ್ಸವವು ೭ ತಿಂಗಳು ೭ ದಿವಸಗಳ ವರೆಗೆ ಇತ್ತೆಂದು ಹೇಳಿದೆ. ಮಹಾವಂಶದಲ್ಲಿ ಈ ಉತ್ಸವಕ್ಕೆ ದೀಪೋತ್ಸವವೆಂದು ಹೇಳಿದೆ.

ಅರಸನು ಸಂಕಲ್ಪಮಾಡಿದನು. ಆದರೆ ದುಷ್ಟನಾದ ಮಾರನು ಪ್ರತಿಬಂಧಕನಾಗಿ ಕೊನೆಯಲ್ಲಿ ಉತ್ಸವದ ಫಲವನ್ನೆಲ್ಲ ವ್ಯರ್ಥಮಾಡಿಯಾನೆಂದು ತಿಳಿದು ಅತನು ಉಪಗುಪ್ತನೆಂಬ ಸಾಧುವಿಗೆ ಶರಣುಹೋದನು. ಮತ್ತು ಮಹಾವೈಭವದಿಂದ ಅತನನ್ನು ಮಥುರೆಯಿಂದ ನೌಕೆಯ ಮೇಲೆ ಪಾಟಲಿಪುತ್ರಕ್ಕೆ ಕರೆಯಿಸಿದನು. ಮಾರನು ಉತ್ಸವವನ್ನು ಕೆಡಿಸುವದಕ್ಕೆ ತೊಡಗಿದ್ದನೆಂದೂ, ಅಸಾಧಾರಣ ಬುದ್ಧಿಶಕ್ತಿಸಂಪನ್ನನಾದ ಉಪಗುಪ್ತನು ದೈವಿಕ ಶಕ್ತಿಯ ಪ್ರಭಾವದಿಂದ ಮಾರನನ್ನು ಸಂಪೂರ್ಣವಾಗಿ ಓಡಿಸಿದನೆಂದೂ ಪ್ರವಾದವುಂಟು. ಲೋಕಪಂಚತಿ§ ಎಂಬ ಒಂದು ಪಾಲೀಗ್ರಂಥದಲ್ಲಿ ಉಪಗುಪ್ತನು ಮಾರನೊಡನೆ ಮಾಡಿದ ಈ ಸಂಗ್ರಾಮದ ಸವಿಸ್ತರವಾದ ವರ್ಣನೆಯುಂಟು. ಬ್ರಹ್ಮದೇಶದಲ್ಲಿ ಪ್ರಚಲಿತವಾದ ಈ ಉಪಾಖ್ಯಾನದಿಂದ ತಿಳಿಯುವದೇನಂದರೆ—ಉಪಗುಪ್ತನು ಒಬ್ಬ ಮಹಾಸ್ಥವಿರ ಭಿಕ್ಷುವಾಗಿದ್ದನು. ಅತನ ಕೀರ್ತಿಯು ನಾಲ್ಕೂ ದಿಕ್ಕುಗಳಲ್ಲಿ ಹಬ್ಬಿತ್ತು. ಸಂಘವು ಅತನಿಗೆ ಯೋಗ್ಯವಾದ ಸಮ್ಮಾನವನ್ನು ತೋರಿಸಿ ಅಗ್ರಸ್ಥಾನವನ್ನು ಕೊಟ್ಟಿತ್ತು. ಅಶೋಕನು ಅತನ ಪವಿತ್ರವಾದ ಸಂಗವನ್ನು ಹೊಂದಿ ಉಪಕೃತನಾಗಿದ್ದನು.

೧೦ನೆಯ ಅಧ್ಯಾಯ.

೩ನೆಯ ಬೌದ್ಧಧರ್ಮಮಹಾಸಭೆ.

ಧರ್ಮಮಹಾಸಭೆಯು ಅಶೋಕನ ಕಾಲದಲ್ಲಿ ಒದಗಿದ ಒಂದು ಮುಖ್ಯ ವಿಷಯವು. ಪುಣ್ಯಕ್ಷೇತ್ರವೆನಿಸಿದ ಭರತಖಂಡವು ಪ್ರಾಚೀನಕಾಲದಿಂದಲೂ ಧರ್ಮಕ್ಕೆ ಲೀಲಾಭೂಮಿಯು. ವೈದಿಕಯುಗದಲ್ಲಿ ದೃಶದ್ವತೀ-ಸಿಂಧು ನದಿಗಳ ತೀರದಲ್ಲಿ ವಸಿಷ್ಠ ವಾಮದೇವ ಮೊದಲಾದ ಮಹರ್ಷಿಗಳು ಗಂಭೀರಸ್ವರದಿಂದ ಯಾವವಾಗಿ ಗಾಯನವನ್ನು ಮಾಡಿದರೋ ಆ ಗಾನಮಯವೇದಧ್ವನಿಯಿಂದ ಶಬ್ದಾಯಮಾನವೂ, ಧರ್ಮಾಚಾರ್ಯರ ಪಾದಧೂಲಿಯಿಂದ ಪವಿತ್ರವಾಗಿಯೂ ಇರುವ ಭರತಭೂಮಿಯು ಈಗಲೂ ಜಗತ್ತಿನಲ್ಲಿ ಮುಖ್ಯ ತೀರ್ಥವೆನಿಸಿರುವದು. ಸೌಂದರ್ಯಶಾಲಿನಿಯಾದ ಪ್ರಕೃತಿದೇವಿಯ ಲೀಲಾಸ್ಥಾನವೆನಿಸಿದ ಭರತಖಂಡದ ಮನೋಹರವಾದ ಪ್ರಾಕೃತಿಕ ದೃಶ್ಯದಿಂದ ಮನುಷ್ಯರ ಚಿತ್ತವು ಸಹಜವಾಗಿಯೇ ಮೋಹಿತವಾಗುವದು. ಉತ್ತರ ದಿಕ್ಕಿನಲ್ಲಿ ಶುಭ್ರವಾದ ಹಿಮಕಿರೀಟವನ್ನು ಧರಿಸಿದ ಪರ್ವತರಾಜನು ತನ್ನ ಅನಂತವಾದ ಔನ್ನತ್ಯದಿಂದ ಆಕಾಶವನ್ನು ಸ್ಪರ್ಶಮಾಡುತ್ತಿರುವನು. ಅತನ ಪಾದದೇಶದಲ್ಲಿ ತೃಣಾಚ್ಛಾದಿತವಾದ ಶ್ಯಾಮಲಪ್ರದೇಶವು ಫಲಪುಷ್ಪಗಳಿಂದ ಸುಶೋಭಿತವಾಗಿ ಸಹೃದಯರಾದ ಪ್ರೇಕ್ಷ

§ Legered of Upagupta, Buddhism Vol. I. No. 2.

ಕರ ಸ್ಮೃತಿಪಟದಲ್ಲಿ ಮನೋಹರವಾದ ಚಿತ್ರವನ್ನು ಮೂಡಿಸುವದು. ಸರ್ವೋತ್ಕೃಷ್ಟವಾದ ಈ ಸೌಂದರ್ಯದಲ್ಲಿ ನಡುನಡುವೆ ನೂರಾರು ನದಿಗಳ ಮಂಜುಲನಾದವು ಪ್ರಾಕೃತಿಕ ಸೌಂದರ್ಯದ ಸಂಗೀತದಲ್ಲಿ ಮಿಶ್ರವಾಗಿ ಮಾನವಹೃದಯದಲ್ಲಿ ಭಾವತರಂಗಗಳ ಮೇಲೆ ಭಾವತರಂಗಗಳನ್ನುಂಟುಮಾಡುತ್ತಿರುವದು. ಸರ್ವಜನಮನೋಹರವಾದ ಭರತಖಂಡದ ಈ ಭಾವಪ್ರವಾಹವು ಬಹುಕಾಲದಿಂದ ಪ್ರವಹಿಸುತ್ತಿರುವದು. ಶಾಕ್ಯಸಿಂಹನು ಅವಿರ್ಭವಿಸಲು ಸಮಗ್ರಭರತಖಂಡದಲ್ಲಿ ಧರ್ಮದ ಒಂದು ಆಂದೋಲನವು ಆರಂಭವಾಯಿತು. ಸರ್ವಸಂಗತ್ಯಾಗಿಯೂ, ಉದಾಸೀನನೂ ಆದ ಆ ರಾಜಪುತ್ರನ ವೈರಾಗ್ಯಕಥೆಯಿಂದ ಎಲ್ಲರೂ ಬೆರಗುವಡೆದುಹೋದರು. ಆ ಮಹಾಪುರುಷನು ಪ್ರವರ್ತಿಸಿದ ಧರ್ಮದ ಸಂಕ್ಷಿಪ್ತ ಇತಿಹಾಸವು ಪಾತಕರ ಅವಗತಿಗಾಗಿ ಕೆಳಗೆ ಬರೆಯಲ್ಪಡುವದು.

ಉರುಬಿಲ್ವದ ಬೋಧಿದ್ರುಮದ ಕೆಳಗೆ ಶಾಕ್ಯಸಿಂಹನು ಯಾವ ಮಹಾಸತ್ಯವನ್ನು ಕಂಡುಹಿಡಿದನೋ ಅದನ್ನು ಆತನು ೩೫ ವರ್ಷಕಾಲ ಭರತಖಂಡದಲ್ಲಿ ಮನೆಮನೆಗೆ ಹೋಗಿ ಪ್ರಚಾರಪಡಿಸಿದ ತರುವಾಯ ಕಾಶೀ ಕ್ಷೇತ್ರಕ್ಕೆ ಬಂದನು. ವೈಶಾಖಪೌರ್ಣಿಮೆಯ ಉಜ್ವಲಚಂದ್ರಕಿರಣಗಳಿಂದ ಕಂಗೊಳಿಸುವ ರಾತ್ರಿಯಲ್ಲಿ, ಕಾಶೀನಗರದ ಸಾಲವೃಕ್ಷಗಳ ಕುಂಜದಲ್ಲಿ ಜಗಜ್ಜ್ಯೋತಿಯಾದ ಬುದ್ಧದೇವನು ಮಹಾಪರಿನಿರ್ವಾಣವನ್ನು ಹೊಂದಿದನು. ಅಸಂಖ್ಯ ಸಾಧುಗಳು, ಬ್ರಾಹ್ಮಣರು, ಕ್ಷತ್ರಿಯರು ವೈಶ್ಯರು, ಶೂದ್ರರು ಈ ಮಹಾಸಮಾಧಿಯ ದರ್ಶನಕ್ಕಾಗಿ ಕೂಡಿದ್ದರು. ಮಹಾಕಾಶ್ಯಪನೊಡನೆ ೭ ಲಕ್ಷ ಬೌದ್ಧ ಭಿಕ್ಷುಗಳು ಶೋಕವಿಹ್ವಲರಾಗಿ ಅಲ್ಲಿಗೆ ಬಂದಿದ್ದರೆಂದೂ, ಮಹಾಪರಿನಿರ್ವಾಣವಾದ ಬಳಿಕ ಬುದ್ಧಶಿಷ್ಯರು ಮಹಾಕಾಶ್ಯಪನನ್ನು ತಮ್ಮ ನಾಯಕನನ್ನಾಗಿ ಮಾಡಿಕೊಂಡರೆಂದೂ ಹೇಳಲ್ಪಟ್ಟಿದೆ. ಸ್ಥವಿರ-ಕಾಶ್ಯಪನು ಬುದ್ಧದೇವನ ಅತ್ಯಂತ ಪ್ರೀತಿಯ ಶಿಷ್ಯರಲ್ಲೊಬ್ಬನು. ಬುದ್ಧದೇವನು ತನ್ನ ಆ ಪ್ರೀತಿಯ ಶಿಷ್ಯನಿಗೆ ತಾನು ಧರಿಸಿದ ಗೈರಿಕವಸ್ತ್ರಗಳನ್ನು ಕೊಟ್ಟು ಶಿಷ್ಯರಲ್ಲಿ ಆತನಿಗೆ ಮುಖ್ಯತೆಯನ್ನುಂಟುಮಾಡಿದ್ದನು. ಮತ್ತು ಆತನಿಗೇ ತನ್ನ ತರುವಾಯ ಧರ್ಮಪ್ರಸಾರಭಾರವನ್ನು ಅರ್ಪಿಸಿದ್ದನು.

ಬುದ್ಧದೇವನು ದೇಹವಿಟ್ಟಬಳಿಕ ಆತನ ಅಂತ್ಯೇಷ್ಟಿಯನ್ನು ಮುಗಿಸಿ ಬುದ್ಧ ಶಿಷ್ಯರು ಆತನ ಭಸ್ಮಾಸ್ಥಿಗಳನ್ನು ಹಲವು ಸಳಗಳಿಗೆ ಕಳುಹಿಸಿಕೊಟ್ಟರು. ಮಹಾಕಾಶ್ಯಪನು ಗುರುವಿನ ಅಪ್ಪಣೆಯನ್ನು ಸ್ಮರಿಸಿ ತನ್ನ ಮೇಲೆ ದೊಡ್ಡ ಭಾರವಿರುವದೆಂಬದನ್ನು ಅರಿತುಕೊಂಡನು. ಯಾಕಂದರೆ ಬುದ್ಧದೇವನು ಆತನಿಗೆ ಬೌದ್ಧಧರ್ಮಪ್ರಸಾರಮಾಡುವ ಭಾರವನ್ನು ಒಪ್ಪಿಸಿಹೋಗಿದ್ದನು. ಶಾಕ್ಯಸಿಂಹನು ಮಾಡಿದ ಅಮೃತಸಮಾನವಾದ ಉಪದೇಶಗಳು ಮುಂದಿನ ಕಾಲದಲ್ಲಿ ಮಾನವರ ಕಲ್ಯಾಣಕ್ಕಾಗಿ ಗ್ರಂಥರೂಪವಾಗಿ ಇರಬೇಕೆಂಬ ಉದ್ದೇಶದಿಂದ ಮಹಾಕಾಶ್ಯಪನು ಐನೂರುಜನ ವಾಸನಾರಹಿತರಾದ ಭಿಕ್ಷುಗಳಿಗೆ ಒಟ್ಟುಗೂಡುವದಕ್ಕೆ ಹೇಳಿಕಳುಹಿದನು. ಭಿಕ್ಷುಗಳೆಲ್ಲ ಒಟ್ಟುಗೂಡಿದ ಬಳಿಕ ಮಹಾ

ಸ್ಥವಿರನಾದ ಕಾಶ್ಯಪನು ಅವರನ್ನು ಕುರಿತು—ಬುದ್ಧದೇವನು ಪ್ರಚಾರಪಡಿಸಿದ ಧರ್ಮವು ಜಗತ್ತಿನಲ್ಲಿ ಹಬ್ಬುವದಕ್ಕೂ ಸಮಗ್ರ ಮಾನವಸಮಾಜದ ಕಲ್ಯಾಣಕ್ಕಾಗಿ ಅದನ್ನು ವಿಕಾರಹೊಂದದಂತೆ ಕಾಪಾಡುವದಕ್ಕೂ ಯಾವ ಉಪಾಯಗಳನ್ನು ಮಾಡಬೇಕೆಂಬ ದನ್ನು ಈಗ ನಿಶ್ಚಯಿಸಿರಿ ಎಂದು ಹೇಳಿದನು. ಬಳಿಕ ಭಿಕ್ಷುಗಳಲ್ಲಿ *ಅರ್ಹತ್ಪದವನ್ನು ಹೊಂದಿದವರು ಈ ಮಹಾಕಾರ್ಯವನ್ನು ನೆರವೇರಿಸಿರೆಂದು ಹೇಳಿ ಅವರನ್ನು ರಾಜಗೃಹಕ್ಕೆ ಕಳುಹಿದನು. ಆ ಸ್ಥಳದಲ್ಲಿಯೇ ‡ವರ್ಷಾವಾಸವನ್ನು ಮುಗಿಸಬೇಕೆಂದು ಅವರು ಮೊದಲು ಆಲೋಚಿಸಿದ್ದರು. ಮತ್ತು ವರ್ಷಾವಾಸದ ಕಾಲದಲ್ಲಿಯೇ ಎಲ್ಲರೂ ಸೇರಿ ಮಹಾಕಾಶ್ಯಪನ ಉದ್ದೇಶವನ್ನು ಕೊನೆಗಾಣಿಸಬೇಕೆಂದು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದರು. ಬುದ್ಧದೇವನ ಅತ್ಯಂತ ಪ್ರೀತಿಯ ಶಿಷ್ಯನಾದ ×ಆನಂದನು ಇನ್ನೂ ಅರ್ಹತ್ಪದವನ್ನು ಹೊಂದಿರಲಿಲ್ಲವಾದರೂ ಎಲ್ಲರೂ ಆತನಿಗೆ ಧರ್ಮಸಭೆಗೆ ಬರಬೇಕೆಂದು ಬೇಡಿಕೊಂಡರು. ಆನಂದನಿಲ್ಲದೆ ಧರ್ಮಸಭೆಯ ಕಾರ್ಯವು ಪೂರ್ಣವಾಗಲಾರದೆಂದು ಎಲ್ಲರ ಅಭಿಪ್ರಾಯವಿತ್ತು. ಆಮಂತ್ರಿತರಾದ ಭಿಕ್ಷುಗಳ ಹೊರತು ಉಳಿದವರು ಯಾರೂ ಅಲ್ಲಿಗೆ ಬರಕೂಡದೆಂದು ಗೊತ್ತಾಗಿತ್ತು. ಬಳಿಕ ಪೌರ್ಣಿಮೆಯ ದಿವಸ ಅವರೆಲ್ಲರೂ ರಾಜಗೃಹದಲ್ಲಿ ಸೇರಿದರು. ಕಾಶ್ಯಪ ಮೊದಲಾದ ಪ್ರಮುಖರು ಮಗಧರಾಜನಾದ ಅಜಾತ ಶತ್ರುವಿನ ಬಳಿಗೆ ಹೋಗಿ ತಾವು ವರ್ಷಾವಾಸದ ೩ ತಿಂಗಳನ್ನು ಇಲ್ಲಿಯೇ ಕಳೆಯುತ್ತೇವೆಂದೂ, ವಿಹಾರಾದಿಗಳನ್ನು ಸರಿಪಡಿಸಿಕೊಡಬೇಕೆಂದೂ ಕೇಳಿಕೊಂಡರು. ಅಜಾತಶತ್ರು ಮಹಾರಾಜನು ಅವರ ಪ್ರಾರ್ಥನೆಯನ್ನು ಕೇಳಿ ಒಡನೆಯೆ ವಿಹಾರಾದಿಗಳನ್ನು ಸರಿಪಡಿಸಿರೆಂದು ಅಪ್ಪಣೆಯನ್ನು ಸಾರಿದನು. ವೈಭಾರಪರ್ವತದ ಪಕ್ಕದಲ್ಲಿ ಸಪ್ತಪರ್ಣೀ ಗುಹೆಯ ಎದುರಿಗೆ ಧರ್ಮಮಹಾಸಭೆಯ ಸಲುವಾಗಿ ಒಂದು ವಿಸ್ತಾರವಾದ ಸಭಾಗೃ

---

* ಪಾಲಿ ಬೌದ್ಧಗ್ರಂಥಗಳಲ್ಲಿ ನಿರ್ವಾಣಮಾರ್ಗಾವಲಂಬಿಗಳಲ್ಲಿ ೪ ವರ್ಗಗಳು ಮಾಡಲ್ಪಟ್ಟಿವೆ. ಅವು—ಸೋತಾಪತ್ತಿ, ಸಕೃದಾಗಾಮಿ, ಅನಾಗಾಮಿ, ಅರ್ಹತ್. ನಿರ್ವಾಣಮಾರ್ಗದಲ್ಲಿ ಸೇರಿ ಬಹಳ ದಿವಸಗಳಾಗದವರಿಗೆ ಸೋತಾಪತ್ತಿ ಎಂದೂ, ಒಂದು ಜನ್ಮವನ್ನು ಕಳೆದು ನಿರ್ವಾಣವನ್ನು ಹೊಂದುವವರಿಗೆ ಸಕೃದಾಗಾಮಿ ಎಂದೂ, ಇದೇ ಜನ್ಮದಲ್ಲಿ ನಿರ್ವಾಣವನ್ನು ಹೊಂದಿ ಪುನರ್ಜನ್ಮವಿಲ್ಲದವರಿಗೆ ಅನಾಗಾಮಿ ಎಂದೂ, ಸಂಪೂರ್ಣವಾಗಿ ಮುಕ್ತಾವಸ್ಥೆಯನ್ನು ಹೊಂದಿದವರಿಗೆ ಅರ್ಹತ್ ಎಂದೂ ಹೆಸರು

‡ ಆಷಾಢ ಪೌರ್ಣಿಮೆಯಿಂದ ಆಶ್ವಿನ ಪೌರ್ಣಿಮೆಯ ವರೆಗೆ ಭಿಕ್ಷುಗಳು ಒಂದೇ ಸ್ಥಳದಲ್ಲಿ ವಾಸ ಮಾಡುತ್ತಿದ್ದರು. ಆಗ ಅವರು ಧರ್ಮಾಲೋಚನೆಯಲ್ಲಿಯೂ, ಶಾಸ್ತ್ರವಿಚಾರದಲ್ಲಿಯೂ ಕಾಲಕಳೆಯುವರು. ಉಳಿದ ಕಾಲದಲ್ಲಿ ದೇಶದಲ್ಲಿ ಧರ್ಮಪ್ರಚಾರಮಾಡುತ್ತ ಸಂಚಾರಮಾಡುವರು. ವರ್ಷಾಕಾಲದಲ್ಲಿ ಒಂದು ಸ್ಥಳದಲ್ಲಿರುವದಕ್ಕೆ ವರ್ಷಾವಾಸವೆಂದು ಹೆಸರು. ಇದು ಬಹು ಪ್ರಾಚೀನ ಪದ್ಧತಿಯು. ಬುದ್ಧದೇವನು ತಾನೇ ಈ ಪದ್ಧತಿಯನ್ನಾರಂಭಿಸಿದನು.

× ಆನಂದನು ಬುದ್ಧದೇವನ ಕಕ್ಕನಾದ ಅಮೃತೋದನನ ಮಗನು. ಈತನನ್ನು ಭಿಕ್ಷುಗಳು ಬುದ್ಧನ ಉಪಸ್ಥಾಪಕ (Attendant) ನನ್ನಾಗಿ ನಿಯುಮಿಸಿದ್ದರು.

ಹವು ನಿರ್ಮಿಸಲ್ಪಟ್ಟಿತು. ಭಿಕ್ಷುಗಳು ಕುಳಿತುಕೊಳ್ಳುವದಕ್ಕೆ ತರತರದ ಶಿಲ್ಪನೈಪುಣ್ಯವುಳ ಆಸನಗಳು ಮೊದಲಾದವುಗಳಿಂದ ಸಭಾಗೃಹವು ಸಜ್ಜುಮಾಡಲ್ಪಟ್ಟಿತು. ಅದರ ನಡುವೆ ಪೂರ್ವಮುಖವಾಗಿ ಒಂದು ಸುಂದರವಾದ ಆಸನವು ಬುದ್ಧದೇವನ ಸಲುವಾಗಿ ನಿರ್ಮಿಸ ಲ್ಪಟ್ಟಿತು. ವರ್ಷಾವಾಸದ ಎರಡನೆಯ ತಿಂಗಳ +ಎರಡನೆಯ ದಿವಸ †ಧರ್ಮಸಂಗೀತಿಯ ಕೆಲಸವು ಆರಂಭಿಸಲ್ಪಟ್ಟಿತು. ಕ್ರಮದಿಂದ ಭಿಕ್ಷುಗಳೆಲ್ಲರು ಆ ಸುಂದರವಾದ ದೊಡ್ಡ ಸಭಾ ಗೃಹದಲ್ಲಿ ಸಮ್ಮಿಲಿತರಾದರು. ಆದರೆ ಆನಂದನು ಮಾತ್ರ ಇನ್ನೂ ಬರಲಿಲ್ಲ. ಆತನು ಬಾರ ದಿರುವ ಕಾರಣವನ್ನು ಒಬ್ಬರನ್ನೊಬ್ಬರು ಕೇಳತೊಡಗಿದರು. ಅಷ್ಟರಲ್ಲಿ ಅರ್ಹತ್ಪದವನ್ನು ಹೊಂದಿದ ಆನಂದನು ಅಲೌಕಿಕ ಶಕ್ತಿಯಿಂದ ಆಕಾಶಮಾರ್ಗದಿಂದ ಬಂದು ತನಗಾಗಿ ಕಾದಿಟ್ಟ ಆಸನದಲ್ಲಿ ಕುಳಿತನಂತೆ. ಆ ಧರ್ಮಸಭೆಯಲ್ಲಿ ಎಲ್ಲರ ಸಮ್ಮತಿಯಿಂದ ಪಿಟಕತ್ರ ಯದ ವಿನಯ, ಸೂತ್ರ, ಅಭಿಧರ್ಮ ಎಂಬ ಮೂರು ಭಾಗಗಳನ್ನು ಸಂಗ್ರಹಿಸುವ ಭಾರವು ಕ್ರಮದಿಂದ ಉಪಾಲಿ, ಆನಂದ, ಮಹಾಸ್ಥವಿರ ಕಾಶ್ಯಪ ಇವರಿಗೆ ಅರ್ಪಿಸಲ್ಪಟ್ಟಿತು. ಮಹಾಕಾಶ್ಯಪನು ಸಭಾಪತಿಯ ಸ್ಥಾನವನ್ನು ಸ್ವೀಕರಿ ಉಪಾಲಿಯನ್ನು ಕುರಿತು ವಿನಯ ಸಂಬಂಧವಾಗಿ ಪ್ರಶ್ನೆಗಳನ್ನು ಮಾಡತೊಡಗಿದನು. ಉಪಾಲಿಭಿಕ್ಷುವು ಆತನ ಪ್ರಶ್ನೆಗಳಿಗೆ ಸ್ಪಷ್ಟವಾಗಿ ವಿವರಣೆಯನ್ನು ಹೇಳಿ ಸಮಾಧಾನಮಾಡಿದನು. ಈ ರೀತಿಯಿಂದ ವಿನಯ ದಲ್ಲಿ ಸೇರಿದ ಎಲ್ಲ ನಿಯಮಗಳು ಸಂಗ್ರಹಿಸಲ್ಪಟ್ಟವು. ಮಹಾಕಾಶ್ಯಪನು ಇದೇಮೇರೆಗೆ ಧರ್ಮವಿಷಯಕವಾಗಿ ಆನಂದನನ್ನು ಕುರಿತು ಪ್ರಶ್ನಮಾಡಿದನು. ಆನಂದನು ಧರ್ಮದ ಸುಂದರವಾದ ವ್ಯಾಖ್ಯೆಯನ್ನು ಹೇಳಿ ಗೌತಮಬುದ್ಧನ ಉಪದೇಶಗಳ ಯಥಾರ್ಥಸ್ವರೂ ಪವನ್ನು ಪ್ರಕಟಮಾಡಿದನು. ಈ ರೀತಿಯಾಗಿ ಸೂತ್ರಪಿಟಕವು ಸಂಗ್ರಹಿಸಲ್ಪಟ್ಟಿತು. ವಿನಯ ಮತ್ತು ಸೂತ್ರ ಇವುಗಳಲ್ಲಿ ಬಾರದ ಬೌದ್ಧಧರ್ಮದ ಬೇರೆ ತತ್ವಗಳನ್ನು ಸರಿ ಯಾಗಿ ವಿಚಾರಮಾಡಿ ಮಹಾಕಾಶ್ಯಪನು ತಾನೇ ಅಭಿಧರ್ಮವೆಂಬ ಭಾಗವನ್ನು ರಚಿಸಿ ದನು. ಈ ಮೇರೆಗೆ ಏಳುತಿಂಗಳವರೆಗೆ ನಡೆದ ಧರ್ಮಸಭೆಯು ಮುಗಿಯಿತು.

ಮಹಾವಂಶದಲ್ಲಿ ಹೇಳಿರುವದೇನಂದರೆ—ಅಜಾತಶತ್ರುವಿನ ಘಾತುಕಪುತ್ರನಾದ ಉದಯಿಭದ್ರನು ತಂದೆಯ ಕೊಲೆಮಾಡಿ ಸಿಂಹಾಸನವನ್ನಾಕ್ರಮಿಸಿ ೧೬ ವರ್ಷ ರಾಜ್ಯ ವಾಳಿದನು. ಉದಯಿಭದ್ರನ ಮಗನಾದ ಅನುರುದ್ಧಕನೂ ಅನುರುದ್ಧಕನ ಮಗನಾದ ಮುಂಡನೂ ಇದೇಮೇರೆಗೆ ತಮ್ಮ ತಂದೆಯ ಕೊಲೆಮಾಡಿ ಸಿಂಹಾಸನದ ಮೇಲೆ ಕುಳಿ ತರು. ದೇಶದ ಜನರೆಲ್ಲರು ಇದನ್ನು ನೋಡಿ ಅಸಹ್ಯಪಟ್ಟರು. ಈ ಪ್ರಕಾರದ ದುಷ್ಟ ಕೃತಿಯನ್ನು ನೋಡಿ ಇನ್ನು ತಾಳಲಾರದೆ ಪಿತೃಘಾತಮಾಡುವ ಈ ವಂಶವನ್ನೇ ಇಲ್ಲ

+ ಶ್ರಾವಣಶುಕ್ಲಪಕ್ಷದ ಪ್ರತಿಪದೆ ಅಥವಾ ದ್ವಿತೀಯೆ.

† ಬೌದ್ಧಯುಗದಲ್ಲಿ ನಡೆದ ೪ ಸಭೆಗಳಿಗೆ ಧರ್ಮಸಂಗೀತಿ ಎಂದು ಹೇಳುವರು. ಯಾಕಂದರೆ ಈ ಸಭೆಗಳಲ್ಲಿ ಸ್ಥವಿರರು ಶಾಸ್ತ್ರಗ್ರಂಥಗಳನ್ನೆಲ್ಲ ಸಂಗೀತಸ್ವರದಿಂದ ಓದುತ್ತಿದ್ದರು. ಅದರಿಂದ ಆ ಸಭೆಗಳಿಗೆ ಧರ್ಮಸಂಗೀತಿ ಎನ್ನುತ್ತಿದ್ದರು.

ದಂತೆ ಮಾಡಬೇಕೆಂದು ಆಲೋಚಿಸಿ ಅವರು ನಾಗದಾಸಕನೆಂಬವನನ್ನು ಸಿಂಹಾಸನದಿಂದ ತಳ್ಳಿ ಸುಸುನಾಗ ಎಂಬ ವಿಚಕ್ಷಣನಾದ ಮಂತ್ರಿಗೆ ರಾಜ್ಯವನ್ನು ಕೊಟ್ಟರು. ಆತನು ೧೮ ವರ್ಷ ರಾಜ್ಯವಾಳಿದನು. ಆತನ ತರುವಾಯ ಆತನ ಮಗನಾದ ಕಾಲಾಶೋಕನು ಮಗಧಸಿಂಹಾಸನವನ್ನೇರಿದನು. ಬುದ್ಧದೇವನ ಪರಿನಿರ್ವಾಣವಾದ ೧೦೦ ವರ್ಷಗಳ ತರುವಾಯ ಕಾಲಾಶೋಕನ ಆಳಿಕೆಯಲ್ಲಿ ಬೌದ್ಧಧರ್ಮದಲ್ಲಿ ಒಂದು ದೊಡ್ಡ ಕ್ರಾಂತಿ ಯುಂಟಾಯಿತು. ಅದೇನಂದರೆ, ಕಾಲಕ್ರಮದಿಂದ ಸಂಘದ ಕಠೋರವಾದ ನಿಯಮಗಳು ಶಿಥಿಲವಾಗಲಾರಂಭಿಸಿದವು. ವೈಶಾಲೀನಗರದಲ್ಲಿ ಮಹಾವನವಿಹಾರದಲ್ಲಿ ಬಹು ಜನ ಭಿಕ್ಷುಗಳು ವಾಸಮಾಡುತ್ತಿದ್ದರು. ಅವರಲ್ಲಿ ಭಿಕ್ಷುಗಳ ಆಚಾರಕ್ಕೆ ಹೊರತಾದ ೧೦ ಪದ್ಧ* ಗಳು ನೆಲೆಗೊಂಡಿದ್ದವು. ಬೌದ್ಧಧರ್ಮಾವಲಂಬಿಗಳಾದ ವೃಜಿಗಳು ಈ ವೈಶಾಲೀಭಿಕ್ಷು ಗಳನ್ನು ನೋಡಿಕೊಂಡು ತಾವೂ ಈ ಹತ್ತುಪ್ರಕಾರದ ವಸ್ತುಗಳ ನಿಷೇಧಾಜ್ಞೆಯನ್ನು ಉಪೇಕ್ಷಿಸತೊಡಗಿದರು. ಒಮ್ಮೆ ಕಾಕಂದಕ ಪುತ್ರನಾದ ಯಶನೆಂಬ ಪ್ರಸಿದ್ಧ ಭಿಕ್ಷುವು ವೈಶಾಲೀಭಿಕ್ಷುಗಳ ಈ ಉಚ್ಛೃಂಖಲಾಚರಣದ ಸುದ್ದಿಯನ್ನು ಕೇಳಿ ತೀರ್ಥಯಾತ್ರೆಯ ನೆವದಿಂದ ಮಹಾವನವಿಹಾರಕ್ಕೆ ಬಂದನು. ಅದೇ ಕಾಲಕ್ಕೆ ಒಂದು ದಿವಸ ಆ ವಿಹಾರದಲ್ಲಿ ಉಪೋಸಥ§ ಕ್ರಿಯೆಯನ್ನು ನೆರವೇರಿಸುವ ಕಾಲದಲ್ಲಿ ಭಿಕ್ಷುಗಳೂ ಬೇರೆ ಬೌದ್ಧರೂ

---

* ಬುದ್ಧದೇವನು ಪರಿನಿರ್ವಾಣಹೊಂದಿದ ೧೦೦ ವರ್ಷಗಳ ತರುವಾಯ ವೈಶಾಲಿಯ ಭಿಕ್ಷುಗಳು ಈ ಹತ್ತು ವಸ್ತುಗಳು ನಿಷಿದ್ಧವಾಗಿದ್ದರೂ ಭಿಕ್ಷುಗಳು ಉಪಯೋಗಿಸಬಹುದೆಂದು ಹೇಳಿದರು. ಅವು (೧) ಕೋಡಿನಲ್ಲಿ ಉಪ್ಪನ್ನು ತುಂಬಿಟ್ಟು ಬೇಕಾದಂತೆ ಉಪಯೋಗಿಸುತ್ತ ಹೋಗುವದು. (೨) ಮಧ್ಯಾಹ್ನವಾದ ಮೇಲೆ ಕೂಡ ನೆಳಲು ೨ ಬೊಟ್ಟು ಹೋಗುವವರೆಗಿನ ಕಾಲದಲ್ಲಿ ಊಟಮಾಡುವದು. (೩) ನಿಮಂತ್ರಿತರಾಗಿ ಪರಸ್ಥಳಕ್ಕೆ ಹೋಗುವಾಗ ಊಟಮಾಡಿ ಹೋಗುವದು. (೪) ಬೇರೆ ಬೇರೆ ವಿಹಾರಗಳಲ್ಲಿ ಭಿಕ್ಷುಗಳಿಗೆ ಒಂದೇ ಸ್ಥಳದಲ್ಲಿ ಉಪೋಸಥಮಾಡುವದಕ್ಕೆ ನಿರ್ಬಂಧಿಸುವದು. (೫) ಉಪೋಸಥ ಮೊದಲಾದ ಕರ್ಮವು ಮುಗಿದ ಬಳಿಕ ಉಪೋಸಥಕ್ಕೆ ಬರಲಸಮರ್ಥರಾದ ಭಿಕ್ಷುಗಳ ಸಲುವಾಗಿ ಪ್ರಾರ್ಥಿಸುವದು. (೬) ಆಚಾರ್ಯರೂ, ಉಪಾಧ್ಯಾಯರೂ ಮಾಡಿದ್ದು ಅನ್ಯಾಯವಾಗಿದ್ದರೂ ಅದನ್ನು ಪಾಲಿಸುವದು. (೭) ಸ್ವಾಭಾವಿಕ ಅವಸ್ಥೆಯನ್ನು ಬಿಟ್ಟು, ಇನ್ನೂ ಮೊಸರಿನ ಅವಸ್ಥೆಗೆ ಬಾರದ ಹಾಲನ್ನು ಯಾವನೊಬ್ಬ ಭಿಕ್ಷುವು ಊಟವಾದ ಬಳಿಕ ಬೇರೆ ಆಸನದಲ್ಲಿ ಕುಳಿತು ತೆಗೆದುಕೊಳ್ಳುವದು. (೮) ಇನ್ನೂ ಮದ್ಯದ ಅವಸ್ಥೆಯನ್ನು ಹೊಂದದೆ, ಪಾರಿವಾಳದ ಕಾಲಿನಂತೆ ಬಣ್ಣಬಂದ ಅವಸ್ಥೆಯಲ್ಲಿ ಮದ್ಯವನ್ನು ಕುಡಿದರೆ ಭಿಕ್ಷುಗಳಿಗೆ ದೋಷವಿಲ್ಲ (೯) ಆಚ್ಛಾದನವುಳ್ಳ ಆಸನವನ್ನು ಉಪಯೋಗಿಸುವದು (೧೦) ಭಂಗಾರಬೆಳ್ಳಿಗಳ ನಾಣ್ಯಗಳನ್ನು ಭಿಕ್ಷುಗಳು ಉಪಯೋಗಿಸಿಕೊಳ್ಳುವದು.

§ ಉಪೋಸಥ (ಸಂಸ್ಕೃತ–ಉಪವಾಸಾಥ) ಪೌರ್ಣಮಿ, ಅಮಾವಾಸ್ಯೆ, ಚತುರ್ದಶಿ, ಶುಕ್ಲ ಕೃಷ್ಣ ಅಷ್ಟಮಿ ತಿಥಿಗಳು ಉಪೋಸಥ ದಿವಸಗಳು. ಇವುಗಳಲ್ಲಿ ಪೌರ್ಣಿಮೆ, ಅಮಾವಾಸೆ, ಚತುರ್ದಶಿ ತಿಥಿಗಳಲ್ಲಿ ಭಿಕ್ಷುಗಳು ಯಾವದೊಂದು ವಿಹಾರದಲ್ಲಿ ಒಟ್ಟುಗೂಡುವರು. ಅಲ್ಲಿ ಒಬ್ಬ ಸ್ಥವಿರಭಿಕ್ಷುವನ್ನು ಸಭಾಪತಿಯನ್ನು ಮಾಡಿಕೊಂಡು ಪ್ರಾತಿಮೋಕ್ಷವನ್ನು ಓದುವರು. ಮತ್ತು ಕಳೆದ ೧೫ ದಿವಸಗಳಲ್ಲಿ ಮಾಡಿದ ಅಪರಾಧಗಳನ್ನು ಒಪ್ಪಿ ಅದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುವರು. ಇವುಗಳಲ್ಲಿ ಅಷ್ಟಮಿ ತಿಥಿಯು ಕೇವಲ ಗೃಹಸ್ಥರ ಪುಣ್ಯಾನುಷ್ಠಾನಕ್ಕಾಗಿ ಗೊತ್ತುಮಾಡಲ್ಪಟ್ಟಿತ್ತು.

ನೆರೆದಿದ್ದರು. ಅಲ್ಲಿ ಒಂದು ನೀರು ತುಂಬಿದ ಸುವರ್ಣಪಾತ್ರವನ್ನು ಸ್ಥಾಪಿಸಿ ಭಿಕ್ಷುಗಳು ಭಿಕ್ಷುಗಳಲ್ಲದ ಬೌದ್ಧರಿಗೆ ತಮ್ಮ ಉಪಯೋಗಕ್ಕಾಗಿ ಆ ಪಾತ್ರೆಯಲ್ಲಿ ಕಾರ್ಷಾಪಣ ಎಂಬ ಸುವರ್ಣನಾಣ್ಯಗಳನ್ನು ಹಾಕುವದಕ್ಕೆ ಹೇಳಿದರು. ಈ ಪದ್ಧತಿಯು ಬುದ್ಧ ದೇವನ ಉಪದೇಶದ ಹೊರಗಿನದಾದ್ದರಿಂದ ಯಶನು ಇದನ್ನು ಬಹಳವಾಗಿ ನಿಷೇಧಿಸಿದನು. ಆಗ ವೈಶಾಲೀಭಿಕ್ಷುಗಳು ಅವನಿಗೆ ಪ್ರತಿಶರಣೀಯಾ + ಶಿಕ್ಷೆಯನ್ನು ವಿಧಿಸಿದರು. ಯಶನು ತನಗೆ ಶಿಕ್ಷೆಯನ್ನು ವಿಧಿಸಿದ್ದನ್ನು ಕೇಳಿ ಪಾಟಲಿಪುತ್ರಕ್ಕೆ ಬಂದು ಅಲ್ಲಿ ಬೌದ್ಧ ಧರ್ಮದ ಶುದ್ಧಸ್ವರೂಪವನ್ನು ಪ್ರಚಾರಮಾಡತೊಡಗಿದನು. ಈ ಸುದ್ದಿಯನ್ನು ಕೇಳಿ ಮಹಾವನವಿಹಾರದ ಭಿಕ್ಷುಗಳು ಸಿಟ್ಟಿಗೆದ್ದು ಯಶನಿಗೆ ಉಪೇಕ್ಷಣೀಯಾ ಶಿಕ್ಷೆಯನ್ನು ವಿಧಿಸಬೇಕೆಂದು ಅಲ್ಲಿಗೆ ಬಂದರು; ಮತ್ತು ಯಶನ ಆಶ್ರಮದ ನಾಲ್ಕೂ ದಿಕ್ಕುಗಳಲ್ಲಿ ಇಳಿದುಕೊಂಡರು. ಸ್ಥವಿರಯಶನು ಅವರ ಈ ನಡತೆಯನ್ನು ನೋಡಿ ವ್ಯಥೆಬಟ್ಟು ಕೌಶಾಂಬೀ*ನಗರಕ್ಕೆ ಹೋದನು. ಅಲ್ಲಿಂದ ಪಾಭೇ×ಯ್ಯದ ಮತ್ತು ಅವಂತಿಯ

+ ಇದೊಂದು ಶಿಕ್ಷೆಯು. ಯಾವನೊಬ್ಬ ಭಿಕ್ಷುವು ನಿಷ್ಕಾರಣವಾಗಿ ಯಾವನೊಬ್ಬ ಗೃಹಸ್ಥನ ವಿಷಯವಾಗಿ ಯಾವದೊಂದು ಅಪರಾಧಮಾಡಿದರೆ ಆ ಅಪರಾಧಕ್ಕಾಗಿ ಕ್ಷಮೆಬೇಡುವದಕ್ಕೆ ಪ್ರತಿಶರಣೀಯ ಶಿಕ್ಷೆಯೆನ್ನುವರು.

* ಕೌಶಾಂಬಿಯು ಇತಿಹಾಸಪ್ರಸಿದ್ಧವಾದ ಸ್ಥಳವು ಪ್ರಾಚೀನ ಹಿಂದು, ಬೌದ್ಧ ಗ್ರಂಥಗಳಲ್ಲಿ ಇದರ ಉಲ್ಲೇಖವುಂಟು. ಪ್ರಯಾಗದಿಂದ ೧೬।೧೭ ಕ್ರೋಶಗಳ ಅಂತರದಲ್ಲಿ ಯಮುನಾನದಿಯ ಮೇಲೆ ಪ್ರಾಚೀನ ಕೌಶಾಂಬೀನಗರಿಯಿತ್ತು. ಈಗಿನ ಕೋಶಾಮ ಎಂಬ ಊರೇ ಕೌಶಾಂಬಿಯ ಸ್ಥಾನವೆಂದು ಐತಿಹಾಸಿಕರು ಹೇಳುವರು ಒಂದು ಕಾಲದಲ್ಲಿ ಕೌಶಾಂಬಿಯು ಸಂಪೂರ್ಣ ಉತ್ತರಹಿಂದುಸ್ಥಾನದ ರಾಜಧಾನಿಯಾಗಿತ್ತು. ಹಸ್ತಿನಾಪುರವು ನಾಶಹೊಂದಿದ ಮೇಲೆ ಈ ಸ್ಥಳಕ್ಕೆ ಪಾಂಡವರು ರಾಜಧಾನಿಯನ್ನು ಒಯ್ದರು. ರಾಮಾಯಣದಂಥ ಪ್ರಾಚೀನ ಸಂಸ್ಕೃತ ಗ್ರಂಥದಲ್ಲಿಯೂ ಇದರ ಉಲ್ಲೇಖವುಂಟು. ಕಾಲಿದಾಸನು ತನ್ನ ಮೇಘದೂತ*ದಲ್ಲಿ ಕೌಶಾಂಬೀರಾಜನಾದ ಉದಯನನ ವಿಷಯವನ್ನು ವರ್ಣಿಸಿರುವನು. ರಾತ್ನಾವಲಿ ಎಂಬ ಸಂಸ್ಕೃತ ನಾಟಕದಲ್ಲಿ ಉದಯನ ರಾಜನೆಂಬ ಹೆಸರಿಗೆ ಬದಲು ವತ್ಸರಾಜನೆಂದು ಹೇಳಿದೆ. ಲಲಿತವಿಸ್ತರ‡ವೆಂಬ ಪ್ರಾಚೀನ ಬೌದ್ಧಗ್ರಂಥದಲ್ಲಿ ಬುದ್ಧದೇವನು ಜನ್ಮಹೊಂದಿದ ದಿವಸವೇ ಕೌಶಾಂಬೀರಾಜನಾದ ಸತಾನಿಕನಿಗೆ ಉದಯನವತ್ಸನೆಂಬ ಮಗನು ಹುಟ್ಟಿದನೆಂದು ಹೇಳಿದೆ. ಉದಯನವತ್ಸನ ಕೀರ್ತಿಯು ತಿಬೇಟದ ನಿವಾಸಿಗಳಿಗೂ§ ಗೊತ್ತಿತ್ತು. ಭರತಖಂಡದ ೧೪ ರಾಜಧಾನಿಗಳಲ್ಲಿ ಕೌಶಾಂಬಿಯೊಂದಾಗಿತ್ತೆಂದು ಸಿಂಹಳ†ಗ್ರಂಥದಲ್ಲಿಯೂ ಹೇಳಿದೆ. ಬುದ್ಧದೇವನು ಬುದ್ಧತ್ವ ಹೊಂದಿದ ೬ನೆಯ ಮತ್ತು ೯ನೆಯ ವರ್ಷಗಳನ್ನು ಈ ಸ್ಥಳದಲ್ಲಿಯೇ ಕಳೆದನು. ಉದಯನವತ್ಸರಾಜನು ಚಂದನ ಕಟ್ಟಿಗೆಯ ಒಂದು ಬುದ್ಧಮೂರ್ತಿಯನ್ನು ತನ್ನ ರಾಜಧಾನಿಯಲ್ಲಿ ಸ್ಥಾಪಿಸಿದ್ದನು. ಹುಯೆನ್ ಸಾಂಗನು ಹಿಂದುಸ್ಥಾನದಲ್ಲಿ ಸಂಚರಿಸುವಾಗ ಈ ಮೂರ್ತಿಯನ್ನು ನೋಡಿದ್ದನು. ಒಂದು ಹಳೆಯ ಕೋಟೆಯ ಅವಶೇಷವು ಮಾತ್ರ ಈಗ ಈ ಸ್ಥಳದಲ್ಲಿ ಉಳಿದಿದೆ.

× ಪಾಭಾ ಎಂಬ ಊರ ಹೆಸರಿನಿಂದ ಅಲ್ಲಿಯ ವಿಹಾರಕ್ಕೆ ಈ ಹೆಸರು ಬಂದಿದೆ.

* Wilson Meghaduta
‡ Foucaux translation of the tibetanversion of the Lalita Vistara
§ Csoma de Koros.
† Hardy Manual of Buddhism.
× Julien Hiouen Thsang.

ಭಿಕ್ಷುಗಳಿಗೆ ಈ ವರ್ತಮಾನವನ್ನು ಕಳುಹಿ ಭಾಗೀರಥಿಯನ್ನು ದಾಟಿ ಅಹೋಗಂಗಾ ಪರ್ವತಕ್ಕೆ ಬಂದನು. ಮತ್ತು ಅಲ್ಲಿ ಭಿಕ್ಷುಸಂಭೂತನೆಂಬವನಿಗೆ ಎಲ್ಲ ವೃತ್ತಾಂತವನ್ನರು ಹಿದನು. ಯಶನ ವಿಷಯವಾಗಿ ವೃಜಿದೇಶದ ಭಿಕ್ಷುಗಳು ನಡೆಸಿದ ಅನ್ಯಾಯದ ವ್ಯವಹಾರವನ್ನು ಕೇಳಿ ನಾನಾದೇಶದ ಭಿಕ್ಷುಗಳು ಗುಂಪುಗುಂಪಾಗಿ ಅಲ್ಲಿಗೆ ಬರಹತ್ತಿದರು. ಸುಮಾರು ೯೦ ಸಾವಿರ ಭಿಕ್ಷುಗಳು ಅಲ್ಲಿ ಸೇರಿದ್ದರೆಂದು ಮಹಾವಂಶದಲ್ಲಿ ವರ್ಣಿಸಲ್ಪಟ್ಟಿದೆ. ಬಳಿಕ ಅಲ್ಲಿ ಒಟ್ಟುಗೂಡಿದ ಎಲ್ಲರೂ ವಿಚಾರಮಾಡಿ ಆ ಕಾಲದಲ್ಲಿ ಸಂಘಕ್ಕೆ ನಾಯಕನೆನಿಸಿದ ಸ್ಥವಿರರೇವತನ ಬಳಿಯಲ್ಲಿ ಈ ಎಲ್ಲ ವೃತ್ತಾಂತವನ್ನು ಹೇಳಿ ಇದರ ನಿರ್ಣಯಮಾಡಿಸಬೇಕೆಂದು ನಿಶ್ಚಯಿಸಿದರು. ಬಳಿಕ ಎಲ್ಲರೂ ರೇವತನಿದ್ದೆಡೆಗೆ ಹೊರಟರು.

ರೇವತನು ಶಾಂತಮನಸ್ಸಿನಿಂದ ಎಲ್ಲ ಕಥೆಯನ್ನು ಕೇಳಿ ಎಲ್ಲರಿಗೂ ವೈಶಾಲಿಗೆ ಹೋಗಹೇಳಿದನು. ತಾನೂ ಅಲ್ಲಿಗೆ ಹೊರಟನು. ರೇವತನು ಬಂದದ್ದನ್ನು ಕೇಳಿ ಆತನನ್ನು ತಮ್ಮ ಪಕ್ಷಕ್ಕೆ ಎಳೆದುಕೊಳ್ಳಬೇಕೆಂದು ವೈಶಾಲಿಯ ಭಿಕ್ಷುಗಳು ಹಲವು ಕಾಣಿಕೆಗಳನ್ನು ತೆಗೆದುಕೊಂಡು ಆತನ ಬಳಿಗೆ ಬಂದರು. ಆದರೆ ರೇವತನು ಆ ಕಾಣಿಕೆಗಳನ್ನು ಸ್ವೀಕರಿಸದೆ ಅವರಿಗೆ ಹೋಗಲಪ್ಪಣೆಕೊಟ್ಟನು. ಅದರಿಂದ ಆ ಭಿಕ್ಷುಗಳು ನಿರಾಶರಾಗಿ ರಾಜಧಾನಿಯಾದ ಪುಷ್ಪಪುರಕ್ಕೆ ಹೋಗಿ ಕಾಲಾಶೋಕಚಕ್ರವರ್ತಿಯ ಸಮೀಪಕ್ಕೆ ಬಂದರು. ಕಾಲಾಶೋಕನು ನೀವು ಬಂದಕಾರಣವೇನೆಂದು ಕೇಳಲು—ನಾವು ಗೌತಮ ಬುದ್ಧನು ತೋರಿಸಿದ ಧರ್ಮವನ್ನು ಪ್ರಸಾರಗೊಳಿಸುವದಕ್ಕಾಗಿ ಮಹಾವನವಿಹಾರದಲ್ಲಿ ವಾಸಮಾಡುತ್ತಿರುವೆವು. ನಾವೇ ಈವರೆಗೆ ಈ ಪ್ರಸಿದ್ಧ ವಿಹಾರವನ್ನು ಕಾಪಾಡುತ್ತಿರುವೆವು. ಈಗ ಬೇರೆ ಸ್ಥಳದಿಂದ ಭಿಕ್ಷುಗಳು ನಮ್ಮ ವಿಹಾರವನ್ನು ಆಕ್ರಮಿಸುವದಕ್ಕೋಸ್ಕರ ವೈಶಾಲಿಗೆ ಬರುತ್ತಿರುವರು. ತಾವು ಅವರನ್ನು ಪ್ರತಿಬಂಧಿಸಬೇಕು* ಎಂದು ಅವರು ಹೇಳಿದರು. ಅರಸನು ಆಶ್ವಾಸನಕೊಟ್ಟು ಅವರನ್ನು ವೈಶಾಲಿಗೆ ಕಳುಹಿಸಿದನು.

ಇತ್ತ ಕಾಲಾಶೋಕನು ಅಸಂಖ್ಯಭಿಕ್ಷುಗಳು ವೈಶಾಲಿಯ ಕಡೆಗೆ ಬರುತ್ತಿರುವದನ್ನು ದೂತರಿಂದ ಕೇಳಿ ಕೂಡಲೆ ಮಹಾವನ ಭಿಕ್ಷುಗಳ ಸಂರಕ್ಷಣಕ್ಕಾಗಿ ತನ್ನ ಅಮಾತ್ಯರನ್ನು ಕಳಿಸಿದನು. ಆದರೆ ಅವರು ತಪ್ಪಿ ಬೇರೆ ದಾರಿಯಿಂದ ಹೋದರು. ಆ ದಿವಸ ಮಧ್ಯರಾತ್ರಿಯಲ್ಲಿ ಅರಸನಿಗೆ ಒಂದು ಸ್ವಪ್ನವು ಬಿದ್ದಿತು. ಆ ಸ್ವಪ್ನದಲ್ಲಿ ತಾನು ಲೋಹಕುಂಭಿ ಎಂಬ ನರಕದಲ್ಲಿ ಹೊರಳಾಡುವಂತೆಯೂ, ಭಯಪೀಡೆಗಳಿಂದ ಒದರುತ್ತಿರುವಂತೆಯೂ ಇರುವಾಗ ಎದುರಿಗೆ ತನ್ನ ತಂಗಿಯಾದ ನಂದಿಯೆಂಬ ಪವಿತ್ರಾಚರಣೆಯ ಭಿಕ್ಷುಣಿಯು ಆಕಾಶಮಾರ್ಗದಿಂದ ಅಲ್ಲಿಗೆ ಬಂದು ಕಾಲಾಶೋಕನನ್ನು ಉದ್ದೇಶಿಸಿ ಅಣ್ಣನೇ, ನೀನು ಮಾಡಿದ ಕೆಲಸವು ಬಹಳ ಅನ್ಯಾಯವಾದದು. ನಿಷ್ಠೆಯುಳ್ಳವರೂ,

* ಸುಪಾನಂಶ,

ಜಿತೇಂದ್ರಿಯರೂ ಆದ ಅರ್ಹಂತರ ಬಳಿಯಲ್ಲಿ ನೀನು ನಿನ್ನ ಅಪರಾಧಕ್ಕಾಗಿ ಕ್ಷಮೆಯನ್ನು ಬೇಡುವದು ಒಳ್ಳೆಯದು; ಅವರ ಉದ್ದೇಶವನ್ನು ತಿಳಿದುಕೊಂಡು ಸತ್ಯಧರ್ಮದ ಪ್ರಸಾರವನ್ನು ಮಾಡು ಎಂದು ಹೇಳಿ ಅವಳು ಅಂತರ್ಧಾನಹೊಂದಿದಂತೆ ಆಯಿತು. ಬೆಳಗ್ಗೆ ಅರಸನು ಹಾಸಿಗೆಯಿಂದ ಎದ್ದು ಕನಸಿನ ವಿಷಯವಾಗಿ ಹಲವು ಆಲೋಚನೆಗಳನ್ನು ಮಾಡಿದನು. ಕೊನೆಗೆ ಏನೂ ತೋರದೆ ಮನಸ್ಸಿನಲ್ಲಿ ಸಮಾಧಾನವಿಲ್ಲದೆ ವೈಶಾಲಿಯ ಕಡೆಗೆ ಹೊರಟನು. ಅಲ್ಲಿ ಮಹಾವನವಿಹಾರಕ್ಕೆ ಬಂದು ಭಿಕ್ಷುಸಂಘವನ್ನು ಕರೆಯಿಸಿ ಪಕ್ಷಪಾತವಿಲ್ಲದೆ ಎರಡೂ ಪಕ್ಷಗಳ ವೃತ್ತಾಂತವನ್ನು ಕೇಳಿಕೊಂಡನು. ಕೊನೆಗೆ ರೇವತ ಮೊದಲಾದವರ ಪಕ್ಷವಾಗಿ ತನ್ನ ಅಭಿಪ್ರಾಯವನ್ನು ಕೊಟ್ಟನು.

ಆಗ ಭಿಕ್ಷುಗಳೆಲ್ಲ ಮಹಾವನವಿಹಾರದಲ್ಲಿ ಸೇರಿ ಹತ್ತುತರದ ನಿಷಿದ್ಧವಸ್ತುಗಳ ವಿಚಾರವನ್ನು ಮಾಡತೊಡಗಿದರು. ಮುಂದೆ ಅಲ್ಲಿ ಭಯಂಕರವಾದ ವಿವಾದವು ಆರಂಭವಾಯಿತು. ಎರಡೂ ಪಕ್ಷಗಳ ಭಿಕ್ಷುಗಳು ಹಲವು ಯುಕ್ತಿಗಳಿಂದ ತಮ್ಮ ತಮ್ಮ ಮತವನ್ನು ಸಮರ್ಥಿಸತೊಡಗಿದರು. ಮಹಾಸ್ಥವಿರನಾದ ರೇವತನು ಆ ದೊಡ್ಡ ಕೋಲಾಹಲವನ್ನು ಕೇಳಿ ಸಭೆಯ ಮಧ್ಯದಲ್ಲಿ ನಿಂತು "ಉವ್ವೋಹಿಕಾ§" ವಿಧಿಯನ್ನನುಸರಿಸಿ ಈ ಪ್ರಶ್ನೆಯ ನಿರ್ಣಯವು ಮಾಡಲ್ಪಡುವದು ಎಂದು ಹೇಳಿದನು. ಸ್ಥವಿರರೇವತನ ಸೂಚನೆಯ ಮೇರೆಗೆ ೮ ಜನ ×ಭಿಕ್ಷುಗಳು ಆರಿಸಲ್ಪಟ್ಟರು. ಈ ಎಂಟು ಜನರಲ್ಲಿ ಪಶ್ಚಿಮವಿಹಾರದ ಸರ್ವಕಾಮಿ, ಶಲ್ಯ, ಕುಯ್ಯಶೋಭಿತ, ವಾಸವಗಾಮಿಕ ಎಂಬ ನಾಲ್ವರು ಭಿಕ್ಷುಗಳೂ, ಪೂರ್ವೇಯ್ಯವಿಹಾರದ ಸ್ಥವಿರರೇವತ, ಸಂಭೂತ, ಕಾಕಂಡಪುತ್ರಯಶ, ಸುಮನ ಎಂಬ ನಾಲ್ವರು ಭಿಕ್ಷುಗಳೂ ಇದ್ದರು. ಇವರು ವಾಲುಕಾರಾಮವಿಹಾರಕ್ಕೆ ಹೋದರು. ಈ ವಿಹಾರವು ಅತ್ಯಂತ ನಿರ್ಜನಪ್ರದೇಶದಲ್ಲಿತ್ತು. ಜನಕೋಲಾಹಲವಂತೂ ಒಂದೆಡೆಗಿರಲಿ, ಪಕ್ಷಿಗಳ ಕೂಗುಸಹ ಅಲ್ಲಿ ಕೇಳಬರುತ್ತಿರಲಿಲ್ಲ. ಕೆಲವು ದಿವಸಗಳಾದಬಳಿಕ ಮಹಾಸ್ಥವಿರ ರೇವತನು ದಶವಿಧ ವಸ್ತುಗಳಲ್ಲಿ ಒಂದೊಂದನ್ನೇ ಕುರಿತು ವಿಚಾರಿಸತೊಡಗಿದನು. ಅರ್ಹಂತನಾದ ಸರ್ವಕಾಮಿಯು ಅಧ್ಯಕ್ಷನಾಗಿ ರೇವತನನ್ನುದ್ದೇಶಿಸಿ—ಬೌದ್ಧಶಾಸ್ತ್ರವನ್ನನುಸರಿಸಿ ಈ ದಶವಿಧ ವಸ್ತುಗಳ ಆಚರಣವು ನಿಷಿದ್ಧವು; ಯಾರು ಈ ಶಾಸ್ತ್ರವಿಧಿಯನ್ನು ಪಾಲಿಸುವದಿಲ್ಲವೋ ಅವರು ಶಿಕ್ಷಾರ್ಹರು; ಎಂದು ಹೇಳಿದನು. ಸರ್ವಕಾಮಿಯು ಶಾಸ್ತ್ರಯುಕ್ತಿಗಳನ್ನು ತೋರಿಸಿ ದಶವಿಧ ವಸ್ತುಗಳು ನಿಷಿದ್ಧವೆಂಬದನ್ನು ಸಿದ್ಧಪಡಿಸಿದನು. ಇದರಿಂದ ಮೇಲೆ ಹೇಳಿದ ವೈಶಾಲಿಯ ಭಿಕ್ಷುಗಳಿಗೆ ಪಾತಿತ್ಯ‡ರೂಪಶಿಕ್ಷೆಯನ್ನು (ಭಿಕ್ಷುಗಳ

§ಉವ್ವಾಹಿಕಾ (ಉದ್ವಾಹಿಕಾ) ಎಂಬದು ಯಾವದೊಂದು ಅಪರಾಧಕ್ಕಾಗಿ ಭಿಕ್ಷುಸಂಘದಿಂದ ಬಹಿಷ್ಕಾರ ಹಾಕುವ ಶಿಕ್ಷೆಯ ಹೆಸರು. (ಮಹಾವಂಶ).

+ಸ್ಥವಿರ ಸರ್ವಕಾಮಿ, ಶಲ್ಯ, ರೇವತ, ಕುಯ್ಯಶೋಭಿತ, ಯಶ ಇವರು ಮಹಾಸ್ಥವಿರ ಆನಂದನ, ಮತ್ತು ವಾಸಸಗಾಮಿಕಾ, ಸುಮನ ಇವರು ಅನುರುದ್ಧನ ಶಿಷ್ಯರಾಗಿದ್ದರು, ಎಂದು ಹೇಳಲ್ಪಟ್ಟಿದೆ.

‡ಭಿಕ್ಷುವಿನ ಅಧಿಕಾರದಿಂದ ಹೊರಹಾಕುವಿಕೆ.

ಅಧಿಕಾರದಿಂದ ಬಿಡುಗಡೆಮಾಡುವದು) ವಿಧಿಸಿದರು. ಬೌದ್ಧಧರ್ಮದ ಪವಿತ್ರತೆಯನ್ನು ಕಾಪಾಡುವದಕ್ಕೋಸ್ಕರ ಮಹಾಸ್ಥವಿರರೇವತನು ಅರ್ಹತ್ವದವನ್ನು ಹೊಂದಿದ ೭೦೦ ಜನ ಭಿಕ್ಷುಗಳನ್ನು ಕರೆಯಿಸಿ ವಾಲುಕಾರಾಮದಲ್ಲಿ ಒಂದು ಧರ್ಮಮಹಾಸಭೆಯನ್ನು ನೆರವೇರಿಸಿದನು. ಕಾಲಾಶೋಕರಾಜನ ಆಳಿಕೆಯ ೧೦ನೆಯ ವರ್ಷ ರೇವತನ ಅಧ್ಯಕ್ಷತೆಯಲ್ಲಿ ಈ ಕಾರ್ಯಗಳು ನೆರವೇರಿಸಲ್ಪಟ್ಟವು. ಈ ಎರಡನೆಯ ಬೌದ್ಧಧರ್ಮಮಹಾಸಭೆಯ ಕಾರ್ಯವು ಮುಗಿಯುವದಕ್ಕೆ ೮ ತಿಂಗಳು ಹಿಡಿದವು. ಈ ಕಾಲದಿಂದ ಬೌದ್ಧಧರ್ಮದಲ್ಲಿ ೧೮ ಸಾಂಪ್ರ*ದಾಯಗಳ ಉತ್ಪತ್ತಿಯಾಯಿತು.

ಎರಡನೆಯ ಮಹಾಸಭೆಯು ಮುಗಿದ ಬಳಿಕ ಮುಂದೆ ಅಶೋಕಮಹಾರಾಜನ ಕಾಲದಲ್ಲಿ ೩ನೆಯ ಧರ್ಮಮಹಾಸಭೆಯು ನೆರೆಯಿಸಲ್ಪಟ್ಟಿತು. ಅಶೋಕನ ಪಟ್ಟಾಭಿಷೇಕವಾದ ೧೭ ವರ್ಷಗಳ ತರುವಾಯ ಈ ಸಭೆಯು ಕೂಡಿತು. ಅಶೋಕಾರಾಮದಲ್ಲಿ ಮಹಾಸ್ಥವಿರ ಮೌದ್ಗಲಿಪುತ್ರ ತಿಷ್ಯನು ಈ ಕಾಲಕ್ಕೆ ಎಲ್ಲಕ್ಕೂ ಮುಖ್ಯ ಸಂಘನಾಯಕನಾಗಿದ್ದನು. ಸ್ವಾರ್ಥಪರರೂ, ಲೋಭಿಗಳೂ ಆದ ಕಪಟಭಿಕ್ಷುಗಳಿಂದ ಬೌದ್ಧಧರ್ಮಕ್ಕೆ ಗ್ಲಾನಿಯು ಒದಗುತ್ತಿರುವದನ್ನು ನೋಡಿ ಆತನು ಬಹಳ ನೊಂದಿದ್ದನೆಂದು ಹೇಳಿದೆ. ಅವನು ಭವಿಷ್ಯದೃಷ್ಟಿಯಿಂದ ಮುಂದಿನಕಾಲದ ಅಧಃಪತನವನ್ನು ತಿಳಿದು ತನ್ನ ಪ್ರಿಯ ಶಿಷ್ಯನಾದ ಮಹೇಂದ್ರನಿಗೆ ಶಿಷ್ಯಮಂಡಲಿಯು ಭಾರವನ್ನೆಲ್ಲ ಅರ್ಪಿಸಿ ತಾನು ಅಹೋಗಂಗಾಪರ್ವತಕ್ಕೆ ತಪಸ್ಸಿಗಾಗಿ ಹೊರಟುಹೋದನು.

ಪೂರ್ವದಲ್ಲಿ ಎಷ್ಟೋ ಜನ ಸೋಮಾರಿಗಳು ರಾಜಾಶ್ರಯದಲ್ಲಿದ್ದರು. ಅಶೋಕನ ಕಾಲದಲ್ಲಿ ಅವರೆಲ್ಲ ಹೊರಗೆ ಹಾಕಲ್ಪಟ್ಟರು. ಈಗ ಸುಯೋಗವೊದಗಿದ್ದನ್ನು ನೋಡಿ ಅವರು ಗೈರಿಕ ವಸ್ತ್ರಗಳನ್ನು ಧರಿಸಿ ತಾವು ಬೌದ್ಧ ಸನ್ಯಾಸಿಗಳೆಂದು ಸಾರಹತ್ತಿದರು; ಮತ್ತು ಬೌದ್ಧಧರ್ಮದ ವಿಕೃತಸ್ವರೂಪವನ್ನು ಪ್ರಚಾರಪಡಿಸಹತ್ತಿದರು. ಈ ಮೇರೆಗೆ ಈ ಕಪಟಿಗಳ ಸಂಖ್ಯೆಯು ಹೆಚ್ಚಾಗುತ್ತ ನಡೆಯಲು ಬೌದ್ಧಧರ್ಮದಲ್ಲಿ ಮಹಾ ಕೋಲಾಹಲವೆದ್ದಿತು. ನಿಜವಾಗಿ ನಿಷ್ಠಾವಂತರಾದ ಭಿಕ್ಷುಗಳಿಗೆ ಈ ಕಪಟಿಗಳ ಸುಳಿದಾಟದಿಂದ ಜಂಬೂದ್ವೀಪದ ಯಾವ ಮಂದಿರದಲ್ಲಿಯೂ, ಉಪೋಸಥ, ಇಲ್ಲವೆ †ಪವಾರಣಕ್ರಿಯೆಯನ್ನು ನಡೆಯಿಸುವದು ಅಸಾಧ್ಯವಾಯಿತು,

---

*ಥೇರವಾದ, ಮಹಾಸಾಂಗೀತಿ, ಗೋಕೂಲಿಕ, ಏಕವ್ಯವಹಾರಿಕ, ಪ್ರಜ್ಞಪ್ತಿ, ಬಾಹುಲಿಕ, ಚೈತೀಯ, ಸರ್ವಾರ್ಥಿಕ, ಧರ್ಮಗುಪ್ತಿಕ, ಕಾಶ್ಯಪೀಯ, ಸನಕಾಂತಿಕ, ಸೂತ್ರ, ಹೈಮವತ, ರಾಜಗಿರೀಯ, ಸಿದ್ಧಾಂತಿಕ, ಪೂರ್ವಶೈಲೀಯ ಅಪರಶೈಲೀಯ,

†ಪವಾರಣ (ಸಂಸ್ಕೃತ=ಪ್ರವರಣ) ಎಂಬದು ವರ್ಷಾವಾಸದ ಕೊನೆಯ ದಿವಸವು. ಈ ದಿವಸ ಭಿಕ್ಷುಗಳೆಲ್ಲ ಒಂದೆಡೆಗೆ ಸಮ್ಮಿಲಿತರಾಗುವರು, ಮತ್ತು ಒಬ್ಬರಿಗೊಬ್ಬರು ಏನಾದರೂ ಅಪರಾಧಮಾಡಿದ್ದರೆ ಅದಕ್ಕಾಗಿ ಕ್ಷಮೆಬೇಡುವರು. ಈ ದಿವಸ ಗೃಹಸ್ಥರು ಸಂಘಕ್ಕೆ ಬೇವರ (ವಸ್ತ್ರ) ದಾನ ಮೊದಲಾದ ಪುಣ್ಯ ಕಾರ್ಯಗಳನ್ನು ಮಾಡುವರು. ಕೆಲವರು ಸಂಪೂರ್ಣ ವರ್ಷಾವಾಸಕ್ಕೆ ಪವಾರಣವೆನ್ನುವರು,

ಈ ಮೇರೆಗೆ ೭ ವರ್ಷಗಳು ಕಳೆಯಲು ಅಶೋಕಚಕ್ರವರ್ತಿಯು ಬೌದ್ಧಧರ್ಮದ ಈ ಅವನತಿಯನ್ನು ಕೇಳಿ ಅದನ್ನು ನಿವಾರಿಸುವದಕ್ಕಾಗಿ ಭಿಕ್ಷುಮಂಡಲಿಗೆ ಉಪೋಸಥ ಕ್ರಿಯೆಯನ್ನು ನಡೆಸುವಂತೆ ವಿಜ್ಞಾಪನೆ ಮಾಡುವದಕ್ಕಾಗಿ ಕೂಡಲೆ ಒಬ್ಬ ಮಂತ್ರಿಯನ್ನು ಅಶೋಕಾರಾಮಕ್ಕೆ ಕಳಿಸಿದನು. ಮಂತ್ರಿಯು ಎಲ್ಲ ಭಿಕ್ಷುಗಳಿಗೆ ಅರಸನ ಅಪ್ಪಣೆಯನ್ನರುಹಿದನು. ಭಿಕ್ಷುಸಂಘವು ವಿಧರ್ಮಿಗಳೊಡನೆ ಉಪೋಸಥ ಕ್ರಿಯೆಯನ್ನು ಮಾಡುವದಕ್ಕೊಪ್ಪಲಿಲ್ಲ. ಇದರಿಂದ ಮಂತ್ರಿಯು ಕೋಪಾವಿಷ್ಟನಾಗಿ ಒರೆಯಿಂದ ಕತ್ತಿಯನ್ನು ಹಿರಿದು ಭಿಕ್ಷುಗಳಲ್ಲೊಬ್ಬೊಬ್ಬರನ್ನೆ ಸಂಹರಿಸಹತ್ತಿದನು. ಅರಸನ ಸೋದರನಾದ ತಿಷ್ಯನೆಂಬ ಭಿಕ್ಷುವು ಆಕಸ್ಮಿಕವಾಗಿ ಒದಗಿದ ಈ ಸಂಹಾರವಾರ್ತೆಯನ್ನು ಕೇಳಿ ಅದನ್ನು ನಿವಾರಿಸ ಬೇಕೆಂದು ಮಂತ್ರಿಯ ಎದುರಿಗೆ ಬಂದನು. ಮಂತ್ರಿಯು ಆತನನ್ನು ನೋಡಿದೊಡನೆ ಅಶೋಕಾರಾಮವನ್ನು ಬಿಟ್ಟು ಅರಸನ ಬಳಿಗೆ ಬಂದನು. ಧಾರ್ಮಿಕನಾದ ಅಶೋಕ ಮಹಾರಾಜನು ಈ ಸುದ್ದಿಯನ್ನೆಲ್ಲ ಕೇಳಿ ಅತ್ಯಂತ ವ್ಯಸನಬಟ್ಟು ತಾನೇ ಆ ವಿಹಾರಕ್ಕೆ ಬಂದು ಎಲ್ಲ ಭಿಕ್ಷುಗಳನ್ನು ಕುರಿತು ವ್ಯಾಕುಲನಾಗಿ ಈ ಭಿಕ್ಷುಹತ್ಯಾಪಾತಕವು ಯಾರಿಗೆ ಹತ್ತುವದೆಂದು ಕೇಳಿದನು. ಈ ಪಾಪವು ಅಶೋಕನಿಗೆಂದು ಕೆಲವರೂ, ಮಂತ್ರಿಗೆ ಎಂದು ಕೆಲವರೂ ಇಬ್ಬರಿಗೂ ಎಂದು ಕೆಲವರೂ ಅಭಿಪ್ರಾಯವಿತ್ತರು. ಆಗ ಅಶೋಕನು ಅವರ ಭಿನ್ನಾಭಿಪ್ರಾಯಗಳನ್ನು ಕೇಳಿ ಸಂಶಯಗೊಂಡು ನನ್ನನ್ನು ಈ ಸಂಶಯದಿಂದ ಬಿಡುಗಡೆ ಮಾಡುವವರು ತಮ್ಮಲ್ಲಿ ಯಾರಾದರೂ ಇದ್ದಾರೆಯೇ ಎಂದು ಭಿಕ್ಷುವರ್ಗವನ್ನು ಕೇಳಿದನು. ಆಗ ಬಿಕ್ಷುಗಳು ಮೌದ್ಗಲಿಪುತ್ರ ತಿಷ್ಯನೊಬನು ಮಾತ್ರ ಇದರ ನಿರ್ಣಯ ಮಾಡಬಲ್ಲನೆಂದು ಉತ್ತರವಿತ್ತರು. ಅವನ ಹೆಸರನ್ನು ಕೇಳಿದೊಡನೆ ಅಶೋಕನ ಹೃದಯವು ಭಕ್ತಿ ಶ್ರದ್ಧೆಗಳಿಂದ ಉಕ್ಕಿ ಬಂದಿತು. ಅವನನ್ನು ಪಾಟಲಿಪುತ್ರಕ್ಕೆ ಕರೆತರಬೇಕೆಂದು ಎರಡು ನಾರೆ ಜನರನ್ನು ಕಳಿಸಿದರೂ ಇವನ ಬಯಕೆಯು ಕೈಗೂಡಲಿಲ್ಲ. ಇದಕ್ಕೆ ಬೆರಗಾಗಿ ಅಶೋಕನು ಸ್ಥವಿರನು ಪಾಟಲಿಪುತ್ರಕ್ಕೆ ಬಾರದಿರುವ ಕಾರಣವೇನೆಂದು ಸಂಘವನ್ನು ಕೇಳಿದನು. ಆಗ ಸಂಘವು ಧರ್ಮಸ್ಥಾಪನೆಗಾಗಿ ಆತನ ಸಹಾಯವನ್ನು ಬೇಡಿದರೆ ಮಾತ್ರ ಆತನು ಇಲ್ಲಿಗೆ ಬರುವನು; ಇಲ್ಲವಾದರೆ ಬಾರನು ಎಂದು ಹೇಳಿತು. ಬಳಿಕ ಅರಸನು ಮತ್ತೆ ನಾಲಿರಾರು ಜನ ಅನುಚರರೊಡನೆ ತನ್ನ ಮಂತ್ರಿಗಳನ್ನು ಕಳಿಸಿದನು. ಅವರು ಹೋಗುವಾಗ ಅರಸನು ಸ್ಥವಿರನು ಶಿಬಿಕೆಯಲ್ಲಿ ಬರುವಂತಿಲ್ಲದಿದ್ದರೆ ನಾವೆಯಲ್ಲಿ ಕರೆದುಕೊಂಡು ಬರಬೇಕೆಂದು ಹೇಳಿಕಳುಹಿದ್ದನು. ಆತನ ಅಪ್ಪಣೆಯಂತೆ ಅವರು ತಪೋನಿರತನಾದ ಮಹಾಸ್ಥವಿರನ ಬಳಿಗೆ ಹೋಗಿ ನಮಸ್ಕರಿಸಿ ಮಹಾಪ್ರಭೋ, ಮಗಧಾಧಿಪತಿ ಮೌರ್ಯ ಅಶೋಕಚಕ್ರವರ್ತಿಯು ನಮ್ಮನ್ನು ತಮ್ಮ ಬಳಿಗೆ ಕಳುಹಿರುವನು. ಆತನು ವಿನಯದಿಂದ ತಮ್ಮ ಪಾದಕಮಲಗಳಿಗೆ ವಿಜ್ಞಾಪಿಸಿದ್ದೇನಂದರೆ–" ನಾನು ಬೌದ್ಧಧರ್ಮದ ಗ್ಲಾನಿಯನ್ನು ದೂರಮಾಡಬೇಕೆಂಬ ಮತ್ತು ಧರ್ಮದ ವಿಶುದ್ಧತೆಯ

ನ್ನುಂಟುಮಾಡಬೇಕೆಂದು ಸಂಕಲ್ಪವನ್ನು ಮಾಡಿರುವೆನು. ಈ ಸಂಕಲ್ಪವನ್ನು ಕೊನೆಗಾಣಿಸುವದಕ್ಕೆ ತಮ್ಮ ಸಾಹಾಯ್ಯವನ್ನು ಬೇಡುವೆನು." ಧ್ಯಾನಮಗ್ನನಾದ ಸ್ಥವಿರನು ಈ ವಾಕ್ಯವನ್ನು ಕೇಳಿದೊಡನೆ ಹೊರಡುವದಕ್ಕೆ ಒಪ್ಪಿದನು. ಇತ್ತ ಅರಸನು ದೂತಮುಖದಿಂದ ಸ್ಥವಿರನು ಬರುತ್ತಾನೆಂಬದನ್ನು ಕೇಳಿ ನಗರಶೋಭೆಯನ್ನು ಮಾಡಲಪ್ಪಣೆಯಿತ್ತು ತಾನೇ ನದೀತೀರಕ್ಕೆ ಹೋಗಿ ಅಲ್ಲಿ ಇಳಿದು ಮಹಾಭಕ್ತಿಯಿಂದ ಸ್ಥವಿರನಿಗೆ ಪ್ರಣಾಮಮಾಡಿದನು. ತನ್ನ ಬಲಹೆಗಲಮೇಲೆ ಆತನ ಭುಜವನ್ನಿರಿಸಿಕೊಂಡು ನೌಕೆಯಿಂದ ಆತನನ್ನಿಳಿಸಿಕೊಂಡನು. ಬಳಿಕ ಮಹಾಸಮಾರಂಭದಿಂದ ಕರೆದೊಯ್ದು ಆತನನ್ನು ರತಿವರ್ಧನ ಎಂಬ ಪ್ರಾಸಾದದಲ್ಲಿ ಇಳಿಸಿದನು. ಅಶೋಕನು ತನ್ನ ಕೈಗಳಿಂದ ಆತನ ಪಾದಗಳನ್ನು ತೊಳೆದನು. ಈ ಕಾಲಕ್ಕೆ ಸ್ಥವಿರನು ತನ್ನ ದೈವಿಕಶಕ್ತಿಯನ್ನು ತೋರ್ಪಡಿಸಿ ಎಲ್ಲರಲ್ಲಿ ಭಕ್ತಿಯನ್ನೂ ವಿಸ್ಮಯವನ್ನೂ ಉಂಟುಮಾಡಿದನೆಂದು ಹೇಳಿದೆ. ವಿಶ್ರಾಂತಿಯನ್ನು ಹೊಂದಿದ ಬಳಿಕ ಅರಸನು ಮೆಲ್ಲನೆ ಮಂತ್ರಿಯಿಂದಾದ ಭಿಕ್ಷುಹತ್ಯೆಯ ವರ್ತಮಾನವನ್ನು ವಿವರಿಸಿ ಹೇಳಿ ಈ ಪಾಪವು ಯಾರಿಗೆ ಹತ್ತುವದೆಂದು ಕೇಳಿದನು. ಮಹಾಸ್ಥವಿರನು ಅಶೋಕನನ್ನು ಸಮಾಧಾನಪಡಿಸಿ—"ಪಾಪದಲ್ಲಿ ಮನೋನಿವೇಶವಿಲ್ಲದೆ ಪಾಪವು ಹತ್ತುವದಿಲ್ಲ. ಆದುದರಿಂದ ಈ ಪಾಪವು ನಿನಗೆ ಹತ್ತಲಾರದು." ಎಂದು ಹೇಳಿದನು. ಬಳಿಕ ಮೌದ್ಗಲಿಪುತ್ರ ತಿಷ್ಯನು ಅಶೋಕ ಚಕ್ರವರ್ತಿಗೆ ಬುದ್ಧದೇವನ ಉಪದೇಶವನ್ನು ಹೇಳಹತ್ತಿದನು. ತರುವಾಯ ಏಳು ದಿವಸಗಳಲ್ಲಿ ಎಲ್ಲಕಡೆಗೆ ದೂತರನ್ನು ಕಳುಹಿ ಎಲ್ಲ ಭಿಕ್ಷುಗಳನ್ನು ಕರೆಯಿಸಿದನು. ಭಿಕ್ಷುಗಳೆಲ್ಲ ನೆರೆದ ಮೇಲೆ ಮೌದ್ಗಲಿ ತಿಷ್ಯನೊಡನೆ ಅಶೋಕನು ಭಿಕ್ಷುಗಳಲ್ಲೊಬ್ಬೊಬ್ಬನನ್ನೆ ಪ್ರತ್ಯೇಕವಾಗಿ ಕರೆದು ಧರ್ಮವಿಷಯದಲ್ಲಿ ಅವರವರ ಮತವನ್ನು ಕೇಳಿದನು. ಅವರು "+ಶಾಶ್ವತವಾದ" ಮತ್ತು ಅನ್ಯಧರ್ಮದ ಬೇರೆ ಬೇರೆ ಮಾರ್ಗಗಳಿಗೇ ಬೌದ್ಧಧರ್ಮವೆಂದು ಹೇಳಪತ್ತಿದರು. ಅರಸನು ಈ ಬೇರೆ ಧರ್ಮದ ಭಿಕ್ಷುಗಳನ್ನು ಪತಿತರೆಂದು ಸಂಘದಿಂದ ಬಿಡುಗಡೆಮಾಡಿದನು. ಇವರ ಸಂಖ್ಯೆಯು ೬೦ ಸಾವಿರವಾಯಿತೆಂದು ಮಹಾವಂಶದಲ್ಲಿ ಹೇಳಿದೆ.

ನಿಜವಾದ ಭಿಕ್ಷುಗಳಿಗೆ ಈ ಪ್ರಶ್ನವನ್ನು ಮಾಡಲು ಅವರು ವಿಭಾಜ್ಯವಾದವನ್ನು ಇಲ್ಲವೆ ವಿಚಾರಮೂಲಕ ಧರ್ಮವನ್ನು ವಿವರಿಸಿ ಹೇಳಿದರು. ವಿಭಾಜ್ಯವಾದವೇ ಬುದ್ಧದೇವನ ನಿಜವಾದ ಉಪದೇಶವು. ಅದನ್ನು ತಿಳಿದು ಅಶೋಕನು ಮೌದ್ಗಲಿಪುತ್ರ ತಿಷ್ಯನನ್ನು ಸಂಬೋಧಿಸಿ—ಯಾವದೊಂದು ಕರ್ಮದಿಂದ ಈ ಸಂಘವು ಮತ್ತೆ ಶುದ್ಧಿಯನ್ನು ಹೊಂದುವಂತೆ ಇದರೆ ಹೇಳಿರಿ, ಇವರು ಅದನ್ನು ನೆರವೇರಿಸಿ ಮುಂದೆ ಉಪೋಸಥ

+ ಶಾಶ್ವತವಾದ ಮತ್ತು ಉಚ್ಛೇದವಾದ ಇವೆರಡೂ ಬೌದ್ಧಧರ್ಮದ ವಿರುದ್ಧವಾದಂಥವು. ಬುದ್ಧದೇವನು ಈ ಎರಡು ಮತಗಳನ್ನು ಖಂಡಿಸಿರುವನು. ಶಾಶ್ವತವಾದದ ಮತವು ಎಲ್ಲ ವಸ್ತುಗಳು ನಿತ್ಯ ಮತ್ತು ಅನಾದಿ ಎಂದು ಇರುವದು: ಉಚ್ಛೇದವಾದದ ಮತವು ಎಲ್ಲ ವಸ್ತುಗಳು ಧ್ವಂಸಶೀಲವಾದಂಥವು ಎಂದು ಇರುವದು.

ಕ್ರಿಯೆಯನ್ನು ಮಾಡುವರು ಎಂದು ಕೇಳಿದನು. ಆಗ ಸ್ಥವಿರನು ಆ ಅಸಂಖ್ಯ ಭಿಕ್ಷು ಮಂಡಲಿಯಲ್ಲಿ ಅರ್ಹತ್ವದವನ್ನು ಹೊಂದಿದ ಒಂದು ನಾವಿರ ಜನರನ್ನು ಧರ್ಮಸಭೆಯ ಸಲುವಾಗಿ ಆರಿಸಿಕೊಂಡನು. ಈ ನಾವಿರ ಜನ ಭಿಕ್ಷುಗಳೆಲ್ಲರೂ ಜಿತೇಂದ್ರಿಯರೂ ,ಧರ್ಮ ತತ್ವಜ್ಞರೂ, ತ್ರಿಪಿಟಕದಲ್ಲಿ ಪಂಡಿತರೂ, ಸರ್ವ ಗುಣಸಂಪನ್ನರೂ ಆಗಿದ್ದರು. ಮಹಾ ಕಾಶ್ಯಪ, ಮತ್ತು ಸ್ಥವಿರಯಶ ಇವರ ಮಾರ್ಗವನ್ನನುಸರಿಸಿ ಮೌದ್ಗಲಿಪುತ್ರ ತಿಷ್ಯನು ಅವರ ಸಹಾಯದಿಂದ ಪಾಟಲಿಪುತ್ರದಲ್ಲಿ ೩ನೆಯ ಧರ್ಮಮಹಾಸಭೆಯನ್ನು ನೆರವೇರಿಸಿದನು. ಈ ಧರ್ಮಸಭಾಗೃಹದಲ್ಲಿ ಸ್ಥವಿರನಾದ ತಿಷ್ಯನು ಧರ್ಮಸಂಶಯಗಳನ್ನು ದೂರಮಾಡುವ ಉಪಾಯಗಳ ಸಂಬಂಧವಾಗಿ ವಿಸ್ತೃತವಾದ *ಉಪನ್ಯಾಸವನ್ನು ಮಾಡಿದನು. ಅಶೋಕನರಪತಿಯ ಆಳಿಕೆಯ ×೧೭ನೆಯ ವರ್ಷ ಈ ಧರ್ಮಸಭೆಯು ಉಪವೇಶನವು ೯ ತಿಂಗಳವರೆಗೆ ಇತ್ತು. ೭೩ ವರ್ಷ ವಯಸ್ಸಿನ ವೃದ್ಧನಾದ ಮೌದ್ಗಲಿಪುತ್ರ ತಿಷ್ಯನು ಬೌದ್ಧಧರ್ಮದ ತತ್ವಗಳನ್ನು ಮತ್ತೆ ಪ್ರಕಟಿಸಿದದರಿಂದ ನಾಲ್ಕೂದಿಕ್ಕಿಗೆ ತ್ರಿರತ್ನದ ಮಹಿಮೆಯು ಹರಡಿತು. ಈ ತೃತೀಯ ಧರ್ಮಮಹಾಸಭೆಯು ಬುದ್ಧದೇವನ ಮಹಾಪರಿನಿರ್ವಾಣವಾದ ೨೩೬ ವರ್ಷಗಳ ತರುವಾಯ ನೆರವೇರಿತೆಂದು ಮೊದಲೇ ಹೇಳಿದೆ.

ಈ ಧರ್ಮಮಹಾಸಭೆಯ ವಿಷಯವಾಗಿ ಪಾಶ್ಚಾತ್ಯಪಂಡಿತರು ಹಲವು ವಿಧವಾಗಿ ಅಭಿಪ್ರಾಯ ಪಡುತ್ತಾರೆ. ಕೆಲವರು ಧರ್ಮಾಶೋಕನ ಆಳಿಕೆಯಲ್ಲಿ ಧರ್ಮಸಭೆಯ ಅಧಿವೇಶನವು ಆಗಿಯೇ ಇಲ್ಲ. ಒಂದು ವೇಳೆ ಇಂಥ ಮಹಾಕಾರ್ಯವು ಅವನ ಆಳಿಕೆಯಲ್ಲಿ ಜರುಗಿದ್ದರೆ ಅವನ ಗಿರಿಲಿಪಿಗಳಲ್ಲಿ ಇಲ್ಲವೆ ಬೇರೆ ಶಾಸನಗಳಲ್ಲಿ ಸ್ವಲ್ಪವಾದರೂ ಉಲ್ಲೇಖವು ಇರಬಹುದಾಗಿತ್ತು. ಈ ಮೂರನೆಯ ಧರ್ಮಸಭೆಯ ಸಂಬಧವಾಗಿ ಸತ್ಯಾಂಶವಿದ್ದರೆ ಭರತಖಂಡದ ಮತ್ತು ಚೀನದೇಶದ ಉಪಾಖ್ಯಾನಗಳಲ್ಲಿ ಅದರ ಉಲ್ಲೇಖವು ಇಲ್ಲದ ಕಾರಣವೇನು? ಆದದರಿಂದ ಮಹಾವಂಶದಲ್ಲಿ ಹೇಳಿದ ಈ ವೃತ್ತಾಂತವು ಸತ್ಯವೆಂದು ನಂಬುವ ಬಗೆ ಹೇಗೆ? ಎಂದು ಹೇಳುತ್ತಾರೆ.

ಆದರೆ ಈ ಆಕ್ಷೇಪಣೆಗೆ ಇಷ್ಟು ಉತ್ತರವನ್ನು ಹೇಳಬಹುದು. ಈ ವರೆಗೆ ಅಶೋಕನ ಎಲ್ಲ ಗಿರಿಲಿಪಿಗಳೂ ಶಾಸನಗಳೂ ಶೋಧಿಸಲ್ಪಟ್ಟಿಲ್ಲ. ಉಪಲಬ್ಧವಿದ್ದ ಗಿರಿಲಿಪಿ-ಶಾಸ

---

* ಈ ಉಪದೇಶವು ಅಭಿಧರ್ಮಪಿಟಕಾಂತರ್ಗತ ಕಥಾವಸ್ತುಪ್ರಕರಣ ಎಂಬ ಗ್ರಂಥದಲ್ಲಿರುವದು.

× ಮಹಾವಂಶದ ಮತದಂತೆ ಅಶೋಕನ ಆಳಿಕೆಯ ೧೭ನೆಯ ವರ್ಷ ಧರ್ಮಮಹಾಸಭೆಯು ನೆರೆದಿತ್ತು. ಆದರೆ Vincent Smith ಮೊದಲಾದ ಐತಿಹಾಸಿಕರು ಅಶೋಕನ ಆಳಿಕೆಯ ೩೦ ವರ್ಷಗಳಲ್ಲಿ ಈ ಪ್ರಕಾರದ ಪ್ರಸಂಗವು ಆದದ್ದು ಅಸಂಭವವೆಂದು ಹೇಳುವರು. ಯಾಕಂದರೆ ಅತನ ಆಳಿಕೆಯ ೨೯ನೆಯ ವರ್ಷ ಕೊನೆಯ ಸ್ತಂಭಲಿಪಿಯು ಕೊರೆಯಿಸಲ್ಪಟ್ಟಿತು. ಅವರು ಊಹಿಸುವದೇನಂದರೆ ಮೇಲೆ ಹೇಳಿದ ಕಾಲದ ಒಳಗೇ ಈ ಪ್ರಕಾರದ ದೊಡ್ಡ ಪ್ರಸಂಗವೊದಗಿದ್ದರೆ ಅನುಶಾಸನದಲ್ಲಿ ಎಲ್ಲಿಯಾದರೂ ಆ ವಿಷಯದ ಉಲ್ಲೇಖವಿರುತ್ತಿತ್ತು. ಆದದರಿಂದ ಅಶೋಕನ ಆಳಿಕೆಯ ೩೦ನೆಯ ವರ್ಷ ಧರ್ಮಮಹಾಸಭೆಯು ನೆರೆದಿರಬೇಕೆಂದು ಅವರು ಹೇಳುವರು.

ನಗಳಿಂದ ಅಶೋಕನ ಆಳಿಕೆಯ ಎಲ್ಲ ಘಟನೆಗಳ ವಿಚಾರವನ್ನು ಮಾಡುವದಕ್ಕಾಗುವ ದಿಲ್ಲ. ಶಾಸನ, ಗಿರಿಲಿಪಿಗಳಲ್ಲಿ ಉಲ್ಲಿಖಿತವಾಗಿರುವ ಘಟನೆಗಳು ಮಾತ್ರ ನಿಸ್ಸಂಶಯವಾಗಿ ಪ್ರಾಮಾಣಿಕವೆಂದು ಹೇಳಬಹುದು. ಆದರೆ ಯಾವ ಸಂಗತಿಗಳು ಅವುಗಳಲ್ಲಿ ಉಲ್ಲೇಖಿಸಲ್ಪಟ್ಟಿಲ್ಲವೋ ಅವು ಸಂಭವಿಸಲೇ ಇಲ್ಲವೆಂದು ತಿರಸ್ಕರಿಸಲಾಗುವದಿಲ್ಲ. ವಿಶೇಷವಾಗಿ ಭರತಖಂಡದಲ್ಲಿ ಬೌದ್ಧಧರ್ಮದ ಇತಿಹಾಸವು ಯತ್ನಪೂರ್ವಕವಾಗಿ ರಕ್ಷಿಸಲ್ಪಟ್ಟಿಲ್ಲ. ಮಹಾವಂಶವು ಬಹು ಪ್ರಾಚೀನ ಗ್ರಂಥವು, ಈ ಗ್ರಂಥದಿಂದ ಭರತಖಂಡದ ಹಲವು ಪ್ರಾಚೀನ ಐತಿಹಾಸಿಕ ವೃತ್ತಾಂತಗಳು ಸ್ವೀಕರಿಸಲ್ಪಟ್ಟಿವೆ. ಅಶೋಕನ ಕಾಲದಿಂದ ಈ ವರೆಗೆ ಸಿಂಹಳದ್ವೀಪವು ಬೌದ್ಧಧರ್ಮದ ಕೇಂದ್ರಸ್ಥಾನವು. ಭರತಖಂಡದ ಭಿಕ್ಷುಗಳು ಸಿಂಹಳದಲ್ಲಿ ಬುದ್ಧದೇವನ ಮಹಿಮೆಯನ್ನು ಪ್ರಚಾರಗೊಳಿಸುತ್ತಿರುವ ಕಾಲದಲ್ಲಿಯೇ ಭರತಖಂಡದ ಇತಿಹಾಸವನ್ನೂ ಪ್ರಚಾರಪಡಿಸುತ್ತಿದ್ದರು. ಇಲ್ಲದಿದ್ದರೆ ಈಗ ನಮಗೆ ಮಹಾವಂಶದಲ್ಲಿ ಅಶೋಕನ ಇಲ್ಲವೆ ಬಿಂದುಸಾರನ ಹೆಸರು ಸಹ ದೊರೆಯುತ್ತಿರಲಿಲ್ಲ. ಗಿರಿಲಿಪಿಗಳಲ್ಲಿಯೂ, ಶಾಸನಗಳಲ್ಲಿಯೂ ಉಲ್ಲಿಖಿತವಾಗಿಲ್ಲವೆಂಬ ಮಾತ್ರದಿಂದ ಮಹಾವಂಶದಲ್ಲಿ ವರ್ಣಿತವಾದ ಇಷ್ಟೊಂದು ದೊಡ್ಡ ಪ್ರಸಂಗವು ಅಸತ್ಯವೆಂದು, ಇಲ್ಲವೆ ಕವಿಕಲ್ಪಿತವೆಂದು ಬಿಟ್ಟುಬಿಡುವದು ಸರಿಯಲ್ಲ. ಈ ವಿಷಯದಲ್ಲಿ ಭರತಖಂಡದಲ್ಲಿ ಅಶೋಕಾವದಾನವನ್ನು ನೋಡಬಹುದಾದರೂ ಅದರಲ್ಲಿ ಧರ್ಮಸಭೆಯ ಉಲ್ಲೇಖವೇ ಇಲ್ಲ; ಆದರೆ ಅದು ನಿಜವಾದ ಇತಿಹಾಸಗ್ರಂಥವಲ್ಲ; ಅದೊಂದು ಅವದಾನಗ್ರಂಥವು. ಒಂದೆರಡು ಪುರಾಣಗಳ ಹೊರತು ಭರತಖಂಡದ ಯಾವ ಗ್ರಂಥದಲ್ಲಿಯೂ ಅಶೋಕನ ಇಲ್ಲವೆ ಬೌದ್ಧಯುಗದ ಇತಿಹಾಸವು ವಿವರಿಸಲ್ಪಟ್ಟಿಲ್ಲ. ಈವರೆಗೆ ಪ್ರಕಟಿತವಾದ ಚೀನೀಯ ಗ್ರಂಥಗಳೆಲ್ಲ ಅಶೋಕನ ಸಮಕಾಲದವಲ್ಲ. ವಿದೇಶೀಯ ಪ್ರವಾಸಿಕರು ತಾವು ನೋಡಿದುದನ್ನೂ, ಜನಮುಖದಿಂದ ಕೇಳಿದುದನ್ನೂ ಬರೆದಿಟ್ಟಿರುವರಲ್ಲದೆ ಭರತಖಂಡದ ಎಲ್ಲ ವೃತ್ತಾಂತಗಳನ್ನು ಬರೆದಿಡುವದು ಅವರಿಗೆ ಸಾಧ್ಯವಲ್ಲ. ಅವರ ಗ್ರಂಥಗಳಲ್ಲಿ ಉಲ್ಲೇಖವಿಲ್ಲವೆಂದ ಮಾತ್ರದಿಂದ ಧರ್ಮಮಹಾಸಭೆಯ ಕಥೆಯು ಸಟೆಯೆಂದಾಗಲಿ, ಕಲ್ಪಿತವೆಂದಾಗಲಿ ಹೇಳುವದು ಅಸಂಗತವಾಗುವದು.

೧೧ನೆಯ ಅಧ್ಯಾಯ.

ಅಶೋಕನ ಧರ್ಮಪ್ರಚಾರ.



ಧರ್ಮಮಹಾಸಭೆಯ ಅಧಿವೇಶನವಾದ ತರುವಾಯ ಬೌದ್ಧಧರ್ಮವು ಮೋಡ ಹರಿದ ಚಂದ್ರನಂತೆ ಧರ್ಮ ರಾಜ್ಯದಲ್ಲಿ ಬೆಳಗಹತ್ತಿತು. ಮೊದಲು ಧರ್ಮದ ಹೆಸರಿನಿಂದ ಸಂಘದಲ್ಲಿ ಸೇರಿದ ಹಲವು ದುರಾಚರಣೆಗಳು ಈಗ ಸಂಪೂರ್ಣವಾಗಿ ಇಲ್ಲದಂತಾದವು. ಧರ್ಮಸಭೆಯು ಬೌದ್ಧಧರ್ಮವನ್ನು ಸಂಸ್ಕರಿಸಿ ಅದರ ಘಟನೆಯನ್ನು ತಿದ್ದಿ, ಬಲವಾದ ತಳಹದಿಯ ಮೇಲೆ ಅದನ್ನು ನಿಲ್ಲಿಸಿತು. ಇದಕ್ಕೂ ಮುಂಚೆ ಬಿಂಬಿಸಾರ ಮೊದಲಾದ ಅರಸರಿಂದ ಧರ್ಮಪ್ರಸಾರಕ್ಕಾಗಿ ಭಿಕ್ಷುಸಂಘವು ಸಾಧ್ಯವಿದ್ದಷ್ಟು ಸಹಾಯವನ್ನು ಹೊಂದುತ್ತಬಂದಿತ್ತು. ಆ ಪೂರ್ವಪದ್ಧತಿಯನ್ನನುಸರಿಸಿ ಸಂಘದ ನಾಯಕನಾದ ಮೌದ್ಗಲಿಪುತ್ರ ತಿಷ್ಯನು ದೇಶವಿದೇಶಗಳಲ್ಲಿ ಧರ್ಮಪ್ರಚಾರ ಮಾಡುವದಕ್ಕಾಗಿ ಅಶೋಕಮಹಾರಾಜನ ಸಾಹಾಯ್ಯವನ್ನು ಬೇಡಿದನು. ಮೊದಲೇ ಅಶೋಕನಲ್ಲಿ ಧರ್ಮಪರಾಯಣತೆಯೂ, ಬೌದ್ಧಧರ್ಮದ ವಿಷಯವಾಗಿ ಅತ್ಯಂತಾನುರಾಗವೂ ತಲೆದೋರಿದ್ದವು. ಕಲಿಂಗವಿಜಯದ ತರುವಾಯ ಅವನು ಬುದ್ಧದೇವನ ಅಮೌಲ್ಯವಾದ ಉಪದೇಶಗಳನ್ನು ಆಚರಣೆಯಲ್ಲಿ ತರುವದಕ್ಕೆ ಪ್ರಯತ್ನಿಸುತ್ತಿದ್ದನು. ಬೌದ್ಧಧರ್ಮವನ್ನು ಸ್ವೀಕರಿಸಿದ ಬಳಿಕ ಆತನು ಎರಡುವರೆ ವರ್ಷಕ್ಕಿಂತ ಹೆಚ್ಚು ಕಾಲ ×ಉಪಾಸಕನಾಗಿ ಇದ್ದನೆಂದು ಶಿಲಾಲಿಪಿಗಳಿಂದ ತಿಳಿಯುವದು, ಬಳಿಕ ಕ್ರಿ. ಪೂ. ೨೫೯ರಲ್ಲಿ ಪಟ್ಟಾಭಿಷೇಕವಾಗಿ ೧೧ ವರ್ಷಗಳಾದ ತರುವಾಯ ಆತನು ಭಿಕ್ಷುವ್ರತವನ್ನು ಸ್ವೀಕರಿಸಿ ಧರ್ಮದ ಎಲ್ಲ ಉಪದೇಶಗಳನ್ನು ಸರಿಯಾಗಿ ಆಚರಿಸತೊಡಗಿದನು. ಈ ಕಾಲದಲ್ಲಿ ಸಮಗ್ರ ಭರತಖಂಡದಲ್ಲಿ ಪ್ರಚಲಿತವಾದ ದೇವೋಪಾಸನೆಯು ಅವನಿಗೆ ನಿರುಪಯುಕ್ತವೆಂದು ತೋರಹತ್ತಿತ್ತು. ಭಿಕ್ಷುವ್ರತವನ್ನು ಸ್ವೀಕರಿಸಿದ್ದರಿಂದ ಹುರುಪು ಬಂದಂತಾಗಿ ಅಶೋಕನು ಬೌದ್ಧಧರ್ಮವನ್ನು ಹಬ್ಬುಗೊಳಿಸುವದಕ್ಕಾಗಿ ತನ್ನ ವಿಶಾಲಸಾಮ್ರಾಜ್ಯದಲ್ಲಿ ಬೇರೆ ಬೇರೆ ಕಡೆಗೆ ವಿಹಾರಗಳನ್ನೂ, ಧರ್ಮಶಾಲೆಗಳನ್ನೂ ಸ್ಥಾಪಿಸಹತ್ತಿದನು. ಪಾಟಲಿಪುತ್ರನಗರದಲ್ಲಿ ದೊಡ್ಡದೊಂದು ವಿಹಾರವನ್ನು ಕಟ್ಟಿಸುವ ಕೆಲಸವನ್ನು ಸ್ಥವಿರ *ಇಂದ್ರಗುಪ್ತನಿಗೆ ಒಪ್ಪಿಸಿದನು. ಆ ಕೆಲಸಕ್ಕೆ ಮೂರು ವರ್ಷಗಳು ಹಿಡಿದವು. ರಾಜ

×ಬೌದ್ಧಧರ್ಮದ ಜನರಲ್ಲಿ ನಾಲ್ಕು ವರ್ಗಗಳು. ಉಪಾಸಕ, ಉಪಾಸಿಕಾ, ಭಿಕ್ಷು, ಭಿಕ್ಷುಣಿ. ಗೃಹಸ್ಥಜನರಿಗೆ ಉಪಾಸಕರೆನ್ನುವರು. ಇವರು ಕೇವಲ ಪಂಚ ಅಷ್ಟಶೀಲಗಳ ಅಧಿಕಾರವುಳ್ಳವರು.

*ಮಹಾವಂಶ.

ಧಾನಿಯಲ್ಲಿದ್ದ ಈ ವಿಹಾರವು ವಿಚಿತ್ರ ಶಿಲ್ಪಕೌಶಲ್ಯವುಳ್ಳದ್ದಾಗಿಯೂ , ಮನೋಹರವಾಗಿಯೂ, ವಿಶಾಲವಾಗಿಯೂ ಇತ್ತು. ಅದರಿಂದ ಅದಕ್ಕೆ ಭಿಕ್ಷುಗಳು ಅಶೋಕಾರಾಮವೆಂದು ಹೆಸರಿಟ್ಟರು.

ಈ ಸಮಯದಲ್ಲಿ ಅಶೋಕನು ಉಪಗುಪ್ತನೊಡನೆ ಹಲವು ಬೌದ್ಧತೀರ್ಥಗಳ ಯಾತ್ರೆಯನ್ನು ಮಾಡಿ ತನ್ನ ಅತ್ಯಂತ ಧರ್ಮಾನುರಾಗವನ್ನು ವ್ಯಕ್ತಪಡಿಸಿದನು. ಏಳು ದಿನಗಳವರೆಗಿನ ‡ದೀಪಾವಲೀ ಉತ್ಸವ, ಅಲ್ಲಲ್ಲಿ ವಿಹಾರಗಳನ್ನೂ, ಸ್ತಂಭಗಳನ್ನೂ ನಿಲ್ಲಿಸುವದು, ಊರೂರಿಗೆ ಧರ್ಮವಿಧಿಗಳ ಪ್ರಚಾರಪಡಿಸುವದು, ಶಿಲಾಲಿಪಿಗಳಿಂದ ಧರ್ಮದ ಗೌರವವನ್ನು ಪ್ರಕಟಮಾಡುವದು, ಧರ್ಮದ ಪ್ರತಿಷ್ಠಾಪನೆಗಾಗಿ ಧರ್ಮಮಹಾಸಭೆಯನ್ನು ನೆರಿಸುವದು ಇವೇ ಮೊದಲಾದ ಕಾರ್ಯಗಳು ಅಶೋಕನನ್ನು ಧಾರ್ಮಿಕರಾಜರಲ್ಲಿ ಶ್ರೇಷ್ಠನನ್ನಾಗಿ ಮಾಡಿರುವವು. ಸಮಗ್ರ ಜಗತ್ತಿನಲ್ಲಿ ವಿಸ್ತಾರವಾಗಿ ಧರ್ಮವನ್ನು ಹಬ್ಬಿಸುವ ಭಾರವನ್ನು ಅಶೋಕನು ಮಹಾಸ್ಥವಿರ ತಿಷ್ಯನಿಗೆ ಒಪ್ಪಿಸಿದ್ದನು. ತಿಷ್ಯನು ಭರತವರ್ಷದ ಬೇರೆ ಬೇರೆ ಪ್ರದೇಶಗಳಿಗೂ, ಭರತವರ್ಷದ ಹೊರಗಿನ ದೇಶಗಳಿಗೂ ಧರ್ಮಪ್ರಚಾರಕರನ್ನು ಕಳಿಸಿಕೊಟ್ಟಿದ್ದನು. ಅವರು ಎಲ್ಲಕಡೆ ಜ್ಞಾನ, ಧರ್ಮ, ನೀತಿ, ಪವಿತ್ರತೆ, ತ್ಯಾಗ, ವೈರಾಗ್ಯ ಇವುಗಳ ಉಚ್ಚಸ್ವರೂಪವನ್ನು ಪ್ರಕಟಿಸಹತ್ತಿದರು. ಈಮೇರೆಗೆ ಜಾತಿವರ್ಣಭೇದವಿಲ್ಲದೆ ಜನಸಾಮಾನ್ಯದಲ್ಲಿ ಧರ್ಮಪ್ರಚಾರಮಾಡಿದ ಕೆಲಸವು ಭರತವರ್ಷದಲ್ಲಿ ಎಲ್ಲಕ್ಕೂ ಮೊದಲು ಬುದ್ಧಶಿಷ್ಯರಿಂದಲೇ ಜರುಗಿತು.

ಹಿಂದೂಧರ್ಮಕ್ಕೂ ಬೌದ್ಧಧರ್ಮಕ್ಕೂ ಭೇದವು ಈ ವಿಷಯದಲ್ಲಿಯೇ ಕಂಡುಬರುವದು. ಹಿಂದುಶಾಸ್ತ್ರವು ಧರ್ಮದ ಉಚ್ಚತತ್ವಗಳನ್ನು ಅಧಿಕಾರಿಯಾದವನಿಗೆ ಮಾತ್ರ ಹೇಳಬೇಕೆಂದೂ, ಮತ್ತು ಆ ತತ್ವಗಳು ಗುರುವಿನಿಂದ ಶಿಷ್ಯನಿಗೆ ಉಪದೇಶಿಸಲ್ಪಡಬೇಕೆಂದೂ ಹೇಳುವದು. ಮೊದಲು ದ್ವಿಜಾತಿಯವರಲ್ಲಿ, ವಿಶೇಷವಾಗಿ ಬ್ರಾಹ್ಮಣರಲ್ಲಿ ಮಾತ್ರ ಧರ್ಮದ ಉಚ್ಚತತ್ವಗಳು ನಿಂತಿದ್ದವು. ಉಳಿದ ಸಾಮಾನ್ಯಜನಕ್ಕೆ ಅವುಗಳ ಪರಿಚಯವಿರಲಿಲ್ಲ. ಆದರೆ ಬೌದ್ಧಯುಗದಲ್ಲಿ ಈ ಸಂಕುಚಿತಭಾವವು ಹೊರಟುಹೋಯಿತು. ಬೌದ್ಧಯುಗದಲ್ಲಿ ಧರ್ಮದ ತತ್ವಗಳ ಮೇಲೆ ಒಂದೇ ಜಾತಿಯ ಅಧಿಕಾರವುಳಿಯಲಿಲ್ಲ. ಧರ್ಮವು ಎಲ್ಲ ಜನರ ಸಂಪತ್ತಿಯಾಯಿತು. ಗೌತಮನು ತಾನು ಕಂಡುಹಿಡಿದ ಮಹಾಸತ್ಯವನ್ನು ಗಂಭೀರಧ್ವನಿಯಿಂದ ಭರತವರ್ಷದಲ್ಲಿ ಮನೆಮನೆಗೆ ಹೋಗಿ ಉಪದೇಶಿಸಿದನು. ಗೌತಮನು ಬೋಧಿವೃಕ್ಷದ ಬುಡದಲ್ಲಿ ಯಾವ ಮಹಾಜ್ಞಾನವನ್ನು ಸಂಪಾದಿಸಿದನೋ ಅದನ್ನು ಜಗತ್ತಿಗೆ ದಾನಮಾಡುವದಕ್ಕಾಗಿ ಆತನು ಉರುಬೆಲ್ವದಿಂದ *ಮೃಗದಾ

‡ಮಹಾವಂಶ.

* ಈಗಿನ ಸಾರನಾಥವು ವಾರಣಾಸಿಯಿಂದ ೩ ಕ್ರೋಶಗಳ ಮೇಲೆ ಇರುವದು. ಬುದ್ಧದೇವನು ತನ್ನ ಯಾವದೋ ಒಂದು ಪೂರ್ವಜನ್ಮದಲ್ಲಿ ಈ ಸ್ಥಳದಲ್ಲಿ ಮೃಗದೇಹವನ್ನು ಧರಿಸಿ ಜನ್ಮವನ್ನು ಹೊಂದಿದ್ದನು.

ವಕ್ಕೆ ಹೋಗಿ ೬೦ ಜನ ಶಿಷ್ಯರನ್ನು ಜಾತಿವರ್ಣಭೇದವಿಲ್ಲದೆ ಆ ಮಹಾಸತ್ಯವನ್ನು ಪ್ರಚಾರಪಡಿಸಿರೆಂದು ಹೇಳಿ ದೇಶದೇಶಾಂತರಗಳಿಗೆ ಕಳಿಸಿದನು. ಮತ್ತು ಅಮರವಾಣಿಯಿಂದ ಅವರಿಗೆ ಉಪದೇಶಿಸಿದ್ದೇನಂದರೆ:—" ಚರಥಭಿಕ್ಖವೇ ಚಾರಿಕಂ, ಬಹುಜನಹಿತಾಯ, ಬಹುಜನಸುಖಾಯ, ಲೋಕಾನುಕಂಪಾಯ, ಅತ್ಥಾಯ, ಹಿತಾಯ, ಸುಖಾಯ, ದೇವಮನುನ್ನಾನಂದೇಸೇಥ, ಭಿಕ್ಖವೇ ಧಮ್ಮಂ, ಪರಿಶುದ್ಧಂ, ಬ್ರಹ್ಮಚರ್ಯಂ, ಪಕಾಸೇಥ" " ಎಲೈ ಭಿಕ್ಷುಗಳೇ ನೀವು ಮನುಷ್ಯರ ಹಿತಕ್ಕಾಗಿ, ಮಂಗಲಕ್ಕಾಗಿ, ಸುಖಕ್ಕಾಗಿ, ಜಗತ್ತಿನ ಸಲುವಾಗಿ, ದೇವಮನುಷ್ಯರ ಸಲುವಾಗಿ, ದಯಾವಶರಾಗಿ, ದೇಶದೇಶಗಳಲ್ಲಿ ಸಂಚಾರಮಾಡಿರಿ; ನನ್ನ ಧರ್ಮವನ್ನು ಪ್ರಚಾರಗೊಳಿಸಿರಿ; ಮತ್ತು ಎಲ್ಲಕಡೆಗೆ ಪರಿಶುದ್ಧವಾದ ಬ್ರಹ್ಮಚರ್ಯವನ್ನು ನೆಲೆಗೊಳಿಸಿರಿ. " ಪೂಜ್ಯನಾದ ಬುದ್ಧದೇವನ ಮುಖಕಮಲದಿಂದ ಹೊರಟ ಈ ಅಮೃತೋಪಮವಾಕ್ಯವು ಜಗತ್ತಿನಲ್ಲಿ ಧರ್ಮದ ಇತಿಹಾಸವು ಇರುವವರೆಗೆ ಜಗದ್ವಾಸಿಗಳ ಹೃದಯದ ಮೇಲೆ ಅಧಿಕಾರವನ್ನು ನಡೆಸುವದು. ಬುದ್ಧದೇವನು ಯಾವ ಧರ್ಮಬೀಜವನ್ನು ಮೊಳಕೆಯೊಡೆಯುವಂತೆ ಮಾಡಿದ್ದನೋ ಆದು ಅಶೋಕನ ಪ್ರಯತ್ನರೂಪಜಲಸೇಚನದಿಂದ ದೊಡ್ಡ ವೃಕ್ಷವಾಯಿತು. ಅಶೋಕ ಚಕ್ರವರ್ತಿಯು ಬೌದ್ಧಧರ್ಮಪ್ರಚಾರಕ್ಕೊಸ್ಕರ ಮಾಡಿದ ಪ್ರಯತ್ನಗಳ ವರ್ಣನೆಯು ದ್ವೀಪವಂಶದಲ್ಲಿಯೂ, ಮಹಾವಂಶದಲ್ಲಿಯೂ ಇರುವದು. ಅದನ್ನೇ ಇಲ್ಲಿ ಕೊಡುವೆವು.

ಅಶೋಕನ ಆಳಿಕೆಯಲ್ಲಿ ಕೆಳಗೆ ಹೇಳುವ ಸ್ಥಳಗಳಿಗೆ ಭಿಕ್ಷುಗಳು ಧರ್ಮಪ್ರಚಾರಕ್ಕೊಸ್ಕರ ಕಳಿಸಲ್ಪಟ್ಟಿದ್ದರು. ಕಾಶ್ಮೀರ, ಗಾಂಧಾರ ಪ್ರದೇಶಗಳಿಗೆ ಮಹಾಸ್ಥವಿರ ಮಜ್ಝಂತಿಕನು, ಮಹಿಷಮಂಡಲಕ್ಕೆ ಅಂದರೆ ಈಗಿನ ಮೈಸೂರ ಪ್ರಾಂತಕ್ಕೆ ಸ್ಥವಿರಮಹಾದೇವನು, ಬನವಾಸಿಯ ಪ್ರಾಂತಕ್ಕೆ ಅಂದರೆ ಈಗಿನ ಉತ್ತರಕಾನಡಾ ಜಿಲ್ಲೆಗೆ ಸ್ಥವಿರರಕ್ಷಿತನು, ಮಹಾರಾಷ್ಟ್ರಕ್ಕೆ ಮಹಾಧರ್ಮರಕ್ಷಿತನು ಮತ್ತು ಯೋನರಾಜ್ಯಕ್ಕೆ ಅಂದರೆ ಯವನ ಪ್ರದೇಶಕ್ಕೆ ಮಹಾರಕ್ಷಿತನು ಹೋಗಿದ್ದರು. ಹಿಮಾಲಯಪ್ರದೇಶಕ್ಕೆ ಸ್ಥವಿರ ಮಜ್ಝಿಮನೂ, ಕಾಶ್ಯಪನೂ, ಸುವರ್ಣಭೂಮಿ ಅಥವಾ ಈಗಿನ ಪೇಗೂ ಮೊಲಮೇನ ಗಳಿಗೆ ಸೋನ, ಉತ್ತರ ಎಂಬವರೂ, ಸಿಂಹಲಕ್ಕೆ ಮಹೇಂದ್ರನೂ ಕಳಿಸಲ್ಪಟ್ಟಿದ್ದರು. ಮೇಲೆ ಹೇಳಿದ ಪ್ರದೇಶಗಳಲ್ಲಿ ಧರ್ಮದ ಒಂದೊಂದು ಕೇಂದ್ರಸ್ಥಳವು ಸ್ಥಾಪಿಸಲ್ಪಟ್ಟಿತ್ತು. ಮೇಲೆ ಹೇಳಿದ ಭಿಕ್ಷುಗಳು ಆಯಾ ಕೇಂದ್ರಸ್ಥಳಗಳ ಆಚಾರ್ಯತ್ವವನ್ನು ವಹಿಸಿದ್ದರು. +ಸಾಂಚಿಯ ಒಂದು ಸ್ತೂಪದಲ್ಲಿ ಮಜ್ಝಿಮ ಮತ್ತು ಕಾಶ್ಯಪ ಇವರ ಭಸ್ಮಾವಶೇಷವು ಕಾದಿಡಲ್ಪಟ್ಟಿದೆ. ಮತ್ತು †ಸೋನಾರಸ್ತೂಪದಲ್ಲಿ ಕಾಶ್ಯಪನು ಹಿಮಾಲಯಪ್ರದೇಶದ ಆಚಾರ್ಯಸ್ಥಾನದಲ್ಲಿದ್ದನೆಂದು ಉಲ್ಲೇಖವುಂಟು. ಇದರಿಂದ ದ್ವೀಪವಂಶ ಮಹಾವಂಶಗಳಲ್ಲಿ ಐತಿಹಾಸಿಕ ಸತ್ಯವಿರುವದೆಂಬ ಸಂಗತಿಯು ಸ್ಪಷ್ಟವಾಗಿ ಗೊತ್ತಾಗುವದು.

+ ಇದಕ್ಕೆ ಚೈತ್ಯಗಿರಿಯಿಂದು ಪ್ರಾಚೀನ ನಾಮವು. † ಭಿಲ್ಸಾದ ಸಮೀಪದಲ್ಲಿರುವ ಸ್ಥಾನವು.

ಮೇಲೆ ಹೇಳಿದ ಗ್ರಂಥಗಳಲ್ಲಲ್ಲದೆ ಶಿಲಾಲಿಪಿಗಳಲ್ಲಿಯೂ ಧರ್ಮಪ್ರಸಾರದ ಉಲ್ಲೇಖವುಂಟು. ಕೇರಲಪುತ್ರ, ಸತಿಯಪುತ್ರ, ಚೋಲ, ಪಾಂಡ್ಯ ದೇಶಗಳಿಗೆ ಧರ್ಮಪ್ರಸಾರಕ್ಕಾಗಿ ಭಿಕ್ಷುಗಳು ಕಳಿಸಲ್ಪಟ್ಟಿದ್ದರು. ಸಿರಿಯಾ, ಸಾಯರಿನ್, ಇಪಿರಾಸ, ಮಾಸಿಡೋನಿಯಾ ಮೊದಲಾದ ಪ್ರದೇಶಗಳಲ್ಲಿಯೂ ಅಶೋಕನ ವರ್ಚಸ್ಸು ಇತ್ತೆಂತಲೂ ಅಲ್ಲಿಗೂ ಅಶೋಕನು ಭಿಕ್ಷುಗಳನ್ನು ಧರ್ಮಪ್ರಸಾರಕ್ಕಾಗಿ ಕಳಿಸಿದ್ದನೆಂತಲೂ ಗಿರಿಲಿಪಿಗಳಿಂದ ತಿಳಿಯುವದು. ಅಶೋಕನು ಧರ್ಮವಿಧಿಗಳ ಪ್ರಸಾರಕ್ಕಾಗಿ ಭಿಕ್ಷುಗಳನ್ನು ಕಳುಹಿದ ಸಂಗತಿಯು ೨ನೆಯ ಮತ್ತು ೧೩ನೆಯ ಗಿರಿಲಿಪಿಗಳಲ್ಲಿ ಉಲ್ಲೇಖಿಸಲ್ಪಟ್ಟಿರುವದು. ಶಿಲಾಲಿಪಿಗಳಿಂದ ಅಶೋಕನ ಧರ್ಮಪ್ರಸಾರದ ಕೇಂದ್ರಸ್ಥಳಗಳು ಆರು ಎಂದು ಗೊತ್ತಾಗುವದು. ಅವು:—

೧ ಮೌರ್ಯಸಾಮ್ರಾಜ್ಯಕ್ಕೆ ಸೇರಿದ ಪ್ರದೇಶಗಳು.

೨ ಸಾಮ್ರಾಜ್ಯದ ಮೇರೆಗೆ ಹೊಂದಿದ ಸೀಮೆಗಳು. ಯೋನ, ಕಾಂಭೋಜ, ಗಾಂಧಾರ, ರಾಷ್ಟ್ರಿಕ, ಪಿತೇನಿಕ, ಆಂಧ್ರ, ಪಚಿತ್ತ, ನಾಭಾಗ ಮೊದಲಾದ ದೇಶಗಳೂ ನಭಿಪಂಥಿ ಮೊದಲಾದ ಜಾತಿಗಳು, ವಾಸಮಾಡುವ ದೇಶಗಳೂ;

೩ ಅರಣ್ಯಪ್ರದೇಶ—ಈ ಪ್ರದೇಶದಲ್ಲಿ ಹಲವು ಬಗೆಯ ಕಾಡುಕುಲಗಳು ವಾಸವಾಗಿದ್ದವು.

೪ ದಕ್ಷಿಣಹಿಂದುಸ್ತಾನದ ಸ್ವತಂತ್ರ ರಾಜ್ಯಗಳು— ಕೇರಲಪುತ್ರ, ಸತಿಯಪುತ್ರ, ಚೋಲ, ಪಾಂಡ್ಯ ದೇಶಗಳು.

೫ ಸಿಂಹಲದ್ವೀಪ.

೬ ಮಿಸರ, ಸಿರಿಯಾ, ಸಾಯರಿನ್, ಇಪಿರಾಸ, ಮಾಸಿಡೋನಿಯಾ.

ದ್ವೀಪವಂಶ ಮಹಾವಂಶಗಳಲ್ಲಿ ೨ನೆಯ, ೩ನೆಯ ಮತ್ತು ೫ನೆಯ ಕೇಂದ್ರಸ್ಥಳಗಳ ಉಲ್ಲೇಖವುಂಟು. ಅವುಗಳಲ್ಲಿ ದಕ್ಷಿಣಹಿಂದುಸ್ತಾನದ ಸ್ವತಂತ್ರರಾಜ್ಯಗಳ ಮತ್ತು ಭಾರತವರ್ಷದ ಹೊರಗಿನ ಪ್ರದೇಶಗಳ ಉಲ್ಲೇಖವಿಲ್ಲ. ಅಶೋಕನ ಆಳಿಕೆಯ ೬೦೦ ವರ್ಷಗಳ ತರುವಾಯ ದ್ವೀಪವಂಶವೂ, ೮೦೦ ವರ್ಷಗಳ ತರುವಾಯ ಮಹಾವಂಶವೂ ರಚಿತವಾಗಿರುವವೆಂದು ಹಲವರು ಹೇಳುವರು. ಬಹುಶಃ ಈ ಗ್ರಂಥಗಳ ನಿರ್ಮಾಣವಾಗುವದಕ್ಕೆ ಬಹುಕಾಲ ಮುಂಚೆಯೇ ಮಿಸರ, ಸಿರಿಯಾ, ಸಾಯರಿನ್ ಮೊದಲಾದ ಗ್ರೀಕರಾಜ್ಯಗಳು ನಷ್ಟವಾಗಿ ಹೋಗಿದ್ದವು. ಅದರಿಂದಲೇ ಆ ಗ್ರಂಥಗಳಲ್ಲಿ ಅವುಗಳ ಉಲ್ಲೇಖವಿರಲಾರದು. ಇನ್ನು ದ್ವೀಪವಂಶ ಮಹಾವಂಶಗಳು ಐತಿಹಾಸಿಕ ಪ್ರಾಮಾಣಿಕ ಗ್ರಂಥಗಳೆಂದು ಪೂರ್ವಖಂಡದಲ್ಲಿಯೂ ಪಶ್ಚಿಮಖಂಡದಲ್ಲಿಯೂ ಎಣಿಸಲ್ಪಟ್ಟಿದ್ದರೂ ಈ ವಿಷಯದಲ್ಲಿ ಈ ಗ್ರಂಥಗಳಿಗಿಂತ ಶಿಲಾಲಿಪಿಗಳ ಪ್ರಾಮಾಣ್ಯವು ಹೆಚ್ಚಾಗಿರುವದು. ದಕ್ಷಿಣಹಿಂದುಸ್ತಾನದ ತಮಿಳ ಜಾತಿಯವರಿಗೂ ಸಿಂಹಲವಾಸಿಗಳಿಗೂ ಬಹುಶಃ ಯುದ್ಧಗಳು ನಡೆಯುತ್ತಿದ್ದದರಿಂದಲೂ

ಆ ಗ್ರಂಥದಲ್ಲಿ ಈ ದೇಶಗಳ ಉಲ್ಲೇಖವಿರಲಾರದು. ಈರ್ಷ್ಯಾವಶರಾಗಿ ಸಿಂಹಲ ಗ್ರಂಥಕಾರರು ತಮಿಳ ಪ್ರದೇಶದ ವೃತ್ತಾಂತವನ್ನು ಬರೆದಿರಲಾರರೆಂದು ಕೆಲವರು ಊಹಿಸುವರು. ಏನೇ ಇರಲಿ, ಭರತಖಂಡದಲ್ಲಿಯೂ ಅದರ ಹೊರಗೂ ಅಶೋಕನು ಧರ್ಮಪ್ರಸಾರಕ್ಕಾಗಿ ಭಿಕ್ಷುಗಳನ್ನು ಕಳಿಸಿದ್ದನೆಂಬದರಲ್ಲಿ ಸಂಶಯವಿಲ್ಲ. ಮತ್ತು ಇದರಿಂದಲೇ ಬ್ರಹ್ಮ, ಶ್ಯಾಮ, ಕಾಂಬೋಡಿಯಾ, ಭಾರತೀಯ ದ್ವೀಪಗಳು, ಚೀನ, ಕೋರಿಯಾ, ಜಪಾನ, ಮಂಗೋಲಿಯಾ, ತಿಬೇಟ, ಮತ್ತು ಏಶಿಯಾಖಂಡದ ಬೇರೆ ಪ್ರದೇಶಗಳು ಇವುಗಳಲ್ಲಿ ಸ್ವಲ್ಪ ಕಾಲದಲ್ಲಿಯೇ ಬೌದ್ಧಧರ್ಮವು ಹಬ್ಬಿಸಲ್ಪಟ್ಟಿತೆಂಬದಕ್ಕೆ ಸಂದೇಹವಿಲ್ಲ.

ಮಹಾವಂಶದಲ್ಲಿಯೂ ದ್ವೀಪವಂಶದಲ್ಲಿಯೂ ಈ ಧರ್ಮಪ್ರಸಾರಕರ ವಿಷಯವಾಗಿ ಕೊಟ್ಟ ಈ ವಿವರಣವು ಇತಿಹಾಸದೃಷ್ಟಿಯಿಂದ ನಿಜವೊ ಎಂಬ ವಿಷಯವನ್ನು ಆಲೋಚಿಸಬೇಕಾಗಿರುವದು. ತಿಬೇಟದ ದುಲ್‌ಭಾ ಎಂಬ ಗ್ರಂಥದಲ್ಲಿ ಸ್ಥವಿರಮಜ್ಝಂತಿಕನು ಕಾಶ್ಮೀರದಲ್ಲಿ ಧರ್ಮಪ್ರಸಾರ ಮಾಡಿದ್ದರ ಉಲ್ಲೇಖವುಂಟು. ಸಾಂಚಿಯ ಬಳಿಯಲ್ಲಿರುವ ಭಿಲಸಾಸ್ತೂಪದಲ್ಲಿ ಸಿಕ್ಕ ಭಸ್ಮಾಧಾರದ ಮೇಲೆ ಮಜ್ಝಿಮ ಮತ್ತು ಕಾಶ್ಯಪ ಇವರ ಹೆಸರುಗಳು ಕಂಡುಬರುವವು. " ಸಮಗ್ರ ಹಿಮವಂತದ ಆಚಾರ್ಯ ಕಾಶ್ಯಪಗೋತ್ರ "* ಎಂಬ ಅಕ್ಷರಗಳು ಆ ಭಸ್ಮಪಾತ್ರದ ಮೇಲೆ ಕೊರೆಯಲ್ಪಟ್ಟಿರುವವು. ಮಹೇಂದ್ರನು ಸಿಂಹಲದಲ್ಲಿ ಧರ್ಮಪ್ರಸಾರಮಾಡಿದನೆಂಬದು ಕೇವಲ ಹೀನಯಾನ, ಮಹಾಯಾನ ಬೌದ್ಧಗ್ರಂಥಗಳಲ್ಲಿ ವರ್ಣಿತವಾಗಿರುವವೆಂಬದಿಷ್ಟೇ ಅಲ್ಲ; ಆ ದೇಶದಲ್ಲಿ ಮಹೇಂದ್ರನ ಕೀರ್ತಿಸ್ಮಾರಕವು ಇದುವರೆಗೆ ಇರುವದು. ಇದರಿಂದ ದ್ವೀಪವಂಶದ ವರ್ಣನೆಯು ಇತಿಹಾಸದೃಷ್ಟಿಯಿಂದ ನಿಜವೆಂಬದಕ್ಕೆ ಸಂದೇಹವಿಲ್ಲ. ಆದರೆ ಅಶೋಕನು ಸುವರ್ಣಭೂಮಿಗೆ+ ಧರ್ಮಪ್ರಚಾರಕರನ್ನು ಕಳುಹಿದ್ದನೋ ಇಲ್ಲವೋ ಎಂಬ ವಿಷಯದಲ್ಲಿ ಐತಿಹಾಸಿಕರಲ್ಲಿ ಮತಭೇದವಿರುವದು. ಸಿಂಹಲದ್ವೀಪದ ಎರಡು ಗ್ರಂಥಗಳಲ್ಲಿಯೂ ಈ ವಿಷಯದ ಉಲ್ಲೇಖವಿದ್ದರೂ ಅದು ಪ್ರಕ್ಷಿಪ್ತವೆಂದು ಕೆಲವರು ಹೇಳುವರು. ಬೌದ್ಧಧರ್ಮದ ಐತಿಹಾಸವನ್ನು ನೋಡಿದರೆ ಭರತಖಂಡದಿಂದಲೇ ಚೀನದೇಶಕ್ಕೆ ಬೌದ್ಧಧರ್ಮವು ಹೋಯಿತೆಂದು ಗೊತ್ತಾಗುವದು. ಬ್ರಹ್ಮದೇಶದ ಇತಿಹಾಸದಲ್ಲಿ ಕ್ರಿ. ಳನೇ ಶತಮಾನದಲ್ಲಿ ಮಹಾಯಾನ ಬೌದ್ಧಮತವು ನಾಲ್ಕೂ ದಿಕ್ಕಿಗೆ ವಿಶೇಷವಾಗಿ ಹಬ್ಬಿತ್ತೆಂದು ಹೇಳಲ್ಪಟ್ಟಿರುವದು. ಈ ಕಾಲದಲ್ಲಿ ಭಾರತಚೀನಗಳಲ್ಲಿಯೂ ಬೇರೆ ಪ್ರದೇಶಗಳಲ್ಲಿಯೂ ಮಹಾಯಾನಸಾಂಪ್ರದಾಯದ ಪ್ರಾಬಲ್ಯವು ವಿಶೇಷವಾಗಿ ಇತ್ತು. ಇದೇ ಸಮಯದಲ್ಲಿ ಎರಡು ನಿಟ್ಟುಗಳಿಂದ ಅಂದರೆ ಭಾರತದಿಂದಲೂ ಚೀನದಿಂದಲೂ ಬೌದ್ಧಧರ್ಮವು ಬ್ರಹ್ಮದೇಶಕ್ಕೆ ಒಯ್ಯಲ್ಪಟ್ಟಿತು. ಮತ್ತು ಅಲ್ಲಿಂದ ಕ್ರಮವಾಗಿ

* Cunningham, Vhilsa Tops. Rhys Davids Buddhist India.

+ Vincent Smith in Indian Antiguary for 1905.

ಜಾವ್ಹಾ, ಕ್ಹಾಂಬೋದಿಯಾ ಮೊದಲಾದ ದೇಶಗಳಿಗೆ ಹೋಯಿತು. ಮಹಾಯಾನ ಸಾಂಪ್ರದಾಯದ ಗ್ರಂಥಗಳೆಲ್ಲ ಸಂಸ್ಕೃತಭಾಷೆಯಲ್ಲಿ ರಚಿತವಾಗಿವೆ. ಬ್ರಹ್ಮದೇಶ ದಲ್ಲಿ ಒಂದು ಕಾಲದಲ್ಲಿ ಮಹಾಯಾನಸಂಪ್ರದಾಯವು ವಿಶೇಷವಾಗಿ ಪ್ರಚಲಿತ ವಾಗಿದ್ದರೂ ಈಗ ಅದರ ವರ್ಚಸ್ಸು ಅಲ್ಲಿ ಸ್ವಲ್ಪವೂ ಇಲ್ಲವೆಂಬದು ಆಶ್ಚರ್ಯ ಕರವಾಗಿರುವದು. ಆದರೆ ಇದರ ಕಾರಣವೇನು? ಯಾವ ಮಹಾಯಾನದ ಗ್ರಂಥ ಗಳೂ ಸ್ತೋತ್ರಾದಿಗಳೂ ಸಂಸ್ಕೃತಭಾಷೆಯಲ್ಲಿ ರಚಿತವಾಗಿ ದಿಗ್ದೇಶಗಳಲ್ಲಿ ವ್ಯಾಪಿಸಿ ದ್ದವೋ, ಯಾವ ಮಹಾಯಾನದ ಆಚಾರವ್ಯವಹಾರಗಳೂ, ಭರತಖಂಡದ ಬೌದ್ಧ ಸಂಪ್ರದಾಯದವರ ಪ್ರಭಾವವೂ ಬ್ರಹ್ಮದೇಶವನ್ನು ವ್ಯಾಪಿಸಿದ್ದವೋ ಆ ಮಹಾಯಾನ ಸಂಪ್ರದಾಯದ ಸ್ಥಳದಲ್ಲಿ ಅದೇ ಬ್ರಹ್ಮದೇಶದಲ್ಲಿ ಪಾಲೀಭಾಷೆಯ ಗ್ರಂಥಗಳೂ, ಸಿಂಹ ಲದ ಆಚಾರವ್ಯವಹಾರಗಳೂ, ಸಿಂಹಲದ ಬೌದ್ಧದರ್ಶನವೂ ಹೇಗೆ ಪ್ರಚಲಿತವಾದವು? ಉನ್ನತಿಯ ಅತ್ಯುಚ್ಚಶಿಖರವನ್ನು ಏರಿದ ಮಹಾಯಾನವು ಸ್ವಾಭಾವಿಕ ನಿಯಮಕ್ಕನು ಸಾರವಾಗಿ ಕ್ರಮದಿಂದ ಅವನತಿಯನ್ನು ಹೊಂದುತ್ತ ನಡೆದಿತ್ತೆಂದೂ, ಈ ಕಾಲದಲ್ಲಿ ಬೌದ್ಧಧರ್ಮಕ್ಕೆ ಗ್ಲಾನಿಯು ಆರಂಭವಾಗಿತ್ತೆಂದೂ, ಕೊನೆಗೆ ಕ್ರಿ. ೧೫೦೦ ರಲ್ಲಿ ಬ್ರಹ್ಮ ದೇಶದಲ್ಲಿ ಬೌದ್ಧಧರ್ಮವು ಸಂಸ್ಕರಿಸಲ್ಪಟ್ಟಿತೆಂದೂ ಇತಿಹಾಸದಿಂದ ತಿಳಿಯುವದು. ಈ ಕಾಲದಲ್ಲಿಯೇ ಅದು ಸಿಂಹಲದ ಬೌದ್ಧಧರ್ಮವನ್ನನುಸರಿಸಿ ಹೊಸ ರೂಪವನ್ನು ಧರಿ ಸಿತು. ಹಳೆಯ ಆಚಾರವ್ಯವಹಾರಗಳೂ ಶಾಸ್ತ್ರಗ್ರಂಥಗಳೂ ನಷ್ಟವಾಗಿ ಅವುಗಳ ಸ್ಥಳ ದಲ್ಲಿ ಹೊಸವು ಬಂದವು. ಆದದರಿಂದಲೇ ಈಗ ಬ್ರಹ್ಮದೇಶದಲ್ಲಿ ಪಾಲೀ ಬೌದ್ಧಧರ್ಮದ ಪ್ರಭಾವವು ಹೆಚ್ಚಾಗಿರುವದು. ಇದಲ್ಲದೆ ಬ್ರಹ್ಮದೇಶದ ಬೇರೆ ಬೇರೆ ಸ್ಥಳಗಳಲ್ಲಿ ದೊರೆತ ವಿಹಾರಗಳು, ಸ್ತಂಭಗಳು ಮೊದಲಾದವುಗಳಲ್ಲಿ ಯಾವದೂ ಅಶೋಕನಿರ್ಮಿತವೆಂದು ಸಿದ್ಧವಾಗುವದಿಲ್ಲ. ಈ ಎಲ್ಲ ಕಾರಣಗಳಿಂದ ಅಶೋಕನು ಸುವರ್ಣಭೂಮಿಗೆ ಪ್ರಚಾರ ಕರನ್ನು ಕಳಿಸಿದ ವಿಷಯದಲ್ಲಿ ಹಲವರು ಸಂದೇಹಪಡುವರು.

ರಾಜಪುತ್ರನಾದ ಮಹೇಂದ್ರನು ನಾಲ್ಕು ಜನ ಅನುಚರರೊಡನೆ ಸಿಂಹಲಕ್ಕೆ ಧರ್ಮಪ್ರಚಾರಕ್ಕೆ ಹೋಗಿದ್ದನು. ಈ ಸಿಂಹಲದೊಡನೆ ಭಾರತಕ್ಕೆ ವಿಶೇಷ ಸಂಬಂಧ ವಿರುವದು. ಈ ಕಾರಣದಿಂದ ಸಿಂಹಲದ ಇತಿಹಾಸವನ್ನು ಇಲ್ಲಿ ಸಂಕ್ಷೇಪವಾಗಿ ಆಲೋ ಚಿಸುವದು ಅಪ್ರಾಸಂಗಿಕವಾಗಲಾರದು. ಮಗಧಾಧಿಪತಿಯ ದೌಹಿತ್ರನಾದ ಸಿಂಹಬಾಹು ವು ರಾಢಪ್ರದೇಶದ ಅಧಿಪತಿಯಾಗಿದ್ದನು. ಅತನ ಹಿರಿಯಮಗನಾದ ವಿಜಯನು ಕಾಲ ಕ್ರಮದಲ್ಲಿ ಯುವರಾಜಪಟ್ಟಕ್ಕೆ ಬಂದಿದ್ದನು. ವಿಜಯನು ಸ್ವೇಚ್ಛಾಚಾರಿಯೂ, ಉಚ್ಛೃಂಖ ಲನೂ, ಪ್ರಜಾಪೀಡಕನೂ ಆಗಿದ್ದನು. ಅವನ ಅನುಚರರೂ ಇಂಥವರೇ ಇದ್ದರು. ಪ್ರಜೆ ಗಳು ಅವನ ಅತ್ಯಾಚಾರಗಳಿಂದ ಪೀಡಿತರಾಗಿ ಕೊನೆಗೆ ಅರಸನ ಬಳಿಯಲ್ಲಿ ತಮ್ಮ ಕಷ್ಟ ವನ್ನು ಹೇಳಿಕೊಂಡರು. ಸಿಂಹಬಾಹುರಾಜನು ಮಗನನ್ನು ಬಹಳವಾಗಿ ತಿರಸ್ಕರಿಸಿದನು.

ಕೆಲವು ದಿವಸಗಳಾದ ಬಳಿಕ ಪ್ರಜೆಗಳು ಮತ್ತೆ ಯುವರಾಜನಿಂದ ತಮಗಾದ ಉಪದ್ರವವನ್ನು ಅರಸನಿಗೆ ಹೇಳಿದರು. ಅರಸನು ಬಹಳ ಸಿಟ್ಟಾಗಿ ಮತ್ತೆ ಮಗನಿಗೆ ತಿರಸ್ಕಾರ ಮಾಡಿದನು. ಅರಸನು ಹಲವು ಸಾರೆ ತಿರಸ್ಕಾರಮಾಡಿದರೂ ವಿಜಯನಿಗೆ ಬುದ್ಧಿ ಬರಲಿಲ್ಲ. ಮುಂದೆ ಕೆಲವು ದಿವಸಗಳಾದ ಬಳಿಕ ಪ್ರಜೆಗಳು ಮತ್ತೆ ಗೋಳಿಡುತ್ತ ಯುವರಾಜನಿಂದಾದ ಪೀಡೆಗಳನ್ನು ಅರಸನೆದುರಿಗೆ ಹೇಳಿದ್ದಲ್ಲದೆ ಯುವರಾಜನು ಜೀವಂತನಾಗಿದ್ದರೆ ತಾವು ಬದುಕುವದೇ ಕಷ್ಟವೆಂದು ಹೇಳಿದರು. ಆಗ ಅರಸನು ಯುವರಾಜನಿಗೂ ಅವನ ಏಳುನೂರುಜನ ಅನುಚರರಿಗೂ ಅರ್ಧಮುಂಡನ ಮಾಡಿಸಿ ಸಮುದ್ರದಲ್ಲಿ ಬಿಟ್ಟುಬರುವ ಆಲೋಚನೆಮಾಡಿದನು. ಅದರಂತೆ ಮೊದಲು ಯುವರಾಜನನ್ನೂ ಅವನ ಅನುಚರರನ್ನೂ ಬಳಿಕ ಅವರ ಹೆಂಡಿರುಮಕ್ಕಳನ್ನೂ ಬೇರೆ ಬೇರೆ ಹಡಗುಗಳಲ್ಲಿ ಕುಳ್ಳಿರಿಸಿ ಸಮುದ್ರದಲ್ಲಿ ಬಿಟ್ಟುಬಂದರು. ಸಮುದ್ರದ ತೆರೆಗಳ ಹೊಡೆತದಿಂದ ಅವರ ಹಡಗಗಳು ಬೇರೆ ಬೇರೆ ದೇಶಗಳ ದಂಡೆಗೆ ಹೋಗಿ ಮುಟ್ಟಿದವು. ಎಷ್ಟೋ ದಿವಸಗಳಾದ ಬಳಿಕ ಬಹಳ ಕಷ್ಟವನ್ನು ಸಹಿಸಿ ವಿಜಯನು ತನ್ನ ಏಳುನೂರುಜನ ಅನುಚರರೊಡನೆ ಸಿಂಹಲದ ತಾಮ್ರಪರ್ಣಿಯ ಬಂದರಕ್ಕೆ ಹತ್ತಿದನು. ಆತನು ಅಲ್ಲಿ ಇಳಿದು ಆ ಪ್ರದೇಶವೆಲ್ಲ ಕಾಡುಜನರಿಂದ ತುಂಬಿ ಹೋಗಿರುವದನ್ನು ನೋಡಿ ಬಾಹುಬಲದಿಂದ ಅವರೆಲ್ಲರನ್ನು ಜಯಿಸಿ ಅನುರಾಧಾಪುರದಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿಸಿದನು. ವಿಜಯನ ಅನುಚರರೂ ಸಿಂಹಲದ ಬೇರೆ ಬೇರೆ ಸ್ಥಳಗಳಲ್ಲಿ ತಮ್ಮ ತಮ್ಮ ರಾಜ್ಯಗಳನ್ನು ಸ್ಥಾಪಿಸತೊಡಗಿದರು. ಕೊನೆಗೆ ಅವರೆಲ್ಲರೂ ಒಂದಾಗಿ ವಿಜಯನನ್ನು ಮುಖ್ಯನನ್ನಾಗಿ ಮಾಡಿ ಅವನಿಗೆ ಪಟ್ಟಾಭಿಷೇಕಮಾಡಿದರು.

ಬಳಿಕ ಕೆಲವು ದಿವಸಗಳಾದ ಬಳಿಕ ವಿಜಯನು ಮಧುರೆಯ ಪಾಂಡ್ಯ ರಾಜನ ಮಗಳನ್ನು ಮದುವೆಯಾದನು. ಕ್ರಮದಿಂದ ವಿಜಯನ ನಡತೆಯು ಬದಲಾಯಿತು. ಆತನಿಗೆ ಮಕ್ಕಳಿರಲಿಲ್ಲ. ತನ್ನ ತರುವಾಯ ತನ್ನ ವಿಶಾಲವಾದ ರಾಜ್ಯಕ್ಕೆ ಉತ್ತರಾಧಿಕಾರಿಗಳಿಲ್ಲದಿರುವದನ್ನು ನೋಡಿ ಆತನು ತಂದೆಯ ರಾಜ್ಯಕ್ಕೆ ದೂತರನ್ನು ಕಳುಹಿದನು. ಸಿಂಹಬಾಹುರಾಜನು ಆಗ ಮಡಿದುಹೋಗಿದ್ದನು. ಆಗ ವಿಜಯನ ತಮ್ಮನಾದ ಸುಮಿತ್ರನು ತಂದೆಯ ಸಿಂಹಾಸನದ ಮೇಲೆ ಕುಳಿತು ಚಕ್ರವರ್ತಿಯಾಗಿ ಆಳುತ್ತಿದ್ದನು. ಸುಮಿತ್ರನು ದೂತರಿಂದ ಎಲ್ಲ ವರ್ತಮಾನವನ್ನು ತಿಳಿದು ತನ್ನ ಮಕ್ಕಳನ್ನು ಕುರಿತು—"ಎಲೈ ಮಕ್ಕಳೆ, ನಾನು ಈಗ ಮುದುಕನಾಗಿದ್ದೇನೆ; ಸಮುದ್ರದ ಆಚೆಗೆ ಹೋಗಿ ರಾಜ್ಯವನ್ನು ಆಳುವದು ನನ್ನಿಂದಾಗದು. ನಿಮ್ಮಲ್ಲಿ ಯಾರಿಗಾದರೂ ಇಚ್ಛೆಯಿದ್ದರೆ ನನ್ನ ಅಣ್ಣನ ಸಮೃದ್ಧವಾದ ರಾಜ್ಯದ ಭಾರವನ್ನು ಸ್ವೀಕರಿಸಬಹುದು." ಎಂದು ಹೇಳಿದನು. ಕಿರಿಯ ಮಗನಾದ ಪಾಂಡವಾಸದೇವನು ತಂದೆಯ ಆಜ್ಞೆಯನ್ನು ಪಾಲಿಸುವದಕ್ಕೆ ಸಮ್ಮತಿಸಿದನು. ಬಳಿಕ ೩೨ ಜನ ಸಾಮಂತರೊಡನೆ ಆತನು ಸಿಂಹಲಕ್ಕೆ ಬಂದನು. ಮತ್ತು ವಿಜಯನ ಮರಣದ ತರುವಾಯ ಸಿಂಹಲದ ಚಕ್ರವರ್ತಿಯಾದನು. ಈ ಪಾಂಡವಾಸದೇವನ

ಮರಣದ ತರುವಾಯ ಅಭಯನೂ, ಆತನ ತರುವಾಯ ಅಭಯನ ಸೋದರಿಯ ಮಗನಾದ ಪಾಂಡುಕಾಭಯನೂ ಎಪ್ಪತ್ತು ವರ್ಷ ರಾಜ್ಯವಾಳಿದರು. ಪಾಂಡುಕಾಭಯನ ಮಗನಾದ ಮೂಟಾಸಿವನು ಅರುವತ್ತು ವರ್ಷ ನಿರಾತಂಕವಾಗಿ ರಾಜ್ಯವಾಳಿದನು. ಮೂಟಾಸಿವನಿಗೆ ಹತ್ತು ಜನ ಮಕ್ಕಳು. ಎರಡನೆಯ ಮಗನು 'ದೇವಪ್ರಿಯ' ತಿಷ್ಯನು. ಮೂಟಾಸಿವನ ಮರಣದ ತರುವಾಯ ಕ್ರಿ-ಪೂ-೩೦೯ರಲ್ಲಿ ತಿಷ್ಯನು ಸಿಂಹಲದ ರಾಜಪಟ್ಟದ ಮೇಲೆ ಕುಳಿತಿದ್ದನು. ಈತನು ಅಶೋಕ ಚಕ್ರವರ್ತಿಯ ಸಮಕಾಲದವನು. ಈತನ ಕಾಲದಲ್ಲಿಯೇ ಧರ್ಮಪ್ರಚಾರಕ್ಕೆ ಮಹೇಂದ್ರನು ಸಿಂಹಲಕ್ಕೆ ಹೋಗಿದ್ದನು.

ಸಿಂಹಲದಲ್ಲಿ ಬೌದ್ಧಧರ್ಮ ಪ್ರಸಾರವಾಗುವ ಮುಂಚೆ ತಿಷ್ಯನು ಬಹುಮೂಲ್ಯವಾದ ಕಾಣಿಕೆಗಳೊಡನೆ ಅಶೋಕನ ಬಳಿಗೆ ನಾಲ್ಕು ಜನ ರಾಯಭಾರಿಗಳನ್ನು ಕಳುಹಿದ್ದನು. ತಿಷ್ಯಮಹಾರಾಜನ ಅಣ್ಣನ ಮಗನಾದ ಮಹಾಅರಿಷ್ಟನು ಅವರಲ್ಲೊಬ್ಬನಾಗಿದ್ದನು. ಅರಿಷ್ಟನ ಸಂಗಡ ವಿದ್ವಾಂಸನಾದ ಒಬ್ಬ ಬ್ರಾಹ್ಮಣನೂ ಒಬ್ಬ ರಾಜಮಂತ್ರಿಯೂ, ಒಬ್ಬ ಲೆಕ್ಕಿಗ (ಕಾರಕೂನ) ನೂ ಬಂದಿದ್ದರು. ಇವರು ಜಂಬುಕೋಲಾದಲ್ಲಿ ಹಡಗವನ್ನೇರಿ ೧೫ ದಿವಸಗಳ ತರುವಾಯ ತಾಮ್ರಲಿಪ್ತಿ ಬಂದರಕ್ಕೆ ಬಂದಿದ್ದರು. ಮುಂದೆ ಅವರು ಪಾಟಲಿಪುತ್ರಕ್ಕೆ ಬಂದು ರಾಜಸಭೆಗೆ ಹೋಗಿ ತಿಷ್ಯನು ಕಳುಹಿದ ಕಾಣಿಕೆ ಮೊದಲಾದವುಗಳನ್ನು ಮಗಧಾಧಿಪತಿಗೆ ಅರ್ಪಿಸಿದರು. ಅಶೋಕ ಮಹಾರಾಜನು ಕಾಣಿಕೆಗಳನ್ನು ಸ್ವೀಕರಿಸಿ ರಾಯಭಾರಿಗಳಿಗೆ ತಕ್ಕ ಮರ್ಯಾದೆಯನ್ನು ಮಾಡಿದನು. ಅವನು ಅರಿಷ್ಟನಿಗೆ ಸೇನಾಪತಿಯೆಂದೂ ಬ್ರಾಹ್ಮಣನಿಗೆ ಪುರೋಹಿತನೆಂದೂ ಮಂತ್ರಿಗೆ ದಂಡನಾಯಕನೆಂದೂ ಲೆಕ್ಕಿಗನಿಗೆ ಶ್ರೇಷ್ಠಿಯೆಂದೂ ಉಪಾಧಿಗಳನ್ನು ಕೊಟ್ಟನು. ಬಳಿಕ ಅವರಿಗೆ ಉಡುಗೊರೆಗಳನ್ನು ಕೊಟ್ಟು ಹೇಳಿದ್ದೇನಂದರೆ—ತಾವು ಸಿಂಹಲರಾಜನ ಬಳಿಗೆ ಹೋಗಿ "ಅಶೋಕನು ಬುದ್ಧ, ಧರ್ಮ, ಸಂಘ ಎಂಬ ರತ್ನತ್ರಯದ ಆಶ್ರಯ ಮಾಡಿರುವನು. ಆತನು ಬುದ್ಧದೇವನು ತೋರಿಸಿದ ಧರ್ಮವನ್ನವಲಂಬಿಸಿರುವನು. ಸಿಂಹಲರಾಜನೂ ಭಕ್ತಿನಿಷ್ಠೆಗಳಿಂದ ಈ ಧರ್ಮವನ್ನು ಅವಲಂಬಿಸಬೇಕೆಂದೂ ಅದರಿಂದ ಶಾಂತಿಯನ್ನೂ ಸಂತೋಷವನ್ನೂ ಹೊಂದಬೇಕೆಂದೂ ಆತನ ಬಯಕೆಯುಂಟು ಎಂದು ಹೇಳಿರಿ." ಎಂದು ಹೇಳಿದನು. ಈ ರಾಯಭಾರಿಗಳು ಐದು ತಿಂಗಳು ಪಾಟಲೀಪುತ್ರದಲ್ಲಿದ್ದು ತಾಮ್ರಲಿಪ್ತಿಯಲ್ಲಿ ಮತ್ತೆ ಹಡಗವನ್ನೇರಿ ಸಿಂಹಲಕ್ಕೆ ತಿರುಗಿಹೋದರು. ಮಹೇಂದ್ರನಿಂದಲೇ ಸಿಂಹಲದಲ್ಲಿ ಬೌದ್ಧಧರ್ಮವು ಪ್ರಚಾರಗೊಳಿಸಲ್ಪಟ್ಟಿತೆಂದು ಈ ಮೊದಲೇ ಹೇಳಿದೆಯಷ್ಟೇ; ಮಹಾವಂಶದಲ್ಲಿ ಹೇಳಿದ್ದೇನಂದರೆ ಈ ಮಹೇಂದ್ರನು ಸಾಗರಾಂಕಿತವಾದ ಭರತವರ್ಷಕ್ಕೆ ಭಾವಿಚಕ್ರವರ್ತಿಯೆಂದು ಮಗಧದಲ್ಲಿ ಮಾನ್ಯನಾಗಿದ್ದನು. ಇವನು ತಂದೆಯ ಪ್ರಿಯ ಪುತ್ರನೆಂದು ಇತಿಹಾಸದಲ್ಲಿ ಹೇಳಿದೆ. ಆದರೆ ಇಂಥವನು ಸನ್ಯಾಸವನ್ನು ಸ್ವೀಕರಿಸಿಯೌವನದಲ್ಲಿ ಭಿಕ್ಷುವಾಗಿ ಸಮಗ್ರಸಿಂಹಲದಲ್ಲಿ ಬೌದ್ಧಧರ್ಮವನ್ನು ಪಸರಿಸಿದನು. ಈ ಮಹೇಂದ್ರನ ಜೀವನವೃತ್ತಾಂತದ ಕೆಲವು ಅಂಶವನ್ನು ಇಲ್ಲಿ ಹೇಳುವೆವು. ಉಜ್ಜಯಿನಿಯ

ಶ್ರೇಷ್ಠಿಯ ಮಗಳಾದ ದೇವಿಯ ಹೊಟ್ಟೆಯಲ್ಲಿ ಮಹೇಂದ್ರನೂ ಸಂಘಮಿತ್ರೆಯೂ ಹುಟ್ಟಿದರೆಂದು ಪ್ರವಾದವುಂಟು. ಕೆಲವರು ಮಹೇಂದ್ರನು ಅಶೋಕನ ತಮ್ಮನೆಂದು ಹೇಳುವರು. ಆದರೆ ಮಹಾವಂಶದ ಮತದಲ್ಲಿ ಅವನು ಅಶೋಕನ ಮಗನು. ಅಶೋಕನು ಮಗಧರಾಜ್ಯಭಾರವನ್ನು ಸ್ವೀಕರಿಸುವದಕ್ಕೆ ಮುಂಚೆ ಉಜ್ಜಯಿನಿಯ ಮದುವೆಯ ಸುದ್ದಿಯನ್ನು ಪ್ರಕಟಪಡಿಸಿರಲಿಲ್ಲ. ಬಳಿಕ ಮಹೇಂದ್ರನನ್ನೂ ಸಂಘಮಿತ್ರೆಯನ್ನೂ ಪಾಟಲಿಪುತ್ರಕ್ಕೆ ಕರೆಸಿಕೊಂಡು ಧರ್ಮನೀತಿಗಳ ಶಿಕ್ಷಣವನ್ನು ಅವರಿಗೆ ಕೊಡಿಸಿದನು. ಮಹಾವಂಶದಲ್ಲಿ ಈ ಮೇರೆಗೆ ವರ್ಣನೆಯುಂಟು:—ಯಾವಾಗ ಸಮಗ್ರ ಭಾರತದಲ್ಲಿ ಲಳಂಂಂ ವಿಹಾರಾದಿಗಳನ್ನು ಕಟ್ಟುವ ಕೆಲಸವನ್ನು ಮುಗಿಸಿದ ಸುದ್ದಿಯು ಅಶೋಕನಿಗೆ ಮುಟ್ಟಿತೋ ಆಗ ಆತನು ಆನಂದಸಾಗರದಲ್ಲಿ ಓಲಾಡಿ ರಾಜಧಾನಿಯಲ್ಲಿ ಪ್ರಕಟಿಸಿದ್ದೇನಂದರೆ—ಇದೇ ದಿವಸದಿಂದ ೭ನೆಯ ದಿವಸ ಮುಗಿಯುವವರೆಗೆ ಸಮಗ್ರ ರಾಜ್ಯದಲ್ಲಿ ಪ್ರತಿಯೋಜನಕ್ಕೂ " ಮಹಾದಾನಮಹೋತ್ಸವವು " ನಡೆಯಬೇಕು; ರಾಜಮಾರ್ಗಗಳನ್ನೂ, ವಿಹಾರಾದಿಗಳನ್ನೂ ಶೃಂಗರಿಸಬೇಕು; ಎಲ್ಲ ಜನರು ವಿಹಾರಗಳೊಳಗಿನ ಭಿಕ್ಷುಗಳಿಗೆ ಯೋಗ್ಯ ತಾನುಸಾರವಾಗಿ ದಾನಮಾಡಬೇಕು; ದೀಪಮಾಲೆಗಳಿಂದಲೂ ಹೂಮಾಲೆಗಳಿಂದಲೂ ಗ್ರಾಮನಗರಗಳನ್ನು ಶೃಂಗರಿಸಬೇಕು; ಸಂಗೀತಾದಿಗಳಿಂದ ರಾಜಧಾನಿಯಲ್ಲಿ ಉತ್ಸವವನ್ನು ಮಾಡಬೇಕು; ೭ನೆಯ ದಿವಸ ಅರಸನು ಪರಿವಾರದೊಡನೆ ರಾಜಮಾರ್ಗದಲ್ಲಿ ಹೊರಹೊರಡುವನು. ಈ ಏಳು ದಿವಸ ಎಲ್ಲರೂ ಶುಚಿರ್ಭೂತರಾಗಿದ್ದು ಬುದ್ಧದೇವನು ಹೇಳಿದ ಧರ್ಮತತ್ವಗಳನ್ನು ಸಮಾಧಾನದಿಂದ ಶ್ರವಣಮಾಡಬೇಕು. ೮ನೆಯ ದಿವಸ ವಿಹಾರಗಳಲ್ಲಿ ದಾನಮಾಡಬೇಕು. " ಎಲ್ಲರೂ ರಾಜನ ಆಜ್ಞೆಯನ್ನು ಪಾಲಿಸಿದರು. ಆನಂದೋತ್ಸವದಿಂದಲೂ ಧರ್ಮಾನುಷ್ಠಾನದಿಂದಲೂ ಮಗಧರಾಜ್ಯವು ದೇವಲೋಕದಂತೆ ಮೆರೆಯಿತು. ಅಶೋಕನು ೭ನೆಯ ದಿವಸ ದೊಡ್ಡ ಸಮಾರಂಭದಿಂದ ರಾಜಮಾರ್ಗದಲ್ಲಿ ಹೊರಟನು. ಮಂತ್ರಿಗಳಲ್ಲಿ ಕೆಲವರು ಕುದುರೆಗಳ ಮೇಲೂ, ಕೆಲವರು ಆನೆಗಳ ಮೇಲೂ ಕುಳಿತಿದ್ದರು. ಅಶೋಕನು ಮುಖ್ಯ ಭಿಕ್ಷುವಾದ ಮೌದ್ಗಲಿಪುತ್ರ ತಿಷ್ಯನ ಪಾದಗಳ ಮೇಲೆ ಬಿದ್ದು ಆ ಭಿಕ್ಷುಸಂಘದ ನಡುವೆ ಹೋಗಿ ಕುಳಿತುಕೊಂಡನು. ಅಸಂಖ್ಯ ಭಿಕ್ಷುಗಳೂ ಭಿಕ್ಷುಣಿಗಳೂ ಆಗ ಪ್ರಸನ್ನರಾಗಿ ಚಕ್ರವರ್ತಿಗೆ ದಿವ್ಯಶಕ್ತಿಯನ್ನು ಕೊಟ್ಟರು. ಆ ಶಕ್ತಿಯ ಮಹಿಮೆಯಿಂದ ಅಶೋಕನು ತಾನು ಸ್ಥಾಪಿಸಿದ ಲಳ ಸಾವಿರ ವಿಹಾರಗಳು ಸಮುದ್ರಾಂಕಿತವಾದ ಭಾರತದ ಬೇರೆ ಬೇರೆ ಸ್ಥಳಗಳಲ್ಲಿ ಉತ್ಸವದಿಂದ ಶೋಭಿಸುತ್ತಿರುವದನ್ನು ಪ್ರತ್ಯಕ್ಷವಾಗಿ ನೋಡಿದನು. ಅಶೋಕನು ಆಗ ಆನಂದದಿಂದ ಬುದ್ಧದೇವನ ಧರ್ಮದಲ್ಲಿ ಯಾವ ದಾನವು ಶ್ರೇಷ್ಠವಾದದ್ದು? ಎಂದು ಸಂಘಕ್ಕೆ ಕೇಳಿದನು. ಆಗ ಸಂಘವು " ಮಹಾರಾಜರೇ, ಬುದ್ಧದೇವನ ಕಾಲದಲ್ಲಿ ಸಹ ತಮ್ಮಂಥ ದಾನಶೀಲರು ಇರಲಿಲ್ಲ " ಎಂದು ಅಂದಿತು. ಅಶೋಕನು ಸಂಘದ ಈ ಪ್ರಶಂಸಾವಾಕ್ಯವನ್ನು ಕೇಳಿ ಪುಲಕಿತನಾಗಿ ಮತ್ತೆ—" ಇಂಥ ದಾನವನ್ನಾಡಿ ಯಾರಾದರೂ ಬೌದ್ಧಧರ್ಮದ ನಿಜವಾದ

ಒಂಥುಗಳೆಂದು ಎಣಿಸಲ್ಪಡುವರೋ?" ಎಂದು ಕೇಳಿದನು. ಸಂಘನಾಯಕನಾದ ಮಹಾ ಸ್ಥವಿರ ಮೌದ್ಗಲಿಪುತ್ರ ತಿಷ್ಯನು ಎಲೈ ರಾಜನೇ, ಯಾವನು ಧರ್ಮಾರ್ಥವಾಗಿ ಮಕ್ಕಳನ್ನು ದಾನಮಾಡುವನೋ ಅವನೇ ಬೌದ್ಧಧರ್ಮದ ನಿಜವಾದ ಬಂಧುವು; ತಮ್ಮಂಥ ದಾನಶೀಲರು ಬೌದ್ಧಧರ್ಮದ ನಿಜವಾದ ಹಿತೈಷಿಗಳೆಂಬದರಲ್ಲಿ ಸಂಶಯವಿಲ್ಲ; ಎಂದು ಅಂದನು. ಆಗ ಆ ವಿಹಾರದಲ್ಲಿಯೇ ರಾಜಪುತ್ರನಾದ ಮಹೇಂದ್ರನೂ, ರಾಜಪುತ್ರಿಯಾದ ಸಂಘಮಿತ್ರೆಯೂ ಇದ್ದರು. ಮಹೇಂದ್ರನು ಆಗ ಸುಂದರನಾದ ೨೦ ವರ್ಷದ ತರುಣನು; ಅತನ ನಮ್ರವಾದ ಸ್ವಭಾವವನ್ನೂ ಸ್ಥಿರವಾದ ಬುದ್ಧಿಯನ್ನೂ ಧರ್ಮಾನುರಾಗವನ್ನೂ ನೋಡಿ ಅಶೋಕನು ಅತನಿಗೆ ಸ್ವಲ್ಪ ದಿವಸಗಳಲ್ಲಿ ಯುವರಾಜಪಟ್ಟವನ್ನು ಕಟ್ಟಬೇಕೆಂದು ಮಾಡಿದ್ದನು. ಈ ದಿವಸ ಧರ್ಮಕ್ಕೋಸ್ಕರ ಆ ಅಶೆಯನ್ನು ತೊರೆದನು. ಸಂಘಮಿತ್ರೆಯು ಆಗ ೧೮ವರ್ಷದ ತರುಣಿಯು ಅರಸನು ಅವರ ಕಡೆಗೆ ನೋಡಿ ಮಕ್ಕಳೇ, ಭಿಕ್ಷುಧರ್ಮವನ್ನು ಸ್ವೀಕರಿಸುವದು ಪುಣ್ಯಕಾರ್ಯವೆಂದು ಮಹಾಪುರುಷರು ಹೇಳುತ್ತಿರುವರು. ನೀವು ಯಾರಾದರೂ ಈ ಪುಣ್ಯವ್ರತವನ್ನು ಗ್ರಹಣಮಾಡಲಿಚ್ಛಿಸುವಿರೋ? ಎಂದು ಕೇಳಿದನು. ಮಗನೂ ಮಗಳೂ ತಂದೆಯ ವಾಕ್ಯವನ್ನು ಕೇಳಿ ಆತನ ಅಭಿಪ್ರಾಯವನ್ನು ತಿಳಿದರು. ಆಗ ಅವರು ಅಪ್ಪಾ, ತಾವು ಅನುಮತಿಯ ಕೊಟ್ಟರೆ ಈ ದಿವಸವೇ ಆ ಪುಣ್ಯವ್ರತವನ್ನು ಸ್ವೀಕರಿಸಿ ಜೀವನವನ್ನು ಸಾರ್ಥಕ ಮಾಡಿಕೊಳ್ಳುವೆವು. ಈ ಮಹಾವ್ರತಗ್ರಹಣದಿಂದ ನಿಮಗೂ ನಮಗೂ ಪುಣ್ಯವು ಒರುವದು. ಆದದರಿಂದ ತಾವು ಅನುಮತಿ ಕೊಡಬೇಕು; ನಾವು ಭಿಕ್ಷುವ್ರತವನ್ನು ಸ್ವೀಕರಿಸುವೆವು ಎಂದು ಹೇಳಿದರು. ಆಗ ಅಶೋಕನು ನೆರೆದ ಭಿಕ್ಷುಸಂಘವನ್ನು ಸಂಬೋಧಿಸಿ ದೃಢಸ್ವರದಿಂದ ಈ ದಿವಸ ಬುದ್ಧದೇವನ ಪವಿತ್ರಧರ್ಮಕ್ಕೋಸ್ಕರ ನನ್ನ ಪ್ರಿಯಪುತ್ರನನ್ನೂ ಪುತ್ರಿಯನ್ನೂ ಅರ್ಪಣ ಮಾಡಿದೆವು ಎಂದು ಹೇಳಿದನು. ಆಗ ನೆರೆದ ಭಿಕ್ಷುಗಳೆಲ್ಲ ಚಕ್ರವರ್ತಿಯಾದ ಅಶೋಕನ ಈ ಅಸಾಧಾರಣವಾದ ತ್ಯಾಗವನ್ನು ನೋಡಿ ಭಕ್ತಿಯಲ್ಲಿಯೂ ವಿಸ್ಮಯರಸದಲ್ಲಿಯೂ ಮುಳುಗಿಹೋದರು.

ಮೌದ್ಗಲಿಪುತ್ರ ತಿಷ್ಯನು ಮಹೇಂದ್ರನ ಉಪಾಧ್ಯಾಯನೂ ಗುರುವೂ ಆದನು. ಸ್ಥವಿರ ಮಹಾದೇವನು ಮಹೇಂದ್ರನಿಗೆ ಭಿಕ್ಷುಧರ್ಮದ ದೀಕ್ಷೆಯನ್ನು ಕೊಟ್ಟನು. ಮಹೇಂದ್ರನು "ಉಪಸಂಪದಾ" ಮಂದಿರದಲ್ಲಿಯೇ ಅರ್ಹತ್ವಪದವನ್ನು ಹೊಂದಿದನು. 'ಧರ್ಮಪಾಲಿ' ಭಿಕ್ಷುಣಿಯು ರಾಜಕುಮಾರಿಯಾದ ಸಂಘಮಿತ್ರೆಯ ಉಪಾಧ್ಯಾಯೆಯೂ ಆಯುಪಾಲಿ ಭಿಕ್ಷುಣಿಯು ಅವಳ ಉಪದೇಶಕಳೂ ಆದರು. ಸ್ವಲ್ಪ ದಿವಸಗಳಲ್ಲಿಯೇ ಸಂಘಮಿತ್ರೆಯು ಅರ್ಹತ್ತ್ವವನ್ನು ಹೊಂದಿದಳು. ಮಹೇಂದ್ರನು ೩ವರ್ಷ ಮೌದ್ಗಲಿಪುತ್ರನ ಬಳಿಯಲ್ಲಿ ಬೌದ್ಧಧರ್ಮಗ್ರಂಥಗಳ ಅಧ್ಯಯನ ಮಾಡಿದನು.

ಮಹೇಂದ್ರನು ಸಿಂಹಲಕ್ಕೆ ಹೋಗುವದಕ್ಕೋಸ್ಕರ ಗುರುವಿನ ಅಪ್ಪಣೆಯನ್ನು ಹೊಗೆದುಕೊಂಡಾಗ ಆತನಿಗೆ ೩೨ ವರ್ಷ ವಯಸ್ಸಾಗಿತ್ತು. ಸಿಂಹಲಕ್ಕೆ ಹೊರಡುವ ಮುಂಚೆ

ಮಹೇಂದ್ರನು ತಂಗಿಯೊಡನೆ ತಾಯಿಯ ದರ್ಶನಕ್ಕಾಗಿ ಉಜ್ಜಯಿನಿಯಲ್ಲಿರುವ ಚೈತ್ಯಗಿರಿಗೆ ಹೋಗಿದ್ದನು. ಮಹೇಂದ್ರನು ಅಲ್ಲಿ ಕೆಲವು ದಿವಸ ವಾಸಮಾಡಿ ತಥಾಗತದೇವನ ಅಮೂಲ್ಯವಾದ ಉಪದೇಶಗಳನ್ನು ಪ್ರಚಾರಪಡಿಸಹತ್ತಿದನು. ತಾಯಿಯು ಮಗನ ಮತ್ತು ಅತನ ಸಂಗಡಿಗರ ಗೈರಿಕ ವಸ್ತ್ರಗಳನ್ನು ನೋಡಿ ಪುಲಕಿತಳಾದಳು. ಮತ್ತು ಪಟ್ಟಣದ ಬಳಿಯಲ್ಲಿ ಕಟ್ಟಿಸಿದ ಚೈತ್ಯವಿಹಾರವೆಂಬ ವಿಹಾರದಲ್ಲಿ ಅವರನ್ನು ಇಳಿಸಿದಳು. ಅದೇ ವಿಹಾರದಲ್ಲಿಯೇ ತನ್ನ ಮಗನ ಬಾಯಿಯಿಂದ ದೇವಿಯು ಬೌದ್ಧಧರ್ಮದ ಅಪೂರ್ವವೂ ಮನೋಹರವೂ ಆದ ವ್ಯಾಖ್ಯಾನವನ್ನು ಕೇಳಹತ್ತಿದಳು. ಅಲ್ಲಿ ಮಹೇಂದ್ರನು ೧ ತಿಂಗಳಿಗಿಂತ ಹೆಚ್ಚು ಕಾಲ ವಾಸಮಾಡಿ ನಾಲ್ಕು ಜನ ಸ್ಥವಿರರೂ ಬೇರೆ ಭಿಕ್ಷುಗಳೂ ಇವರೊಡನೆ ಸಿಂಹಲಕ್ಕೆ ಪ್ರಯಾಣ ಬೆಳೆಸಿದನು.

ಮುಂದೆ ಸಿಂಹಲದ ಮಿಶ್ರಪರ್ವತಕ್ಕೆ ಮಹೇಂದ್ರನು ಬಂದನು. ಅಕಸ್ಮಾತ್ತಾಗಿ ಸಿಂಹಲಾಧಿಪತಿಯಾದ ದೇವಪ್ರಿಯ ತಿಷ್ಯನು ಸಾವಿರಾರು ಅನುಚರರೊಡನೆ ಬೇಟೆಗಾಗಿ ಅದೇ ದಿವಸ ಆ ಪರ್ವತಕ್ಕೆ ಬಂದಿದ್ದನು. ಮಹೇಂದ್ರನು ಬೇಟೆಯ ಸಲುವಾಗಿ ಅನುಚರರನ್ನು ದೂರಬಿಟ್ಟು ಒಬ್ಬನೇ ಬಂದಿರುವ ಅರಸನನ್ನು ನೋಡಿ ಆತನ ಸಮೀಪಕ್ಕೆ ಹೋಗಿ ಆತನನ್ನು ' ತಿಷ್ಯನೇ ' ಎಂದು ಕೂಗಿದನು. ದೇವಪ್ರಿಯ ತಿಷ್ಯನು ಸಿಂಹಲದ ರಾಜಾಧಿರಾಜನು; ಆ ದೇಶದ ಯಾವ ಮನುಷ್ಯನೂ ಆತನನ್ನು ತಿಷ್ಯನೆಂದು ಕರೆಯುವದು ಅಸಂಭವವು. ಆ ನಿರ್ಜನ ಪ್ರದೇಶದಲ್ಲಿ ಅಕಸ್ಮಾತ್ತಾಗಿ ' ತಿಷ್ಯ ' ಎಂಬ ಶಬ್ದವನ್ನು ಕೇಳಿದೊಡನೆ ಸಿಂಹಲಾಧಿಪತಿಯು ಬೆರಗಾಗಿ ನಿಂತನು. ಬಳಿಕ ಮಹೇಂದ್ರನು ಆತನಿಗೆ ಆಶ್ವಾಸನ ಕೊಟ್ಟು ತಾನು ಜಂಬೂದ್ವೀಪದಿಂದ ಬಂದಿರುವದನ್ನು ಹೇಳಿದನು. ತಿಷ್ಯನು ಆತನ ಈ ಮಾತನ್ನು ಕೇಳಿದೊಡನೆ ಸಮಾಧಾನ ಹೊಂದಿದನು. ಕ್ರಮದಿಂದ ತಿಷ್ಯನ ಅನುಚರರೂ ಮಹೇಂದ್ರನ ಸಂಗಡ ಬಂದ ಭಿಕ್ಷುಗಳೂ ಅಲ್ಲಿಗೆ ಬಂದರು. ತಿಷ್ಯನು ಮಹೇಂದ್ರನ ಸಂಗಡಿಗರ ಗೈರಿಕ ವಸ್ತ್ರಗಳನ್ನು ನೋಡಿ ಇವರು ಯಾರು? ಎಂದು ಕೇಳಿದನು. ಮಹೇಂದ್ರನು ಅವರ ವ್ರತವನ್ನೂ ಉದ್ದೇಶವನ್ನೂ ವಿವರಿಸಿ ಹೇಳಿದ ಬಳಿಕ ತಿಷ್ಯನು ಧನುರ್ಬಾಣಗಳನ್ನು ನೆಲದಮೇಲಿಟ್ಟು ಮಹೇಂದ್ರನ ಪಾದಗಳಿಗೆ ನಮಸ್ಕಾರಮಾಡಿದನು. ತಿಷ್ಯನು ಮಹೇಂದ್ರನ ಗೈರಿಕ ವಸ್ತ್ರ ಧರಿಸಿದ ತೇಜಃಪುಂಜ ದೇಹವನ್ನು ನೋಡಿ ಭಾರತವರ್ಷದಲ್ಲಿ ಇಂಥ ವೇಷವುಳ್ಳವರು ಎಷ್ಟು ಜನರಿರುವರು? ಎಂದು ಕೇಳಿದನು. ಆಗ ಮಹೇಂದ್ರನು ಗೈರಿಕ ವಸ್ತ್ರಗಳಿಂದ ಭಾರತವರ್ಷವು ಮುಚ್ಚಿಹೋಗಿ ಕಂಗೊಳಿಸುತ್ತಿರುವದು; ಬುದ್ಧಶಿಷ್ಯರು ಅಸಂಖ್ಯರಿರುವರು; ಎಂದು ಹೇಳಿದನು. ಬಳಿಕ ಸಿಂಹಲಾಧಿಪತಿಯಾದ ತಿಷ್ಯನು ಅಶೋಕಮಹಾರಾಜನ ವಾಣಿಯನ್ನು ಸ್ಮರಿಸಿ ಬಹಳ ಆದರದಿಂದ ಅವರ ಸತ್ಕಾರಮಾಡಿದನು. ಕ್ರಮದಿಂದ ಮಹೇಂದ್ರನು ಬುದ್ಧದೇವನ ಪವಿತ್ರ ಜೀವನವನ್ನೂ ಶಾಂತಿದಾಯಕವಾದ ಉಪದೇಶವನ್ನೂ ವಿವರಿಸಲು ಎಲ್ಲರೂ ಸಂತುಷ್ಟರಾದರು. ಈ ಕಾಲದಲ್ಲಿಯೇ ಸಿಂಹಲದ ಮಹಾಮೇಘವೆಂಬ ಸುಪ್ರಸಿದ್ಧ ಉದ್ಯಾನವು

ಸಂಘದ ಉಪಯೋಗಕ್ಕಾಗಿ ಕೊಡಲ್ಪಟ್ಟಿತು. ಕ್ರಮಕ್ರಮದಿಂದ ಸಿಂಹಲದ ಊರೂರಿಗೂ ಬೌದ್ಧವಿಹಾರಗಳೂ ಮಂದಿರಗಳೂ ಸ್ಥಾಪಿಸಲ್ಪಟ್ಟವು. ಸಿಂಹಲನಿವಾಸಿಗಳು ಗುಂಪು ಗುಂಪಾಗಿ ಆ ಪವಿತ್ರಧರ್ಮವನ್ನು ಸ್ವೀಕರಿಸಿ ಭಿಕ್ಷುವ್ರತವನ್ನು ತೆಗೆದುಕೊಳ್ಳಹತ್ತಿದರು. ಸಿಂಹಲ ರಾಜಕುಮಾರಿಯಾದ ಅನುಲೆಯು ಐನೂರು ಜನ ಸಖಿಯರೊಡನೆ ಭಿಕ್ಷುವ್ರತವನ್ನು ಸ್ವೀಕರಿಸಿದಳು. ಈ ಕಾಲದಲ್ಲಿ ಸಂಘಮಿತ್ರೆಯೂ ಸಿಂಹಲಕ್ಕೆ ಬಂದು ಭಿಕ್ಷುಣೀ ಸಾಂಪ್ರದಾಯವನ್ನು ನಂಟುಮಾಡಿದಳು. ಮಹೇಂದ್ರನ ಪ್ರಯತ್ನದಿಂದಲೂ, ದೇವಪ್ರಿಯ ತಿಷ್ಯನ ಅನುರಾಗದಿಂದಲೂ ಕ್ರಮವಾಗಿ ಭೋಧಿವೃಕ್ಷದ ಶಾಖೆಯು ಸಿಂಹಲದಲ್ಲಿ ಊರಲ್ಪಟ್ಟಿತು. ಸಿಂಹಲದಲ್ಲಿ ಬೌದ್ಧಧರ್ಮವನ್ನು ಪ್ರಸಾರಗೊಳಿಸಿದ್ದು ಅಶೋಕ ಮಹಾರಾಜನ ಅಕ್ಷಯ ಕೀರ್ತಿಯು. ಈ ಮೇರೆಗೆ ಅಶೋಕನು ದೇಶದೇಶಾಂತರಗಳಲ್ಲಿ ಧರ್ಮಪ್ರಚಾರಮಾಡಿ ಭರತಖಂಡದ ಕೀರ್ತಿಯನ್ನು ಜಗತ್ತಿನಲ್ಲಿ ನೆಲೆಗೊಳಿಸಿರುವನು.

೧೨ನೆಯ ಅಧ್ಯಾಯ.

ಉಪಗುಪ್ತ.

ಪ್ರಾಚೀನ ಬೌದ್ಧ ಗ್ರಂಥಗಳಲ್ಲಿ ಕೆಳಗೆ ಬರೆದ ಮಹಾಪುರುಷರು ಬೌದ್ಧ-ಧರ್ಮ ಗುರುಗಳೆಂದು ಪ್ರಸಿದ್ಧರಾಗಿರುವರು. ಅವರು:–*ಮಹಾಕಾಶ್ಯಪ, ಆನಂದ, ಸನವಾಸ, ಉಪಗುಪ್ತ, ದ್ರಟಕ, ಮಿಚ್ಛಕ, ವಸುಮಿತ್ರ, ಬುದ್ಧನಂದಿ, ಬುದ್ಧಮಿತ್ರ, ಪಾರ್ಶ್ವ, ಪುಣ್ಯಯಶ, ಅಶ್ವಘೋಷ, ಕಪಿಮಲ, ನಾಗಾರ್ಜುನ, ಕಣ್ವದೇವ ಅಥವಾ ಆರ್ಯದೇವ, ಅಸಂಗ, ವಸುಬಂಧು ಮುಂತಾದವರು. ಮಾನವಜಾತಿಯ ಕಲ್ಯಾಣಕ್ಕಾಗಿ ಬೌದ್ಧಧರ್ಮವನ್ನು ಪ್ರಚಾರಪಡಿಸುವ ಉದ್ದೇಶದಿಂದ ಇವರು ಕಾಲಕಾಲಕ್ಕೆ ಭೂತಲದಲ್ಲಿ ಅವತರಿಸಿದರು. ಉಪಗುಪ್ತನು ಇವರಲ್ಲಿ ನಾಲ್ಕನೆಯವನು. ಮಹಾಯಾನವೆಂಬ ಬೌದ್ಧಗ್ರಂಥದಲ್ಲಿ, ಬುದ್ಧದೇವನೂ ಆನಂದನೂ ಉಪಗುಪ್ತನು ಅವತರಿಸುವನೆಂದು ಭವಿಷ್ಯವನ್ನು ಹೇಳಿದಂತೆ ವರ್ಣನೆಯುಂಟು. ಈತನು ಅಶೋಕಚಕ್ರವರ್ತಿಯ ಗುರುವೂ ಧರ್ಮೋಪದೇಶಕನೂ ಆಗಿದ್ದನು. ಈತನ ಅಸಾಧಾರಣವಾದ ವೈರಾಗ್ಯವೂ, ಕಠೋರವಾದ ಸಾಧನವೂ, ವಿಲಕ್ಷಣವಾದ ಪ್ರತಿಭೆಯೂ, ಧರ್ಮಪ್ರಚಾರಕ್ಕಾಗಿ ಮಾಡಿದ ನಿಸ್ಸೀಮ ಪರಿಶ್ರಮವೂ ಮಹಾಯಾನಗ್ರಂಥದಲ್ಲಿ ಚೆನ್ನಾಗಿ ವರ್ಣಿಸಲ್ಪಟ್ಟಿರುವವು. ಅಶೋ

* Aswaghosha's Awakening of faith.

ಕನ ಜೀವಮಾನದಲ್ಲಿ ಉಪಗುಪ್ತನ ಸಂಬಂಧವು ಬಹಳ ನಿಕಟವಾಗಿರುವದು. ಈ ಕಾರಣದಿಂದ ಉಪಗುಪ್ತನ ಇತಿಹಾಸವನ್ನು ಇಲ್ಲಿ ಸಂಕ್ಷೇಪವಾಗಿ ಆಲೋಚಿಸುವದು ಅಪ್ರಾಸಂಗಿಕವಾಗಲಾರದು.

ಮೂರನೆಯ ಧರ್ಮಗುರುವಾದ ಸನವಾಸನು× ಚಂಪಾನಗರದಲ್ಲಿ ಮಹಾಪರಿನಿರ್ವಾಣವನ್ನು ಹೊಂದಲು, ಉಪಗುಪ್ತನು ಆತನ ಪೀಠದಲ್ಲಿ ಕುಳಿತು ಬೌದ್ಧಧರ್ಮವನ್ನು ಹಬ್ಬಿಸುವದಕ್ಕಾಗಿ ದೇಶಸಂಚಾರಮಾಡಹತ್ತಿದನು. ಅವನು ಭಾಗೀರಥಿಯನ್ನು ದಾಟಿ ವಿದೇಹ ನಗರದ ವಸುಸಾರನು ಕಟ್ಟಿಸಿದ ವಿಹಾರದಲ್ಲಿ ಕೆಲವು ದಿವಸ ವಾಸಮಾಡಿದನು. ಮುಂದೆ ಗಾಂಧಾರ ಪರ್ವತಕ್ಕೆ ಹೋಗಿ, ಎಷ್ಟೋ ಜನ ಸ್ತ್ರೀಪುರುಷರಿಗೆ ಬೌದ್ಧಧರ್ಮದ ದೀಕ್ಷೆಯನ್ನು ಕೊಟ್ಟು ಮಥುರೆಗೆ ನಡೆದನು. ಅಲ್ಲಿ ನಟ, ಭಟ್ಟ ಎಂಬ ಇಬ್ಬರು ವ್ಯಾಪಾರಿಗಳು ಕಟ್ಟಿಸಿದ ವಿಹಾರದಲ್ಲಿ ಕೆಲವು ದಿವಸ ವಾಸಮಾಡಿದನು; ಮತ್ತು ಅಲ್ಲಿಯೇ ಮಾರನನ್ನು ಸಂಗ್ರಾಮದಲ್ಲಿ ಜಯಿಸಿ, ಸಾವಿರಾರು ಜನರನ್ನು ಬೌದ್ಧಧರ್ಮದಲ್ಲಿ ತೆಗೆದುಕೊಂಡನು. ಮುಂದೆ ಮಹೇಂದ್ರ ಮತ್ತು ಚಮಸ ಎಂಬ ಇಬ್ಬರು ರಾಜರ ಆಳಿಕೆಯಲ್ಲಿ ಸಿಂಧು ದೇಶಕ್ಕೆ ಹೋಗಿ, ಅಲ್ಲಿರುವ ಹಂಸಾರಾಮವೆಂಬ ಸ್ಥಳದಲ್ಲಿ ವಾಸಮಾಡಿದ್ದನು. ಅಲ್ಲಿಂದ ಕಾಶ್ಮೀರಕ್ಕೆ ಪ್ರಯಾಣಮಾಡಿ, ಅಲ್ಲಿ ಹಲವು ಅಮಾನುಷಕೃತಿಗಳನ್ನು ತೋರಿಸಿ, ಅಲ್ಲಿಯ ಜನರನ್ನು ಬೆರಗುಬಡಿಸಿದನು. ತಿಬೇಟದ ಲಾಮಾತಾರಾನಾಥನ ಭಾರತೀಯ ಬೌದ್ಧಧರ್ಮವೆಂಬ ಪುಸ್ತಕದಲ್ಲಿ, ಉಪಗುಪ್ತನ ಇತಿಹಾಸವು ವರ್ಣಿಸಲ್ಪಟ್ಟಿದೆ. ತಿಬೇಟದ ಗ್ರಂಥಗಳಲ್ಲಿ ಉಪಗುಪ್ತ ಎಂಬ ಹೆಸರಿಗೆ ಬದಲು ಕೆಲವೆಡೆಯಲ್ಲಿ "ರತಿಗುಪ್ತ"† ಎಂಬದಾಗಿ ಉಲ್ಲೇಖವುಂಟು. ಆ ಗ್ರಂಥಗಳಲ್ಲಿ ಆತನು ಕಾಶ್ಮೀರವಾಸಿಯೆಂದು ವರ್ಣಿತವಾಗಿದೆ. ಮಂಗೋಲಿಯದ ಕೆಲಕೆಲವು ಪುಸ್ತಕಗಳಲ್ಲಿಯೂ ಆತನ ಉಲ್ಲೇಖವುಂಟು. ನೇಪಾಳದೇಶದ ಗ್ರಂಥಗಳಲ್ಲಿ ಉಪಗುಪ್ತನು ಅಶೋಕನ ಸಮಕಾಲೀನನೆಂದೂ, ಪಾಟಲಿಪುತ್ರನಗರದ ಮುಖ್ಯ ಧರ್ಮಗುರುವೆಂದೂ ವರ್ಣನೆಯುಂಟು. ಉಪಗುಪ್ತನು ಮಥುರೆಯಲ್ಲಿ ಹೆಚ್ಚಾಗಿ ವಾಸಮಾಡುತ್ತಿದ್ದನು. ಹ್ಯೂವೆನ್‌ತ್ಸಾಂಗನು ಮಥುರೆಗೆ ಬಂದಾಗ‡ ಹತ್ತು ಸಂಘಾರಾಮಗಳನ್ನು ನೋಡಿದ್ದನು. ಅವುಗಳಲ್ಲಿ ಸುಮಾರು ಎರಡು ಸಾವಿರ ಭಿಕ್ಷುಗಳು ವಾಸವಾಗಿದ್ದರು. ಮಥುರೆಯ ಸಂಘದಲ್ಲಿ ಹೀನಯಾನಕ್ಕೂ ಮಹಾಯಾನಕ್ಕೂ ಸಮವಾಗಿ ಆದರವಿತ್ತು. ಅಶೋಕನು ಮಥುರೆಯಲ್ಲಿ ಮೂರು ಸ್ತೂಪಗಳನ್ನು ಕಟ್ಟಿಸಿದ್ದನು. ಮಹಾತ್ಮನಾದ ತಥಾಗತ, ಸಾರಿಪುತ್ರ, ಮೌದ್ಗಲಿಪುತ್ರ, ಪೂರ್ಣಮೈತ್ರಾಣಿಪುತ್ರ, ಉಪಾಲ, ಆನಂದ, ಮಂಜುಶ್ರೀ ಮೊದಲಾಗಿ ಹಲವು ಜನ ಬೋಧಿ

× ಕೆಲಕೆಲವು ಸ್ಥಳಗಳಲ್ಲಿ ಇವನು ಶಂಗನುವಸು ಎಂಬ ಹೆಸರಿನಿಂದಲೂ ಪ್ರಸಿದ್ಧನಿರುವನು.

† Lt. Col. Waddel.

‡ Beal's Record of western world, Vo. 1.

ಸತ್ವರ ಸ್ಮಾರಕಸ್ತೂಪಗಳು ಅಲ್ಲಿ ಇದ್ದವೆಂದು ಚೀನ ಪ್ರವಾಸಿಗಳು ಉಲ್ಲೇಖಿಸಿದ್ದಾರೆ. ಪಟ್ಟಣದ ಪೂರ್ವಕ್ಕೆ ಅರ್ಧ ಹರದಾರಿಯ ಮೇಲೆ ಸಂಘಾರಾಮಪರ್ವತವಿತ್ತು. ಈ ಪರ್ವತವನ್ನು ಕೊರೆದು, ಭಿಕ್ಷುಗಳ ವಾಸಕ್ಕಾಗಿ ಗುಹೆಗಳನ್ನು ನಿರ್ಮಿಸಿದ್ದರು. ಈ ಆರಾಮದ ಬಾಗಿಲಿಗಿದ್ದ ಒಂದು ಇಳುಕಲನ್ನು ದಾಟಿ ಹ್ಯೂವೇನ್‌ತ್ಸಾಂಗನು ಆ ಗುಹೆಗಳಲ್ಲಿ ಪ್ರವೇಶಿಸಿದ್ದನು. ಉಪಗುಪ್ತನು ಈ ಮಾರ್ಗವನ್ನು ಮಾಡಿಸಿದ್ದನು.

ಹ್ಯೂವೇನ್‌ತ್ಸಾಂಗನ ವಿವರಣೆಯನ್ನೋದಲು ಮಥುರೆಯು ಒಂದು ಮುಖ್ಯವಾದ ಬೌದ್ಧಕ್ಷೇತ್ರವಿತ್ತೆಂದೂ, ಇದೇ ಉಪಗುಪ್ತನ ಲೀಲಾಭೂಮಿಯೆಂದೂ ತಿಳಿಯುವದು. ಹೀನಯಾನಸಂಪ್ರದಾಯದವರಿಗೆ ಉಪಗುಪ್ತನ ವಿಷಯವು ತಿಳಿದಿರಲಿಲ್ಲ. ಉಪಗುಪ್ತನು ಹದಿನೇಳನೆಯ ವರ್ಷ ಭಿಕ್ಷುಧರ್ಮವನ್ನು ಸ್ವೀಕರಿಸಿ, ೨೦ನೆಯ ವರುಷ ಅರ್ಹತ್ತ್ವವನ್ನು ಹೊಂದಿದನು. ಮಹಾಯಾನ ಗ್ರಂಥದಲ್ಲಿ ಉಪಗುಪ್ತನು ಬುದ್ಧದೇವನ ಮಹಾಪರಿನಿರ್ವಾಣವಾದ ನೂರು ವರ್ಷಗಳ ತರುವಾಯ ಅಶೋಕನ ಕಾಲದಲ್ಲಿ ಇದ್ದನೆಂದು ಹೇಳಿರುವದು. ಹ್ಯೂವೇನ್‌ತ್ಸಾಂಗನ ಪ್ರವಾಸವೃತ್ತಾಂತದಲ್ಲಿ:—ಉಪಗುಪ್ತನು ಸಂಘಾರಾಮ ಪರ್ವತದ ಉತ್ತರದಲ್ಲಿ ಇಪ್ಪತ್ತು ಘೂಟು ಎತ್ತರವಾಗಿಯೂ, ಮೂವತ್ತು ಘೂಟು ವಿಶಾಲವಾಗಿಯೂ ಇರುವ ಒಂದು ಕಲ್ಲಿನ ಕಟ್ಟಡದಲ್ಲಿ ಧರ್ಮೋಪದೇಶಮಾಡುತ್ತಿದ್ದನೆಂದು ವರ್ಣಿಸಲ್ಪಟ್ಟಿದೆ. ಆತನು *ಅಲಕ್ಷಣ ಬುದ್ಧನೆಂದು ಭಿಕ್ಷುಗಳಲ್ಲಿ ಸಮ್ಮಾನಿತನಾಗಿದ್ದನು. ಬೌದ್ಧಗುರುವಾವ ಉಪಗುಪ್ತನ ಮುಖಮಂಡಲದಲ್ಲಿ ಅಮಾನುಷವಾದ ಪ್ರತಿಭೆ, ತೀಕ್ಷ್ಣ ಬುದ್ಧಿ, ಅತಿಶಯ ತೇಜಸ್ವಿತೆ ಇವು ಒಡೆದು ಕಾಣುತ್ತಿದ್ದವು. ಈತನು ಧರ್ಮಾನುರಾಗದಿಂದ ಸ್ಥವಿರ† ಸನವಾಸಗುರುವಿನ ಬಳಿಗೆ ಬರಲು ಆಗ ಆತನು—"ವತ್ಸಾ, ಚಿತ್ತಶುದ್ಧಿಯು ಧರ್ಮಸಾಧನದ ಮೂಲವು. ನಿನ್ನ ಮನಸಿನಲ್ಲಿ ಕೆಟ್ಟವಿಚಾರವು ಬಂದಾಗ, ನೀನು ಒಂದು ಪಾತ್ರೆಯಲ್ಲಿ ಒಂದು ಕರಿಯ ಹರಳನ್ನು ಹಾಕು; ಮತ್ತು ಒಳ್ಳೆಯ ವಿಚಾರವು ಬಂದಾಗ ಅದೇ ಪಾತ್ರೆಯಲ್ಲಿ ಒಂದು ಬಿಳಿಯ ಹರಳನ್ನು ಹಾಕು. ಬೆಳಗ್ಗೆ ಎದ್ದಕೂಡಲೆ ಆ ಪಾತ್ರೆಯಲ್ಲಿಯ ಹರಳುಗಳನ್ನು ತೆಗೆದುಕೊಂಡು ಯಾವ ಬಣ್ಣದ ಹರಳುಗಳು ಹೆಚ್ಚಾಗಿವೆ, ನೋಡುತ್ತ ಹೋಗು" ಎಂದು ಹೇಳಿದನು. ಮೊದಲನೆಯ ದಿವಸ ಬಹುತರ ಕರಿಯ ಹರಳುಗಳಿಂದಲೇ ಪಾತ್ರೆಯು ತುಂಬಿದೆಯೆಂದು ಕಂಡುಬಂತು. ಎರಡನೆಯ ದಿವಸ ನೋಡುತ್ತಾನೆ, ಬಿಳಿಯಬಣ್ಣದ ಹರಳುಗಳು ಮೊದಲನೆಯ ದಿವಸಕ್ಕಿಂತ ಸ್ವಲ್ಪ ಹೆಚ್ಚಿಗೆ ಆಗಿವೆ. ಈ ಪ್ರಕಾರ ಏಳನೆಯ ದಿವಸ ನೋಡಲು, ಪಾತ್ರೆಯು ಬಿಳಿಯ ಹರಳುಗಳಿಂದಲೇ ತುಂಬಿತ್ತು; ಈ ರೀತಿಯಿಂದ ಉಪಗುಪ್ತನ ಚಿತ್ತಶುದ್ಧಿಯಾದದ್ದನ್ನು ಕಂಡು, ಸನವಾಸನು ಆತನನ್ನು ಶಿಷ್ಯನನ್ನಾಗಿ ಮಾಡಿಕೊಂಡನು. ಮತ್ತು ಅವನಿಗೆ ಧರ್ಮೋಪದೇಶವನ್ನು

* ಚಿಹ್ನ (ಲಕ್ಷಣ)ಗಳಿಲ್ಲದ; ಬುದ್ಧದೇವನ ಶರೀರದಲ್ಲಿ ೩೨ ಮಹಾಪುರುಷ ಲಕ್ಷಣಗಳಿದ್ದವಂತೆ.

† Edgin Chinese Buddhism.

ಮಾಡಿದನು. ಸ್ವಲ್ಪ ದಿವಸಗಳಲ್ಲಿ ಉಪಗುಪ್ತನು ಶ್ರೋತಾಪತ್ತಿ ‡ಫಲವನ್ನು ಹೊಂದಿದನು.

ಉಪಗುಪ್ತನ ಕೀರ್ತಿಯನ್ನು ಕೇಳಿ, ಒಮ್ಮೆ ಒಬ್ಬ ಸುಂದರಿಯಾದ ವಾರಾಂಗನೆಯು ತನ್ನ ಬಳಿಗೆ ಬರುವದಕ್ಕೆ ಆತನಿಗೆ ಆಮಂತ್ರಣ ಕಳಿಸಿದಳು. ಉಪಗುಪ್ತನು ಅದಕ್ಕೆ ಒಪ್ಪಲಿಲ್ಲ. ಮಥುರೆಯ ಒಬ್ಬ ತರುಣ ಶ್ರೀಮಂತನು ಈ ವೇಶ್ಯೆಯ ರೂಪಲಾವಣ್ಯಗಳಿಗೆ ಮರುಳಾಗಿ ಅವಳ ಮನೆಗೆ ದಿನಾಲು ಬರುತ್ತಿದ್ದನು. ಕೆಲವು ದಿವಸಗಳಾದ ತರುವಾಯ ಮತ್ತೊಬ್ಬ ಶ್ರೀಮಂತನಾದ ಪ್ರವಾಸಿಯು ಬಹುಮೂಲ್ಯವಾದ ಮುತ್ತು, ರತ್ನ ಮೊದಲಾದ ವುಗಳನ್ನು ತೆಗೆದುಕೊಂಡು ಈ ವೇಶ್ಯಾಸ್ತ್ರೀಯ ಮನೆಗೆ ಹೋದನು. ಆ ಪಾಪಿಷ್ಠೆಯು ದ್ರವ್ಯಲೋಭದಿಂದ ಆ ಪ್ರವಾಸಿಗೆ ಮರುಳಾಗಿ, ದಿನಾಲು ಬರುವ ತರುಣನನ್ನು ಮಧ್ಯರಾತ್ರಿಯಲ್ಲಿ ಕೊಂದು ಹೆಣವನ್ನು ಅಂಗಳದಲ್ಲಿ ಹುಗಿದಳು. ಆ ತರುಣನ ಬಳಗದವರು ಶೋಧಮಾಡುತ್ತ ಈ ವಾರಾಂಗನೆಯ ಮನೆಗೆ ಬಂದರು. ಅವಳ ಮುಖವಿಕಾರವನ್ನು ನೋಡುತ್ತಿರಲು ಅವರಿಗೆ ಸಂಶಯವು ಬರಲು ಅವರು ಮನೆಯ ಸುತ್ತಲು ಶೋಧ ಮಾಡುತ್ತ ಮಾಡುತ್ತ ಅಂಗಳದಲ್ಲಿ ಮಣ್ಣನ್ನು ಅಗಿದು ಹೆಣವನ್ನು ಹೊರಗೆ ತೆಗೆದರು. ಅರಸನು ಈ ಕ್ರೂರವಾದ ಕೊಲೆಯನ್ನು ಕೇಳಿ, ಆ ಚಾರೆಯ ಕಿವಿ-ಮೂಗುಗಳನ್ನು ಕೊಯ್ಸಿ ಪಟ್ಟಣದಿಂದ ಹೊರಗೆ ಹಾಕಿಸಿದನು. ರಾಜಸೇವಕರು ಅವಳನ್ನು ಒಂದು ಅರಣ್ಯದಲ್ಲಿ ಬಿಟ್ಟು ಬಿಟ್ಟರು. ಉಪಗುಪ್ತನು ಸಂಚಾರ ಮಾಡುತ್ತ ಮಾಡುತ್ತ ಆ ಅರಣ್ಯಕ್ಕೆ ಒಮ್ಮೆ ಬಂದನು. ಆ ವಾರಾಂಗನೆಯ ಈ ವಿಕಾರವನ್ನು ನೋಡಿ, ಅವಳನ್ನು ಕೇಳಿ, ಎಲ್ಲ ಸಂಗತಿಯನ್ನು ತಿಳಿದುಕೊಂಡನು. ಆ ವೇಶ್ಯೆಗೆ ಉಪಗುಪ್ತನ ಗುರುತು ಹತ್ತಲು ಅವಳು:— ನಾನು ಸುಂದರಿಯಾಗಿದ್ದಾಗ ನನ್ನ ಬಳಿಗೆ ಬರಬೇಕೆಂದು ನಿಮಗೆ ಎಷ್ಟೋ ಪ್ರಾರ್ಥನೆ ಮಾಡಿಕೊಂಡೆನು. ಆಗ ನೀವು ಆ ಪ್ರಾರ್ಥನೆಗೆ ನಿರಾಕರಣ ಮಾಡಿದಿರಿ. ಈಗ ರಾಜಾಜ್ಞೆಯಿಂದ ನನ್ನ ಕಿವಿಮೂಗುಗಳು ಕೊಯ್ಯಲ್ಪಟ್ಟವೆ. ಈ ನನ್ನ ಅಮಂಗಲವಾದ ಕುರೂಪವನ್ನು ನೋಡಿ ಎಲ್ಲರೂ ನನ್ನನ್ನು ಬಿಟ್ಟಿರುವರು. ನನಗೆ ಈಗ ಮರಣವು ಸಮೀಪಿಸಿದೆ. ಈಗ ನನ್ನ ಬಳಿಗೆ ಬರಲು ಫಲವೇನು? ಎಂದು ಅಂದಳು. ಅದಕ್ಕೆ ಉಪಗುಪ್ತನು:— ನಿನ್ನ ಕಲ್ಪನೆಯಂತೆ ನಾನು ಯಾವ ದುಷ್ಟವಾಸನೆಯಿಂದಲೂ ನಿನ್ನ ಬಳಿಗೆ ಬಂದಿಲ್ಲ. ನಿನ್ನ ಈಗಿನ ಮನಸ್ಸಿನ ಸ್ಥಿತಿಯನ್ನು ತಿಳಿಯಲು ಬಂದಿರುವೆನು. ಆದರೆ ಈಗಲೂ ನೀನು ಕಾಲಕೂಟ ತುಂಬಿದ ಪಾತ್ರೆಯಂತೆ ನನಗೆ ತೋರುತ್ತೀಯೆ. ನಿನ್ನಲ್ಲಿ ಸೌಂದರ್ಯವಿತ್ತೆಂಬದು ನಿಜ; ಆದರೆ ಆ ಸೌಂದರ್ಯವೆಂಬ ಬೆಂಕೆಯಲ್ಲಿ ಎಷ್ಟೋ ಕಾಮಮೋಹಿತರಾದ ತರುಣರೆಂಬ ಪತಂಗಗಳು ಬಿದ್ದು ಭಸ್ಮವಾಗಿರಬಹುದು. ನಿಜವಾದ ಜ್ಞಾನವುಳ್ಳವರು ನಿನ್ನ ಸಹ

‡ ಯಾವ ಅವಸ್ಥೆಗೆ ಬರಲು ಮನುಷ್ಯನಿಗೆ ಏಳು ಜನ್ಮಗಳಾದ ಬಳಿಕ ನಿರ್ವಾಣವು ದೊರೆಯುವದೋ, ಆ ಅವಸ್ಥೆ.

ವಾಸದಿಂದ ಯಾವ ಆನಂದವನ್ನೂ ಹೊಂದಲಾರರು. ದೇಹದ ಸೌಂದರ್ಯವು ಸ್ಥಿರವಲ್ಲ. ಕುಷ್ಠರೋಗಗ್ರಸ್ತನಾದ ರೋಗಿಯಂತೆ ನೀನು ಈಗ ಪೀಡೆಯಿಂದ ವ್ಯಾಕುಲಳಾಗಿ ಪಶ್ಚಾತ್ತಾಪ ಪಡುತ್ತಿರುವೆ. ದುರ್ಮಾರ್ಗಕ್ಕೆ ಈ ಶೋಚನೀಯವಾದ ಪರಿಣಾಮವು ಒದಗತಕ್ಕದ್ದೇ ಸರಿ, ಎಂದು ಹೇಳಿದನು. ಉಪಗುಪ್ತನ ಉಪದೇಶ ಪೂರ್ಣವಾದ ಈ ತಿರಸ್ಕಾರದ ನುಡಿಗಳನ್ನು ಕೇಳಿ, ಆ ವಾರಾಂಗನೆಯ ಧರ್ಮನೇತ್ರವು ತೆರೆಯಿತು. ಮನೋವಾಕ್ಕಾಯಗಳಿಂದ ಅವಳು ಮುಕ್ತಿಮಾರ್ಗವನ್ನು ಹಿಡಿಯುವದಕ್ಕೆ ಏಕಾಗ್ರತೆಯನ್ನು ಸ್ವೀಕರಿಸಿದಳು. ಅತ್ಯಂತವಾದ ಇಚ್ಛಾಶಕ್ತಿಯ ಬಲದಿಂದ ಅವಳ ಹೃದಯವು ನಿರ್ಮಲವಾಯಿತು.

ಉಪಗುಪ್ತನು ಯೌವನದ ಮದದಲ್ಲಿಯೇ ಕ್ಷಣಭಂಗುರವೂ, ದುಃಖಪೂರ್ಣವೂ ಆದ ಜಗತ್ತಿನ ವ್ಯಾಪಾರಗಳನ್ನು ನೋಡಿ ಸಂಸಾರದ ಭೋಗಗಳಲ್ಲಿ ವಿರಕ್ತನಾಗಿ "ಅನಾಗಾಮಿ" ಪದವನ್ನು ಹೊಂದಿದನು. ಇದೇ ನಿರ್ವಾಣದ ಪೂರ್ವಸ್ಥಿತಿಯು. ಉಪಗುಪ್ತನು ಸನವಾಸನ ಬಳಿಗೆ ಹೋದ ಕೂಡಲೆ ಆತನು ಅವನಿಗೆ ಭಿಕ್ಷುಧರ್ಮದ ದೀಕ್ಷೆಯನ್ನು ಕೊಟ್ಟನು. ಉಪಗುಪ್ತನು ಕೂಡಲೆ ಅರ್ಹತ್ತ್ವವನ್ನು ಹೊಂದಿದನು.

ಅಶೋಕಾವದಾನ ಗ್ರಂಥದಲ್ಲಿ ಈ ಪ್ರಕಾರ ಹೇಳಿರುವದು:—ಅಶೋಕನು ತೀರ್ಥಯಾತ್ರೆಗೆ ಹೊರಡುವದಕ್ಕೆ ಸ್ವಲ್ಪ ದಿವಸಗಳ ಮುಂಚೆ ಆತನಿಗೆ ಉಪಗುಪ್ತನ ಸಮಾಗಮವಾಯಿತು. ಆಗ ಉಪಗುಪ್ತನು ತೀರ್ಥಯಾತ್ರೆಗಾಗಿ ಅಶೋಕನೊಡನೆ ಹೊರಟು ಆತನಿಗೆ ಪ್ರಸಿದ್ಧವಾದ ಬೌದ್ಧ ತೀರ್ಥಗಳನ್ನೆಲ್ಲಾ ತೋರಿಸಿದನು. ಅಶೋಕನು ಆಯಾ ಸ್ಥಳಗಳಲ್ಲಿ ಹಲವು ಸ್ತೂಪಗಳನ್ನೂ ವಿಹಾರಗಳನ್ನೂ ಕಟ್ಟಿಸಿದನು. ಅಶೋಕನ ಬಳಿಗೆ ಬರುವ ಮುಂಚೆ ಉಪಗುಪ್ತನು ಮಥುರೆಯಲ್ಲಿ ವಾಸವಾಗಿದ್ದನು. ಆತನ ಉಪದೇಶವನ್ನು ಕೇಳಿ, ಅಸಂಖ್ಯ ಸ್ತ್ರೀಪುರುಷರು ಬೌದ್ಧಧರ್ಮವನ್ನು ಸ್ವೀಕರಿಸುತ್ತಿದ್ದರು. ಅಶೋಕನು ಉಪಗುಪ್ತನ ಗುಣಗಳನೂ, ಕೀರ್ತಿಯನ್ನೂ ಕೇಳಿ ಪಾಟಲಿಪುತ್ರಕ್ಕೆ ಬರಬೇಕೆಂದು ಆತನಿಗೆ ಹೇಳಿಕಳುಹಿದನು. ಆತನನ್ನು ಕರೆತರುವದಕ್ಕಾಗಿ ಪಾಟಲಿಪುತ್ರದಿಂದ ನಾವೆಯನ್ನು ಕಳುಹಿದನು. ಮತ್ತು ಆತನು ಅಲ್ಲಿಗೆ ಬಂದೊಡನೆ ಮಹಾ ವೈಭವದಿಂದ ಪಟ್ಟಣಕ್ಕೆ ಕರೆದುಕೊಂಡು ಬಂದನು. ಬಳಿಕ ಅಶೋಕನು ತೀರ್ಥಯಾತ್ರೆಗೆ ತನ್ನೊಡನೆ ಬರಬೇಕೆಂದು ಬೇಡಿಕೊಂಡನು. ಉಪಗುಪ್ತನು ಆನಂದದಿಂದ ಅದಕ್ಕೆ ಒಪ್ಪಿಕೊಂಡನು. ಬಳಿಕ ಅಶೋಕನು ಅವನೊಡನೆ ಹೂಮಾಲೆಗಳು, ಪರಿಮಳ ದ್ರವ್ಯಗಳು, ಮೊದಲಾದ ಸಂಭಾರಗಳನ್ನು ತೆಗೆದುಕೊಂಡು ತೀರ್ಥಯಾತ್ರೆಗೆ ಹೊರಟನು.

ಪಾಟಲಿಪುತ್ರದಲ್ಲಿ ಒಂದು ದಿನ್ನೆಯ ಮೇಲೆ ಉಪಗುಪ್ತನ ಆಶ್ರಮವಿತ್ತು. ಇದರ ಬಳಿಯಲ್ಲಿಯೇ ಅಶೋಕನು ಭಿಕ್ಷುಗಳಿಗಾಗಿ ಕಲ್ಲಿನ ಆರಾಮಗಳನ್ನು ಕಟ್ಟಿಸಿದ್ದನು. ಆ ದಿನ್ನೆಗೆ ಈಗ "ಫೋಟಾಪಹಾಡ" (ಸಣ್ಣಗುಡ್ಡ) ಎಂದು ಕರೆಯುತ್ತಾರೆ.

ಚೀನ ದೇಶದ ಉಪಾಖ್ಯಾನಗಳನ್ನು ಓದಿದರೆ, ಉಪಗುಪ್ತನೇ ಅಶೋಕನಿಗೆ ಬೌದ್ಧಧರ್ಮದ ದೀಕ್ಷೆಯನ್ನು ಕೊಟ್ಟನೆಂದೂ, ಆತನೇ ಅಶೋಕನಿಗೆ ಬೋಧಿಸಿ ಹಲವು ಕಡೆಗಳಲ್ಲಿ ಸ್ತೂಪ-ವಿಹಾರಗಳನ್ನು ಕಟ್ಟಿಸಿದನೆಂದೂ, ಇದರಿಂದಲೇ ಪಾಟಲಿಪುತ್ರದಲ್ಲಿ ಎಲ್ಲಕ್ಕೂ ಮೊದಲು ಉತ್ತಮವಾದ ಕೈಗಾರಿಕೆಯ ಕೌಶಲ್ಯವುಳ್ಳ ಕುಕ್ಕುಟಾರಾಮವು ಅಥವಾ ಅಶೋಕಾರಾಮವು ಕಟ್ಟಸಲ್ಪಟ್ಟಿತೆಂದೂ ತಿಳಿಯುತ್ತದೆ. ಕುಕ್ಕುಟಾರಾಮದಲ್ಲಿ ಅಶೋಕನೂ, ಉಪಗುಪ್ತನೂ ಕೂಡಿ ಮಾಡಿದ ಧರ್ಮಾಲೋಚನೆಯು *"ಗುಣಕಾರಂಡವ್ಯೂಹ" ಎಂಬ ಬೌದ್ಧ ಗ್ರಂಥವಾಯಿತು. ಉಪಗುಪ್ತನ ದೇಹತ್ಯಾಗದ ಸಂಬಂಧವಾಗಿ ಹಲವು ಪ್ರವಾದಗಳಿರುವವು. ಕೆಲವರು ಮಥುರೆಯಲ್ಲಿ ದೇಹಬಿಟ್ಟನೆಂದು ಹೇಳುತ್ತಾರೆ. ಒಂದು ಭಯಂಕರವಾದ ಭೂಕಂಪವಾಗಿ ಅದರಲ್ಲಿ ಉಪಗುಪ್ತನ ಅಂತವಾಯಿತೆಂದು ಜಪಾನದೇಶದಲ್ಲಿ ಒಂದು ಕಥೆಯು ಪ್ರಚಲಿತವಿರುವದು. ಉಪಗುಪ್ತನು ಈಗಲೂ ಜೀವಿಸಿರುವನೆಂದು ಬ್ರಹ್ಮದೇಶದವರು ಹೇಳುತ್ತಾರೆ. ಬ್ರಹ್ಮದೇಶದಲ್ಲಿ ಉಪಗುಪ್ತನ ವಿಷಯವಾಗಿ ಹಲವು ‡ಕಥೆಗಳಿರುವವು. ಅವೆಲ್ಲವು ಪಾಲಿ ಭಾಷೆಯಲ್ಲಿರುವವು. ಇದರಿಂದ ಉಪಗುಪ್ತನ ಸಂಬಂಧವಾಗಿ ಕೇವಲ ಮಹಾಯಾನಗ್ರಂಥದಲ್ಲಿ ಉಲ್ಲೇಖವಿದೆ ಎಂಬದಿಷ್ಟೇ ಅಲ್ಲ; ಪಾಲಿ ಗ್ರಂಥಗಳಲ್ಲಿಯೂ ಆತನ ಸಂಬಂಧವಾಗಿ ಉಪಾಖ್ಯಾನಗಳು ಪ್ರಚಲಿತವಾಗಿರುವವೆಂಬದು ಸ್ಪಷ್ಟವಾಗುವದು. ಬ್ರಹ್ಮದೇಶನಿವಾಸಿಗಳು ಉಪಗುಪ್ತನು ಅಮರನು; ಅವನು ದಕ್ಷಿಣ ಮಹಾಸಾಗರದಲ್ಲಿ ಒಂದು ಹಿತ್ತಾಳೆಯ ಪ್ರಾಸಾದವನ್ನು ನಿರ್ಮಾಣ ಮಾಡಿ ಇದುವರೆಗೆ ದೈವಶಕ್ತಿಯಿಂದ ಧ್ಯಾನನಿರತನಾಗಿ ಜಗತ್ತಿನ ಕಲ್ಯಾಣವನ್ನು ಮಾಡುತ್ತಾನೆಂದೂ, ನಿರ್ವಾಣವನ್ನವಲಂಬಿಸಿದವರಿಗೆ ತಮ್ಮ ತಮ್ಮ ಮಾರ್ಗದಲ್ಲಿ ಮುಂದುವರಿಯುವದಕ್ಕೆ ಸಹಾಯ ಮಾಡುತ್ತಾನೆಂದೂ ನಂಬುವರು. ಬ್ರಹ್ಮದೇಶದಲ್ಲಿ ಪ್ರತಿವರ್ಷ ವರ್ಷಾವಾಸದ ಕಡೆಯ ದಿವಸ (ಅಕ್ಟೋಬರ ತಿಂಗಳಲ್ಲಿ) ಉಪಗುಪ್ತನ ಹೆಸರಿನಿಂದ ಒಂದು ಉತ್ಸವವು ನಡೆಯುವದು. ಈ ದಿವಸ ಪ್ರತಿಯೊಂದು ಮನೆಯು ದೀಪಮಾಲೆಯಿಂದ ಶೋಭಿತವಾಗುವದು. ಬಹುತರ ಪ್ರತಿಯೊಬ್ಬ ಬ್ರಹ್ಮದೇಶದ ಗೃಹಸ್ಥನು ಒಂದೊಂದು ಸಣ್ಣ ನಾವೆಯನ್ನು ಮಾಡಿ, ಅದನ್ನು ಪತ್ರಪುಷ್ಪಗಳು ದೀಪಗಳು ಇವುಗಳಿಂದ ಸಿಂಗರಿಸಿ ಹಾಡುತ್ತ ಅದನ್ನು ನದಿಯಲ್ಲಿ ತೇಲಬಿಡುವನು. ಆ ನಾವೆಯು ಉಪಗುಪ್ತನ ಬಳಿಗೆ ಹೋಗಬೇಕೆಂದೂ ಅತನನ್ನು ಕರೆತರಬೇಕೆಂದೂ ಅವರ ವಿಶ್ವಾಸವು. ಕೆಲಕೆಲವೆಡೆ ಉಪಗುಪ್ತನು ವಾರಣಾಸಿಯ ಬಬ್ಬ ಸುಗಂಧದ್ರವ್ಯ ಮಾರುವವನ ಮಗನೆಂದು ಹೇಳಿದೆ. ಹೀನಯಾನ ಬೌದ್ಧಗ್ರಂಥದಲ್ಲಿ ಉಪಗುಪ್ತನ ಬದಲು ಮೌದ್ಗಲಿಪುತ್ರ ತಿಷ್ಯನ ಹೆಸರು ಬಹಳ ಸಾರೆ ಉಲ್ಲೇಖಿಸಿರುವದು. ಉಪಗುಪ್ತ ತಿಷ್ಯನೂ,

* ನೇಪಾಳದಲ್ಲಿ ೯ ಬಹು ಪವಿತ್ರ ಧರ್ಮಗ್ರಂಥಗಳಿರುವವು ಇದು ಅವುಗಳಲ್ಲೊಂದಾಗಿರುವದು.

‡ ಬ್ರಹ್ಮದೇಶವಾಸಿಗಳು ಉಪಗುಪ್ತನಿಗೆ ಪೂಜೆಯನ್ನರ್ಪಿಸಿದರೆ ಜಡಿಮಳೆಯು ಹೋಗಿ, ಆಕಾಶವು ನಿರ್ಮಲವಾಗುವದೆಂದು ನಂಬುತ್ತಾರೆ.

ಮೌದ್ಗಲಿಪುತ್ರ ತಿಷ್ಯನೂ ಬೇರೆ ಬೇರೆ ಅಲ್ಲ; ಒಂದೇ ವ್ಯಕ್ತಿಯೆಂದು ಹಲವರು ಅಭಿಪ್ರಾಯ ಪಟ್ಟಿದ್ದಾರೆ. ಮೊದಲನೆಯ ಹೆಸರು ಮಹಾಯಾನ ಗ್ರಂಥದಲ್ಲಿ, ಎರಡನೆಯದು ಹೀನಯಾನ ಗ್ರಂಥದಲ್ಲಿ ಉಲ್ಲಿಖಿತವಾಗಿರುವದು. ಏನೇ ಇರಲಿ, ಉಪಗುಪ್ತನು ಮಥುರೆಯಿಂದ ಪಾಟಲಿಪುತ್ರಕ್ಕೆ ಬರುವದೂ ಮೌದ್ಗಲಿಪುತ್ರ ತಿಷ್ಯನು ಅಹೋಗಂಗಾ ಪರ್ವತದಿಂದ ಪಾಟಲಿಪುತ್ರಕ್ಕೆ ಬರುವದೂ ಒಂದೇ ಪ್ರಸಂಗದ ಪುನರಾವರ್ತನವೆಂದು ತೋರುತ್ತದೆ. ಈ ಎರಡೂ ಘಟನೆಗಳಲ್ಲಿ ಬಹಳ ಸಾಮ್ಯವಿರುವದು. ಬುದ್ಧಚರಿತಕಾವ್ಯ, ಹ್ಯೂವೇನ್‌ತ್ಸಾಂಗನ ಪ್ರವಾಸವೃತ್ತಾಂತ ಬ್ರಹ್ಮದೇಶದಲ್ಲಿಯ ಪ್ರಚಲಿತವಾದ ಕಥೆಗಳು ಇವುಗಳಲ್ಲೆಲ್ಲ ಉಪಗುಪ್ತನು ಅಶೋಕಮಹಾರಾಜನ ಉಪದೇಶಕನೂ, ಗುರುವೂ ಆಗಿದ್ದನೆಂದು ವರ್ಣಿಸಲ್ಪಟ್ಟಿರುವದು.

೧೩ನೆಯ ಅಧ್ಯಾಯ.

ಅಶೋಕನ ತೀರ್ಥಯಾತ್ರೆ.

ಅಶೋಕಾವದಾನದಲ್ಲಿ ಹೇಳಿರುವದೇನಂದರೆ:—ಮಹಾಸ್ಥವಿರ ಉಪಗುಪ್ತನು ನ್ಯಾಯಶಾಸ್ತ್ರಪಂಡಿತನಾದ ಭಿಕ್ಷುನಾಯಕನು. ಅತನ ದಿಗಂತವ್ಯಾಪಿಯಾದ ಕೀರ್ತಿಯು ಅಶೋಕಚಕ್ರವರ್ತಿಯ ಕಿವಿಯವರೆಗೆ ಬಂದಿತು. ಉಪಗುಪ್ತನನ್ನು ಕರೆತರುವದಕ್ಕಾಗಿ ಮಂತ್ರಿಗಳು ಅತನ ಬಳಿಗೆ ದೂತರನ್ನು ಕಳಿಸಬೇಕೆಂದಿರಲು ಅಶೋಕನು ತಾನೇ ಹೋಗಿ ಉಪಗುಪ್ತನನ್ನು ಕುರಿತು ಪಾಟಲಿಪುತ್ರಕ್ಕೆ ಬರುವದಕ್ಕೆ ಪ್ರಾರ್ಥಿಸಬೇಕೆಂದು ಸಂಕಲ್ಪಮಾಡಿದನು. ಅಶೋಕನು ಮಥುರೆಗೆ ಹೊರಡಬೇಕೆಂದಿರುವಷ್ಟರಲ್ಲಿ ಉಪಗುಪ್ತನು ತಾನೇ ಪಾಟಲಿಪುತ್ರವಿಹಾರಕ್ಕೆ ಬರುತ್ತಿರುವನೆಂಬ ಸುದ್ದಿಯು ಬಂದಿತು. ಉಪಗುಪ್ತನು ಬರುವದನ್ನು ತಿಳಿದು ಅವನ ಸತ್ಕಾರಕ್ಕಾಗಿ ದೊಡ್ಡ ಸಮಾರಂಭವು ಮಾಡಲ್ಪಟ್ಟಿತು. ಅಶೋಕನು ನದಿಯ ದಂಡೆಯ ಮೇಲೆ ಅತನ ಮಾರ್ಗವನ್ನೋಡಹತ್ತಿದನು. ಅಷ್ಟರಲ್ಲಿ ನಾವೆಯು ದಂಡೆಗೆ ಬಂದಿತು. ಅಶೋಕನು ಬಹಳ ಸಂಭ್ರಮದಿಂದ ಅತನಿಗೆ ನಮಸ್ಕಾರಮಾಡಿ ಸತ್ಕಾರಮಾಡಿದನು. ಮಹಾಸ್ಥವಿರ ಉಪಗುಪ್ತನ ಉಜ್ವಲಮೂರ್ತಿಯನ್ನೂ, ನಿರ್ದುಷ್ಟವಾದ ಧರ್ಮವ್ಯಾಖ್ಯಾನವನ್ನೂ ದಿವ್ಯತೇಜಸ್ಸನ್ನೂ ನೋಡಿ ಅಶೋಕನು ಮರುಳಾದನು. ಅತನ ಸಹವಾಸವೊದಗಿದದರಿಂದ ತಾನು ಧನ್ಯನೆಂದು ತಿಳಿದನು. ಕೊನೆಗೆ ಉಪಗುಪ್ತನೊಡನೆ ತೀರ್ಥಯಾತ್ರೆಮಾಡಬೇಕೆಂದು ನಿಶ್ಚಯಿಸಿದನು. ಶುಭಮುಹೂರ್ತದಲ್ಲಿ ಅವರು ತೀರ್ಥಯಾತ್ರೆಗೆ ಹೊರಟರು.

ಚಾರುಮತಿಯೆಂಬ* ಮಗಳು ಮತ್ತು ಮಹಾಸ್ಥವಿರ ಉಪಗುಪ್ತ ಇವರೊಡನೆ ಅಶೋಕನು ಗಂಗೆಯನ್ನು ದಾಟಿ ವೈಶಾಲೀನಗರಕ್ಕೆ ಬಂದನು. ವೈಶಾಲಿಯ ಹಾಳಾದ ದೇವಾಲಯ ಮೊದಲಾದವುಗಳನ್ನು ನೋಡಿ ಆ ನಗರದ ಪೂರ್ವವೈಭವವು ಆತನ ನೆನಪಿಗೆ ಬಂದಿತು. ವೈಶಾಲೀಪ್ರದೇಶದಲ್ಲಿ ಲಿಚ್ಛವಿ§ ಎಂಬ ಜಾತಿಯು ವಾಸಮಾಡುತ್ತಿತ್ತು. ವೈಶಾಲಿಯು ಆ ಜಾತಿಯ ರಾಜಧಾನಿಯು. ಮಗಧ ಮತ್ತು ನೇಪಾಳ ಇವುಗಳ ರಾಜರಿಗೂ, ಲಿಚ್ಛವಿ ರಾಜರಿಗೂ ಎಷ್ಟೋ ಸಾರೆ ವಿವಾಹಸಂಬಂಧವಾಗಿತ್ತು. ಈ ಸ್ಥಳವು ಬುದ್ಧದೇವನ ಪಾದಸ್ಪರ್ಶದಿಂದಲೂ, ಉಪದೇಶದಿಂದಲೂ ಒಂದು ಸಮಯದಲ್ಲಿ ಪುಣ್ಯತೀರ್ಥವಾಯಿತು. ಈ ಸ್ಥಾನದಲ್ಲಿಯೇ ವೃಜಿಜಾತಿಯ ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಯು ಪ್ರಚಲಿತವಾಗಿತ್ತು. ಮಗಧರಾಜನಾದ ಅಜಾತಶತ್ರುವು ವೃಜಿಜಾತಿಯನ್ನು ಸೋಲಿಸಿದರೂ ಪ್ರಜಾಸತ್ತಾತ್ಮಕ ಪದ್ಧತಿಯನ್ನು ಮುರಿಯುವದಾಗಲಿಲ್ಲ. ಈ ವೈಶಾಲೀನಗರಿಯಲ್ಲಿ ಇನ್ನೂ ಆ ಪದ್ಧತಿಯ ನಿದರ್ಶನವು ಅಶೋಕನಿಗೆ ಕಂಡುಬಂದಿತು. ವೈಶಾಲಿಯ ಪ್ರಸಿದ್ಧವಾದ ವಾಲುಕಾರಾಮದಲ್ಲಿ ಶಿನೆಯು ಬೌದ್ಧ ಧರ್ಮಮಹಾಸಭೆಯು ನೆರೆದಿತ್ತು. ಈಗಲೂ ಅಲ್ಲಿ ಬೌದ್ಧಭಿಕ್ಷುಗಳು ವಾಸವಾಗಿದ್ದರು.

ಭಾಗೀರಥಿಯ ಉತ್ತರಕ್ಕೆ ೧೨ ಕ್ರೋಶಗಳ ಮೇಲೆ ಗಂಡಕೀನದಿಯ ಪೂರ್ವಭಾಗದಲ್ಲಿ ವೈಶಾಲೀ ನಗರಿಯಿತ್ತೆಂದು ಐತಿಹಾಸಿಕರು ಹೇಳುವರು. ವೈಶಾಲಿಯಲ್ಲಿರುವ ಹಾಳಾದ ಕೋಟೆಗೆ "ರಾಜಾವಿಶಾಲಕಾಗಡ" ಎಂದು ಇನ್ನೂ ಅನ್ನುವರು. ವಿಶಲ ಎಂಬ ರಾಜನಿಂದ ಅದಕ್ಕೆ ವೈಶಾಲಿ ಎಂದು ಹೆಸರು ಬಂತೆಂದು ಪ್ರವಾದವುಂಟು. ಅಲ್ಲಿಯ ಅರಮನೆಯು ೪೦೦ ಅಡಿ ವಿಸ್ತಾರವಾಗಿತ್ತು. ಹಳೆಯ ಕೋಟೆಯು ೪೬೦೦ ಅಡಿ ವಿಸ್ತಾರವಾಗಿತ್ತು. ಈಗಿನ ದಿಗ್ವಾರಾದಿಂದ ಈಶಾನ್ಯಕ್ಕೆ ೨೩ ಮೈಲುಗಳ ಮೇಲೆ ವೇಶಾಢ ಗ್ರಾಮವುಂಟು. ಬುದ್ಧದೇವನು ತನ್ನ ಪ್ರಿಯಶಿಷ್ಯನಾದ ಆನಂದನೊಡನೆ ಚಪಲಾಸ್ತೂಪವನ್ನು ಕುರಿತು ಹೋಗುತ್ತಿರುವಾಗ ದಾರಿಯಲ್ಲಿ ವಿಶ್ರಾಂತಿಗಾಗಿ ನೆಳಲಿಗೆ ಕುಳಿತು ಶಿಷ್ಯನಿಗೆ "ಹೇ ಆನಂದ! ×ಈ ವೃಜಿಭೂಮಿಯು ವೈಶಾಲೀನಗರಿಯು ಬಹು ಮನೋಹರವಾದ ಸೌಂದರ್ಯವುಳ್ಳದ್ದು" ಎಂದು ಹೇಳಿದನೆಂದು ‡ಪ್ರವಾದವುಂಟು. ಬುದ್ಧದೇ

* ಚಾರುಮತಿ ಯ ಹೆಸರು ಕಾಶ್ಮೀರದ ಕಥೆಯಲ್ಲಿ ಮಾತ್ರ ಬರೆಯಲ್ಪಟ್ಟಿದೆ.

§ ಲಿಚ್ಛವಿ ಜಾತಿಯು ವೃಜಿಜಾತಿಯ ಒಂದು ಶಾಖೆಯು.

× ಮಹಾಪರಿನಿರ್ವಾಣಸೂತ್ರ.

‡ ತ್ರಿಕಾಂಡ ಶೇಷದಲ್ಲಿ ಲಿಚ್ಛವಿ, ವೈದೇಹ, ತೀರಭುಕ್ತಿ ಎಂಬವು ಪರ್ಯಾಯ ಶಬ್ದಗಳೆಂದು ಹೇಳಿದೆ. ರಾಮಾಯಣದಲ್ಲಿ ಜನಕರಾಜರ್ಷಿಗೆ ವೈದೇಹನೆಂದೂ, ಸೀತಾದೇವಿಗೆ ವೈದೇಹಿಯೆಂದೂ ಹೆಸರುಂಟು. ತೀರಭುಕ್ತಿ ಶಬ್ದದ ವಿಕೃತರೂಪವು ತಿರಹುತ ಎಂಬದು. ಈಗಿನ ಜನಕಪುರವು ಪ್ರಾಚೀನ ಮಿಥಿಲೆಯ ರಾಜಧಾನಿಯಾಗಿತ್ತೆಂಬದನ್ನು ಎಲ್ಲರೂ ಒಪ್ಪುವರು.

ವನ ಕಾಲದಲ್ಲಿಯೂ, ಆತನ ಪರಿನಿರ್ವಾಣವಾದ ಎಷ್ಟೋ ಶತಮಾನಗಳ ವರೆಗೂ ವೈಶಾಲಿಯ ಜನರಿಗೆ ಲಿಚ್ಛವಿ ಎಂಬ ಹೆಸರು ಇತ್ತು.

ಪಟ್ಟಣದ ಸಮೀಪದಲ್ಲಿರುವ ಪಾವಾಗ್ರಾಮದಲ್ಲಿ ಜೈನಧರ್ಮಸ್ಥಾಪಕನೂ, ಕೊನೆಯ ತೀರ್ಥಂಕರನೂ ಆದ ಮಹಾವೀರ ಸ್ವಾಮಿಯು ಜನ್ಮಹೊಂದಿದನು. ಈ ವೈಶಾಲಿಗೆ ಹೊಂದಿದ ಮಹಾವನವು ಉತ್ತರದಲ್ಲಿ ಹಿಮಾಚಲದ ಪಾದದೇಶದ ವರೆಗೆ ಹಬ್ಬಿರುವದು. ಈಮಹಾವನದಲ್ಲಿಯೇ ಬುದ್ಧಶಿಷ್ಯರು ದೊಡ್ಡದೊಂದು ವಿಹಾರವನ್ನು ಕಟ್ಟಿಸಿದ್ದರು. †ಅದೇ ವಿಹಾರದಲ್ಲಿ ಬುದ್ಧನು ಅವರಿಗೆ ಹಲವು ಸಾರೆ ಧರ್ಮೋಪದೇಶ ಮಾಡಿದ್ದನು. ವೈಶಾಲೀ ನಗರಕ್ಕೆ ೩ ಸುತ್ತು ಗೋಡೆಯಿತ್ತು. ಒಂದೊಂದು ಸುತ್ತಿನ ನಡುವೆ ಒಂದೊಂದು ಗೋವೂಥ§ದ ಅಂತರವಿತ್ತು. ವೈಶಾಲಿಯು ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಯಲ್ಲಿ ೭೭೦೭ ಜನನಾಯಕರು *ಒಟ್ಟುಗೂಡಿ ರಾಜಕಾರ್ಯವನ್ನು ಸಾಗಿಸುತ್ತಿದ್ದರು. ತೀರ್ಥಯಾತ್ರೆಯ ಕಾಲದಲ್ಲಿ ಅಶೋಕನು ಇಲ್ಲಿ ನಿಲ್ಲಿಸಿದ ಶಿಲೆಯಲ್ಲಿನ ಕಂಬಗಳು ಆತನು ಇಲ್ಲಿ ಬಂದಿದ್ದನೆಂಬದಕ್ಕೆ ಸಾಕ್ಷಿಯಾಗಿವೆ. ಇಲ್ಲಿಂದ ಪೂರ್ವಕ್ಕೂ ಪಶ್ಚಿಮಕ್ಕೂ ಎರಡು ದಾರಿಗಳು ಹೋಗಿವೆ. ಅಶೋಕನು ಪೂರ್ವದ ದಾರಿಯಿಂದ ರಾಮಗ್ರಾಮವನ್ನು ಕುರಿತು ಹೋಗಿದ್ದನು.

ರಾಮಗ್ರಾಮದ ಪೂರ್ವಕ್ಕೆ ಒಂದು ಇಟ್ಟಿಗೆಯ ಸ್ತೂಪವು ಕಾಣುವದು. ಬುದ್ಧದೇವನು ನಿರ್ವಾಣ ಹೊಂದಿದಾಗ ಒಬ್ಬ ಅರಸನು ಈ ಸ್ಥಳದಲ್ಲಿ ಬುದ್ಧದೇವನ ಶರೀರ ಧಾತುಗಳನ್ನು ಹುಗಿದು ಒಂದು ಸ್ತೂಪವನ್ನು ಕಟ್ಟಿಸಿದ್ದನು. ಅದರ ಎದುರಿಗೆ ಒಂದು ಜಲಾಶಯವಿರುವದು. ಬುದ್ಧದೇವನ ಶರೀರ ಧಾತುಗಳು ಇಲ್ಲಿ ಇಡಲ್ಪಟ್ಟಿವೆಯೆಂದು ತಿಳಿದು ಅಶೋಕನು ಅವುಗಳನ್ನು ಹೊರತೆಗೆಯುವ ಆಲೋಚನೆ ಮಾಡಿದನು. ಈ ಕಾಲದಲ್ಲಿ ಒಂದು ಮಹಾನಾಗವು ಬ್ರಾಹ್ಮಣರೂಪವನ್ನು ಹೊಂದಿ ಅಶೋಕನ ಬಳಿಗೆ ಬಂದು ಮಹಾರಾಜರೇ, ತಾವು ಬುದ್ಧದೇವನಲ್ಲಿ ಅತ್ಯಂತ ಭಕ್ತಿಯುಳ್ಳವರು; ಆತನ ಧರ್ಮವನ್ನು ಹಬ್ಬಿಸುವದಕ್ಕಾಗಿ ಹಲವು ಉಪಾಯಗಳನ್ನು ಮಾಡಿ ತಾವು ಬಹಳ ಪುಣ್ಯವನ್ನು ಸಂಪಾದಿಸಿರುವಿರಿ. ತಾವು ವಾಹನದಿಂದಿಳಿದು ನಮ್ಮ ಮನೆಗೆ ಬರಬೇಕೆಂದು ಬಹಳ ಅಪೇಕ್ಷೆಯುಂಟು ಎಂದು ಅಂದಿತು. ಆಗ ಅಶೋಕನು ಇಲ್ಲಿಂದ ತಮ್ಮ ಆಶ್ರಮವು ಎಷ್ಟು ದೂರದಲ್ಲಿದೆ ಎಂದು ಕೇಳಿದನು. ಆಗ ಆ ಬ್ರಾಹ್ಮಣನು ನಾನು ಈ ಜಲಾಶಯದ ಸ್ವಾಮಿಯಾದ

† ಇದೇ ಸುಪ್ರಸಿದ್ಧ ಮಹಾವನವಿಹಾರವು.

§ ಗೋವೂಥ ಎಂಬದಕ್ಕೆ ಪಾಲಿಯಲ್ಲಿ ಗೋವುತಂ, ಸಂಸ್ಕೃತದಲ್ಲಿ ಗವ್ಯೂತಿ ಎಂಬ ರೂಪಗಳು. childers ಸಾಹೇಬರು ತಮ್ಮ ಪಾಲಿಕೋಶದಲ್ಲಿ ಯೋಜನದ ೪ನೇಯ ಭಾಗಕ್ಕೆ ಗೋವುತಂ ಎಂದು ಹೇಳಿರುವರು. ಶಬ್ದಕಲ್ಪದ್ರುಮದಲ್ಲಿ ೨ ಕ್ರೋಶಗಳಿಗೆ ಒಂದು ಗವ್ಯೂತಿಯೆಂದು ಹೇಳಿದೆ.

* Rhys Davids Buddhist India.

ನಾಗರಾಜನು; ತಾವು ಸ್ತೂಪವನ್ನು ಅಗೆಯಿಸುತ್ತೀರೆಂದು ತಿಳಿದು ನನ್ನ ಮನೆಗೆ ತಮ್ಮನ್ನು ಕರೆದಿರುವೆನು. ಎಂದು ಹೇಳಿದನು. ಅಶೋಕನು ಆ ಬ್ರಾಹ್ಮಣನ ಸಂಗಡ ಆತನ ಮನೆಗೆ ಹೋದನು. ನಾಗರಾಜನು—ಮಹಾರಾಜರೇ ನಾನು ನನ್ನ ದುಷ್ಕರ್ಮದಿಂದ ಈ ನಾಗದೇಹವನ್ನು ಹೊಂದಿರುವೆನು. ಬುದ್ಧದೇವನ ದೇಹಾಸ್ಥಿಗಳನ್ನು ಪ್ರತಿದಿವಸ ಪೂಜೆಮಾಡಿ ಪಾಪವನ್ನು ಕಳೆದುಕೊಳ್ಳುತ್ತಿರುವೆನು; ತಮಗೆ ನಂಬಿಗೆಯಾಗದಿದ್ದರೆ ಅದನ್ನು ಪ್ರತ್ಯಕ್ಷ ನೋಡಬೇಕು ಎಂದು ಹೇಳಿದನು. ನಾಗನ ಮನೆಯಲ್ಲಿ ಆತನ ಮಾತು ಗಳನ್ನು ಕೇಳಿ ಅಶೋಕನು ಅಂಜಿದನು; ಮತ್ತು ನಾಗರಾಜನ ಪೂಜೆಯ ಉಪಕರಣಗ ಳನ್ನು ನೋಡಿ ಇಂಥ ಉಪಕರಣಗಳು ಮನುಷ್ಯರಿಗೆ ದೊರೆಯಲಾರವು ಎಂದು ಭಾವಿಸಿ ದನು. ಆಗ ನಾಗರಾಜನು ಮಹಾರಾಜರೇ, ಹಾಗಿದ್ದರೆ ತಾವು ಈ ಸ್ತೂಪವನ್ನು ಹಾಳು ಮಾಡುವದಿಲ್ಲವೆಂದು ವಚನಕೊಡಿರಿ ಎಂದು ಕೇಳಿದನು. ಅಶೋಕನು ಆತನ ಮಾತುಗ ಳನ್ನು ಕೇಳಿ ಬುದ್ಧದೇವನ ಶರೀರ ಧಾತುಗಳನ್ನು ಹೊರತೆಗೆಯುವ ಆಲೋಚನೆಯನ್ನು ಬಿಟ್ಟುಕೊಟ್ಟನು. ಈ ಜಲಾಶಯದ ಬಳಿಯಲ್ಲಿ ನಾಗರಾಜನು ಬ್ರಾಹ್ಮಣ ವೇಷದಿಂದ ಬಂದ ಸ್ಥಳದಲ್ಲಿ ಅಶೋಕನು ಈ ವೃತ್ತಾಂತವನ್ನೆಲ್ಲ ಬರೆದು ಒಂದು ಶಿಲೆಯನ್ನು ನಿಲ್ಲಿಸಿದ್ದನು. ಚೀನ ಪ್ರವಾಸಿಗಳಾದ ಫಾಹಿಯಾನನೂ ಹುಯೆನ್‌ಸಾಂಗನೂ ಈ ಶಿಲಾಲಿಪಿಯ ಉಲ್ಲೇ ಖವನ್ನು ಮಾಡಿರುವರು. ರಾಮಗ್ರಾಮದ ಹತ್ತರ *ಯಾವ ಸ್ಥಳದಲ್ಲಿ ಯುವರಾಜನಾದ ಸಿದ್ಧಾರ್ಥನು ರಾಜವೇಷವನ್ನು ಬಿಟ್ಟು ಶುದ್ಧಾವಾಸ ದೇವನ ಬಳಿಯಲ್ಲಿ ಮೃಗಚರ್ಮವನ್ನು ತೆಗೆದುಕೊಂಡು ಮಸ್ತಕ ಮುಂಡನ ಮಾಡಿಸಿಕೊಂಡಿದ್ದನೋ ಆ ಸ್ಥಳದಲ್ಲಿ ಅಶೋಕನು ೧೦೦ ಅಡಿ ಎತ್ತರವಾದ ದೊಡ್ಡದೊಂದು ಸ್ತೂಪವನ್ನು ಕಟ್ಟಿಸಿದನು. ಈ ರಾಮಪುರದಲ್ಲಿ ಒಂದು ಕಲ್ಲಿನ ಸಿಂಹಸ್ತಂಭವನ್ನು ನಿಲ್ಲಿಸಿ ಪರ್ವತವನ್ನು ದಾಟಿ ಅವರು ಕುಶೀನಗರಿಗೆ ಬಂದರು.

ಈ ಕುಶೀನಗರದಲ್ಲಿಯೇ ಬುದ್ಧದೇವನು ಪರಿನಿರ್ವಾಣವನ್ನು ಹೊಂದಿದನು. ಈಗಿ ನ ಕಾಶಿಯಾ ಗ್ರಾಮವೇ ಕುಶೀನಗರವೆಂದು ಐತಿಹಾಸಿಕರು ಹೇಳುವರು. ಈ ಸ್ಥಳವು ಗೋರಕ್ಷಪುರದಿಂದ ಪೂರ್ವಕ್ಕೆ ೩೫ ಮೈಲಿನ ಮೇಲೆ ಇತ್ತು. ಪ್ರಾಚೀನ ಕುಶೀನಗರವು ಕಾಶಿಯಾ ಗ್ರಾಮವೆಂಬ ಹೆಸರಿನಿಂದ ಈಗಲೂ ಹಿಂದಿನ ಅವಶೇಷಗಳುಳ್ಳದ್ದಾಗಿ ಇರು ವದು. ಹುಯೆನ್‌ಸಾಂಗನು ಪಟ್ಟಣದ ಹಾಳಾದ ಭಾಗವನ್ನೂ, ಪ್ರಶಸ್ತವಾದ ರಾಜ ಮಾರ್ಗ ಮೊದಲಾದವುಗಳನ್ನೂ ನೋಡಿದ್ದನು. ಆ ಪುರಾತನ ನಗರದ ಈಶಾನ್ಯದಲ್ಲಿ ಅಶೋಕನು ಒಂದು ಸ್ತೂಪವನ್ನು ಕಟ್ಟಿಸಿದನು. ಬುದ್ಧದೇವನು ಚಂಡನ ಮನೆಯಲ್ಲಿ ಕೊನೆಯ ಭಿಕ್ಷೆಯನ್ನು ಸ್ವೀಕರಿಸಿದನೆಂದೂ, ಆ ಚಂಡನ ಮನೆಯು ಈ ಸ್ತೂಪದ ಬಳಿ ಯಲ್ಲಿಯೇ ಇತ್ತೆಂದೂ ಪ್ರವಾದವುಂಟು. ಅಚಿರಾವತೀ§ ನದಿಯ ದಂಡೆಯ ಮೇಲೆ

* ಅನೋಮಾನದಿಯ ದಂಡೆಯ ಮೇಲೆ

§ ಈಗಿನ ರಾಪ್ತಿನದಿಯು

ಉನ್ನತ ಶಾಲವೃಕ್ಷದ ಬುಡದಲ್ಲಿ ಬುದ್ಧದೇವನು ಪರಿನಿರ್ವಾಣವನ್ನು ಹೊಂದಿದನು. ಈ ಮಹಾತೀರ್ಥಸ್ಥಾನದಲ್ಲಿ ಒಂದು ದೊಡ್ಡ ವಿಹಾರವುಂಟು. ಅದರಲ್ಲಿ ಉತ್ತರಕ್ಕೆ ತಲೆಮಾಡಿ ನಿದ್ದೆಮಾಡುತ್ತಿರುವಂತೆ ಬುದ್ಧನ ನಿರ್ವಾಣಮೂರ್ತಿಯುಂಟು. ಅಶೋಕನು ಈ ಸ್ಥಳದಲ್ಲಿ ೨೦೦ ಅಡಿ ಎತ್ತರವಾದ ದೊಡ್ಡದೊಂದು ಸ್ತೂಪವನ್ನು ಕಟ್ಟಿಸಿದ್ದನು. ಮತ್ತು ಅದರ ಬಳಿಯಲ್ಲಿ ಒಂದು ಕಲ್ಲಿನ ಕಂಬವನ್ನು ನಿಲ್ಲಿಸಿ ಅದರ ಮೇಲೆ ನಿರ್ವಾಣವೃತ್ತಾಂತವನ್ನು ಕೊರೆಯಿಸಿರುವನು. ಈ ಕುಶೀನಗರದಲ್ಲಿಯೇ ಮಲ್ಲಜಾತಿಯು ವಾಸಮಾಡಿತ್ತು. ಈ ಸ್ಥಳದಲ್ಲಿಯೇ ಅಶೋಕನು ಈ ಮಲ್ಲಜನಾಂಗದ ಗೌರವವು ನಾಶಹೊಂದಿದ್ದರ ಅವಶೇಷ ಚಿಹ್ನಗಳನ್ನು ನೋಡಿದ್ದನು. ಒಂದಾನೊಂದು ಕಾಲದಲ್ಲಿ ಶಾಕ್ಯಭೂಮಿಯ ಪರ್ವತಪ್ರದೇಶದ ಪೂರ್ವಭಾಗದಿಂದ ವೃಜಿಪ್ರದೇಶದ ಉತ್ತರಭಾಗದ ವರೆಗೆ ಮಲ್ಲಜಾತಿಯ ಅಖಂಡ ಪ್ರತಾಪವು ವ್ಯಾಪಿಸಿತ್ತು. ಅಶೋಕನು ಕುಶೀನಗರಿಯನ್ನು ಬಲಗೊಂಡು ಮತ್ತೆ ರಾಮು ಪುರಕ್ಕೆ ಬಂದನು. ಮುಂದೆ ಗಂಡಕೀ ನದಿಯನ್ನು ದಾಟಿ ತೆರಾಯಿಪ್ರದೇಶದ ಗುಂಟ ಲುಂಬಿನೀ ಉದ್ಯಾನಕ್ಕೆ ಹೋದನು.

ಈ ಲುಂಬಿನೀ ಉದ್ಯಾನದಲ್ಲಿಯೇ ಬುದ್ಧದೇವನು ಹುಟ್ಟಿದ್ದನು. ಲುಂಬಿನಿಯಲ್ಲಿ ಅಶೋಕನು ದೊಡ್ಡದೊಂದು ಕಲ್ಲಿನ ಕಂಬವನ್ನು ನಿಲ್ಲಿಸಿದನು. ಆ ಕಂಬದ ಮೇಲೆ ಒಂದು ದೊಡ್ಡ ಕಲ್ಲಿನ ಕುದುರೆಯು ನಿಲ್ಲಿಸಲ್ಪಟ್ಟಿದೆ. ಆ ಕಂಬದ ಮೇಲೆ ಕೆಳಗೆ ಬರೆದ ಸಂಗತಿಯು ಕೊರೆಯಲ್ಪಟ್ಟಿದೆ. " ದೇವಪ್ರಿಯ ಪ್ರಿಯದರ್ಶಿ ನರಪತಿಯು ತನ್ನ ಆಳಿಕೆಯ ೨೧ನೆಯ ವರ್ಷ ತೀರ್ಥಯಾತ್ರೆಯ ನಿಮಿತ್ತವಾಗಿ ಈ ಸ್ಥಳಕ್ಕೆ ಬಂದಿದ್ದನು. ಈ ಸ್ಥಳದಲ್ಲಿ ಶಾಕ್ಯಮುನಿ ಬುದ್ಧದೇವನು ಜನ್ಮಹೊಂದಿದ್ದರಿಂದ ಪ್ರಿಯದರ್ಶಿ ನರಪತಿಯು ಕಲ್ಲಿನ ಕಂಬವನ್ನೂ ಅದರ ಮೇಲೆ ಕಲ್ಲಿನ ಕುದುರೆಯನ್ನೂ ನಿಲ್ಲಿಸಿದನು.× ಪರಮಾರಾಧ್ಯನಾದ ಬೋಧಿಸತ್ವನ ಜನ್ಮಭೂಮಿಯಾದ್ದರಿಂದ ಲುಂಬಿನಿಯು ನಿಷ್ಕರವಾಗಿ ಅರಸನಿಂದ ಅರ್ಪಿಸಲ್ಪಟ್ಟಿತು "ಅಶೋಕನು ಉಪಗುಪ್ತನೊಡನೆ ಈ ಪ್ರದೇಶದ ಮೋಹಕವಾದ ಪ್ರಾಕೃತಿಕಸೌಂದರ್ಯವನ್ನು ನೋಡಿ ಮರುಳಾದನು. ಸಮೀಪದಲ್ಲಿ ಗಗನಚುಂಬಿಗಳಾದ ಹಿಮಮಯ ಗಿರಿಶಿಖರಗಳು, ನಾಲ್ಮೂಕಡೆಗೆ ಎಲೆಹೂಗಳಿಂದ ಕಂಗೊಳಿಸುವ ಮರಗಳು, ಹುಲ್ಲಿನಕಾಡಿನಲ್ಲಿ ಸ್ವೇಚ್ಛೆಯಿಂದ ತಿರುಗಾಡುವ ಚಿಗರೆಗಳು, ಮತ್ತು ಆ ಪುಣ್ಯಪ್ರದೇಶವಾದ ಲುಂಬಿನಿಯು ಪೂರ್ವಸ್ಮೃತಿ ಇವೆಲ್ಲವುಗಳಿಂದ ಆತನು ಆನಂದಭರಿತನಾದನು. ಅಲ್ಲಿಂದ ಅವರು ಶಾಕ್ಯರಾಜ್ಯದ ರಾಜಧಾನಿಯಾದ ಕಪಿಲಾವಸ್ತುನಗರಿಗೆ ಪ್ರಯಾಣಮಾಡಿದರು.

ಈಗಿನ ಫಯಜಾಬಾದದಿಂದ ಗಂಡಕೀ ಘರ್ಘರಾನದಿಗಳ ಸಂಗಮಸ್ಥಳದವರೆಗೆ ವಿಸ್ತಾರವಾದ ಪ್ರದೇಶವು ಪ್ರಾಚೀನ ಕಪಿಲಾವಸ್ತುವೆಂದು ಹೇಳಲ್ಪಡುವದು. ಬಸ್ತಿ ಜಿಲ್ಲೆಯ ವಾಯವ್ಯಕ್ಕೆ ಇರುವ ಭೂಇಲಾಗ್ರಾಮವು ಇದರ ರಾಜಧಾನಿಯಾಗಿ

× ಇದು ಮುಂದೆ ನಷ್ಟವಾಗಿತ್ತು. Beal's Record of western world Vol. II.

ತ್ತೆಂದು ಪಾಶ್ಚಾತ್ಯ ಐತಿಹಾಸಿಕರು ಕೇಳುವರು. ಧ್ವಂಸೋನ್ಮುಖವಾಗಿದ್ದರೂ ಕಪಿಲಾವಸ್ತುವಿನ ಪೂರ್ವಗೌರವವು ಹೋಗಿಲ್ಲ. ಅರಮನೆಯ ಹಳೆಯ ಗೋಡೆಯ ಮೇಲೆ ಬೌದ್ಧವಿಹಾರವೂ, ಅದರಲ್ಲಿ ಶಾಕ್ಯಸಿಂಹನ ತಂದೆಯಾದ ಶುದ್ಧೋದನ ರಾಜನ ಕಲ್ಲಿನ ಮೂರ್ತಿಯೂ ಶೋಭಿಸುತ್ತಿರುವವು. ಇದರ ಸಮೀಪದಲ್ಲಿಯೇ ರಾಜಾಂತಃಪುರದ ಅವಶೇಷವುಂಟು. ಅದರ ಗೋಡೆಗಳ ಮೇಲೆ ದೊಡ್ಡ ವಿಹಾರವು ಕಟ್ಟಲ್ಪಟ್ಟಿದೆ. ಅದರಲ್ಲಿ ಬುದ್ಧನ ತಾಯಿಯಾದ ಮಹಾಮಾಯೆಯ ಮೂರ್ತಿಯುಂಟು. ಬೋಧಿಸತ್ವನು ಮೆಲ್ಲ ಮೆಲ್ಲನೆ ತಾಯಿಯ ಗರ್ಭವನ್ನು ಪ್ರವೇಶಿಸುತ್ತಿರುವಂತೆ ಅಪರೂಪವಾದ ಒಂದು ಚಿತ್ರವು ಈ ವಿಹಾರದಲ್ಲಿ ಬರೆಯಲ್ಪಟ್ಟಿತ್ತು ಕ್ರಿ. ೭ನೆಯ ಶತಮಾನದಲ್ಲಿ ಹುಯೆನ್‌ಸಾಂಗನು ಇದನ್ನು ನೋಡಿದ್ದನು. ಕಪಿಲಾವಸ್ತುವಿನ ಆಗ್ನೇಯಕ್ಕೆ ಅಶೋಕನು ೨೦ ಅಡಿ ಎತ್ತರವಾದ ಒಂದು ಕಲ್ಲಿನ ಕಂಬವನ್ನು ನಿಲ್ಲಿಸಿದ್ದನು. ಕಲ್ಲಿನ ಮೇಲೆ ಒಂದು ಸಿಂಹದ ಮೂರ್ತಿಯು ನಿಲ್ಲಿಸಲ್ಪಟ್ಟಿತ್ತು. ಈ ಕಂಬದ ಬದಿಯಲ್ಲಿ ಒಂದು ಸ್ತೂಪದಲ್ಲಿ ಬುದ್ಧದೇವನ ಅಸ್ಥಿಯು ಇಡಲ್ಪಟ್ಟಿತ್ತು. ಅಶೋಕನು ಬುದ್ಧನ ನಿರ್ವಾಣವೃತ್ತಾಂತವನ್ನು ಕಂಬದ ಮೇಲೆ ಕೊರೆಯಿಸಿರುವನು. ಪಟ್ಟಣದ ಈಶಾನ್ಯ ಭಾಗದಲ್ಲಿ ಇನ್ನೊಂದು ಸ್ತೂಪವುಂಟು. ಈ ಸ್ಥಳದಲ್ಲಿ ರಾಜಕುಮಾರನಾದ ಶಾಕ್ಯ ಸಿಂಹನು ಹಲೋತ್ಸವವನ್ನು ನೋಡುತ್ತ ನೋಡುತ್ತ ಅತ್ಯಂತ ಧ್ಯಾನಮಗ್ನನಾಗಿದ್ದನು. ಶುದ್ಧೋದನ ರಾಜನು ಎಷ್ಟೋ ಕಡೆಗೆ ಹುಡುಕಿ ಸೂರ್ಯಾಸ್ತಕಾಲದಲ್ಲಿ ಧ್ಯಾನ್ಯಮಗ್ನನಾದ ಮಗನನ್ನು ಕಂಡನು. ಪಟ್ಟಣದ ಪೂರ್ವದಿಕ್ಕಿನ ಅಗಸೆಯಲ್ಲಿ ಒಂದು ಸ್ತೂಪವಿರುವದು. ಈ ಸ್ಥಾನದಲ್ಲಿ ಸಿದ್ಧಾರ್ಥನು ದೇವದತ್ತನು ಕೊಂದ ಆನೆಯನ್ನು ಬಗೆದಿರುವದರಿಂದ ಅದಕ್ಕೆ "ಹಸ್ತಿಪರಿಖಾ" ಎಂದೆನ್ನುವರು. ಇದರ ಬಳಿಯಲ್ಲಿರುವ ಒಂದು ವಿಹಾರದಲ್ಲಿ ಬುದ್ಧದೇವನ ಮೂರ್ತಿಯಿರುವದು. ಇದರ ಬಳಿಯಲ್ಲಿರುವ ಇನ್ನೊಂದು ವಿಹಾರದಲ್ಲಿ ಮಗನನ್ನೆತ್ತಿಕೊಂಡ ಯಶೋಧಾರೆಯ ಮೂರ್ತಿಯಿರುವದು. ಈ ಸ್ಥಳವು ಯುವರಾಜನಾದ ಶಾಕ್ಯಸಿಂಹನ ಶಯನಮಂದಿರವಾಗಿತ್ತು. ಪಟ್ಟಣದ ಆಗ್ನೇಯ ಮೂಲೆಯಲ್ಲಿರುವ ಒಂದು ವಿಹಾರದಲ್ಲಿ ತಡಿಹಾಕಿದ ಬಿಳಿಗುದುರೆಯ ಮೇಲೆ ಶಾಕ್ಯಸಿಂಹನ ಮೂರ್ತಿಯಿರುವದು. ಯುವರಾಜನು ಸಂಸಾರವನ್ನು ತೊರೆದು ಇದೇ ಬಾಗಿಲಿಂದ ಹೊರ ಹೊರಟಿದ್ದನು. ಪಟ್ಟಣದ ನಾಲ್ಕೂ ಕಡೆಗೆ ನಾಲ್ಕು ಬಾಗಿಲುಗಳುಂಟು. ಪ್ರತಿಯೊಂದು ಬಾಗಿಲಿಗೆ ಒಂದೊಂದು ವಿಹಾರವೂ, ಅದರಲ್ಲಿ ಕ್ರಮದಿಂದ ಮುದುಕ, ಬೇನಿಗ, ಮೃತ, ಸನ್ಯಾಸಿ ಇವರ ಮೂರ್ತಿಗಳು ಸ್ಥಾಪಿಸಲ್ಪಟ್ಟಿರುವವು. ತಥಾಗತನು ತಂದೆಯನ್ನು ಕಂಡಿದ್ದ ನ್ಯಗ್ರೋಧಕುಂಜದಲ್ಲಿ ಅಶೋಕನು ಒಂದು ಸ್ತೂಪವನ್ನು ಕಟ್ಟಿಸಿರುವನು. ಅಶೋಕನು ಯುವರಾಜನಾದ ಸಿದ್ಧಾರ್ಥನ ವ್ಯಾಯಾಮಶಾಲೆಯಲ್ಲಿ ಶರಕೂಪ, ತೈಲನದಿ ಮೊದಲಾದ ಬಾಲಕ್ರೀಡಾಸ್ಥಲಗಳನ್ನು ನೋಡಿ ಬಹಳ ಆನಂದಬಟ್ಟನು. ಕ್ರಿ.

ಏನೆಯ ಶತಮಾನದಲ್ಲಿ ಹುಯೆನ್‌ಸಾಂಗನು ಕಪಿಲಾವಸ್ತುನಗರದಲ್ಲಿ ನೋಡಿದ ಅಸಂಖ್ಯ ಸ್ತೂಪ, ವಿಹಾರ, ಮೂರ್ತಿ, ಚಿತ್ರ ಮೊದಲಾದವೆಲ್ಲ ಅಶೋಕನಿಂದಲೇ ನಿರ್ಮಿತವಾಗಿರಬೇಕೆಂದು ತೋರುವದು.

ಇಲ್ಲಿ ಮೊದಲು ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಯಿತ್ತು. ಪ್ರಾಚೀನ ಕಪಿಲಾವಸ್ತುವು ಹಾಳಾದ ಬಳಿಕ ಮತ್ತೆ ಈ ನಗರವು ಕಟ್ಟಲ್ಪಟ್ಟಿತು. ಇಲ್ಲಿ ಇದ್ದ ಬಹುದೊಡ್ಡ *ಶಾಂತಾಗಾರದಲ್ಲಿ ಆಬಾಲವೃದ್ಧ ಪ್ರಜೆಗಳೆಲ್ಲರ ಎದುರಿಗೆ ಸಾರ್ವಜನಿಕ ಸಭೆಯಲ್ಲಿ ರಾಜ್ಯಶಾಸನವೂ, ವಿಚಾರಕಾರ್ಯವೂ ನಡೆಯುತ್ತಿದ್ದವು. ಒಬ್ಬನು ಸಾಮಂತ ಪಂಚಾಯಿತ ಅಥವಾ ಸಭಾಪತಿಯಾಗಿ ಆರಿಸಲ್ಪಡುತ್ತಿದ್ದನು. ಅವನಿಗೆ ಆಗ ರಾಜಸನ್ಮಾನವು ದೊರೆಯುತ್ತಿತ್ತು. ಮತ್ತು ಅವನಿಗೇ ರಾಜನೆನ್ನುವರು. ಒಬ್ಬನು ಎಷ್ಟು ದಿವಸಗಳ ವರೆಗೆ ಈ ಮೇರೆಗೆ ರಾಜನಾಗಿರುತ್ತಿದ್ದನೆಂಬದನ್ನು ಈಗ ನಿರ್ಣಯಿಸುವದು ಅಸಾಧ್ಯವು. ಶಾಕ್ಯಜಾತಿಯು ಪ್ರಾಚೀನೇತಿಹಾಸವನ್ನೊ೯ದಲು ತಿಳಿಯುವದೇನಂದರೆ—ಬುದ್ಧದೇವನ ತಂದೆಯಾದ ಶುದ್ಧೋದನನು ಒಂದೆಡೆಗೆ ರಾಜನೆಂದು ಉಲ್ಲೇಖಿಸಲ್ಪಟ್ಟಿರುವನು; ಇನ್ನೊಂದೆಡೆಗೆ ಆತನು ಒಬ್ಬ ಕೇವಲ ಸನ್ಮಾನಿತ ನಾಗರಿಕನೆಂದೂ, ಆತನ ಅಣ್ಣನ ಮಗನಾದ ಭದ್ದಿಯಶಾಕ್ಯನು ರಾಜನೆಂದು ಪೂಜಿಸಲ್ಪಡುತ್ತಿದ್ದನೆಂದೂ ಉಲ್ಲೇಖವುಂಟು. ಬುದ್ಧದೇವನ ಕಾಲದಲ್ಲಿಯೇ ಪ್ರಾಚೀನ ಕಪಿಲಾವಸ್ತುನಗರವು ಹಾಳಾಯಿತು. ಕೋಶಲದೇಶದ ರಾಜನಾದ ಪ್ರಸೇನಜಿತುವು ಬುದ್ಧದೇವನ ಮೇಲೆ ಅನುರಾಗವುಳ್ಳವನಾಗಿದ್ದನು. ಅವನು ಶಾಕ್ಯವಂಶದೊಡನೆ ಶರೀರಸಂಬಂಧಮಾಡಿ ಬುದ್ಧದೇವನ ನೆನಪು ನಿಲ್ಲಬೇಕೆಂಬ ಉದ್ದೇಶದಿಂದ ಒಬ್ಬ ಶಾಕ್ಯಸಾಮಂತನ ಮಗಳನ್ನು ಮದುವೆಯಾಗಬೇಕೆಂದು ಕೇಳಿದ್ದನು. ಶಾಂತಾಗಾರದಲ್ಲಿ ಶಾಕ್ಯರು ಒಟ್ಟುಗೂಡಿ ಕೋಶಲದೇಶದ ಕಡಿಮೆ ಕುಲಕ್ಕೆ ಕನ್ಯಾದಾನ ಮಾಡುವದಕ್ಕೆ ಒಪ್ಪಲಿಲ್ಲ. ಆದರೆ ಯುದ್ಧಾದಿಗಳಾದಾವೆಂಬ ಅಂಜಿಕೆಯಿಂದ ಒಬ್ಬ ಶಾಕ್ಯಸಾಮಂತನಿಗೆ ಒಬ್ಬ ಕ್ರೀತದಾಸಿಯ ಹೊಟ್ಟೆಯಲ್ಲಿ ಹುಟ್ಟಿದ ವಾಸವಾಕ್ಷತ್ರಿಯಾ ಎಂಬ ಒಬ್ಬ ಪರಮಸುಂದರ ಕನ್ಯೆಯನ್ನು ಆತನಿಗೆ ಕೊಟ್ಟರು. ಶಾಕ್ಯರ ಈ ತಂತ್ರವನ್ನರಿಯದೆ ಶಾಕ್ಯರಾಜಪುತ್ರಿಯೆಂದು ಅವಳನ್ನು ಆತನು ಮದುವೆಯಾದನು. ಮುಂದೆ ವಾಸವೆಯು ಹೊಟ್ಟೆಯಲ್ಲಿ ಹುಟ್ಟಿದ ವಿಡೂರಭನೆಂಬವನು ಕೋಶಲದ ಸಿಂಹಾಸನವನ್ನೇರಿದ ಬಳಿಕ ಶಾಕ್ಯಜಾತಿಯು ಮಾಡಿದ ಕೆಟ್ಟಕೃತಿಯನ್ನು ತಿಳಿದು ವಿಡೂರಭನು ಕ್ರೋಧಾಂಧನಾಗಿ ಮುಯ್ಯಿ ತೀರಿಸಿಕೊಳ್ಳುವ ಸಂಕಲ್ಪಮಾಡಿದನು. ಇದರಿಂದಲೇ ಅವನು ಶಾಕ್ಯರಾಜ್ಯವನ್ನು ಮುತ್ತಿ ಕಪಿಲಾವಸ್ತು ನಗರವನ್ನು ಹಾಳುಮಾಡಿ ಹುಡುಗರಿಂದ ಮುದುಕರವರೆಗಿನ ಎಲ್ಲ ಪ್ರಜೆಗಳನ್ನು ಕೊಂದನು. ಈ ಸಂಗತಿಯಾದ ಒಂದೆರಡು ವರ್ಷಗಳ ತರುವಾಯ ಬುದ್ಧದೇವನು ಮಹಾಪರಿನಿರ್ವಾಣವನ್ನು ಹೊಂದಿದನು.

* ಆಲೋಚನಾಗೃಹ. Rhys Davids Buddhist India.

ಅಶೋಕನು ಮುಂದೆ ಪಶ್ಚಿಮಾಭಿಮುಖವಾಗಿ ಹೊರಟನು. ಉಪಗುಪ್ತನು ಗೌತಮಬುದ್ಧನಿಗಿಂತ ಬಹು ಪೂರ್ವಕಾಲದಲ್ಲಿದ್ದ ಕೋನಾಕ*ಮುನಿಯ ಆಶ್ರಮಸ್ಥಾನವನ್ನು ಅಶೋಕನಿಗೆ ತೋರಿಸಿದನು. ಅಲ್ಲಿ ಅಶೋಕನು ಒಂದು ಕಂಬವನ್ನು ನಿಲ್ಲಿಸಿದನು. ಆ ಕಂಬದ ಮೇಲೆ ಬರೆದ ಲಿಪಿಯಿಂದ ತಿಳಿಯುವದೇನಂದರೆ—ತನ್ನ ಆಳಿಕೆಯ ೧೫ನೆಯ ವರ್ಷ ಅಶೋಕನು ತೀರ್ಥಯಾತ್ರೆಯ ಕಾಲದಲ್ಲಿ ಹಿಮಾಚಲದ ಈ ನಿರ್ಜನಪ್ರದೇಶಕ್ಕೆ ಬಂದಿದ್ದನು. ಆದರೆ ಮೇಲೆ ಉಲ್ಲೇಖಿಸಿದ ಲುಂಬಿನೀ ಉದ್ಯಾನದ ಸ್ತಂಭಲಿಪಿಯಿಂದ ಅಶೋಕನು ತನ್ನ ಆಳಿಕೆಯ ೨೧ನೆಯ ವರ್ಷ ಲುಂಬಿನೀಸ್ತಂಭವನ್ನು ನಿಲ್ಲಿಸಿದ್ದನೆಂದು ತಿಳಿಯುವದು. ಇದರಿಂದ ಅಶೋಕನು ಒಂದಕ್ಕಿಂತ ಹೆಚ್ಚು ಸಾರೆ ತೀರ್ಥಯಾತ್ರೆಗೆ ಹೊರಟಿದ್ದನೆಂದು ಗೊತ್ತಾಗುವದು. ಉಪಗುಪ್ತನು ಯಾವನಾರೆ ಆತನೊಡನೆ ಹೊರಟಿದ್ದನೆಂಬದನ್ನು ಈಗ ನಿರ್ಣಯಿಸುವದು ಅಸಾಧ್ಯವು. ಬಳಿಕ ಅಶೋಕನು ನೇಪಾಲರಾಜ್ಯವನ್ನು ಪ್ರವೇಶಿಸಿ ಲಲಿತಪತ್ತನ ಕಾಟಮುಂಡ ಮೊದಲಾದ ಸ್ಥಾನಗಳನ್ನು ನೋಡಿಕೊಂಡು ಮತ್ತೆ ಪಶ್ಚಿಮಾಭಿಮುಖವಾಗಿ ತಿರುಗಿದನು. ಕೆಲವು ದೂರ ಮುಂದೆ ಹೋದಬಳಿಕ ಆತನು ಪುಣ್ಯಭೂಮಿಯಾದ ಶ್ರಾವಸ್ತೀನಗರಕ್ಕೆ ಬಂದನು.

ಶ್ರಾವಸ್ತಿಯು ಅತಿ ಪ್ರಾಚೀನ ಪ್ರದೇಶವು. ಹರಿವಂಶ, ವಿಷ್ಣುಪುರಾಣ ಮೊದಲಾದ ಸಂಸ್ಕೃತಗ್ರಂಥಗಳಲ್ಲಿ ಸೂರ್ಯವಂಶದ ಯುವನಾಶ್ವನ ಮೊಮ್ಮಗನಾದ ಶ್ರಾವಸ್ತನು ಈ ನಗರವನ್ನು ಕಟ್ಟಿಸಿದನೆಂದು ಉಲ್ಲೇಖವುಂಟು. ಯುವನಾಶ್ವನು ಸೂರ್ಯನಿಂದ ಕೆಳಗೆ ೫೫ನೆಯ ತಲೆಯವನು. ಅಂದಬಳಿಕ ಶ್ರೀರಾಮಾವತಾರವಾಗುವದಕ್ಕೆ ಬಹುಕಾಲ ಮುಂಚೆ ಈ ನಗರವು ಸ್ಥಾಪಿಸಲ್ಪಟ್ಟಿತು. ಅವನ ಆಳಿಕೆಯಲ್ಲಿ ಶ್ರಾವಸ್ತಿಯು ಅಯೋಧ್ಯಾ ಸಾಮ್ರಾಜ್ಯಕ್ಕೆ ಸೇರಿತ್ತೆಂದು ವಾಯುಪುರಾಣದಲ್ಲಿ ಹೇಳಿದೆ. ರಾಪ್ತಿನದಿಯ ದಕ್ಷಿಣತೀರದಲ್ಲಿ ಈಗಲೂ ಈ ನಗರದ ಹಾಳಾದ ಭಾಗವು ಕಣ್ಣಿಗೆ ಬೀಳುವದು. ಈಗೀನ ಅಕೋಯಾನ ಮತ್ತು ಬಲರಾಮಪುರಕ್ಕೆ ಸೇರಿದ ಸಾಹೇತ್ ಮಾಹೇತ ಎಂಬಿವಕ್ಕೆ ಪೂರ್ವದ ಶ್ರಾವಸ್ತಿಯೆಂದು ಹಲವರು ಹೇಳುವರು. ಈಗಿನ ಸಾಹೇತಮಾಹೇತದಲ್ಲಿ ಒಂದು ದೊಡ್ಡ ಬುದ್ಧಮೂರ್ತಿಯೂ ಒಂದು ಅನುಶಾಸನವೂ ಸಿಕ್ಕಿರುವವು. ಈ ಅನುಶಾಸನದಲ್ಲಿ ಶ್ರಾವಸ್ತಿಯ ಉಲ್ಲೇಖವುಂಟು. ಕ್ರಿ. ೭ನೆಯ ಶತಮಾನದಲ್ಲಿ ಹುಯೆನ್‌ಸಾಂಗನು ಬಂದಾಗ ಹಾಳಾದ ಅರಮನೆಯ ಸುತ್ತಲಿನ ದೊಡ್ಡ ಕೋಟೆಯ ಭಾಗವನ್ನು ನೋಡಿದ್ದನು. ಆತನು ಈ ದೊಡ್ಡ ಕೋಟೆಯ ವ್ಯಾಸವು ೫ಕ್ರೋಶಗಳೆಂದು ಹೇಳಿರುವನು. ಬುದ್ಧದೇವನ ಕಾಲದಲ್ಲಿ ಪ್ರಸನ್ನಜಿತ್ ಎಂಬ ನರಪತಿಯು ಶ್ರಾವಸ್ತಿಯಲ್ಲಿ ಆಳುತ್ತಿದ್ದನು. ಈ ಶ್ರಾವಸ್ತಿಯ ಹಾಳಾದ ಸ್ತೂಪದ ಬಳಿಯಲ್ಲಿ ಸದ್ಧರ್ಮಮಹಾಶಾಲೆಯು ಕಟ್ಟಿಸಲ್ಪಟ್ಟಿತ್ತು. ಈ ಮಹಾಶಾಲೆಯಲ್ಲಿದ್ದು ಗೌತಮಬುದ್ಧನು ತನ್ನ ಅಮೃತಸಮಾನವಾದ ಉಪ

* ಗೌತಮಬುದ್ಧನು ಅವತರಿಸುವದಕ್ಕೆ ಮುಂಚೆ ಬೇರೆ ಬೇರೆ ಕಲ್ಪಗಳಲ್ಲಿ ೨೪ ಜನ ಬುದ್ಧರು ಜನ್ಮತಾಳಿದ್ದರೆಂದೂ, ಕೋನಾಕಮುನಿಯು ಅವರಲ್ಲೊಬ್ಬನೆಂದೂ ಬೌದ್ಧಗ್ರಂಥಗಳಲ್ಲಿ ಹೇಳಿದೆ.

ದೇಶದಿಂದ ಸಹಸ್ರಾವಧಿ ನರನಾರಿಯರ ಹೃದಯದಲ್ಲಿ ಶಾಂತಿಯನ್ನುಂಟುಮಾಡಿದ್ದನು. ಈ ಮಹಾಶಾಲೆಯ ಸಮೀಪದಲ್ಲಿಯೇ ಬುದ್ಧದೇವನ ಚಿಕ್ಕನ್ನನಾದ (ಮಾತೃಷ್ವಸೃ) ಪ್ರಜಾಪತಿ ಭಿಕ್ಷುಣಿಯ ವಿಹಾರವಿತ್ತು. ಶ್ರಾವಸ್ತಿಯ ದಕ್ಷಿಣಕ್ಕೆ ಸ್ವಲ್ಪ ದೂರದಲ್ಲಿರುವ ಸುಪ್ರಸಿದ್ಧವಾದ * ಜೇತವನವಿಹಾರವು ಅನಾಥಪಿಂಡಿಕನ ಕೀರ್ತಿಯನ್ನು ಘೋಷಿಸುತ್ತಿರುವದು. ಈ ನಗರದ ಪೂರ್ವದ್ವಾರದ ಎಡಬಲಗಳಲ್ಲಿ ಅಶೋಕನು ಸುಮಾರು ೭೦ ಅಡಿ ಎತ್ತರವಾದ ಕಲ್ಲಿನ ಕಂಬಗಳನ್ನು ನಿಲ್ಲಿಸಿದ್ದನು. ಎಡಗಡೆಯ ಕಂಬದ ಮೇಲ್ಗಡೆಯಲ್ಲಿ ಧರ್ಮಚಕ್ರವೂ ಬಲಗಡೆಯ ಕಂಬದ ಮೇಲೆ ವೃಷಭಮೂರ್ತಿಯೂ ಸ್ಥಾಪಿಸಲ್ಪಟ್ಟಿದ್ದವು. ಚೀನಪ್ರವಾಸಿಗಳು ಈ ಕಂಬಗಳನ್ನು ಉಲ್ಲೇಖಿಸಿರುವರು. ಕ್ರಿ. ೭ನೆಯ ಶತಮಾನದಲ್ಲಿ ಹುಯೆನ್‌ಸಾಂಗನು ಜೇತವನವಿಹಾರದ ಹಾಳಾದ ಭಾಗದೊಳಗೆ ಒಂದು ಇಟ್ಟಿಗೆಯ ಕಟ್ಟಡವನ್ನು ನೋಡಿದ್ದನು. ಅಲ್ಲಿ ಬುದ್ಧದೇವನ ಮೂರ್ತಿಯು ಸ್ಥಾಪಿಸಲ್ಪಟ್ಟಿತ್ತು. ಜೇತವನ ವಿಹಾರದಲ್ಲಿ ಬುದ್ಧದೇವನು ತನ್ನ ಕೈಯ್ಯಿಂದಲೇ ಒಬ್ಬ ಬೇನೆ ಬಿದ್ದ ಭಿಕ್ಷುವಿನ ಶುಶ್ರೂಷೆಮಾಡಿದ್ದನು. ಈ ಪುಣ್ಯಲೀಲೆಯು ಸ್ಮಾರಕವೆಂದು ಈ ವಿಹಾರದ ಈಶಾನ್ಯದಲ್ಲಿ ಒಂದು ಸ್ತೂಪವು ನಿರ್ಮಿಸಲ್ಪಟ್ಟಿತ್ತು. ಯಾವ ಸ್ಥಳದಲ್ಲಿ ಸಾರಿಪುತ್ರನ ಎದುರಿಗೆ ಮೌದ್ಗಲ್ಯಪುತ್ರನ ಅಲೌಕಿಕಶಕ್ತಿಯು ಕುಂಠಿತವಾಗಿತ್ತೋ ಅಲ್ಲಿ ಒಂದು ಸಣ್ಣ ಸ್ತೂಪವಿತ್ತು. ಈ ಸಣ್ಣ ಸ್ತೂಪದ ಬಳಿಯಲ್ಲಿ ಒಂದು ಬಾವಿಯು ಕಂಡುಬರುತ್ತಿತ್ತು. ಬುದ್ಧದೇವನು ಜೇತವನವಿಹಾರದಲ್ಲಿರುವಾಗ ಆತನ ಬಳಕೆಗೆ ಇದೇ ಬಾವಿಯ ನೀರು ಸೇದಲ್ಪಡುತ್ತಿತ್ತೆಂದು ಪ್ರವಾದವುಂಟು. ಅಶೋಕನು ಈ ಬಾವಿಯ ಬಳಿಯಲ್ಲಿ ಒಂದು ಸ್ತೂಪವನ್ನು ಕಟ್ಟಿಸಿದ್ದನು. ಈ ವಿಹಾರದೊಳಗೆ ಹಲವೆಡೆಗಳಲ್ಲಿ ಬುದ್ಧದೇವನು ಪಾದ ಚಾರಣ ಮಾಡುತ್ತ ಮಾಡುತ್ತ ಸದ್ಧರ್ಮೋಪದೇಶವನ್ನು ಮಾಡುತ್ತಿದ್ದನು. ಈ ಪವಿತ್ರ ಸ್ಮೃತಿಯನ್ನು ಚಿರಸ್ಥಾಯಿಯಾಗಿ ಮಾಡಬೇಕೆಂದು ಅಶೋಕನು ಒಂದು ದೊಡ್ಡ ಸ್ತಂಭವನ್ನು ನಿಲ್ಲಿಸಿದನು. ಜೇತವನವಿಹಾರದ ಬಳಿಯಲ್ಲಿ ಒಂದು ದೊಡ್ಡ ಆಳವಾದ ಅಗಳತೆಯು ಕಂಡುಬರುವದು. ಈ ಅಗಳತೆಯೊಳಗೆ ಬುದ್ಧದ್ವೇಷಿಯಾದ ದೇವದತ್ತನ ಕೊಲೆಯಾಯಿತು.§ ಇದರ ದಕ್ಷಿಣಕ್ಕಿರುವ ಇನ್ನೊಂದು ಅಗಳತೆಯಲ್ಲಿ ಪಾಪಿಷ್ಠೆಯಾದ ಕೂಕಾಲಿಭಿಕ್ಷುಣಿಯು ಬುದ್ಧನಿಂದೆಯನ್ನು ಮಾಡಿದ ಪಾಪಫಲದಿಂದ ಮೃತ್ಯುಪಥವನ್ನು ಹಿಡಿದಳು.

---

* ಶ್ರಾವಸ್ತಿಯ ರಾಜಕುಮಾರನಾದ ಜೇತಸಿಂಹನ ಹೆಸರಿನಿಂದ ಈ ಉದ್ಯಾನಕ್ಕೆ ಜೇತವನನೆಂಬ ಹೆಸರು ಬಂದಿದೆ. ಅತ್ಯಂತ ಧನಶಾಲಿಯಾದ ಅನಾಥಪಿಂಡಿಕನೆಂಬ ಬುದ್ಧಶಿಷ್ಯನು ಈ ವನವನ್ನು ಕೊಂಡು ಭಿಕ್ಷುಸಂಘಕ್ಕೆ ದಾನಮಾಡಿದ್ದನು. ಬುದ್ಧದೇವನು ಇಲ್ಲಿಯೇ ಹೆಚ್ಚುಕಾಲ ಕಳೆಯುತ್ತಿದ್ದನು. ಮತ್ತು ಅವನು ಉಪದೇಶಮಾಡಿದ್ದು ಬಹಳವುಟ್ಟಿಗೆ ಈ ಸ್ಥಳದಲ್ಲಿಯೇ

§ ಬುದ್ಧದ್ವೇಷಿಯಾದ ದೇವದತ್ತನ ಉಪದೇಶದಿಂದ ಕೂಕಾಲಿ ಭಿಕ್ಷುಣಿಯು ಬುದ್ಧದೇವನ ಆಚರಣೆಯಲ್ಲಿ ದೊಷ್ಟ ದೋಷವನ್ನಾರೋಪಿಸಿದಳು. ಸ್ವಲ್ಪಕಾಲದಲ್ಲಿಯೇ ಅಕೆಯ ತಂತ್ರವು ಬಯಲಿಗೆ ಬಿತ್ತು. ಆ ಪಾಪದಿಂದ ಅವಳು ಭಯಂಕರ ಯಾತನೆಯನ್ನನುಭವಿಸಿದಳು; ಈ ಸೋತೆಗೆ ಪ್ರವಾದವುಂಟು.

ಶ್ರಾವಸ್ತಿಯು ಸಮೃದ್ಧವಾದ ನಗರವು. ಎಷ್ಟೋ ಜ್ಞಾನಿಗಳೂ, ಧನಿಕರೂ, ಶ್ರೇಷ್ಠಿಗಳೂ ಇಲ್ಲಿ ವಾಸಮಾಡುತ್ತಿದ್ದರು. ಇದು ಉತ್ತರಹಿಂದುಸ್ತಾನದ ವ್ಯಾಪಾರದ ಮುಖ್ಯ ಕೇಂದ್ರಸ್ಥಳವಾಗಿತ್ತು. ಈ ಸ್ಥಳದಲ್ಲಿ ಬುದ್ಧದೇವನು ಬಹುದಿವಸ ಇದ್ದು ತನ್ನ ಮಧುರವಾದ ಉಪದೇಶದಿಂದ ಸಾವಿರಾರು ಜನ ನರನಾರಿಯರ ತಾಪತ್ರಯದಿಂದ ಬೆಂದುಹೋದ ಹೃದಯದಲ್ಲಿ ಶಾಂತಿರೂಪವಾದ ನೀರನ್ನು ಸಿಂಪಡಿಸುತ್ತಿದ್ದನು. ಅಶೋಕನು ಈ ಶ್ರಾವಸ್ತಿಯಲ್ಲಿದ್ದ ಬಕುಲನ ಸ್ತೂಪವನ್ನೂ ಆನಂದನ ಸ್ತೂಪವನ್ನೂ ನೋಡಿದನು. ಬಕುಲನ ಸ್ತೂಪದಲ್ಲಿ ಆತನು ಒಂದು ತಾಮ್ರಖಂಡವನ್ನು ಮಾತ್ರ ದಾನಮಾಡಿದನು. ಶ್ರಾವಸ್ತಿಯ ಪುಣ್ಯಭೂಮಿಯಲ್ಲಿ ಆತನು ೭೦ ಅಡಿ ಎತ್ತರವಾದ ಒಂದು ದೊಡ್ಡ ಕಲ್ಲಿನ ಕಂಬವನ್ನು ಕಟ್ಟಿಸಿದನು. ಶ್ರಾವಸ್ತಿಯಿಂದ ಅವರು ಮಹಾತೀರ್ಥವಾದ ಗಯೆಗೆ ಪ್ರಯಾಣ ಮಾಡಿದರು. ಗಯೆಯು ಹಿಂದುಗಳ ಪ್ರಾಚೀನ ತೀರ್ಥವು; ಬುದ್ಧದೇವನ ಲೀಲಾಸ್ಥಳವು. ಈಗಿನ ಫಲ್ಗುನದಿಯ ತೀರದಲ್ಲಿದ್ದ ವಿಷ್ಣುಮಂದಿರದಿಂದ ಬುದ್ಧಗಯೆಯು ೩ ಕ್ರೋಶಗಳ ಅಚೆ ಇರುವದು. ಬುದ್ಧಗಯೆಯಲ್ಲಿರುವ ಬೋಧಿವೃಕ್ಷವು ಬಹು ದಿವಸಗಳಿಂದ ಹಿಂದುಗಳ ಮತ್ತು ಬೌದ್ಧರ ಭಕ್ತಿಪೂಜೆಗಳನ್ನು ಸ್ವೀಕರಿಸುತ್ತ ಬಂದಿರುವದು. ಇದೇ ಬೋಧಿವೃಕ್ಷದ ಬುಡದಲ್ಲಿ ಶಾಕ್ಯಸಿಂಹನು ಬುದ್ಧತ್ವವನ್ನು ಪಡೆದನು. ಅಶೋಕನು ಈ ಸ್ಥಳದಲ್ಲಿ ಬಹು ಶಿಲ್ಪಕೌಶಲ್ಯವುಳ್ಳ ಒಂದು ದೊಡ್ಡ ಮಂದಿರವನ್ನು ಕಟ್ಟಿಸಿದ್ದನು. ಈ ಮಂದಿರದಲ್ಲಿ ಬುದ್ಧದೇವನ ಧ್ಯಾನಮಗ್ನವಾದ ದೊಡ್ಡ ಮೂರ್ತಿಯು ಇನ್ನೂ ಇರುವದು. ಈ ಬುದ್ಧ ಮಂದಿರದ ಬಳಿಯಲ್ಲಿಯೇ ಮಣ್ಣಿನ ಗುಹೆಗಳಿಂದ ಗೋಡೆ, ಕಲ್ಲಿನ ಕಂಬ ಮೊದಲಾದವು ಅಗಿದು ಹೊರತೆಗೆಯಲ್ಪಟ್ಟು ಈಗ ಆಶ್ಚರ್ಯವನ್ನುಂಟುಮಾಡುತ್ತಿರುವವು. ಉರುಬಿಲ್ವದ ಮನೋಹರವಾದ ದೃಶ್ಯವನ್ನು ಒಮ್ಮೆ ನೋಡಿದವರಿಗೆ ಅದರ ಮರವು ಎಂದೂ ಅಗಲಾರದು. ಸುತ್ತಲು ಕಿರಿಯವಾದ ಗುಡ್ಡಗಳ ಸಾಲುಗಳು* ಶ್ಯಾಮಲವರ್ಣದಿಂದ ಕಂಗೊಳಿಸುತ್ತಿವೆ; ಸಣ್ಣ ಪ್ರವಾಹವುಳ್ಳ ಅಳವಾದ ಫಲ್ಗುನದಿಯು (ಪ್ರಾಚೀನ ನೈರಂಜನ) ದಂಡೆಯ ಪ್ರದೇಶವನ್ನು ತೊಳೆಯುತ್ತ ಹರಿಯುತ್ತದೆ; ನಿರ್ಜನವಾದ ಗುಹೆಗಳು ನಿಜವಾದ ಸಾಧಕರ ತಪೋಭೂಮಿಗಳಾಗಿ ಅಲ್ಲಲ್ಲಿ ಶೋಭಿಸುತ್ತವೆ. ಇಂಥ ಮನೋಹರವಾದ ಸ್ಥಳದಲ್ಲಿ ಅಶೋಕನು ಉಪಗುಪ್ತನ ಸಹವಾಸದಿಂದ ನಿರ್ವಾಣದ ಮಹಿಮೆಯನ್ನು ಶ್ರವಣಮಾಡಿದನು. ಬೋಧಿವೃಕ್ಷದ ಬುಡದಲ್ಲಿ ಕುಳಿತ, ನಿರ್ವಾಣಾನಂದದಲ್ಲಿ ಮಗ್ನನಾದ ಮಹಾಯೋಗಿಯಾದ ಬುದ್ಧನ ಉಜ್ವಲ ಮೂರ್ತಿಯು ಆತನ ಮಾನಸ ಚಕ್ಷುವಿನೆದುರಿಗೆ ಪ್ರತ್ಯಕ್ಷವಾಯಿತು. ಆತನು ಭಕ್ತಿಯುಕ್ತವಾದ ಮನಸ್ಸಿನಿಂದ ಪ್ರಾಚೀನ ಬೋಧಿವೃಕ್ಷದ

* ಗೌತಮಬುದ್ಧನೂ ಮೊದಲಿನ ಬೇರೆ ಬುದ್ಧರೂ ಈ ಸ್ಥಳದಲ್ಲಿ ಕುಳಿತೇ ಬುದ್ಧತ್ವವನ್ನು ಹೊಂದಿದ್ದರು.

ಬುಡದಲ್ಲಿ × ವಜ್ರಾಸನವನ್ನು ಕಂಡನು. ಬಳಿಕ ಅತನು ಬುದ್ಧಗುಯಾ, ವಾರಾಣಸಿ ಗಳನ್ನು ನೋಡಿಕೊಂಡು ಅಲ್ಲಿಂದ ಋಷಿಪತ್ತನ ಅಥವಾ ಸಾರನಾಥಕ್ಕೆ ಹೊರಟನು.

ಸಾರನಾಥವು + ಈಗಿನ ವಾರಾಣಸಿಯಿಂದ ಉತ್ತರಕ್ಕೆ ೭ ಮೈಲು ದೂರದಲ್ಲಿ ರುವದು. ಈ ಸಾರನಾಥವು ಬೌದ್ಧಧರ್ಮದ ಮುಖ್ಯ ಪ್ರಚಾರಸ್ಥಳವು. ಈ ಸ್ಥಳದಲ್ಲಿಯೇ ಲೋಕನಾಯಕನಾದ ಬುದ್ಧದೇವನು ಎಲ್ಲಕ್ಕೂ ಮೊದಲು ತನ್ನ ಧರ್ಮವನ್ನು ಜಗತ್ತಿನೆ ದುರಿಗೆ ಪ್ರಕಟಿಸಿದನು. ಮತ್ತು ಇದೇ ಸ್ಥಳದಿಂದ ಪ್ರಾಣಿಗಳ ಕಲ್ಯಾಣಕ್ಕಾಗಿ ತನ್ನ ಅಮೃತಸಮಾನವಾದ ಉಪದೇಶಗಳನ್ನು ನಾಲ್ಕೂ ಕಡೆಗೆ ಪ್ರಚಾರಪಡಿಸುವದಕ್ಕಾಗಿ ೬೦ ಜನ ಭಿಕ್ಷುಗಳನ್ನು ಕಳುಹಿದನು. ಇವೆಲ್ಲ ಸಂಗತಿಗಳ ಸ್ಮಾರಕವೆಂದು ಕಟ್ಟಿಸಿದ ಸಾರ ನಾಥ ಸ್ತೂಪವು ಇದುವರೆಗೆ ಇರುವದು. ಇದು ಅಶೋಕನು ಕಟ್ಟಿಸಿದ್ದು. ಬುದ್ಧದೇ ವನು ಯಾವ ಸ್ಥಳದಲ್ಲಿ ನಿಂತು ಧರ್ಮಪ್ರಚಾರ ಮಾಡಿದ್ದನೋ, ಸಾವಿರಾರು ಜನರ ಬಳಿ ಯಲ್ಲಿ ತಾನು ಕಂಡು ಹಿಡಿದ ಮಹಾಸತ್ಯವನ್ನು ಲೋಕಕಲ್ಯಾಣಕ್ಕಾಗಿ ಪ್ರಕಟಮಾಡಿ ದ್ದನೋ ಆ ಪವಿತ್ರಸ್ಥಾನದಲ್ಲಿ ಅಶೋಕನು ಒಂದು ಇಟ್ಟಿಗೆಯ ಸ್ತೂಪವನ್ನೂ, ೭೦ ಅಡಿ ಎತ್ತರವಾದ ಒಂದು ಕಲ್ಲಿನ ಕಂಬವನ್ನೂ ನಿಲ್ಲಿಸಿದನು. ಬಳಿಕ ಅಶೋಕನು ಸಾರನಾಥ ವನ್ನು ನೋಡಿಕೊಂಡು ಪಾಟಲಿಪುತ್ರಕ್ಕೆ ತಿರುಗಿ ಬಂದನು.

೧೪ನೆಯ ಅಧ್ಯಾಯ.

ಅಶೋಕನ ಧರ್ಮವಿಧಿ.

ಅಶೋಕನ ಗಿರಿಲಿಪಿ, ಸ್ತಂಭಲಿಪಿ ಮತ್ತು ಬೇರೆ ಅನುಶಾಸನಗಳು ಇವುಗ ಳಲ್ಲಿ ಧರ್ಮಶಬ್ದದ ಉಲ್ಲೇಖವು ಆಗಾಗ ಕಂಡುಬರುವದು. ಈ "ಧರ್ಮ" ಶಬ್ದದ ಅರ್ಥವೇನು? ಇಂಗ್ಲಿಷ ಐತಿಹಾಸಿಕರು ಇದಕ್ಕೆ Low of Piety ಎಂದು ಅರ್ಥವನ್ನು ಹೇಳುವರು. ಈ ಅರ್ಥವು ಬಹು ಮಟ್ಟಿಗೆ ಯೋಗ್ಯವಾದದ್ದೆಂದು ತೋರುವದು. ಈ ಅನುಶಾಸನಗಳು

× ಹುಯೆನ್‌ಸಾಂಗನು ತಾನು ಈ ಸ್ಥಳದಲ್ಲಿ ೭೦ ಅಡಿ ಎತ್ತರವಾದ ಶಿವಲಿಂಗವನ್ನು ನೋಡಿದ್ದೆ ನೆಂದು ತನ್ನ ಪ್ರವಾಸ ವೃತ್ತಾಂತದಲ್ಲಿ ಬರೆದಿರುವನು. Beal's Record Vol II

+ ಬುದ್ಧನ ಪೂರ್ವಜನ್ಮಗಳ ವರ್ಣನೆಯು ಜಾತಕವೆಂಬ ಪಾಲಿಗ್ರಂಥದಲ್ಲಿರುವದು. ಬುದ್ಧದೇ ವನು ಮೃಗಜನ್ಮವನ್ನು ಧರಿಸಿದಾಗ ಈ ಸ್ಥಳದಲ್ಲಿದ್ದನೆಂದೂ, ಒಂದು ಮೃಗಗಳ ಹಿಂಡಿಗೆ ಒಡೆಯನಾಗಿ ದ್ದನೆಂದೂ, ಆ ಕಾಲದಲ್ಲಿ ಈಯಲಾದ ಒಂದು ಹೆಣ್ಣು ಚಿಗರೆಯ ಜೀವವುಳಿಸುವದಕ್ಕಾಗಿ ತಾನು ಪ್ರಾಣ ಕೊಟ್ಟನೆಂದೂ ಅದರಲ್ಲಿ ವರ್ಣನೆಯುಂಟು. ಈ ಪ್ರಸಂಗದಿಂದ ಈ ಸ್ಥಳಕ್ಕೆ ಮೃಗದಾವನೆಂಬ ಹೆಸರು ಬಂದಿತ್ತು. ಈಗ ಈ ಸ್ಥಳಕ್ಕೆ ಸಾರನಾಥ ಇಲ್ಲವೆ ಸಾರಂಗನಾಥವೆನ್ನುವರು.

ಹಲವು ಸ್ಥಳಗಳಲ್ಲಿ ಧರ್ಮಲಿಪಿ ಎಂದು ಹೇಳಲ್ಪಟ್ಟಿವೆ. ರಾಜಕಾರ್ಯಗಳ ಸೌಕರ್ಯಕ್ಕಾಗಿಯೂ, ಮಾನವರ ಆಧ್ಯಾತ್ಮಿಕ ಉನ್ನತಿಗಾಗಿಯೂ ಈ ಅನುಶಾಸನಗಳು ಕೊರೆಯಲ್ಪಟ್ಟಿದ್ದವು. ಅಶೋಕನು ಕೆಲವು ನೀತಿಸೂತ್ರಗಳನ್ನಷ್ಟೇ ಪ್ರಕಟಿಸಿ ಸುಮ್ಮನಿರದೆ ಮನುಷ್ಯನ ಇಹಪರ ಸಾಧನೆಗಾಗಿ ಕೆಲವು ನಿಷೇಧರೂಪ ನಿಯಮಗಳನ್ನು ಪ್ರಕಟಿಸಿದನು. ಈ ನೈತಿಕ ಉಪದೇಶಗಳು ಪ್ರಜೆಗಳ ಜೀವನ ಕ್ರಮದಲ್ಲಿ ನಿಜವಾಗಿ ಕಾರ್ಯತಃ ಉಪಯೋಗಿಸಲ್ಪಡುತ್ತವೆಯೋ ಇಲ್ಲವೋ ಎಂಬದರ ಮೇಲ್ವಿಚಾರಣೆಗಾಗಿ ಉಚ್ಚವರ್ಗದ ಕಾಮದಾರರು ಕೂಡ ನಿಯಮಿಸಲ್ಪಟ್ಟಿದ್ದರು. ಅಹಿಂಸೆ, ಸತ್ಯನಿಷ್ಠೆ, ಪರೋಪಕಾರ, ನಿಷ್ಕಾಮಕರ್ಮ ಇವೇ ಈ ಧರ್ಮವಿಧಿಗಳ ಮೂಲವು. ತಾಯಿ ತಂದೆಗಳು, ಗುರುಹಿರಿಯರು ಇವರ ಮೇಲೆ ಭಕ್ತಿ, ಅವರ ಅಪ್ಪಣೆಗಳನ್ನು ಪಾಲಿಸುವದು, ಸಾಧುಗಳ ಮತ್ತು ದರಿದ್ರರ ಸೇವೆ, ಪವಿತ್ರತೆ, ವಾಕ್ಸಂಯಮ ಇವೆಲ್ಲ ಆ ಧರ್ಮವಿಧಿಗಳಲ್ಲಿ ಸೇರಿದ್ದವು. ಮೊದಲು ಯಜ್ಞ, ಹೋಮ, ಬೇರೆ ಧರ್ಮಕಾರ್ಯಗಳು ಇವುಗಳಲ್ಲಿ ಆಕಳು, ಕುದುರೆ, ಹೋತು ಮೊದಲಾದ ಪ್ರಾಣಿಗಳು ಬಲಿಕೊಡಲ್ಪಡುತ್ತಿದ್ದವು. ಮತ್ತು ಬಲಿಕೊಟ್ಟ ಪ್ರಾಣಿಗಳ ಮಾಂಸವನ್ನು ಎಲ್ಲರೂ ಸ್ವೀಕರಿಸುತ್ತಿದ್ದರು. ಬೇಟೆಯಲ್ಲಿಯೂ ನಾಮಾಜಿಕ ಪರ್ವಗಳಲ್ಲಿಯೂ ಆಹಾರಕ್ಕೋಸ್ಕರ ಹಲವು ಪಶುಪಕ್ಷಿಗಳು ಕೊಲ್ಲಲ್ಪಡುತ್ತಿದ್ದವು. ಈ ಪ್ರಾಣಿಹಿಂಸಾ ಪದ್ಧತಿಯನ್ನು ನಾಶಗೊಳಿಸುವದಕ್ಕಾಗಿ ಅಶೋಕ ಮಹಾರಾಜನು ತನ್ನ ಆಳಿಕೆಯ ೧೩ನೆಯ ವರ್ಷ ಯಜ್ಞದಲ್ಲಿ ಇಲ್ಲವೆ ಪರ್ವಗಳಲ್ಲಿ ಯಾರೂ ರಾಜ್ಯದಲ್ಲಿ ಪ್ರಾಣಿಹಿಂಸೆಯು ಮಾಡಬಾರದೆಂದು ಪ್ರಕಟಿಸಿದನು. ಮೊದಲಿನಿಂದ ಅರಮನೆಯ ಅಡಿಗೆಮನೆಯಲ್ಲಿ ಅಡುವಳರು ಹಲವು ತರದ ಮಾಂಸದ ಅಡಿಗೆಗಳನ್ನು ಮಾಡುತ್ತಿದ್ದರು. ಅಶೋಕನು ತನ್ನ ಮೊದಲನೆಯ ಗಿರಿಲಿಪಿಯಲ್ಲಿ ಅದನ್ನು ನಿಷೇಧಿಸಿದ್ದನು. ಬೌದ್ಧಧರ್ಮವನ್ನು ಸ್ವೀಕರಿಸಿದಂದಿನಿಂದ ಅವನು ಮಾಂಸಭೋಜನವನ್ನು ಬಿಡುವದಕ್ಕೆ ಪ್ರಯತ್ನಿಸತೊಡಗಿದನು. ಅವನು ಮೇಲೆ ಹೇಳಿದ ಗಿರಿಲಿಪಿಯಲ್ಲಿ * ಸ್ಪಷ್ಟವಾಗಿ ಹೇಳಿದ್ದೇನಂದರೆ—" ಮೊದಲು ರಾಜನ ಅಡಿಗೆಯ ಮನೆಯಲ್ಲಿ ಆಹಾರಕ್ಕೋಸ್ಕರ ಸಹಸ್ರಾವಧಿ ಪ್ರಾಣಿಗಳು ಕೊಲ್ಲಲ್ಪಡುತ್ತಿದ್ದವು. ಈಗ ಕೇವಲ ಎರಡು ನವಿಲುಗಳು ಮತ್ತು ಒಂದು ಚಿಗರೆಯು ಮಾತ್ರ ಕೊಲ್ಲಲ್ಪಡುತ್ತಿವೆ. ಚಿಗರೆಯು ದಿನಾಲು ಕೊಲ್ಲಲ್ಪಡುವದಿಲ್ಲ. ಮುಂದೆ ಈ ಮೂರು ಪ್ರಾಣಿಗಳೂ ಕೊಲ್ಲಲ್ಪಡಲಾರವು. " ಅಶೋಕನು ತನ್ನ ಆಳಿಕೆಯ ೨೭ನೆಯ ವರ್ಷ ೫ನೆಯ ಸ್ತಂಭಲಿಪಿಯಲ್ಲಿ ಹಲವು ಪ್ರಾಣಿಗಳನ್ನು ಹೆಸರುಗೊಂಡು ಹೇಳಿ ಅವುಗಳ ಹಿಂಸೆಯನ್ನು ನಿಷೇಧಿಸಿರುವನು. ಇನ್ನು ಮೇಲೆ ನನ್ನ ಆಳಿಕೆಯಲ್ಲಿ ಯಾರೂ ಈ ಪ್ರಾಣಿಗಳನ್ನು ಕೊಲ್ಲಬಾರದು:—

* ಧೌಲಿ, ಗಿರ್ನಾರ, ಜುನಾಗಡ, ಕಾಲ್ಸಿ, ಸಾಹಾವಾಜಗಿರಿ ಈ ಎಲ್ಲ ಸ್ಥಳಗಳಲ್ಲಿ ಈ ಶಾಸನದ ನಕಲುಗಳು ದೊರೆತಿವೆ.

ತುಷಾಗ್ನಿಯಲ್ಲಿ ಯಾವ ಜೀವಂತ ಪ್ರಾಣಿಯನ್ನೂ ಸುಡಬಾರದು. ಯಾರಿಗಾದರೂ ಹಾನಿಮಾಡಬೇಕೆಂದು ಇಲ್ಲವೆ ಪ್ರಾಣಿವಧ ಮಾಡಬೇಕೆಂದು ಯಾರೂ ಕಾಡನ್ನು ಸುಡಬಾರದು. ಚಾತುರ್ಮಾಸ್ಯದ (ಆಷಾಢ ಪೂರ್ಣಿಮೆಯಿಂದ ಕಾರ್ತಿಕ ಪೌರ್ಣಿಮೆಯವರೆಗೆ) ಪ್ರತಿಯೊಂದು ಪೌರ್ಣಿಮೆ, ಅಮಾವಾಸ್ಯೆ, ಪಾಡ್ಯ, ವರ್ಷದ ಉಪೋಸಥ ದಿವಸಗಳು ಇವುಗಳಲ್ಲಿ ಮತ್ಸ್ಯವಧ, ಮತ್ಸ್ಯವಿಕ್ರಯಗಳನ್ನು ಮಾಡಕೂಡದು. ಮೇಲೆ ಹೇಳಿದ ದಿವಸಗಳಲ್ಲಿ ಯಾರೂ ವಿೂನಗಳುಳ್ಳ ಪುಷ್ಕರಿಣಿಗಳಲ್ಲಿ ಯಾವ ರೀತಿಯಿಂದಲೂ ಪ್ರಾಣಿವಧ ಮಾಡಬಾರದು. ಅಷ್ಟಮಿ, ಚತುರ್ದಶಿ, ಅಮಾವಾಸ್ಯೆ, ಪೂರ್ಣಿಮೆ ಪುಷ್ಯ ಪುನರ್ವಸು ನಕ್ಷತ್ರಗಳ ದಿವಸಗಳು ಇವುಗಳಲ್ಲಿ ಟಗರು, ಎತ್ತು, ಹೋತು, ಹಂದಿ, ಮೊದಲಾದವುಗಳನ್ನು ಹಿಂಸಿಸಬಾರದು. ಪುಷ್ಯ ಪುನರ್ವಸು ನಕ್ಷತ್ರಗಳ ದಿವಸ, ಪ್ರತಿಯೊಂದು ಚಾತುರ್ಮಾಸ್ಯದ ಪೌರ್ಣಿಮೆಯ ದಿವಸ ಇಲ್ಲವೆ ಪಕ್ಷದ ಬೇರೆ ದಿವಸಗಳು ಇವುಗಳಲ್ಲಿ ಕುದುರೆ ಇಲ್ಲವೆ ಎತ್ತು ಇವುಗಳ ಹಿಂಸೆಯನ್ನು ಮಾಡಲಾಗದು.

ಅಶೋಕನು ಪ್ರಾಣಿಹಿಂಸೆಯನ್ನು ನಿಲ್ಲಿಸುವದಕ್ಕೆ ಬರೆದಿಟ್ಟ ನಿಯಮಗಳನ್ನು ಎರಡು ಸಾವಿರ ವರ್ಷಗಳ ತರುವಾಯ ಈಗ ಓದಿದರೆ ಒಮ್ಮೆಲೆ ಆಶ್ಚರ್ಯವೂ ಆನಂದವೂ ಉಂಟಾಗುವವು. ಯಾವನು ಸಮುದ್ರಾಂಕಿತ ಭರತಖಂಡದ ಏಕಚ್ಛತ್ರಾಧಿಪತಿಯೋ, ಯಾವನ ಪ್ರತಾಪವು ಉತ್ತರದಲ್ಲಿ ಹಿಮಾಚಲದ ಪಾದಭೂಮಿಯನ್ನು ಹಿಡಿದು ದಕ್ಷಿಣದಲ್ಲಿ ಈಗಿನ ಮೈಸೂರು ಪ್ರದೇಶ ಪೂರ್ವಕ್ಕೆ ಬಂಗಾಲ ಉಪಸಾಗರ ಮತ್ತು ಬ್ರಹ್ಮಪುತ್ರ ಇವುಗಳನ್ನು ಹಿಡಿದು ಪಶ್ಚಿಮಕ್ಕೆ ಗಾಂಧಾರರಾಜ್ಯ ಇವುಗಳವರೆಗೆ ನೆಲೆಗೊಂಡಿತ್ತೋ ಯಾವಾತನ ರಾಜ್ಯಶಾಸನವನ್ನು ನೋಡಿ ಪರದೇಶದ ಸಮರ್ಥರಾದ ರಾಜರು ಕೂಡ ಅಂಜಿ ನಡುಗುತ್ತಿದ್ದರೋ ಅವನು ಹಂದಿ ವಿೂನ ಮೊದಲಾದ ಕ್ಷುದ್ರಪ್ರಾಣಿಗಳ ಪ್ರಾಣರಕ್ಷಣೆಗೂ ವ್ಯಾಕುಲನಾಗುತ್ತಾನೆ! ಈ ದೃಶ್ಯವನ್ನು ನೋಡಿದರೆ ಯಾವನ ಹೃದಯವು ಕರಗದು? ಯಾವನು ವಿಲಾಸಭೋಗ-ಐಶ್ವರ್ಯಪೂರ್ಣವಾದ ಸುವರ್ಣಸಿಂಹಾಸನದ ಮೇಲೆ ಕುಳಿತಿರುವನೋ ಅವನು ಒಂದು ಸಾಮಾನ್ಯ ಇರುವೆಯ ಪ್ರಾಣವನ್ನು ಕೂಡ ಯಾರೂ ತೆಗೆದುಕೊಳ್ಳಬಾರದೆಂದು ತನ್ನ ಸಾಮ್ರಾಜ್ಯದ ಒಂದು ತುದಿಯಿಂದ ಇನ್ನೊಂದು ತುದಿಯ ವರೆಗೆ ಕರುಣಸ್ವರದಿಂದ ಪ್ರಕಟಿಸುತ್ತಾನೆ! ಇದು ಅಭೂತಪೂರ್ವವು! ನೂತನವು! ಮಾನವ ಜಾತಿಯ ಇತಿಹಾಸದಲ್ಲಿ ದುರ್ಲಭವು!!

ಪ್ರಿಯದರ್ಶಿಯು ತಾನು ಕೊರೆಯಿಸಿದ ಗಿರಿಲಿಪಿ ಮೊದಲಾದವುಗಳಲ್ಲಿ ಎಲ್ಲಿಯೂ "ನಿರ್ವಾಣ", "ಕರ್ಮ", "ಚತುರಾರ್ಯಸತ್ಯ", "ಅಷ್ಟಾಂಗ ಕರ್ಮ" ಮೊದಲಾದವುಗಳ ಉಲ್ಲೇಖವನ್ನು ಮಾಡಿಲ್ಲವೆಂಬದು ನಿಜವು. ಆದರೂ ಅವೆಲ್ಲವುಗಳನ್ನು ಓದಿದರೆ ಅವನ ಶಾಸನಗಳಲ್ಲೆಲ್ಲ ಬುದ್ಧದೇವನ ಉಪದೇಶಗಳ ಸಾರಾಂಶವೇ ಇರುವದೆಂದು ಸ್ಪಷ್ಟವಾಗಿ ತೋರುವದು. ಇವುಗಳಲ್ಲಿ ಸುಲಭಭಾಷೆಯಿಂದ ಜ್ಞಾನ, ಭಕ್ತಿ, ಸತ್ಯ,

ವಿನಯ, ಔದಾರ್ಯ, ದಯೆ ಮೊದಲಾದ ನೀತಿತತ್ವಗಳ ಮೂಲಸೂತ್ರಗಳು ವಿವರಿಸಲ್ಪಟ್ಟಿವೆ. ಮೇಲೆ ಹೇಳಿದ ಶಾಸನಗಳನ್ನೋದಿದರೆ ಅಶೋಕನು ರಾಜನೀತಿ, ಧರ್ಮನೀತಿ ಇವುಗಳಿಗೆ ತಳಕು ಹಾಕಿ ಹೊಸ ಧರ್ಮರಾಜ್ಯವನ್ನು ಸ್ಥಾಪಿಸುವದರಲ್ಲಿ ತೊಡಗಿದ್ದನೆಂದು ತೋರುವದು. ಧರ್ಮ ಮತ್ತು ನೀತಿ ಇವುಗಳ ಜೋಡಣೆಯು ಭರತಖಂಡದಲ್ಲಿ ಪ್ರಾಚೀನಕಾಲದಿಂದ ನಡೆದು ಬಂದಿತ್ತು. ಅದೇ ಬೌದ್ಧಪ್ರಭಾವದಿಂದ ಬೆಳೆದು ಅಶೋಕನ ಅನುಶಾಸನಗಳ ರೂಪದಿಂದ ಇತಿಹಾಸದಲ್ಲಿ ಕಂಡುಬರುವದು. ಇದು ಎಲ್ಲ ಜಾತಿಗಳ ಎಲ್ಲ ಧರ್ಮಗಳ ಸರ್ವಸಾಧಾರಣ ಸಂಪತ್ತಿಯು. ಯಾಗ, ಯಜ್ಞ, ವ್ರತ, ನಿಯಮ, ಉಪವಾಸಾದಿಗಳು ಈ ಧರ್ಮವಿಧಿಯ ಅಂಗವಲ್ಲ. ಯಾವದರಿಂದ ಜೀವವು ಎಲ್ಲ ತರದ ಸದ್ಗುಣಗಳನ್ನು ಹೊಂದಬಹುದೋ, ಜ್ಞಾನಧರ್ಮಗಳಲ್ಲಿ ಮೇಲನ್ನು ಹೊಂದಬಹದೋ, ಯಾವದರಿಂದ ಮನುಷ್ಯನು ದೇವತೆಯಾಗಬಲ್ಲನೋ, ಐಹಿಕಪಾರತ್ರಿಕ ಮಂಗಲವನ್ನು ದೊರಕಿಸಲು ಸಮರ್ಥನಾಗುವನೋ ಅದೇ ಧರ್ಮವಿಧಿಯು. ಅಶೋಕನು ಈ ನೀತಿ ಸೂತ್ರಗಳನ್ನು ಪ್ರಚಾರಪಡಿಸಿ ಅಷ್ಟಕ್ಕೇ ಸುಮ್ಮನಿರಲಿಲ್ಲ. ತಾನು ತನ್ನ ಜೀವನಕ್ರಮದಲ್ಲಿ ಅವುಗಳನ್ನು ಪಾಲಿಸುವದಕ್ಕೂ. ಜನಸಾಮಾನ್ಯವು ತಮ್ಮ ತಮ್ಮ ಜೀವನದಲ್ಲಿ ಈ ಸದ್ಗುಣಗಳನ್ನು ಪಾಲಿಸುವದಕ್ಕೂ ವ್ಯವಸ್ಥೆ ಮಾಡಿದ್ದನು. ಪ್ರಾಣಿಹಿಂಸಾನಿವಾರಣ, ಮನುಷ್ಯ ಚಿಕಿತ್ಸಾಲಯ, ಪಶುಚಿಕಿತ್ಸಾಲಯ, ಧರ್ಮೋಪದೇಶ ಇವುಗಳ ಶಾಖೆಗಳನ್ನು ರಾಜ್ಯದಲ್ಲಿ ಸ್ಥಾಪಿಸಿದ್ದನು.

ಸಮಗ್ರ ಪ್ರಾಣಿಸಮೂಹದ ಹಿತವನ್ನು ಮಾಡುವದೇ ಅಶೋಕನ ಮೂಲ ಮಂತ್ರವು. ಇದೇ ನಿಜವಾದ ಬೌದ್ಧತನವು. ಧರ್ಮವಿಧಿಗಳನ್ನು ಪಾಲಿಸುವದರಿಂದ ಮನುಷ್ಯನಿಗೆ ಇಹಪರಗಳಲ್ಲಿ ಸುಖವಾಗುವದೆಂದು ರಾಜ್ಯದಲ್ಲೆಲ್ಲ ಪ್ರಕಟಿಸಲ್ಪಟ್ಟಿತ್ತು. ಯುಕ್ತಿ, ತರ್ಕ, ಇಲ್ಲವೆ ದಾರ್ಶನಿಕಮತ ಇವುಗಳಿಂದ ಧರ್ಮವಿಧಿಯ ಯಾವ ಸಿದ್ಧಾಂತವೂ ಸ್ಥಾಪಿಸಲ್ಪಟ್ಟಿದ್ದಿಲ್ಲ. ಮನುಷ್ಯನಿಗೆ ಯಾವುದು ಅವಶ್ಯ ಕರ್ತವ್ಯವೋ, ನಿಜವಾಗಿ ಕಲ್ಯಾಣಕರವೋ ಅದನ್ನೇ ಸಹಜ ಸುಲಭಭಾಷೆಯಿಂದ ಪ್ರಕಟಿಸಿದನು. ಆತನು ಪ್ರಚಾರಗೊಳಿಸಿದ ಧರ್ಮವಿಧಿಗಳನ್ನೋದಿದರೆ ಬಹಳ ಆಶ್ಚರ್ಯವಾಗುವದು. ಭಾವರಾ ಅನುಶಾಸನವನ್ನೋದಿದರೆ ಅಶೋಕನು ಯಾವ ಅಮೃತಮಯ ಭಾಂಡಾರದಿಂದ ರತ್ನಗಳನ್ನು ತೆಗೆದು ಜಗತ್ತಿಗೆ ದಾನಮಾಡಿದನೋ ಎಂದು ಅನಿಸುವದು. ಬೌದ್ಧಧರ್ಮವು ಆತನ ಹೃದಯದಲ್ಲಿಯ ಆಧ್ಯಾತ್ಮಿಕ ಝರಿಯು. ಬುದ್ಧದೇವನ ಉಪದೇಶಗಳೇ ಅಶೋಕನ ಮೂಲಮಂತ್ರವು. ಆದದರಿಂದಲೇ ಆತನು ನಿಜವಾದ ಭಕ್ತಿವಿಶ್ವಾಸಗಳಿಂದ ತನ್ನ ಅನುಶಾಸನಗಳಲ್ಲಿ ಬೌದ್ಧವಿಧಿಗಳನ್ನು ಕೊರೆಯಿಸಿದನು. ಈ ಧರ್ಮವಿಧಿಗಳು ಅಶೋಕನು ತಾನೇ ಕಂಡುಹಿಡಿದವುಗಳಾಗಿದ್ದರೆ ಅವನು ನಾನಾ ಯುಕ್ತಿ ತರ್ಕಗಳಿಂದ ಅವುಗಳನ್ನು ಸಿದ್ಧಪಡಿಸಿ ಬರೆಯಿಸುವ ಪ್ರಯತ್ನಮಾಡುತ್ತಿದ್ದನು. ಆದರೆ ಗೌತಮಬುದ್ಧನು ತನ್ನ ಕಠೋರವಾದ ಸಾಧನದಿಂದ ಯಾವ ಮಹಾವಾಣಿಯನ್ನು ಪ್ರಕಟಿಸಿದನೋ ಅದು ಸ್ವತಃ ಸಿದ್ಧಸತ್ಯದ

ತಳಹದಿಯ ಮೇಲೆ ನಿಂತಂಥದು. ಆದದರಿಂದ ಅಶೋಕನು ಯಾವ ವಿಚಾರನ್ನೂ ಮಾಡದೆ ಆ ಧರ್ಮವಿಧಿಗಳನ್ನು ಜಗತ್ತಿನ ಇಹಪರ ಕಲ್ಯಾಣಕ್ಕಾಗಿ ಮೇಲಿಂದ ಮೇಲೆ ಉಪದೇಶಿಸಿದನು. ಅಶೋಕನು ತನ್ನ ಮೊದಲನೆಯ ಕ್ಷುದ್ರಗಿರಿಲಿಪಿಯಲ್ಲಿ—ಸಣ್ಣವನೇ ಆಗಲಿ, ದೊಡ್ಡವನೇ ಆಗಲಿ, ಎಲ್ಲರೂ ತಮ್ಮ ಕರ್ಮಗಳಿಂದ ಮುಕ್ತಿಯನ್ನು ಹೊಂದುವರು ಎಂದು ಪ್ರಕಟಿಸಿರುವನು. ಮೊದಲನೆಯ ಸ್ತಂಭಲಿಪಿಯಲ್ಲಿಯೂ, ೧೦ನೆಯ ಗಿರಿಲಿಪಿಯಲ್ಲಿಯೂ "ಪ್ರಿಯದರ್ಶಿರಾಜನು ಆಚರಿಸುವದೆಲ್ಲವೂ ಪರಲೋಕಕ್ಕೋಸ್ಕರವೇ. ಎಲ್ಲರೂ ಆಪತ್ತಿಲ್ಲದವರಾಗಲಿ, ಪಾಪವೇ ಆಪತ್ತು. ಸಣ್ಣವನೇ ಆಗಲಿ, ದೊಡ್ಡವನೇ ಆಗಲಿ, ಎಲ್ಲರೂ ಅತ್ಯಂತ ಪ್ರಯತ್ನ, ಸರ್ವತ್ಯಾಗ ಇವುಗಳನ್ನು ಮಾಡಿದ ಹೊರತು ಇದು ದುರ್ಲಭವು; ಅತ್ಯಂತ ಧರ್ಮಾನುರಾಗ, ಆತ್ಮಪರೀಕ್ಷೆ, ಅತ್ಯಂತ ಧರ್ಮಭಯ, ಬಹಳವಾದ ಸಾಧನೆ ಇವುಗಳಿಲ್ಲದೆ ಇಹಪರಸುಖವು ದುರ್ಲಭವು" ಎಂದು ಪ್ರಕಟಿಸಿರುವನು.

ಬೌದ್ಧಗ್ರಂಥಗಳಲ್ಲಿ ಈ ಸತ್ಯವು ಮೇಲಿಂದ ಮೇಲೆ ಪ್ರಕಟಿಸಲ್ಪಟ್ಟಿದೆ. ಬುದ್ಧದೇವನು ಈಶ್ವರನ ಅಸ್ತಿತ್ವದ ವಿಷಯವಾಗಿ ಮೌನವಾಗಿದ್ದು ತಮ್ಮ ಕರ್ಮಗಳಿಂದ ನಿರ್ವಾಣವನ್ನು ಹೊಂದಬೇಕೆಂದು ಎಲ್ಲರಿಗೂ ಉಪದೇಶಮಾಡಿದನು. ಅಶೋಕನು ಅದೇ ಮೇರೆಗೆ ಎಲ್ಲರೂ ತಮ್ಮ ಕರ್ಮಗಳಿಂದ ಇಹಪರ ಸುಖವನ್ನು ಹೊಂದಬೇಕೆಂದು ಪ್ರಕಟಿಸಿದನು. ಎಲ್ಲಿಯೂ ಈಶ್ವರನ ದಯ, ಅನುಗ್ರಹ ಇವುಗಳ ಉಲ್ಲೇಖವನ್ನು ಮಾಡಿಲ್ಲ.

ಭರತಖಂಡದ ಪ್ರಾಚೀನ ಪುಣ್ಯಶ್ಲೋಕರಾದ ನರಪತಿಗಳಿಗೂ, ಅಶೋಕನಿಗೂ ಈ ಧರ್ಮವಿಧಿಗಳ ರಚನೆಯಲ್ಲಿಯೇ ಭೇದವು ಕಂಡುಬರುವದು. ರಾಮಚಂದ್ರ, ಯುಧಿಷ್ಠಿರ ಮೊದಲಾದ ಮಹಾಪುರುಷರು ತಮ್ಮ ಉದಾರಹರಣವನ್ನು ಮನುಷ್ಯ ಸಮಾಜದಲ್ಲಿ ಹಾಕಿಟ್ಟಿರುವರು. ಅವರು ಈ ಜಗತ್ತಿನಲ್ಲಿ ತಮ್ಮ ಚರಿತ್ರಬಲವನ್ನು ನಿರ್ಭಯವಾಗಿ ಕಾಯ್ದುಕೊಂಡು ತಮ್ಮ ಪ್ರಭಾವನನ್ನು ಪ್ರಕಟಿಸಿದರು. ಈ ಮೇರೆಗೆ ಅಶೋಕ ಚರಿತ್ರವು ಸಮಾಜದಲ್ಲಿ ಸ್ಫುಟವಾಗಿ ಮೂಡಿರದಿದ್ದರೂ, ಅಶೋಕನಂಥ ಪ್ರತಾಪಶಾಲಿಗಳಾದ ಎಷ್ಟೋ ಅರಸರು ಆಗಿರಬಹುದಾಗಿದ್ದರೂ ಆತನು ವಿಶೇಷ ಪ್ರಕಾರದ ಮಹಾತ್ಮನಾದ ಅರಸನಾಗಿದ್ದನೆಂಬದು ಈ ಧರ್ಮವಿಧಿಗಳಿಂದ ಸ್ಪಷ್ಟವಾಗುವದು. ಈ ಧರ್ಮವಿಧಿಗಳೇ ಅಶೋಕನ ಜಯಪತಾಕೆಗಳು. ಆತನ ದಿವ್ಯವಾದ ಪ್ರಕಾಶವು ಎರಡು ಸಾವಿರ ವರ್ಷಗಳ ದಟ್ಟವಾದ ಆವರಣವನ್ನು ಭೇದಿಸಿ ಈ ಹೊತ್ತಿಗೂ ಹೊರಬೀಳುತ್ತಿರುವದು. ಆತನು ತನ್ನ ಕೈಯಲ್ಲಿರುವ ಪ್ರಜೆಗಳನ್ನು, ಅಷ್ಟೇ ಏಕೆ ಎಲ್ಲ ಮಾನವಜಾತಿಯನ್ನು ಉದ್ಧರಿಸಬೇಕೆಂದು ಪ್ರಯತ್ನಿಸಿದನು. ಮಕ್ಕಳು ವಿದ್ವಾಂಸರೂ ಸದಾಚಾರಿಗಳೂ ಆಗಿರಬೇಕೆಂದು ತಂದೆಯು ಬಯಸುವಂತೆ ಅಶೋಕನು ಸಿಂಹಾಸನದ ಮೇಲೆ ಕುಳಿತು ಸಮಗ್ರ ಮಾನವಜಾತಿಯ ಕಲ್ಯಾಣವನ್ನು ಬಯಸುತ್ತಿದ್ದನು. ಈ ವಿಷಯದಲ್ಲಿ ಅವನಂತೆ ಇನ್ನಾರೂ ಆಗಲಿಲ್ಲ. ಯಾವದೊಂದು ಸಂಪ್ರದಾಯವನ್ನು ಇಲ್ಲವೆ ಮತವನ್ನು ಹಿಡಿಯದೆ ಉದಾರ

ಧರ್ಮಮತವನ್ನು ಅವಲಂಬಿಸಿ ಆತನು ಎಲ್ಲರೂ ತಮ್ಮ ತಮ್ಮ ಕರ್ಮಗಳಿಂದ ಮುಕ್ತಿಯನ್ನು ಹೊಂದಬೇಕೆಂದು ಕಲಿಸಿದನು. ಅವನು ದಾರ್ಶನಿಕ ಯುಕ್ತಿಗಳಿಂದ, ಇಲ್ಲವೆ ಬಲಾತ್ಕಾರದಿಂದ ತನ್ನ ಮತವನ್ನು ಸ್ಥಾಪಿಸುವದಕ್ಕಾಗಿ ಮೂಢಭಕ್ತಿಯ ಅವಲಂಬನ ಮಾಡಲಿಲ್ಲ. ಪವಿತ್ರತೆಯಿಂದ ಜೀವನಕ್ರಮ, ಇಂದ್ರಿಯ ನಿಗ್ರಹ, ಕರ್ತವ್ಯನಿಷ್ಠೆ ಇವು ಮಾನವರ ಉನ್ನತಿಯ ಮಾರ್ಗಗಳೆಂದು ಆತನು ಹೇಳಿದನು. ಅಶೋಕನು ಹೊಸದೊಂದು ಮತವನ್ನು ಇಲ್ಲವೆ ಸಂಪ್ರದಾಯವನ್ನು ಸ್ಥಾಪಿಸಲಿಲ್ಲ. ಆತನು ತರ್ಕವಿಲ್ಲದೆ ಯಾವ ಸತ್ಯಗಳು ಜಗತ್ತಿನಲ್ಲಿ ಸ್ವೀಕರಿಸಲ್ಪಡುವವೋ ಅವುಗಳನ್ನೇ ಪ್ರಕಟಿಸಿದನು. ಆತನು ಜಾತಿಭೇದವಿಲ್ಲದೆ ಮನುಷ್ಯಪ್ರಕೃತಿಯಲ್ಲಿ ಸ್ವಾಭಾವಿಕವಾಗಿ ಇರುವ ಸದ್ವೃತ್ತಿಗಳನ್ನು ವಿಕಾಸಗೊಳಿಸುವದಕ್ಕೂ ಎಲ್ಲ ಮಾನವರನ್ನು ಪ್ರೇಮಸೂತ್ರದಿಂದ ಸಂಬಂಧ ಪಡಿಸುವದಕ್ಕೂ ಪ್ರಯತ್ನಿಸಿದನು. ಆತನ ಧರ್ಮನೀತಿಯು ಆಕಾಶದಂತೆ ವಿಶ್ವವ್ಯಾಪಿಯೂ ನಿರ್ಮಲವೂ ಉದಾರವೂ ಆಗಿರುವದು.

ತಾಯಿತಂದೆಗಳಲ್ಲಿ ಭಕ್ತಿ, ಗುರುಹಿರಿಯರಲ್ಲಿ ಶ್ರದ್ಧೆ, ಮಿತ್ರರ ಮೇಲೆ ಉಪಕಾರ, ಸಾಧುಸಜ್ಜನರ ಸೇವೆ, ಅನಾಥರಿಗೂ ದುಃಖಿಗಳಿಗೂ ದಾನ, ಅಹಿಂಸೆ, ದಯೆ, ಸತ್ಯನಿಷ್ಠೆ, ಪ್ರತಿಯೊಂದು ಪ್ರಾಣಿಯ ಜೀವವು ಪವಿತ್ರವೆಂಬ ತಿಳುವಳಿಕೆ ಇವು ಅಶೋಕನ ಧರ್ಮವಿಧಿಗಳ ಮುಖ್ಯ ಧ್ಯೇಯಗಳಾಗಿದ್ದವು. ಈಶ್ವರನ ಅಸ್ತಿತ್ವ ಇಲ್ಲವೆ ನಾಸ್ತಿತ್ವ ಇಲ್ಲವೆ ಯಾವದೊಂದು ಧರ್ಮಕೃತ್ಯದ ಮಹಿಮೆ ಇವುಗಳನ್ನು ಅಶೋಕನು ಹೇಳಲಿಲ್ಲ. ಎಲ್ಲ ಪ್ರಜೆಗಳೂ ಉತ್ತಮ ಕರ್ಮಗಳಿಂದ ಮುಕ್ತರಾಗುವರೆಂಬ ಸರಲ ಉಪದೇಶವನ್ನೇ ಆತನು ಮಾಡಿದನು. ಈ ಮೇರೆಗೆ ಉಪದೇಶವನ್ನಷ್ಟೇ ಮಾಡಿ ಸುಮ್ಮನಿರದೆ ಪ್ರಜೆಗಳು ನಿತ್ಯಕ್ರಮದಲ್ಲಿ ಆ ಉಪದೇಶಗಳನ್ನು ಪಾಲಿಸುವಂತೆ ನೋಡಿಕೊಳ್ಳುವದಕ್ಕೆ ಧರ್ಮಮಹಾಮಾತ್ರ, ರಾಜೂಕ, ಪ್ರಾದೇಶಿಕ, ಧರ್ಮಪ್ರಚಾರಕ ಎಂಬ ಅಧಿಕಾರಿಗಳನ್ನು ನಿಯಮಿಸಿದ್ದನು. ಅಶೋಕನು ತನ್ನ ಆಳಿಕೆಯ ೧೪ನೆಯ ವರ್ಷ ಧರ್ಮಮಹಾಮಾತ್ರರನ್ನು ನಿಯಮಿಸಿದ್ದನು. ಯವನ, ಕಾಂಭೋಜ, ಗಾಂಧಾರ ರಾಷ್ಟ್ರಿಕ ಪಿತೇನಿಕಾಶ ಮೊದಲಾದ ಮೇರೆಯ ಪ್ರದೇಶದ ನಿವಾಸಿಗಳಲ್ಲಿಯೂ ಧರ್ಮಪ್ರಸಾರ ಮಾಡುವದಕ್ಕಾಗಿ ಧರ್ಮಮಹಾಮಾತ್ರರು ಕಳಿಸಲ್ಪಟ್ಟಿದ್ದರು. ಅಶೋಕನ ಆಳಿಕೆಯಲ್ಲಿ ರಾಜದಂಡವು ಧರ್ಮಶಾಸನವನ್ನೂ ಮಾಡುತ್ತಿತ್ತು. ಧರ್ಮವಿಧಿಯು ಅಶೋಕನ ಮಹತವನ್ನೂ ಗೌರವವನ್ನೂ ನಿಜವಾಗಿ ತೋರ್ಪಡಿಸುವದು. ಗೀತೆ, ಉಪನಿಷತ್ತು ಮೊದಲಾದ ಧರ್ಮಗ್ರಂಥಗಳು ಹೇಗೆ ಹಳೆಯುವೆನಿಸಲಾರವೋ ಹಾಗೆಯೇ ಅಶೋಕನು ಕಲ್ಲುಗಳ ಮೇಲೆ ಕೊರೆಯಿಸಿದ ಧರ್ಮವಿಧಿಗಳೂ ಹಳೆಯುವಾಗಲಾರವು. ಅವು ಯಾವಾಗಲೂ ಹೊಸವೇ, ಯಾವಾಗಲೂ ಸತ್ಯವಾದಂಥವೇ, ಯಾವಾಗಲೂ ಶಾಂತಿಯನ್ನು ಕೊಡುವಂಥವೇ.

೧೫ನೆಯ ಅಧ್ಯಾಯ.

ಅಶೋಕನ ಕಾಲದಲ್ಲಿ ಭಾಷೆಯೂ ವಾಙ್ಮಯವೂ.

ಅಶೋಕ ಯುಗದಲ್ಲಿ ಭರತಖಂಡದ ನಿವಾಸಿಗಳು ಜ್ಞಾನದಲ್ಲಿಯೂ, ಧರ್ಮದಲ್ಲಿಯೂ, ಎಷ್ಟುಮಟ್ಟಿಗೆ ಉತ್ಕರ್ಷವನ್ನು ಹೊಂದಿದ್ದರೆಂಬದನ್ನು ಹಿಂದಿನ ಅಧ್ಯಾಯಗಳಲ್ಲಿ ತೋರಿಸುವದಕ್ಕೆ ಪ್ರಯತ್ನಿಸಿರುವೆವು. ಅಶೋಕ ಮಹಾರಾಜನ ಕಾಲವು ಸ್ವದೇಶ ಪರದೇಶಗಳಲ್ಲಿ ಅವನು ಬೌದ್ಧಧರ್ಮವನ್ನು ಪ್ರಚಾರಮಾಡಿದ ಮಾತ್ರದಿಂದ ಇಲ್ಲವೆ ವಿಶಾಲವಾದ ಸಾಮ್ರಾಜ್ಯವನ್ನು ಆಳಿದನೆಂಬ ಮಾತ್ರದಿಂದ ಪ್ರಸಿದ್ಧಿಯನ್ನು ಹೊಂದಿದೆಯೆಂದು ಹೇಳುವಂತೆ ಇಲ್ಲ. ಆ ಕಾಲವು ಜ್ಞಾನ, ಧರ್ಮ, ರಾಜನೀತಿ, ಸಮಾಜನೀತಿ, ಶಿಲ್ಪವಿದ್ಯೆ ಇವುಗಳಲ್ಲಿ ಉಚ್ಚದಶೆಯನ್ನು ಹೊಂದಿದಂತೆ, ಭಾಷಾಸಾಹಿತ್ಯಗಳಲ್ಲಿಯೂ ಉತ್ಕರ್ಷವನ್ನು ಹೊಂದಿ ಇತಿಹಾಸದಲ್ಲಿ ಚಿರಸ್ಮರಣೀಯವಾಗಿರುವದು.

ಯಾವ ಪ್ರಾಚೀನಯುಗದಲ್ಲಿ ಮನುಷ್ಯರ ಭಾಷೆಯು ಗ್ರಂಥಸ್ಥವಾಯಿತು, ಮತ್ತು ಯಾವ ಕಾಲದಿಂದ ಅಕ್ಷರಗಳು ಪ್ರಚಾರದಲ್ಲಿ ಬಂದು ಜನರ ಸುಧಾರಣೆಯಲ್ಲಿ ಕ್ರಾಂತಿಯನ್ನುಂಟುಮಾಡಿದವು, ಎಂಬದನ್ನು ನಿಶ್ಚಿತವಾಗಿ ನಿರ್ಣಯಿಸುವದು ಅಸಾಧ್ಯವು. ಭರತಖಂಡದಲ್ಲಿ ಲೇಖನಪದ್ಧತಿಯುಂಟಾದ ಕಾಲವಾವದು, ಆ ಲೇಖವು ಗ್ರಂಥಗಳಲ್ಲಿ ಯಾವಾಗ ಪ್ರಚಲಿತವಾಯಿತು, ಮುಂದೆ ಬೌದ್ಧವಾಙ್ಮಯವು ಹೇಗೆ ಉಂಟಾಯಿತು, ಆ ವಾಙ್ಮಯವು ಅಶೋಕನ ಕಾಲದಲ್ಲಿ ಹೇಗೆ ಬೆಳವಣಿಗೆಹೊಂದಿತು ಎಂಬದನ್ನು ಇಲ್ಲಿ ಆಲೋಚಿಸುವ.

ಭಾಷೆಯು ಗ್ರಂಥರೂಪವನ್ನು ಹೊಂದಿ ಜನಗಳಲ್ಲಿ ಪ್ರಚಾರವಾಗಬೇಕಾದರೆ ಅಕ್ಷರಗಳ ಸಾಹಾಯ್ಯವು ಬೇಕು. ಭರತಖಂಡದಲ್ಲಿ ಈಗ ಎಷ್ಟು ಪ್ರಕಾರದ ಅಕ್ಷರಗಳು ಪ್ರಚಾರದಲ್ಲಿರುವವೊ, ಹಿಂದೆ ಇದ್ದವೊ, ಅವುಗಳೆಲ್ಲೆಲ್ಲ ಅಶೋಕ ಅಕ್ಷರಗಳೇ ಎಲ್ಲಕ್ಕೂ ಹಳೆಯವೆಂದು ಹೇಳುವರು. ಅಶೋಕ ಮಹಾರಾಜನ ಶಾಸನಗಳೆಲ್ಲ ಈ ಅಕ್ಷರಗಳಿಂದಲೇ ಬರೆಯಲ್ಪಟ್ಟದ್ದರಿಂದ ಇವಕ್ಕೆ ಅಶೋಕ ಅಕ್ಷರಗಳೆಂದು ಹೆಸರು. ಕ್ರಿ. ಪೂ. ೩ನೆಯ ಶತಮಾನದಿಂದ ಅಂದರೆ ಅಶೋಕ ಮಹಾರಾಜನ ಆಳಿಕೆಯ ಕಾಲದಿಂದ ಲೇಖನಪದ್ಧತಿಯು ಭರತಖಂಡದಲ್ಲಿ ಆರಂಭವಾಯಿತೆಂದು ಅನೇಕ ಯುರೋಪೀಯ ಪಂಡಿತರ ಅಭಿಪ್ರಾಯವಿರುವದು. ಅವರು ಪ್ರಾಚೀನ ಸೆಮಿಟಿಕ ಅಕ್ಷರಗಳಿಂದ ಅಶೋಕ ಅಕ್ಷರಗಳು

ಹುಟ್ಟಿದವೆಂದೂ ಅವುಗಳಿಂದೇ ಭರತಖಂಡದ ಬೇರೆ ಬೇರೆ ಅಕ್ಷರಗಳು ಹುಟ್ಟಿರುತ್ತ ವೆಂದೂ ಹೇಳುವರು. ಭಾಷಾತತ್ವಜ್ಞರೂ ಐತಿಹಾಸಿಕರೂ ಈ ವಿಷಯವನ್ನು ಬಹಳ ಮಟ್ಟಿಗೆ ಆಲೋಚಿಸಿರುವರು. ಭರತಖಂಡದ ವರ್ಣಮಾಲೆಯು ಈ ದೇಶದಲ್ಲಿಯೇ ಉತ್ಪನ್ನವಾಯಿತೇ, ಇಲ್ಲವೆ ಪರದೇಶದಿಂದ ತರಲ್ಪಟ್ಟಿತೇ ಎಂಬ ವಿಷಯದಲ್ಲಿ ಯುರೋ ಪೀಯ ಪಂಡಿತರು ಬಹು ದಿವಸಗಳಿಂದ ಚರ್ಚೆಯನ್ನು ನಡಿಸುತ್ತ ಬಂದಿರುವರು. ಆದರೂ ಆ ವಿಷಯದಲ್ಲಿ ಆ ಪಂಡಿತರ ಐಕಮತ್ಯವಾಗಲಿಲ್ಲ. ಟಮಾಸ್, ಗೋಲ್‌ಉಷ್ಟ್ಕಾರ, ರಾಜೇಂದ್ರ ಲಾಲಮಿತ್ರ, ಲ್ಯಾಸೆನ್ ಮೊದಲಾದ ಪಂಡಿತರು ಭಾರತವರ್ಣಮಾಲೆಯು ಭಾರತಭೂಮಿಯಲ್ಲೇ ಉತ್ಪನ್ನವಾಯಿತೆಂದು ಹೇಳುವರು. ಕನಿಂಗಹಮ್ * ಸಾಹೇ ಬರು ಅಶೋಕ ಅಕ್ಷರಗಳು ಪ್ರಾಚೀನಕಾಲದ ಭರತಖಂಡದ ವಸ್ತುಚಿತ್ರಗಳಿಂದ ಉತ್ಪ ನ್ನವಾದವೆಂದು ಹೇಳುವರು. ಸುಪ್ರಸಿದ್ಧ ಪಂಡಿತರಾದ ಪ್ರೊಫೆಸರ್ ಡಸನ್ ‡ (Da wson) ಎಂಬವರು ಕೂಡ ಭಾರತೀಯ ವರ್ಣಮಾಲೆಯು ಭರತಖಂಡದಲ್ಲಿಯೇ ಉತ್ಪ ನ್ನವಾಯಿತೆಂದು ವಿವೇಚಿಸಿರುವರು. ಇದಕ್ಕೆ ವಿರುದ್ಧವಾಗಿ, ಪ್ರಸಿದ್ಧರಾದ ಅನೇಕ ಭಾಷಾತತ್ವಜ್ಞರು ಭಾರತೀಯ ವರ್ಣಮಾಲೆಯು ಪರದೇಶದಿಂದ ಬಂದಿತೆಂದು ಪ್ರತಿ ಪಾದಿಸಿರುತ್ತಾರೆ. ಜೇಮ್ಸ್‌ಪ್ರಿನ್ಸೆಪ್, ಡಾಕ್ಟರ ಮುಲ್ಲರ, ಇವರು ಭಾರತೀಯ ಅಕ್ಷರಗಳು ಗ್ರೀಕ ಅಕ್ಷರಗಳಿಂದ ಹುಟ್ಟಿರುವವೆಂದು ಹೇಳುವರು. ಕೆಲವರು ಚೀನ ದೇಶದ ವಸ್ತು ಚಿತ್ರಗಳಿಂದ ಉತ್ಪನ್ನವಾದವೆಂದು ಹೇಳುವರು. ಪಾರಸ್ಯ ಅಕ್ಷರಗಳಿಂದ ಅಶೋಕ ಅಕ್ಷ ರಗಳು ಉತ್ಪನ್ನವಾದವೆಂದು ಬಾರ್ಣೌಲನು ಹೇಳುವನು. ಬೇಬಾರ ಮತ್ತು ಟೇಲಾರ ಎಂಬವರು ಭಾರತವರ್ಣಮಾಲೆಯು ಯೆಮೆನ್ (Yemen)ದಿಂದ ತರಲ್ಪಟ್ಟಿತೆಂದು ಹೇಳುವರು. ಬೆನ್‌ಫೆ (Benfey) ಎಂಬವನು ಫಿನಿಸಿಯಾನರಿಂದ ಪ್ರಾಪ್ತವಾಯಿತೆಂದು ಹೇಳುವನು. ಸರ್ ಉಯಿಲಿಯಮ್ ಜೋನ್ಸ, ಪ್ರೊಫೆಸರ್ ಕವ್ ಲೆಪ್ಸಿನ್, ಡಾಕ್ಟರ್ ಸ್ಟ್ರಿಕ್ಸನ್‌ಸನ್, ಗ್ರಿಸಿಲಾರ್, ಕಾರನ್ ಬುಹ್ಲರ್, ಮೊದಲಾದವರು ಕೊನೆಗೆ ಹೇಳಿದ ಮತ ವನ್ನು ಸಮರ್ಥಿಸುವರು.

ಮೇಲಿನ ಪ್ರಶ್ನವನ್ನು ಚನ್ನಾಗಿ ವಿಚಾರಿಸುವದಕ್ಕೆ ಮುಂಚೆ ಅಕ್ಷರಗಳು ಹೇಗೆ ಹುಟ್ಟಿದವು, ಮತ್ತು ಯಾವ ದೇಶದಲ್ಲಿ ಎಲ್ಲಕ್ಕೂ ಮುಂಚೆ ಹುಟ್ಟಿದವು ಎಂಬ ವಿಷ ಯವನ್ನು ಸಂಕ್ಷೇಪವಾಗಿ ವಿವೇಚಿಸುವದು ಅವಶ್ಯವಾಗಿರುವದು. ಕೆಲವರು ಅಕ್ಷರ ಸೃಷ್ಟಿಗೆ ಮುಂಚೆ ಮನುಷ್ಯಜಾತಿಯು ಕೇವಲ ಗ್ರಾಮ್ಯಸ್ಥಿತಿಯಲ್ಲಿತ್ತೆಂದು ಹೇಳು ವರು. ಅದು ನಿಜವಲ್ಲ. ವರ್ಣಮಾಲೆಯು ಪ್ರಚಾರದಲ್ಲಿ ಬರುವದಕ್ಕೆ ಮುಂಚೆ ಬಹು

---

* Corpus Inscriptionum Indicrum vol I.

‡ The peculiarities of The Indian Alphabets demonstrate its indchendence of all foreign-origin

ಪ್ರಾಚೀನ ದೇಶಗಳು ಬೇಕಾದಷ್ಟು ಸುಧಾರಣೆಯನ್ನು ಹೊಂದಿದ್ದವು. ಶಿಲ್ಪವಿದ್ಯೆ, ಕೃಷಿವಿದ್ಯೆ, ಧಾತುವಿದ್ಯೆ, ಸಂಗೀತ, ಧರ್ಮಶಾಸ್ತ್ರ ಮೊದಲಾದವು ವರ್ಣಮಾಲೆಯು ಪ್ರಚಾರದಲ್ಲಿ ಬರುವದಕ್ಕಿಂತ ಎಷ್ಟೋ ಕಾಲ ಮುಂಚೆ, ಭರತಖಂಡ, ಕ್ಯಾಲ್‌ಡಿಯ, ಮಿಸರ ಮೊದಲಾದ ದೇಶಗಳಲ್ಲಿ ಬೆಳವಣಿಗೆಯನ್ನು ಹೊಂದಿದ್ದವು. ಪ್ರಕೃತಿಯ ವಿಶ್ವ ಮೋಹಕಚಿತ್ರವು ಯಾವಾಗ ಮನುಷ್ಯಜಾತಿಯ ಕಣ್ಣೆದುರಿಗೆ ಪ್ರಕಾಶಿತವಾಯಿತೋ, ಇಲ್ಲವೆ ಯಾವಾಗ ಅದರ ರುದ್ರಮೂರ್ತಿಯು ನೋಡುವವರನ್ನು ವ್ಯಾಕುಲ ಮಾಡಿತೋ, ಆವಾಗಲೇ ಪ್ರೀತಿಯಿಂದಾಗಲಿ, ಭಕ್ತಿಯಿಂದಾಗಲಿ ಮನುಷ್ಯನು ತನ್ನ ಉದ್ಗಾರಗಳನ್ನು ಭಾಷೆಯಲ್ಲಿ ವ್ಯಕ್ತಮಾಡುವದಕ್ಕೆ ಪ್ರಯತ್ನಿಸಿದನು. ಆರ್ಯಋಷಿಗಳ ಕಂಠದಲ್ಲಿ ಉದಾತ್ತ, ಅನುದಾತ್ತ, ಸ್ವರಿತ ಸ್ವರಸಂಯೋಗದಿಂದ ವೈದಿಕ ಸೂಕ್ತಗಳು ಪ್ರತಿಧ್ವನಿತವಾಗುತ್ತಿದ್ದಸಮಯದಲ್ಲಿ ಲಿಪಿಯು ಪ್ರಚಾರದಲ್ಲಿರಲಿಲ್ಲ. ಯಾವಾಗ ಪ್ರಾಚೀನ ಕಾಲದ ಎಕ್ವೇಡಿಯದ ಪುರೋಹಿತರು ಉಚ್ಚ ಸ್ವರದಿಂದ ಆಶೀರ್ವಚನಗಳನ್ನು ಉಚ್ಚರಿಸುತ್ತಿದ್ದರೋ ಆವಾಗಲೂ ಅಕ್ಷರಸೃಷ್ಟಿಯಾಗಿರಲಿಲ್ಲ. ಅಥವಾ ಯಾರು ಟ್ರೋಯ, ನಗರದ ಧ್ವಂಸವಾರ್ತೆಯನ್ನು ಗಾನಮಾಡುತ್ತ ತಿರುಗುತ್ತಿದ್ದರೋ ಅವರೂ ಅಕ್ಷರಗಳನ್ನು ತಿಳಿದಿರಲಿಲ್ಲ. ಅತಿಪ್ರಾಚೀನೇತಿಹಾಸವನ್ನು ನೋಡಲು ಅಕ್ಷರಸೃಷ್ಟಿಯಾಗುವದಕ್ಕೆ ಮುಂಚೆ ಶಿಲ್ಪ, ವಾಣಿಜ್ಯ, ಧರ್ಮಶಾಸ್ತ್ರ ಮೊದಲಾದವು ಬಹಳ ದೇಶಗಳಲ್ಲಿ ಪ್ರಚಲಿತವಾಗಿದ್ದವೆಂದು ತಿಳಿದುಬರುವದು.

ಅಕ್ಷರನಿರ್ಮಾಣವಾಗುವದಕ್ಕೆ ಮುಂಚೆ ಮೇಲೆ ಹೇಳಿದ ವಿಷಯಗಳು ಸಮಾಜದಲ್ಲಿದ್ದವಷ್ಟೇ ಅಲ್ಲದೆ ಒಂದು ಪ್ರಕಾರದ ಲೇಖನಪದ್ಧತಿಯೂ ಇತ್ತು. ಪ್ರತಿಯೊಂದು ಶಬ್ದವನ್ನು ಪ್ರಕಟಮಾಡುವದಕ್ಕೆ ಒಂದೊಂದು ಸ್ವತಂತ್ರ ಚಿಹ್ನವಿತ್ತು. ಆಗ ಬರಹದಲ್ಲಿ ಬಹಳ ತೊಂದರೆಯಿತ್ತು. ಒಂದೊಂದು ಭಾಷೆಯಲ್ಲಿ ಎಷ್ಟೆಷ್ಟು ಶಬ್ದಗಳಿವೆಯೆಂಬದರ ಇಯತ್ತೆಯೇ ಇಲ್ಲವಾದದರಿಂದ ಪ್ರತಿಯೊಂದು ಶಬ್ದದ ಸಲುವಾಗಿ ಒಂದೊಂದು ಚಿಹ್ನವನ್ನು ಉಪಯೋಗಿಸುವದಾದರೆ ಆ ಚಿಹ್ನಗಳು ಅಸಂಖ್ಯವಾಗುವವೆಂಬದು ಸಹಜವಿದೆ. ಆ ಚಿಹ್ನಗಳನ್ನೆಲ್ಲ ಗೊತ್ತು ಮಾಡಿಕೊಳ್ಳುವಲ್ಲಿ ಒಬ್ಬನ ಎಲ್ಲಾ ಆಯುಷ್ಯವು ಕಳೆದುಹೋಗುತ್ತಿತ್ತು. ಆಗ ಬಹುತರ ಸಮಾಜದಲ್ಲಿ ಒಂದು ವಿಶಿಷ್ಟ ವರ್ಗದವರು ಮಾತ್ರ ಈ ಚಿಹ್ನಗಳನ್ನು ಕಲಿಯುತ್ತಿದ್ದರು. ಸಾಧಾರಣ ಜನರು ಅದರ ಗೋಜಿಗೇ ಹೋಗುತ್ತಿರಲಿಲ್ಲ. ಲೇಖನಪದ್ಧತಿಯನ್ನು ಬಲ್ಲವರೇ ಶಾಸ್ತ್ರಚರ್ಚೆಯನ್ನು ಮಾಡುತ್ತಿದ್ದರು. ಮಿಸರ, ಅಸೀರಿಯಾ, ಚೀನ ಮೊದಲಾದ ದೇಶಗಳಲ್ಲಿ ಕೇವಲ ಪುರೋಹಿತರಷ್ಟೇ ಲೇಖನಪದ್ಧತಿಯನ್ನು ತಿಳಿಯುತ್ತಿದ್ದರು. ಭರತಖಂಡದಲ್ಲಿಯೂ ಬ್ರಾಹ್ಮಣಜಾತಿಯೊಂದೇ ಶಾಸ್ತ್ರಚರ್ಚೆಯನ್ನು ಮಾಡುತ್ತಿತ್ತೆಂದೂ, ಪಾಮರರಿಗೆ ಶಾಸ್ತ್ರಚರ್ಚೆಯಲ್ಲಿ ಅಧಿಕಾರವಿರಲಿಲ್ಲವೆಂದೂ ಇತಿಹಾಸದಿಂದ ತಿಳಿಯುವದು. ಈ ಕೊರತೆಯನ್ನು ನೀಗುವದಕ್ಕಾಗಿಯೇ ಅಕ್ಷರಸೃಷ್ಟಿಯಾಯಿತು.

ಹಿಂದೆ ಹೇಳಿದಂತೆ ಆ ಕಾಲದಲ್ಲಿ ಯಾವ ವಸ್ತುವಿನ ವಿಷಯವಾಗಿ ಹೇಳುವ ದಾದರೂ ಆ ವಸ್ತುವಿನ ಚಿತ್ರವನ್ನು ತೆಗೆದು ತೋರಿಸಬೇಕಾಗುತ್ತಿತ್ತು. ಈಗಲೂ ಈ ಪದ್ಧತಿಯ ನಿದರ್ಶನವು ಉಳಿದಿರುವದು. ಚೀನದೇಶದ ಅಕ್ಷರಗಳನ್ನು ನೋಡಿದರೆ ಅವು ವಸ್ತುವಿಶೇಷಗಳ ಚಿತ್ರಗಳ ಹೊರತು ಬೇರೆ ಇಲ್ಲವೆಂದು ಕಂಡುಬರುವದು.

ಪೃಥ್ವಿಯಲ್ಲಿ ಯಾವ ಮನುಷ್ಯವರ್ಗವು ಎಲ್ಲಕ್ಕೂ ಮೊದಲು ಅಕ್ಷರಗಳನ್ನು ಪ್ರಕಟಮಾಡಿತೆಂಬದನ್ನು ನಿಶ್ಚಿತವಾಗಿ ಹೇಳುವದಕ್ಕೆ ಬರುವಂತೆ ಇಲ್ಲ. ಅನೇಕರು ಫಿನೀಸಿಯಾ ದೇಶದಲ್ಲಿ ಎಲ್ಲಕ್ಕೂ ಮೊದಲು ಅಕ್ಷರಗಳು ಹುಟ್ಟಿದವೆಂದು ಹೇಳವರು. ಕೆಲವರು ಬಾಬಿಲೋನದಲ್ಲಿ ಹುಟ್ಟಿದವೆಂದೂ ಇನ್ನು ಕೆಲವರು ಕ್ರೀಟದೇಶದಲ್ಲಿ ಹುಟ್ಟಿದವೆಂದೂ ಮತ್ತೆ ಕೆಲವರು ಮಿಸರದೇಶದಲ್ಲಿ ಹುಟ್ಟಿದವೆಂದೂ ಹೇಳುವರು. ಪ್ಲೇಟೋ ಪ್ಲೂಟಾರ್ಕ್, ಟ್ಯಾಸಿಟನ್, ಮೊದಲಾದ ಪಂಡಿತರು ಕೊನೆಯ ಮತವನ್ನು ಅಂಗೀಕರಿಸುವರು. ಈ ಮತವೇ ಬಹುಮಾನ್ಯವಾಗಿರುವದು. ಆದರೆ ಮಿಸರ ದೇಶದಿಂದ ಮುಂದೆ ಬೇರೆ ಬೇರೆ ದೇಶಗಳಲ್ಲಿ ಆ ಅಕ್ಷರಗಳ ಪ್ರಚಾರವು ಹೇಗೆ ಆಯಿತೆಂಬದನ್ನು ನಿರ್ಣಯಿಸುವದು ಕಠಿಣವಿರುವದು. ಮಿಸರದೇಶವು ಬಹು ಪ್ರಾಚೀನಕಾಲದಿಂದ ತಿದ್ದುಪಾಟಾದದ್ದು. ಮೆಮ್‌ಫಿನ್ ನಗರವು ಮಿಸರದ ರಾಜಧಾನಿಯಿತ್ತು. ಇದೇ ಸ್ಥಳದಲ್ಲಿ ಇದುವರೆಗೆ ಜಗದ್ವಿಖ್ಯಾತವಾದ ಪಿರಾಮಿಡ ಎಂಬ ಗೋಪುರಗಳಿರುವವು. ಮುಂದೆ ಪ್ರಾಯಶಃ ಕ್ರಿಸ್ತನ ಜನ್ಮಕ್ಕೆ ಮುಂಚೆ ಎರಡುವರೆ ನಾಲಿರವರ್ಷಗಳ ಪೂರ್ವದಲ್ಲಿ ಬಲಿಷ್ಠವಾದ ಸೆಮಿಟಿಕ್ ಜಾತಿಯು ಮಿಸರದೇಶವನ್ನು ಆಕ್ರಮಿಸಿತ್ತು. ಇದೇ ಕಾಲದಲ್ಲಿ ಮಿಸರದೇಶದವರು ನಾಲ್ಕೂ ದಿಕ್ಕಿಗೆ ಹರಿದಿದ್ದರು. ಸೆಮಿಟಿಕ್ ಜನರು "ಅಫ್ಹಿರಿನ್" ನಗರವನ್ನು ರಾಜಧಾನಿಯನ್ನು ಮಾಡಿಕೊಂಡು ಕ್ರಿ. ಪೂ ೨೨೦೦-೧೭೦೦ ರವರೆಗೆ ರಾಜ್ಯವಾಳಿದರು. ಈ ಕಾಲದಲ್ಲಿ ಉಂಟಾದ ಮಿಸರದೇಶದ ಅಕ್ಷರಗಳು [ಸೆಮಿಟಿಕ್ ಅಕ್ಷರಗಳು] ನೆನೇವ್ಹಾ, ಫಿನಿಸಿಯಾ ಮೊದಲಾದ ದೇಶಗಳಲ್ಲಿ ವ್ಯಾಪ್ತವಾಗಿದ್ದವು.

ಈ ಮೇರೆಗೆ ಉಂಟಾದ ಮೂಲ ಸೆಮಿಟಿಕ್ ಅಕ್ಷರಗಳು ಎರಡು ಪಂಗಡವಾಗಿ ದಕ್ಷಿಣ ಸೆಮಿಟಿಕ್ ಮತ್ತು ಫಿನೀಸಿಯನ್ ಎಂಬ ಅಕ್ಷರಗಳನ್ನು ಹುಟ್ಟಿಸಿದವು. ಈ ದಕ್ಷಿಣ ಸೆಮಿಟಿಕ್ ಅಕ್ಷರಗಳು ಸ್ವಲ್ಪ ಹೆಚ್ಚುಕಡಿಮೆಯಾಗಿ ಪ್ರಾಚೀನ ಭಾರತದ ಅಕ್ಷರಗಳು (ಅಶೋಕ ಅಕ್ಷರಗಳು) ಆಗಿ ಪರಿಣಮಿಸಿದವೆಂದು ಅವರು ಹೇಳುವರು. ಅಶೋಕ ಅಕ್ಷರಗಳು ನಾಗರಿ, ಪಾಲಿ, ದ್ರಾವಿಡೀಯ, ಎಂದು ಮೂರು ಪಂಗಡವಾದವು. ನಾಗರೀ ಅಕ್ಷರಗಳಿಂದ ತೀಬೇಟಿ, ಗುಜರಾಥೀ, ಕಾಶ್ಮೀರೀ, ಮಹಾರಾಷ್ಟ್ರೀ, ಬಂಗಾಲೀ, ಅಕ್ಷರಗಳು ಹುಟ್ಟಿದವು. ಪಾಲೀ ಅಕ್ಷರಗಳಿಂದ ಬ್ರಹ್ಮ, ಶ್ಯಾಮ (ಸಿಯಾಮ) ಯವದ್ವೀಪ (ಜಾವಾ) ಸಿಂಹಲ, ಕೋರಿಯಾ ದೇಶಗಳ ಅಕ್ಷರಗಳು ಹುಟ್ಟಿದವು. ಮಲೆಯಾಳ,

ತೆಲಗು, ಕನ್ನಡ, ತಮಿಳು ಅಕ್ಷರಗಳು ದ್ರಾವಿಡೀಯ ಅಕ್ಷರಗಳಿಂದ ಹುಟ್ಟಿದವು. ಕಾಲಾನುಸಾರವಾಗಿ ನಾನಾ ಪ್ರಕಾರವಾದ ಅಕ್ಷರಗಳು ಉಂಟಾದವು. ಈಗ ಅವುಗಳ ರಚನೆಯಲ್ಲಿ ವಿಶೇಷ ಹೆಚ್ಚು ಕಡಿಮೆಗಳು ಕಂಡುಬಂದರೂ ಅವೆಲ್ಲ ಅಕ್ಷರಗಳು ಒಂದೇ ಮೂಲ ಅಕ್ಷರಗಳಿಂದ ಉತ್ಪನ್ನವಾದಂಥವು. ಭರತಖಂಡದಲ್ಲಿ ಅತಿ ಪ್ರಾಚೀನಕಾಲದಲ್ಲಿ ಕೊರೆದ ಲಿಪಿಗಳ ಅಕ್ಷರಗಳಿಂದೇ ಈ ದೇಶದ ಎಲ್ಲ ಅಕ್ಷರಗಳ ಉತ್ಪತ್ತಿಯಾಗಿರುವದು. ಅಶೋಕ ಮಹಾರಾಜನ ಕಾಲದಲ್ಲಿ ಈ ಲಿಪಿಗಳು ಕೊರೆಯಲ್ಪಟ್ಟಿರುವವು. ಅಶೋಕನು ಕೊರೆಯಿಸಿದ ಅಕ್ಷರಗಳು ಎರಡು ಸಾವಿರ ವರ್ಷಗಳಾದರೂ ಇದುವರೆಗೆ ಅಚ್ಚಳಿಯದೆ ಈವೊತ್ತು ಕೊರೆದಂತೆ ಕಾಣುತ್ತಿರುವವು. ಪೃಥ್ವಿಯಲ್ಲಿ ನಾನಾ ದೇಶಗಳಲ್ಲಿ ನಾನಾಪ್ರಕಾರದ ಅಕ್ಷರಗಳು ಪ್ರಚಲಿತವಾಗಿದ್ದರೂ ಅಶೋಕ ಅಕ್ಷರಗಳಂತೆ ಸುಂದರ, ನಿರಲಂಕಾರ, ಸರಲ ಅಕ್ಷರಗಳು ಯಾವವೂ ಇಲ್ಲ. ಅಶೋಕಲಿಪಿಯು ಎರಡು ಪ್ರಕಾರವಾಗಿ ಬರೆಯಲ್ಪಟ್ಟಿರುವದು. ಒಂದು ಪ್ರಕಾರಕ್ಕೆ ಆರ್ಯಪಾಲಿ (Ariano pali) ಇನ್ನೊಂದು ಪ್ರಕಾರಕ್ಕೆ ಭಾರತೀಯ ಪಾಲಿ (Indo pali) ಎಂದು ಹೆಸರು. ಆರ್ಯಪಾಲಿ ಮತ್ತು ಭಾರತೀಯ ಪಾಲಿ ಅಕ್ಷರಗಳು ಕ್ರಮವಾಗಿ ಉತ್ತರ ಅಶೋಕ ಅಕ್ಷರ ಮತ್ತು ಭಾರತೀಯ ಅಶೋಕ ಅಕ್ಷರ ಎಂದು ಕರೆಯಲ್ಪಡುವವು. ಆರ್ಯಪಾಲಿ ಅಕ್ಷರಗಳು ಖರೋಷ್ಟ್ರಿ ಅಥವಾ ಇಂಡೋಬಾಕ್ಟ್ರಿಯನ್ (Indo Bactrian) ಅಕ್ಷರಗಳೆಂದು ಪ್ರಸಿದ್ಧವಾಗಿರುವವು. " ಸಾಹಾವಾಜಗಿರಿ " ಮತ್ತು " ಮಾನಸೇರಾ " ಎಂಬ ಎರಡು ಸ್ಥಳಗಳಲ್ಲಿ ದೊರೆತ ಅಶೋಕನ ಶಿಲಾಶಾಸನಗಳು ಉತ್ತರ ಅಶೋಕ ಅಕ್ಷರಗಳಲ್ಲಿ ಬರೆಯಲ್ಪಟ್ಟಿರುವವು.

ಈ ಅಶೋಕಲಿಪಿಯು ಉತ್ಪತ್ತಿಯ ಸಂಬಂಧವಾಗಿ ಪಾಶ್ಚಾತ್ಯ ಪಂಡಿತರು ಬೇರೆ ಬೇರೆ ಮತಗಳನ್ನು ಪ್ರಕಟಿಸಿರುವರು. ಕೆಲವರು ಅವು ಗ್ರೀಕ ಅಕ್ಷರಗಳಿಂದ ಹುಟ್ಟಿದವೆಂದು ಹೇಳುವರು. ಕೆಲವರು ಸೆಮಿಟಿಕ್ ಅಕ್ಷರಗಳೇ ರೂಪಾಂತರವಾಗಿ ಅಶೋಕ ಅಕ್ಷರಗಳಾಗಿ ಪರಿಣಮಿಸಿದವೆಂದು ಹೇಳುವರು. ಪ್ರೊಫೆಸರ ಬೇಬಾರ, ಡಾಕ್ಟರ್ ಬುಹ್ಲರ್ ಮೊದಲಾದವರು ಭಾರತೀಯ ಅಕ್ಷರಗಳಲ್ಲಿ ಎಸ್ಟ್ರೋ ಅಸೀರಿಯದ ಅಕ್ಷರಕ್ಕೆ ಹೋಲುವವೆಂದೂ, ಕ್ರಿ. ಪೂ. ೬ನೆಯ ಮತ್ತು ೭ನೆಯ ಶತಮಾನದಲ್ಲಿ ಪಾಲಿ ಸ್ಯೈನದಲ್ಲಿದ್ದ ವೇಶಾ, ಅನುಶಾಸನಕ್ಕೆ ಹೋಲುವವೆಂದೂ ಹೇಳುವರು. ಇಷ್ಟರಿಂದಲೇ ಅವರು ಉತ್ತರ ಸೆಮಿಟಿಕ್ ಅಕ್ಷರಗಳಿಂದ ಭಾರತೀಯ ಅಕ್ಷರಗಳು ಹುಟ್ಟಿದವೆಂದು ಹೇಳುವರು. ಇದಕ್ಕೆ ವಿರುದ್ಧವಾಗಿ Isaac Taylor ಎಂಬವರು ದಕ್ಷಿಣ ಸೆಮಿಟಿಕ್ ಅಕ್ಷರಗಳಿಂದೇ ಭಾರತೀಯ ಅಕ್ಷರಗಳು ಉತ್ಪನ್ನವಾಗಿರುತ್ತವೆಂದು ತೋರಿಸುವದಕ್ಕೆ ಬಹಳ ಪ್ರಯತ್ನ ಮಾಡಿರುವರು. ಡಾಕ್ಟರ ರಿಸ್‌ಡೇವ್ಹಿಡ್ಸ ಎಂಬವರು ಈ ಎರಡು ಮತಗಳಿಗೂ ಅನುಮೋದನ ಕೊಡುವದಿಲ್ಲ. ಅವರು ಉತ್ತರ ಇಲ್ಲವೆ ದಕ್ಷಿಣ ಸೆಮಿಟಿಕ್ ಜಾತಿಗಳ ಬಹು ಪೂರ್ವಕಾಲದಲ್ಲಿ ಯುಫ್ರೆಟಿಸ್ ತಪ್ಪಲು ಪ್ರದೇಶದಿಂದ ಭಾರತೀಯ ಅಕ್ಷರ

ಗಳು ಪ್ರಚಲಿತವಾದವು. ಭರತಖಂಡದ ಎಲ್ಲ ಅಕ್ಷರಗಳಿಗೆ ಯುಫ್ರೆಟಿನ್ ವರ್ಣಮಾಲೆಯು ಮೂಲವು ಎಂದು ಹೇಳುವರು.

ಇತಿಹಾಸವನ್ನು ನೋಡಲು ತಿಳಿದುಬರುವದೇನಂದರೆ:—" ಕ್ರಿ. ಪೂ. ೩ ನೆಯ ಶತಮಾನದಲ್ಲಿ ಭರತಖಂಡದ ಪಶ್ಚಿಮತೀರದಲ್ಲಿರುವ ಸೌವೀರ, ಸುಪಾರಕ, ಬಾರುಕಚ್ಛ (ಇದಕ್ಕೆ ಎರಡನೆ ಹೆಸರು ಭೃಗುಕ್ಷೇತ್ರ) ಎಂಬ ಬಂದರಗಳಿಗೂ, ಬಾಬಿಲನಕ್ಕೂ ಬಹಳ ವ್ಯಾಪಾರವು ನಡೆಯುತ್ತಿತ್ತು; ಭರತಖಂಡದ ಪಶ್ಚಿಮತೀರದಲ್ಲಿದ್ದ ದ್ರವಿಡ ಜಾತಿಯೇ ಎಲ್ಲಕ್ಕೂ ಮೊದಲು ಬಾಬಿಲನದಿಂದ ಸೆಮಿಟಿಕರ ಪೂರ್ವದಲ್ಲಿ ಎಕ್ಸೇಡಿಯರಲ್ಲಿ ಪ್ರಚಲಿತವಾಗಿದ್ದ ವರ್ಣಮಾಲೆಯನ್ನು ಭರತಖಂಡಕ್ಕೆ ತಂದಿತು; ಇದೇ ಲಿಪಿಯು ಸುಮಾರು ಸಾವಿರ ವರ್ಷಗಳ ತರುವಾಯ ಭರತಖಂಡದ ಪ್ರಸಿದ್ಧವಾದ ಬ್ರಾಹ್ಮಿಲಿಪಿಯಾಗಿ ಪರಿಣಮಿಸಿತು." ಈ ಮತದೊಡನೆ ಎಲ್ಲ ವಿಷಯಗಳಲ್ಲಿ ಪರದೇಶದ ಪಂಡಿತರ ಐಕಮತ್ಯವಾಗುವಂತಿಲ್ಲ. ನಾವು ತಿಳಿದದ್ದೇನಂದರೆ—ಆರ್ಯಜನರ ಪ್ರಾಚೀನ ವಾಸಭೂಮಿಯೇ ಅಶೋಕ ಅಕ್ಷರಗಳ ಜನ್ಮಸ್ಥಾನವು. ಮುಂದೆ ಕಾಲಾನುಸಾರವಾಗಿ ಸೆಮಿಟಿಕ್ ಜಾತಿಯ ಸಂಸರ್ಗದಿಂದ ಅವುಗಳಲ್ಲಿ ಎಷ್ಟೋ ಹೆಚ್ಚುಕಡಿಮೆಗಳಾದ ಮೇಲೆ ಅವು ಭಾರತೀಯ ಅಶೋಕ ಅಕ್ಷರಗಳಾಗಿ ಪರಿಣಮಿಸಿದವು.

ಕೆಲವರು ಈ ದೇಶದಲ್ಲಿ ಎಷ್ಟು ಪ್ರಕಾರದ ಅಕ್ಷರಗಳು ಪ್ರಚಲಿತವಾಗಿ ಇರುವವೋ ಅವುಗಳಲ್ಲೆಲ್ಲ ಅಶೋಕ ಅಕ್ಷರಗಳೇ ಎಲ್ಲಕ್ಕೂ ಪ್ರಾಚೀನವೆಂದು ನಂಬುವರು. ಆದರೆ ಈ ಮತವು ಸಯುಕ್ತಿಕವೆಂದು ಹೇಳಲಾಗುವದಿಲ್ಲ. ಕ್ರಿ. ಪೂ. ೩ನೆಯ ಶತಮಾನದಲ್ಲಿ ಅಶೋಕ ಅಕ್ಷರಗಳು ಈ ದೇಶದಲ್ಲಿ ಪ್ರಚಲಿತವಾಗಿದ್ದವು. ಅಶೋಕ ಮಹಾರಾಜನ ಕಾಲಕ್ಕಿಂತ ಬಹು ಪೂರ್ವಕಾಲದಲ್ಲಿ ದರ್ಶನಗಳು, ಧರ್ಮಶಾಸ್ತ್ರಗಳು ಮೊದಲಾದ ವಿಷಯಗಳು ಉನ್ನತಿಯನ್ನು ಹೊಂದಿದ್ದವು. ಮತ್ತು ಅದರೊಡನೆ ಲೇಖನ ಪದ್ಧತಿಯೂ ಪ್ರಚಲಿತವಾಗಿತ್ತು. ಹಿಂದೂ ಗ್ರಂಥಗಳಲ್ಲಿಯೂ ಬೌದ್ಧಗ್ರಂಥಗಳಲ್ಲಿಯೂ ಈ ವಿಷಯದಲ್ಲಿ ಅನೇಕ ಆಧಾರಗಳು ದೊರೆಯುವವು. ವೈದಿಕ ಸೂಕ್ತಗಳು ರಚಿತವಾದ ಕಾಲದಲ್ಲಿ ಲೇಖನಪದ್ಧತಿಯು ಇದ್ದಿಲ್ಲವೆಂಬದು ಒಪ್ಪಬೇಕಾದದ್ದೇ. ಆಗ ಆ ಸೂಕ್ತಗಳನ್ನು ಜನರು ಶ್ರವಣ ಸಹಾಯದಿಂದೇ ಕಾದುಕೊಂಡಿದ್ದರು. ಆದ್ದರಿಂದ ಅವಕ್ಕೆ ಶ್ರುತಿ, ಎಂಬ ಹೆಸರುಂಟಾಯಿತು. ಆದರೆ ಮುಂದೆ ಸ್ವಲ್ಪ ದಿವಸಗಳಲ್ಲಿ ಲೇಖನಪದ್ಧತಿಯ ವಿಷಯವಾಗಿ ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖವಿರುವದು. ವೇದದ ಪ್ರಾತಿಶಾಖ್ಯವೂ ಯಾಸ್ಕನ ನಿರುಕ್ತವೂ ಅತ್ಯಂತ ಪ್ರಾಚೀನ ವ್ಯಾಕರಣಗಳು. ಅವುಗಳಿಗಿಂತಲೂ ಪೂರ್ವದಲ್ಲಿಯೇ ಈ ದೇಶದಲ್ಲಿ ಲೇಖನವು ಪ್ರಚಾರದಲ್ಲಿತ್ತೆಂಬದಕ್ಕೆ ಏನೂ ಸಂಶಯವಿಲ್ಲ. ಪಾಣಿನಿವ್ಯಾಕರಣವು ಕ್ರಿ. ಪೂ. ೪ನೆಯ ಶತಮಾನದಲ್ಲಿ ಅಸ್ತಿತ್ವದಲ್ಲಿತ್ತು. ಅದರ ಒಂದು ಸೂತ್ರದಲ್ಲಿ 'ಲಿಪಿಕರ' ಎಂಬ ಶಬ್ದವು ಬಂದಿರುವದು. ಆಗ ಒಂದುನೇಳೆ ಲೇಖನವು ಪ್ರಚಾರದಲ್ಲಿ

ಲ್ಲದಿದ್ದರೆ ಈ ಶಬ್ದವು ಎಂದೂ ಪ್ರಯೋಗಿಸಲ್ಪಡುತ್ತಿರಲಿಲ್ಲ. ಮನುಸಂಹಿತೆಯ ೮ ನೆಯ ಅಧ್ಯಾಯದ ೧೬೮ನೆಯ ಶ್ಲೋಕದಲ್ಲಿ 'ಲೇಖಿತ' ಎಂಬ ಶಬ್ದದ ಉಲ್ಲೇಖವುಂಟು. ಇದರಿಂದ ಮನುವಿನ ಕಾಲದಲ್ಲಿಯೂ ಲೇಖನದ ಪ್ರಚಾರವಿತ್ತೆಂದು ಕಂಡುಬರುವದು. ಇದರಂತೆ ಮಹಾಭಾರತದಲ್ಲೂ 'ವೇದಲೇಖಕ' ಎಂಬ ಶಬ್ದದ ಪ್ರಯೋಗವುಂಟು. 'ಲಲಿತವಿಸ್ತರ' ವೆಂಬ ಪ್ರಾಚೀನ ಬೌದ್ಧಗ್ರಂಥದಲ್ಲಿ ೬೪ ಪ್ರಕಾರದ ಲಿಪಿಗಳ ಉಲ್ಲೇಖವಿರುವದು. ಬಹುಶಃ ಎರಡು ಸಾವಿರ ವರ್ಷಗಳ ಪೂರ್ವದಲ್ಲಿ ಲಲಿತವಿಸ್ತರ ಗ್ರಂಥವು ಬರೆಯಲ್ಪಟ್ಟಿತೆಂದು ಅನೇಕರು ಊಹಿಸುತ್ತಾರೆ. ಅದು ನಿಜವಿದ್ದರೆ ಆ ಕಾಲದಲ್ಲಿ ಈ ಎಲ್ಲ ಲಿಪಿಗಳು ಪ್ರಚಾರದಲ್ಲಿರುವ ಸಂಭವವುಂಟೆಂದು ತೋರುವದು.

ಪ್ರಾಚೀನ ಸಂಸ್ಕೃತ ವಾಙ್ಮಯದಲ್ಲಿರುವಂತೆ ಪ್ರಾಚೀನ ಪಾಲೀಗ್ರಂಥಗಳಲ್ಲಿಯೂ ಅಶೋಕಲಿಪಿಯು ಪ್ರಚಾರದಲ್ಲಿ ಬರುವದಕ್ಕೆ ಮುಂಚೆ ಲೇಖನಪದ್ಧತಿಯಿತ್ತೆಂಬದರ ಉಲ್ಲೇಖವು ಬಹಳ ಸ್ಥಳಗಳಲ್ಲಿ ಕಂಡುಬರುವದು. ಸೂತ್ರಪಿಟಕವೆಂಬ ಗ್ರಂಥದ ಪ್ರಥಮ ಭಾಗದಲ್ಲಿ 'ಶೀಲ'ವೆಂಬ ಹೆಸರಿನ ಧರ್ಮಶಾಸ್ತ್ರವು ಬಂದಿರುವದು. ಈ ಶೀಲ ಗ್ರಂಥವು ಕ್ರೈ. ಪೂ. ೪೫೦ ರಲ್ಲಿ ಸಂಕಲಿತವಾಯಿತೆಂದು ಐತಿಹಾಸಿಕರು ಊಹಿಸುತ್ತಾರೆ. ಬೌದ್ಧ ಭಿಕ್ಷುಗಳಲ್ಲಿ ನಿಷಿದ್ಧವಾದ ವಿಷಯಗಳಾವವು' ಎಂಬ ವಿಷಯದ ವಿವೇಚನೆಯು ಶೀಲ ಗ್ರಂಥದಲ್ಲಿರುವದು. ನಿಷಿದ್ಧವಾದವುಗಳ ಪಟ್ಟಿಯಲ್ಲಿ 'ಅಕ್ಷರಿಕಾ' ಎಂಬ ಆ ಕಾಲದ ಒಂದು ಆಟದ ಹೆಸರಿನ ಉಲ್ಲೇಖವಿರುವದು. 'ಅಕ್ಷರಿಕಾ' ಎಂಬದು ಒಂದು ಆಟವಾದ ಮೇಲೆ ಅಕ್ಷರಜ್ಞಾನವು ಜನರಲ್ಲಿ ಪ್ರಚಲಿತವಾಗಿತ್ತೆಂದು ತೋರುವದು. ವಿನಯಪಿಟಕವೆಂಬ ಪ್ರಾಚೀನ ಪಾಲಿಗ್ರಂಥದ ೪ನೇ ಭಾಗದ ಒಂದು ಸೂತ್ರದಲ್ಲಿ ಲೇಖನವು ಪ್ರಸಿದ್ಧ ಶಿಲ್ಪವಿದ್ಯೆಗಳಲ್ಲಿ ಎಣಿಸಲ್ಪಟ್ಟಿರುವದು. ಭಿಕ್ಷುಣಿಗಳಲ್ಲಿಯೂ ಇದರ ಪ್ರಚಾರವಿತ್ತು. ಬೌದ್ಧಯುಗದಲ್ಲಿ ಲಿಪಿ ವಿದ್ಯೆಯು ಉಪಜೀವನದ ಯೋಗ್ಯ ಉಪಾಯಗಳಲ್ಲಿ ಒಂದಾಗಿ ಎಣಿಸಲ್ಪಟ್ಟಿತ್ತು. ಆ ಕಾಲದಲ್ಲಿ ಯಾವನಾದರೂ ದುರ್ಬುದ್ಧಿಯಿಂದ ಸಂಘದಲ್ಲಿ ಆತ್ಮಹತ್ಯೆಯನ್ನು ಸಮರ್ಥನ ಮಾಡುವ ಪತ್ರಾದಿಗಳನ್ನು ಬರೆದರೆ ಅವನಿಗೆ ಅದರ ಅಕ್ಷರಗಳ ಸಂಖ್ಯೆಯಿಂದ ಶಾಸನವಾಗುತ್ತಿತ್ತೆಂದು ಪ್ರವಾದವಿದೆ. ಬಿಂಬಿಸಾರ ನೆಂಬ ರಾಜನು ತನ್ನ ಆಳಿಕೆಯ ಕಾಲದಲ್ಲಿ ಗಾಂಧಾರದೇಶದ ರಾಜನಾದ 'ಪಕ್ಕುಸತಿ'ಯ ಬಳಿಗೆ ಒಂದು ಪತ್ರವನ್ನು ಕಳಿಸಿದ್ದನು. ಈ ಪತ್ರವನ್ನು ಚಿನ್ನದ ತಗಡಿನ (೬ ಫೂಟು × ೧೧ ಫೂ. ೨ ಇ.) ಮೇಲೆ ಕೊರೆಸಿದ್ದನು. ಅದರಲ್ಲಿ ಬುದ್ಧ ಮತ್ತು ಅವನ ಉಪದೇಶಗಳ ವರ್ತಮಾನವು ಒರೆಯಲ್ಪಟ್ಟಿತ್ತು. ಬುದ್ಧದೇವನ ಪ್ರಸಿದ್ಧ ಶಿಷ್ಯನಾದ ಮಹಾಕಾಶ್ಯಪನೆಂಬವನು ತಾನು ಸಂಸಾರವನ್ನು ಬಿಟ್ಟು ಹೋಗುವಾಗ ತನ್ನ ಹೆಂಡತಿಯಾದ ಭದ್ರೆಯ ಅಪ್ಪಣೆಯನ್ನು ಪತ್ರದ್ವಾರದಿಂದ ತೆಗೆದುಕೊಂಡನೆಂದು "ಮನೋರಥಪೂರಾನಿ" ಎಂಬ ಪಾಲೀಗ್ರಂಥದಲ್ಲಿ ವರ್ಣಿತವಾಗಿರುವದು. ಪಾಲೀಗ್ರಂಥದ ಆಧಾರಗಳಿಂದ

ಲಿಪಿವಿದ್ಯೆಯು ಪ್ರಚಲಿತವಾಗಿತ್ತೆಂದು ತೋರುವದು. ರಾಜಕಾರ್ಯಗಳಲ್ಲಿಯೂ, ಸುದ್ದಿಯನ್ನು ಕಳುಹಿಸುವಲ್ಲಿಯೂ ಲಿಪಿವಿದ್ಯೆಯ ಪ್ರಯೋಜನವಾಗುತ್ತಿತ್ತು.

ಅಶೋಕ ಮಹಾರಾಜನ ಕಾಲಕ್ಕಿಂತ ಪೂರ್ವದಲ್ಲಿಯೇ ಈ ದೇಶದಲ್ಲಿ ಲೇಖನಪದ್ಧತಿಯೂ ಭಾಷಾಸಾಹಿತ್ಯವೂ ಇದ್ದರೂ ಅವು ಸರ್ವಸಾಧಾರಣವಾಗಿ ಜನರಲ್ಲಿ ಪ್ರಚಾರವಾಗುವದಕ್ಕೆ ಅಶೋಕ ಮಹಾರಾಜನ ಕಾಲದಿಂದೇ ಪ್ರಯತ್ನವು ಆರಂಭವಾಯಿತು. ಅಶೋಕನು ತನ್ನ ವಿಶಾಲರಾಜ್ಯದಲ್ಲಿದ್ದ ರಾಜಮಾರ್ಗಗಳು, ಪರ್ವತಗಳು, ಗುಹೆಗಳು ಇವುಗಳಲ್ಲೆಲ್ಲ ಈ ಲಿಪಿಯು ಪ್ರಚಾರವನ್ನು ಮಾಡಲಾರಂಭಿಸಿದನು. ಇದುವರೆಗೆ ಅಲ್ಪಸ್ವಲ್ಪ ಜನರಲ್ಲಿದ್ದ ಲೇಖನಕಲೆಯು ಈಗ ಎಲ್ಲ ಕಡೆಗೆ ಪ್ರಚಾರವಾಗಹತ್ತಿತು. ಪ್ರವಾಸಿ-ವೈದ್ಯರು ಹಲವು ಸ್ಥಳಗಳಲ್ಲಿ ಚಿಕಿತ್ಸೆಯು ಸಲುವಾಗಿ ತಿರುಗುತ್ತ ನಿತ್ಯವ್ಯವಹಾರದ ಔಷಧಗಳ ಹೆಸರುಗಳನ್ನೂ, ಅನುಪಾನದ ಪ್ರಕಾರಗಳನ್ನೂ ಪ್ರಸಿದ್ಧ ಸ್ಥಳಗಳಲ್ಲಿ ಕಲ್ಲುಗಳ ಮೇಲೆ ಕೊರೆದು ಇಡುತ್ತಿದ್ದರು.

ಅಶೋಕ ಮಹಾರಾಜನು ಎಲ್ಲ ಜನರಲ್ಲಿ ತನ್ನ ಅಪ್ಪಣೆಗಳನ್ನು ಪ್ರಚಾರಪಡಿಸುವದಕ್ಕಾಗಿ ಅವುಗಳನ್ನು ದೇಶದಲ್ಲಿ ಹಲವೆಡೆಗಳಲ್ಲಿ ಕಲ್ಲುಗಳ ಮೇಲೆ ಕೊರೆಯಿಸಿ ಇಡಹತ್ತಿದನು. ಈ ಹೊಸ ಪದ್ಧತಿಯು ಅಶೋಕನ ಕಾಲದಲ್ಲಿಯೇ ಎಲ್ಲಕ್ಕೂ ಮೊದಲು ಪ್ರಚಲಿತವಾಯಿತು. ಲೇಖನವು ಬಹು ಪೂರ್ವಕಾಲದಿಂದ ಪ್ರಚಲಿತವಾಗಿದ್ದರೂ ಸರ್ವಸಾಧಾರಣ ಜನರಲ್ಲಿ ಇದು ಹಬ್ಬಲಿಲ್ಲ. ಬ್ರಾಹ್ಮಣ ಧರ್ಮದ ಪ್ರಭಾವದ ಕಾಲದಲ್ಲಿ ಶಿಕ್ಷಣವೂ ಲೇಖನವೂ ಉಚ್ಚತರಗತಿಯವರಲ್ಲಿ ಮಾತ್ರ ಇದ್ದವು. ಸ್ವಾಭಾವಿಕವಾಗಿಯೇ ಬ್ರಾಹ್ಮಣರು ತಮ್ಮ ಉಪದೇಶಗಳನ್ನು ಬಹಿರಂಗವಾಗಿ ಬರೆದಿಡುವದಕ್ಕೆ ವಿರೋಧಿಗಳಾಗಿದ್ದರು ಅಸಾಧಾರಣ ವಿದ್ವಾಂಸರಾದ ಜೇಮ್ಸ ಪ್ರಿನ್ಸೆಪ್ ಎಂಬವರು ೧೮೩೭ರಲ್ಲಿ ಅಶೋಕಲಿಪಿಗಳ ನಿಜವಾದ ಅರ್ಥವನ್ನು ಎಲ್ಲಕ್ಕೂ ಮೊದಲು ಜಗತ್ತಿನೆದುರಿಗೆ ಪ್ರಕಟಿಸಿದರು. ಅಂದಿನಿಂದ ಪ್ರಾಚೀನಯುಗದ ವಿವರಣವು ಹೊಸರೂಪವನ್ನು ಹೊಂದಿರುವದು ಭರತಖಂಡದ ಇತಿಹಾಸದಲ್ಲಿ ಹೊಸ ಅಧ್ಯಾಯವು ಸೇರಿದಂತಾಯಿತು. ಅದಕ್ಕೂ ಮುಂಚೆ ಯಾರಿಗೂ ಅವುಗಳ ಅರ್ಥವನ್ನು ಕಂಡು ಹಿಡಿಯುವದಾಗಿರಲಿಲ್ಲ. ೧೮೨೫ರಲ್ಲಿ ಲೆಫ್ಟನೆಂಟ ವಿಲ್‌ಫೋರ್ಡ ಸಾಹೇಬನು, ಮತ್ತು ೧೮೩೪ರಲ್ಲಿ ಸ್ಟ್ಯಾರ್ಲಿಂಗ್ ಸಾಹೇಬನು ಅಶೋಕಶಾಸನಗಳನ್ನು ಓದುವದಕ್ಕೂ ಅರ್ಥವನ್ನು ಕಂಡುಹಿಡಿಯುವದಕ್ಕೂ ಬಹಳ ಪ್ರಯತ್ನ ಮಾಡಿದ್ದರು. ಆದರೂ ಅವರ ಬಯಕೆಯು ನೆರವೇರಿದ್ದಿಲ್ಲ. ಸಾಂಚಿಸೂಪ್ತದ ಅಶೋಕ ಅಕ್ಷರಗಳ ನಕಲನ್ನು ತೆಗೆದುಕೊಳ್ಳುವಾಗ ಪ್ರಿನ್ಸೆಪ್ ಸಾಹೇಬರು ಪ್ರತಿಯೊಂದು ಲಿಪಿಯು ಕೊನೆಯು ಭಾಗದಲ್ಲಿ ಎರಡು ಅಕ್ಷರಗಳನ್ನು ಗೊತ್ತುಹಚ್ಚಿದರು. ಆದನಿಂದ ಅವರು ಈ ಲಿಪಿಗಳೆಲ್ಲ ದಾನಪತ್ರಗಳಾಗಿರಬೇಕೆಂದೂ, ಮತ್ತು ಆ ಎರಡು ಅಕ್ಷರಗಳು 'ದಾನ' ಶಬ್ದದ ಸ್ಥಳದಲ್ಲಿರಬೇಕೆಂದೂ

ಊಹಿಸಿದರು. ಕೊನೆಯ ಎರಡು ಅಕ್ಷರಗಳು ದಾನವೆಂದು ಆದಮೇಲೆ ಅದರ ಮೊದಲಿನ ಶಬ್ದವು ದಾತನ ಹೆಸರಾಗಿರಬೇಕು. ಈ ಮೇರೆಗೆ ಸಾಗಿ ಅವರು 'ಸ' ಅಕ್ಷರವನ್ನು ಗೊತ್ತು ಹಚ್ಚಿದರು. ಇದೇ ಮೇರೆಗೆ ಮುಂದೆ ಸಾಗಿ ಅವರು ದಿಲ್ಲೀ ಸ್ತಂಭದ ಮೇಲೆ ಕೊರೆದ ಲಿಪಿಯಲ್ಲಿ 'ಪ್ರಿಯದಸಿ' ಎಂಬ ಶಬ್ದವನ್ನು ಕಂಡುಹಿಡಿದರು.

ಗಿರ್ಣಾರಲ್ಲಿ ಪೆಪಿ ಎಂಬ ಒಬ್ಬ ಇಂಗ್ಲಿಷ ಗೃಹಸ್ಥನ ಭೂಮಿಯಲ್ಲಿ ಕೆಲವು ಭಸ್ಮಾಧಾರಗಳು ಸಿಕ್ಕವು. ಆ ಭಸ್ಮಾಧಾರಗಳಲ್ಲಿ ಶಾಕ್ಯರ ಅಸ್ಥಿಗಳು ತುಂಬಿರುವವೆಂದು ಎಲ್ಲರೂ ಒಪ್ಪಿದರು. ಯಾಕಂದರೆ ಈ ಅಭಿಪ್ರಾಯದ ಲಿಪಿಯು ಆ ಭಸ್ಮಾಧಾರಗಳ ಮೇಲೆ ಇತ್ತು. ಇದುವರೆಗೆ ಸಿಕ್ಕ ಶಿಲಾಲಿಪಿಗಳಲ್ಲಿ ಇವೇ ಎಲ್ಲಕ್ಕೂ ಪ್ರಾಚೀನವಾದಂಥವು. ಯಾಕಂದರೆ ಅವುಗಳಲ್ಲಿದ್ದ ಅಸ್ಥಿಗಳು ಶಾಕ್ಯಜನರವೆಂದ ಬಳಿಕ ಅವುಗಳ ಮೇಲಿನ ಲಿಪಿಯು ಅಶೋಕನಿಗಿಂತ ಪೂರ್ವದಲ್ಲಿ ಬರೆಯಲ್ಪಟ್ಟಿತೆಂಬದಕ್ಕೆ ಏನೂ ಸಂಶಯವಿಲ್ಲ. ಅಶೋಕನ ಧರ್ಮಪ್ರಚಾರಕರಾದ ಮಜ್ಜಿಮ, ಮತ್ತು ಕಾಶ್ಯಪ ಇವರ ಭಸ್ಮಾವಶೇಷವು ಸಾಂಚಿಸ್ತೂಪದಲ್ಲಿಯ ಭಸ್ಮಾಧಾರಗಳಲ್ಲಿ ದೊರೆತಿರುವದು. ಅವುಗಳ ಮೇಲೆ ಕೊರೆದ ಲಿಪಿಯೂ ಅತ್ಯಂತ ಪುರಾತನವಾದದ್ದು. ಅಂದಬಳಿಕ ಈಗ 'ಅಶೋಕನ ಅಕ್ಷರಗಳೆಂದು ಹೇಳಲ್ಪಡುವ ಅಕ್ಷರಗಳು ಅತನಿಗಿಂತ ಪೂರ್ವದಲ್ಲಿಯೇ ಪ್ರಚಲಿತವಾಗಿದ್ದವೆಂಬದಕ್ಕೆ ಏನೂ ಸಂಶಯವಿಲ್ಲ. ಕ್ರಿ. ಪೂ ೭ನೆಯ ಇಲ್ಲವೆ ೬ನೆಯ ಶತಮಾನದಲ್ಲಿ ಎಲ್ಲಕ್ಕೂ ಮೊದಲು ಭರತಖಂಡದಲ್ಲಿ ವರ್ಣಮಾಲೆಯು ತರಲ್ಪಟ್ಟಿತೆಂದು ಐತಿಹಾಸಿಕರು ಊಹಿಸುವರು. ವೈದಿಕ ವಾಙ್ಮಯವು ಈ ಪೂರ್ವದಲ್ಲಿಯೇ ಸಮಾಜದಲ್ಲಿ ಪ್ರಚಾರವಾಗಿತ್ತು. ವೇದದ ಸಂಹಿತೆ, ಮಂತ್ರ ಎಂಬ ಭಾಗಗಳು ಶ್ರುತಿ ಎಂಬ ಹೆಸರಿನಿಂದ ಜನರ ಬಳಕೆಯಲ್ಲಿ ಬಂದಿದ್ದವು. ವರ್ಣಮಾಲೆಯು ದೇಶದಲ್ಲಿ ಪ್ರಚಾರಕ್ಕೆ ಬರಲು ಬ್ರಾಹ್ಮಣರು ಮೊದಲು ಅದನ್ನು ಸ್ವೀಕರಿಸಲಿಲ್ಲ. ಎಷ್ಟೋ ದಿವಸ ಅವರು ತಮ್ಮ ಪೂರ್ವಪದ್ಧತಿಯನ್ನೇ ಅವಲಂಬಿಸಿದರು. ವರ್ಣಮಾಲೆಯು ಪ್ರಚಾರಕ್ಕೆ ಬರುವ ಮೊದಲು ಉಂಟಾದ ವಾಙ್ಮಯವು ವೈದಿಕವಾಙ್ಮಯವೆಂದೂ ವರ್ಣಮಾಲೆಯು ಪ್ರಚಾರಕ್ಕೆ ಬಂದತರುವಾಯ ಉಂಟಾದ ವಾಙ್ಮಯವು ಲೌಕಿಕ ವಾಙ್ಮಯವೆಂದೂ ಹೇಳಲ್ಪಡುತ್ತಿತ್ತೆಂದು ಕೆಲವರು ಊಹಿಸುವರು. ಮೇಲಿನ ವಿವರಣೆಯನ್ನೋದಲು ಲೇಖನವು ಈ ದೇಶದಲ್ಲಿ ಪ್ರಚಲಿತವಾದ ಮೇಲೆ ಕೂಡ ಅದು ಬೌದ್ಧಯುಗದಲ್ಲಿಯೇ ವಿಶೇಷವಾಗಿ ಆದರಿಸಲ್ಪಟ್ಟಿತೆಂದು ತಿಳಿಯುವದು.

ಅಕ್ಷರಗಳು ಹೊರದೇಶಗಳಿಂದ ತರಲ್ಪಟ್ಟರೂ ಬರಹದ ಪದ್ಧತಿಯು ಪ್ರತಿಯೊಂದು ದೇಶದಲ್ಲಿ ಬೇರೆ ಬೇರೆ ಇರುವದು. ಎಲ್ಲಕ್ಕೂ ಮೊದಲು ಮಣ್ಣಿನ ಮೇಲೆ ಇಲ್ಲವೆ ಇಟ್ಟಿಗೆಯ ಮೇಲೆ ಅಕ್ಷರಗಳು ಕೊರೆಯಲ್ಪಡುತ್ತಿದ್ದವೆಂದು ಈ ಮೊದಲೇ ಹೇಳಿದೆ. ಆದರೆ ಪುಸ್ತಕಗಳನ್ನೂ ಪತ್ರಗಳನ್ನೂ ಈ ಮೇರೆಗೆ ಬರೆಯುವದು ಅಸಂಭವವು. ರಾಜ

ಕೀಯ ಶಾಸನ ಮೊದಲಾದವು ತಾಮ್ರ ಮೊದಲಾದ ಧಾತುಗಳ ತಗಡುಗಳ ಮೇಲೆ ಕೊರೆಯಲ್ಪಡುತ್ತಿದ್ದವು. ಹುಡುಗರು ಉಸುಕಿನ ಮೇಲೆ ಬರಹವನ್ನು ಕಲಿಯುತ್ತಿದ್ದರು. ಬಿದಿರು, ಕಟ್ಟಿಗೆ, ಮೇಣ ಇವುಗಳ ಮೇಲೆಯೂ ಲಿಪಿಯು ಕೊರೆಯಲ್ಪಡುತ್ತಿತ್ತು. ಖೋಟಾನದ ಬಳಿಯಲ್ಲಿರುವ ಘೋಸಿಂಗವಿಹಾರದಿಂದ ಮಣ್ಣಿನ ಮೇಲೆ ಬರೆದ ಈ ತರದ ಒಂದು ಲಿಪಿಯನ್ನು ಡಾ. ಹೋಯಿ ಇವರು ಸಂಪಾದಿಸಿದ್ದರು. ಮಣ್ಣಿನ ಮೇಲೂ ಇಟ್ಟಿಗೆಯ ಮೇಲೂ ಬರೆಯುವ ಪದ್ಧತಿಯು ಪ್ರಚಲಿತವಾದರೂ ತಾಮ್ರದ ಮತ್ತು ಚಿನ್ನದ ತಗಡುಗಳ ಮೇಲೆ ಬರೆಯುವ ಪದ್ಧತಿಯು ಪೂರ್ವಕಾಲದಲ್ಲಿಯೂ ಇತ್ತು. ತಕ್ಷಶಿಲೆಯ ಅವಶೇಷದಲ್ಲಿ ಈ ತರದ ಒಂದು ತಾಮ್ರಲಿಪಿಯು ದೊರೆತಿದೆ. ಇದಲ್ಲದೆ ತಾಲಪತ್ರದ ಇಲ್ಲವೆ ಭೂರ್ಜಪತ್ರದ ಉಪಯೋಗವು ಅತಿ ಪ್ರಾಚೀನ ಕಾಲದಿಂದಲೂ ಆಗುತ್ತಬಂದಿತ್ತು. ಭೂರ್ಜಪತ್ರದ ಮೇಲೆ ಮಸಿಯಿಂದ ಖರೋಷ್ಟ್ರೀ ಲಿಪಿಯಿಂದ ಬರೆದ ಒಂದು ಅತಿ ಪ್ರಾಚೀನ ಪುಸ್ತಕವು ಮೇಲೆ ಹೇಳಿದ ಘೋಸಿಂಗ ವಿಹಾರದಲ್ಲಿ ದೊರೆತಿದೆ. ಬೌದ್ಧಧರ್ಮಕ್ಕೆ ಸಂಬಂಧಪಟ್ಟ ಪದಾವಲಿಯು ಇದರಲ್ಲಿ ಬರೆಯಲ್ಪಟ್ಟಿದೆ. ಕ್ರಿಸ್ತ ಶಕಕ್ಕೆ ಸ್ವಲ್ಪ ಮುಂಚೆ ಈ ಪುಸ್ತಕವು ಬರೆಯಲ್ಪಟ್ಟಿದ್ದೆಂದು ಹಲವರು ಊಹಿಸುವರು. ಗಿರನಾರ ಪರ್ವತದಿಂದ ಇನ್ನೊಂದು ಪ್ರಕಾರದ ಲಿಪಿಯು ದೊರೆತಿದೆ. ಅದು ಕ್ರಿ. ೧ನೆಯ ಶತಮಾನದಲ್ಲಿ ಕ್ಷತ್ರಪವಂಶದ ರುದ್ರದಾಮರಾಜನ ಆಳಿಕೆಯಲ್ಲಿ ಕೊರೆಯಲ್ಪಟ್ಟಿತ್ತು. ಸಂಸ್ಕೃತಭಾಷೆಯಲ್ಲಿ ಇದುವರೆಗೆ ಸಿಕ್ಕ ಕೊರೆದ ಲಿಪಿಗಳಲ್ಲಿ ಇದೇ ಎಲ್ಲಕ್ಕೂ ಮೊದಲನೆಯದು. ಪ್ರಾಚೀನ ಶಾಸನಗಳೆಲ್ಲವೂ ಪಾಲಿಭಾಷೆಯಲ್ಲಿ ಬರೆಯಲ್ಪಟ್ಟವೆ. ಪಾಲಿಯಿಂದ ಸಂಸ್ಕೃತಕ್ಕೆ ಬರುವದಕ್ಕೆ ೪೦೦ ವರ್ಷಗಳು ಹಿಡಿದಿರುವವು. ಕಪ್ತಾನ ಬಾವಾರ ಎಂಬ ಒಬ್ಬ ಇಂಗ್ಲಿಷ ಸೈನಿಕನು ಚೀನದಿಂದ ಸ್ವದೇಶಕ್ಕೆ ತಿರುಗಿಬರುವಾಗ ಮಧ್ಯ ಏಸಿಯದ ಮಿಂಗಾಯಿ ಎಂಬ ಸ್ಥಳದಲ್ಲಿ ಹಲವು ಪುಸ್ತಕಗಳನ್ನು ಸಂಪಾದಿಸಿದ್ದನು. ಈ ಎಲ್ಲ ಪುಸ್ತಕಗಳು ಭೂರ್ಜಪತ್ರಗಳ ಮೇಲೆ ಸಂಸ್ಕೃತಭಾಷೆಯಲ್ಲಿ ಬರೆಯಲ್ಪಟ್ಟಿವೆ. ಎಷ್ಟೋ ಔಷಧಗಳ ಹೆಸರುಗಳನ್ನೂ ಔಷಧ ಮಾಡುವ ಕೃತಿಗಳನ್ನೂ ಇವುಗಳಲ್ಲಿ ಹೇಳಿದೆ. ಕ್ರಿ. ೪ನೆಯ ಇಲ್ಲವೆ ೫ನೆಯ ಶತಮಾನದಲ್ಲಿ ಇವುಗಳನ್ನು ಬರೆದಿರಬೇಕೆಂದು ಹಲವರು ಊಹಿಸುವರು. ೧೮೯೦ ರಲ್ಲಿ ಡಾ. ಹರ್ನಲಿ ಎಂಬವರು ಇವುಗಳನ್ನು ಓದಿದರು. ಡಾ. ಬುಲ್ಹಾರ ಎಂಬವರು Vienna oriental gournal ಎಂಬ ಪತ್ರಿಕೆಯಲ್ಲಿ ಈ ಪುಸ್ತಕಗಳ ಹಲವು ಸ್ಥಳಗಳ ಅರ್ಥವನ್ನು ಸ್ಪಷ್ಟಪಡಿಸಿರುವರು. ಬುದ್ಧದೇವನು ಜನರಾಡುವ ಭಾಷೆಯಲ್ಲಿಯೇ ಉಪದೇಶ ಮಾಡುತ್ತಿದ್ದನು; ಮತ್ತು ಶಿಷ್ಯರಿಗೆ ಅದೇ ಭಾಷೆಯಲ್ಲಿ ಆ ಉಪದೇಶಗಳನ್ನು ಕಾದಿಡುವದಕ್ಕೆ ಹೇಳುತ್ತಿದ್ದನು. ಅಶೋಕನ ಕಾಲದವರೆಗೆ ಅವರ ಆ ಅಪ್ಪಣೆಯು ಪಾಲಿಸಲ್ಪಟ್ಟಿತ್ತು. ಇದೇ ಭರತಖಂಡದ ಪಾಲಿ ಅಥವಾ ಮಾಗಧೀಭಾಷೆಯು. ಉತ್ತರದಲ್ಲಿ

ಶ್ರಾವಸ್ತಿ, ದಕ್ಷಿಣದಲ್ಲಿ ಅವಂತಿ, ಪಶ್ಚಿಮದಲ್ಲಿ ಇಂದಪ್ರಸ್ಥ, ಪೂರ್ವದಲ್ಲಿ ಪಾಟಲಿಪುತ್ರ ಈ ಮೇರೆಯೊಳಗಿನ ವಿಸ್ತಾರವಾದ ರಾಜ್ಯದಲ್ಲಿ ಈ ಭಾಷೆಯು ವ್ಯಾಪಿಸಿತ್ತು. ಪ್ರಾಚೀನ ಇತಿಹಾಸವನ್ನು ನೋಡಿದರೆ ರಾಷ್ಟ್ರೀಯ ಶಕ್ತಿಯು ಬದಲಾದಂತೆ ಭಾಷೆಯಲ್ಲಿಯೂ ಬದಲುಂಟಾಗುವದೆಂಬದು ಗೊತ್ತಾಗುವದು. ಎಲ್ಲಕ್ಕೂ ಮೊದಲು ಪಂಚನದದಲ್ಲಿ ಈ ಭಾಷೆಯು ವಿಕಾಸಗೊಂಡದ್ದು ಕಂಡುಬರುವದು. ಆ ಬಳಿಕ ಕೋಸಲರಾಜ್ಯವು ಉತ್ಕರ್ಷವನ್ನು ಹೊಂದುತ್ತ ನಡೆದಂತೆ ಈ ಭಾಷೆಯೂ ಉತ್ಕರ್ಷವನ್ನು ಹೊಂದುತ್ತ ನಡೆಯಿತು. ಮುಂದೆ ಬೌದ್ಧಧರ್ಮದ ಅಭಿವೃದ್ಧಿ ಕಾಲದಲ್ಲಿ ಮಗಧವೇ ಇದರ ಮುಖ್ಯ ಸ್ಥಾನವಾಗಿತ್ತು. ಮಾಗಧೀ ಭಾಷೆಯೇ ಮೂಲಭಾಷೆಯೆಂದು ಬೌದ್ಧರು ಅನ್ನುವರು. ಸಂಸ್ಕೃತವೂ ಬೇರೆ ಭಾಷೆಗಳೂ ಈ ಮೂಲಭಾಷೆಯಿಂದಲೇ ಹುಟ್ಟಿದವೆಂದು ಅವರು ನಂಬುವರು. ಸಂಪೂರ್ಣ ತ್ರಿಪಿಟಕವೆಂಬ ಗ್ರಂಥವು ಪಾಲಿಭಾಷೆಯಲ್ಲಿರುವದು. ಈ ಮಾಗಧೀ ಭಾಷೆಯಲ್ಲಿ ಮಹೇಂದ್ರನು ಸಿಂಹಲದಲ್ಲಿ ಧರ್ಮಪ್ರಸಾರ ಮಾಡಿದನು. ಅದರಿಂದ ದ್ವೀಪವಂಶ, ಮಹಾವಂಶ, ಅರ್ಧ ಕಥೆ ಮೊದಲಾದ ಗ್ರಂಥಗಳೂ, ಧರ್ಮ ಶಾಸ್ತ್ರಗಳೂ ಈ ಭಾಷೆಯಲ್ಲಿ ರಚಿತವಾಗಿ ಸಿಂಹಲದಲ್ಲಿ ಬಹಳ ಹೆಸರಾದವು. ತ್ರಿಪಿಟಕ ಗ್ರಂಥವೇ ಬೌದ್ಧಧರ್ಮದ ಮುಖ್ಯ ಗ್ರಂಥವು. ಈ ಪಿಟಕ ಗ್ರಂಥದಲ್ಲಿ ವಿನಯ, ಸೂತ್ರ ಅಭಿಧರ್ಮ ಎಂಬ ಮೂರು ಭಾಗಗಳುಂಟು.

ವಿನಯ ಪಿಟಕ.

೧. ವಿಭಾಗ— ಪ್ರಥಮ ಭಾಗ, ಪರಾಚಿಕ ದ್ವಿತೀಯ ಭಾಗ, ಪಚಿತ್ತಿಯ (ಪ್ರಾಯಶ್ಚಿತ್ತಿಯ)
೨. ಖಂದಕ— ಪ್ರಥಮ ಭಾಗ, ಮಹಾವಗ್ಗ ದ್ವಿತೀಯಭಾಗ, ಚೂಲವಗ್ಗ.
೩. ಪರಿವಾರ ಪಾಠ.

ಸೂತ್ರಪಿಟಕ.

೧. ದೀರ್ಘನಿಕಾಯ (೩೪ ದೊಡ್ಡ ಸೂತ್ರಗಳ ಸಮೂಹವು)
೨. ಮಜ್ಜಿಮನಿಕಾಯ (೧೫೨ ಸೂತ್ರಗಳ ಗುಂಪು.)
೩. ಸಂಯುಕ್ತನಿಕಾಯ.
೪. ಅಂಗುತ್ತರ ನಿಕಾಯ.
೫. ಕ್ಷುದ್ರಕ ನಿಕಾಯ.
(ಕ) ಕ್ಷುದ್ರಕ ಪಾಠ. (ಖ) ಧಮ್ಮಪದ. (ಗ) ಉದಾನ. (ಘ) ಇತಿವುತ್ತಕ. (ಙ) ಸೂತ್ರನಿಪಾತ.
೬ ವಿಮಾನವತ್ಥು. ೧೨. ಪಟಿಸಂಭಿದಾ ಮಗ್ಗ.
೭ ಪೇತವತ್ಥು. ೧೩ ಅವದಾನ.
೮ ಥೇರಗಾಥಾ. ೧೪. ಬುದ್ಧವಂಶ.
೯ ಥೇರಗಾಥಾ. ೧೫ ಚಾರಿಯಾ ಪಿಟಕ
೧೦ ಜಾತಕ.
೧೧ ನಿದ್ದೇಶ.

ಅಶೋಕನ ಆಳಿಕೆಯಲ್ಲಿ ಬೌದ್ಧಧರ್ಮವು ಶ್ರೇಷ್ಠತೆಯನ್ನು ಹೊಂದಿತು. ಈ ಬೌದ್ಧಧರ್ಮವು ರಾಜಾಶ್ರಯದಿಂದ ಪಾಲಿಭಾಷೆಯು ಉತ್ಕರ್ಷವನ್ನುಂಟು ಮಾಡಿತು. ಆ ಕಾಲದ ಭರತಖಂಡದ ಶಿಕ್ಷಣಕೇಂದ್ರವಾದ ನಾಲಂದಾ ವಿಹಾರದಲ್ಲಿ ಈ ಭಾಷೆಯಲ್ಲಿಯೇ ವ್ಯಾಸಂಗವು ನಡೆಯುತ್ತಿತ್ತು. ಈ ನಾಲಂದಾ ವಿಹಾರದ ಕಥೆಯು ಬಹಳ ಆಶ್ಚರ್ಯಕರವಾಗಿದೆ. ನಾನಾದೇಶಗಳಿಂದ ಇಲ್ಲಿಗೆ ವಿದ್ಯಾರ್ಥಿಗಳು ಶಿಕ್ಷಣ ಕ್ಕೋಸ್ಕರ ಬರುತ್ತಿದ್ದರು. ಒಂದೇ ಕಾಲದಲ್ಲಿ ಸಮಾರು ೧೦ ಸಾವಿರ ವಿದ್ಯಾರ್ಥಿಗಳಿಗೆ ಇಲ್ಲಿ ವಾಸಿಸುವದಕ್ಕೆ ಅನುಕೂಲತೆಯಿತ್ತು. ಹಲವು ಶಾಸಗಳ ಶಿಕ್ಷಣವು ಇಲ್ಲಿ ದೊರೆಯುತ್ತಿತ್ತು. ಭರತಖಂಡದ ಹೊರಗಿನ ದೇಶಗಳಲ್ಲಿಯೂ ಇದರ ಪ್ರಸಿದ್ಧಿಯಿತ್ತು. ದೂರದಲ್ಲಿರುವ ಚೀನದೇಶದಲ್ಲಿ ಸಹ ಇದರ ಕೀರ್ತಿಯು ಹಬ್ಬಿತ್ತು. ಈ ನಾಲಂದಾವಿ ಹಾರದಲ್ಲಲ್ಲದೆ ಬೇರೆ ಎಲ್ಲ ಬೌದ್ಧವಿಹಾರಗಳಲ್ಲಿಯೂ ಈ ಪಾಲೀ ಭಾಷೆಯೇ ಪ್ರಚಲಿತವಾಗಿತ್ತು. ಆಗ ರಾಜನು, ಪ್ರಜೆಗಳು, ವಿದ್ವಾಂಸರು, ಭಿಕ್ಷುಗಳು, ಗೃಹಸ್ಥರು ಇವರೆಲ್ಲರ ಭಾಷೆಯು ಪಾಲೀಭಾಷೆಯೇ ಆಗಿತ್ತು. ಅಶೋಕನ ಆಳಿಕೆಯಲ್ಲಿ ಈ ಭಾಷೆಯ ಗೌರವವು ಎಲ್ಲಕಡೆಗೆ ಹಬ್ಬಿತ್ತು.

೧೬ನೆಯ ಅಧ್ಯಾಯ.

ಅಶೋಕನ ರಾಜ್ಯಶಾಸನಪದ್ಧತಿಯು.

ಮೌರ್ಯವಂಶ ಪ್ರತಿಷ್ಠಾಪಕನಾದ ಚಂದ್ರಗುಪ್ತ ಮಹಾರಾಜನು ತನ್ನ ಬಾಹುಬಲದಿಂದ ಪೂರ್ವಕ್ಕೆ ಮಗಧದಿಂದ ಪಶ್ಚಿಮಕ್ಕೆ ಹಿಂದುಕುಶ, ಈಗಿನ ಅಫಘಾನಿಸ್ಥಾನ, ಬೆಲೂಚಿಸ್ಥಾನ, ದೂರದಲ್ಲಿರುವ ಮೆಕ್ರಾನ ಇವುಗಳ ವರೆಗಿನ ಪ್ರದೇಶದಲ್ಲಿ ಏಕಚ್ಛತ್ರ ಸಾಮ್ರಾಜ್ಯವನ್ನು ಸ್ಥಾಪಿಸಿದ್ದನು. ಕಾಬೂಲ ಕಂದಹಾರ ಗಜನಿ ಹಿರಾಟ ಮತ್ತು ಸಂಪೂರ್ಣ ಕಾಠಿಯಾವಾಡ ಈ ಪ್ರದೇಶಗಳು ಅತನ ಆಳಿಕೆಗೆ ಒಳ

ಅಭಿಧಮ್ಮ ಪಿಟಕ.

(೧) ಧರ್ಮ ಸಂಗಿನೀ. ೪ ಪುಗ್ಗಲ ಪಂಚಾತಿ.
೨ ವಿಭಂಗ. ೫ ಧಾತುಕಥಾ.
೩. ಕಥಾವಸ್ತು ಪಕರಣ. ೬ ಯಮಕ.
೭ ಪಟ್ಠಾನ ಪ್ರಕರಣ.

ಪಟ್ಟಿದ್ದವು. ಬಿಂದುಸಾರರಾಜನ ಆಳಿಕೆಯ ಕಾಲದಲ್ಲಿ ಈ ರಾಜ್ಯದಲ್ಲಿ ಸ್ವಲ್ಪವೂ ಕಡಿಮೆಯಾಗಲಿಲ್ಲ. ಅಶೋಕನು ಸಿಂಹಾಸನವೇರಿದಾಗ ಉತ್ತರದಲ್ಲಿ ಕಾಶ್ಮೀರ, ಸೋಯಾಟ ಪರ್ವತ ಪ್ರದೇಶ, ಹಿಮಾಲಯ ಪ್ರದೇಶಗಳೂ, ಪಶ್ಚಿಮದಲ್ಲಿ ಇಸುಫಜಾಯಿ ಹಿಂದುಕುಶ, ಅಫಘಾಣಿಸ್ಥಾನ ಬೆಲೂಚಿಸ್ಥಾನ, ಸಿಂಧು ದೇಶಗಳೂ ದಕ್ಷಿಣದಲ್ಲಿ ೩-೪ ಸಣ್ಣ ಸ್ವತಂತ್ರರಾಜ್ಯಗಳನ್ನು ಬಿಟ್ಟು ಉಳಿದ ಎಲ್ಲ ಪ್ರದೇಶವೂ ಮಗಧಸಾಮ್ರಾಜ್ಯಕ್ಕೆ ಸೇರಿದ್ದವು. ಬ್ರಹ್ಮದೇಶವನ್ನು ಬಿಟ್ಟು ಈಗಿನ ಬ್ರಿಟಿಶ ಹಿಂದುಸ್ತಾನಕ್ಕಿಂತ ಅಶೋಕಸಾಮ್ರಾಜ್ಯವು ಹೆಚ್ಚು ವಿಸ್ತಾರವಾಗಿತ್ತು. ಕೇವಲ ಅನುಮಾನದಿಂದ ಅಶೋಕ ಸಾಮ್ರಾಜ್ಯದ ಈ ಮೇರೆಯು ಗೊತ್ತುಮಾಡಲ್ಪಟ್ಟಿಲ್ಲ. ಶಿಲಾಲಿಪಿಗಳು, ಹಲವು ಪ್ರದೇಶಗಳಲ್ಲಿ ಬಿದ್ದಿರುವ ಸ್ತಂಭಲಿಪಿಗಳು, ಮತ್ತು ಪ್ರಾಚೀನ ಪರದೇಶದ ಪ್ರವಾಸಿಗಳು ಬರೆದಿಟ್ಟ ಲೇಖಗಳು ಇವುಗಳನ್ನೆಲ್ಲ ನೋಡಿದರೆ ಈ ಮಾತು ಸಿದ್ಧವಾಗುವದು.

ಕ್ರಿ. ಪೂ. ೩೦೫ ರಲ್ಲಿ ಸೆಲ್ಯೂಕಸ ನಿಕೇತರನು ಚಂದ್ರಗುಪ್ತ ಮಹಾರಾಜನೊಡನೆ ಒಪ್ಪಂದ ಮಾಡಿಕೊಂಡಿದ್ದನು. ಈ ಒಪ್ಪಂದದ ಮೇರೆಗೆ ಆರಿಯಾ, ಆರಾಕೋಸಿಯಾ, ಗೆದ್‌ರೋಸಿಯಾ ಮತ್ತು ಪಾರಪನಿಸದಾಯಿ ಈ ಪ್ರದೇಶಗಳೆಲ್ಲ ಮೌರ್ಯ ಸಾಮ್ರಾಜ್ಯವೆಂದು ಎಣಿಸಲ್ಪಡುತ್ತಿದ್ದವು. ಈಗಿನ ಅಫಘಾನಿಸ್ಥಾನ ಪ್ರದೇಶದಲ್ಲಿ ಅಶೋಕನು ಕಟ್ಟಿಸಿದ ಹಲವು ಸ್ತೂಪಗಳಿದ್ದವು. ಹುಯನ್‌ತ್ಸಾಂಗನು ತನ್ನ ಪ್ರವಾಸ ವರ್ಣನೆಯಲ್ಲಿ ಈ ಎಲ್ಲ ವೃತ್ತಾಂತವನ್ನು ಬರೆದಿರುವನು. ಕಪಿಶೆಯ ಬಳಿಯಲ್ಲಿ ೧೦೦ ಅಡಿ ಎತ್ತರವಾದ ಪಿಲೂಶಾಸ್ತೂಪ ಮತ್ತು ಜಾಲಾಲಾಬಾದದ ಬಳಿಯಲ್ಲಿರುವ ನಗರಹಾರವೆಂಬ ಸ್ಥಳದಲ್ಲಿ ಶಿಲ್ಪಕೌಶಲ್ಯವುಳ್ಳ ೩೦೦ ಅಡಿ ಎತ್ತರವಾದ ಒಂದು ಸ್ತಂಭ ಇವು ಅಶೋಕನ ಕೀರ್ತಿ ಚಿಹ್ನಗಳೆಂದು ಇದುವರೆಗೆ ಪ್ರಸಿದ್ಧವಿರುವವು. ಈ ದೊಡ್ಡ ಸ್ತಂಭದ ಹತ್ತರ ಒಂದು ಸಣ್ಣ ಸ್ತೂಪವಿತ್ತು. ಅದೂ ಅಶೋಕನಿರ್ಮಿತವೆಂದು ಪ್ರವಾದವುಂಟು. ಅರಾಕೋಶಿಯಾ ಪ್ರದೇಶದ ರಾಜಧಾನಿಯಾದ ಗಜನಿಯಲ್ಲಿ ಅಶೋಕನು ಸ್ಥಾಪಿಸಿದ ೧೦ ಸ್ತೂಪಗಳನ್ನು ಐತಿಹಾಸಿಕರು ಕಂಡುಹಿಡಿದಿರುವರು.

ಅಶೋಕ ನರಪತಿಯು ಕಾಶ್ಮೀರದ ಈಗಿನ ರಾಜಧಾನಿಯಾದ ಶ್ರೀನಗರವು ಸ್ಥಾಪಿತವಾಗುವ ಪೂರ್ವದಲ್ಲಿ ಅಲ್ಲಿಯ ಪ್ರಾಚೀನರಾಜಧಾನಿಯನ್ನು ಸ್ಥಾಪಿಸಿದನೆಂದು ಪ್ರವಾದವುಂಟು. ಇದು ಈಗಿನ ಶ್ರೀನಗರದ (ಇದರ ಎರಡನೆಯ ಹೆಸರು ಪ್ರವರಪುರ) ೨ ಮೈಲು ದಕ್ಷಿಣಕ್ಕೆ ಹಳೆಯ ಪಾಂಡ್ರೇಥಾನ ಎಂಬ ಸ್ಥಾನದಲ್ಲಿ ಇತ್ತು. ಮುಸಲ್ಮಾನ ಐತಿಹಾಸಿಕರು ಈಗಿನ ಇಸ್ಲಾಮಾಬಾದ ಮತ್ತೂ ಮಾರತಾಂಡಾ ಎಂಬ ಸ್ಥಳಗಳ ಬಳಿಯಲ್ಲಿ ಲಿದಾರ (Lidar River) ನದಿಯ ದಂಡೆಯ ಮೇಲೆ ಈ ರಾಜಧಾನಿಯು ಇತ್ತೆಂದು ಹೇಳುವರು. ಈ ಸ್ಥಳವು ಶ್ರೀ ನಗರದಿಂದ ೩೦ ಮೈಲು ದೂರದಲ್ಲಿರುವದು. ಕಾಶ್ಮೀರದ ಐತಿಹಾಸಿಕರು ಅಶೋಕನ ಮಗನಾದ ಜಲೂಕನು ಈ

ಪ್ರದೇಶದ ಕಾರಭಾರಿಯಾಗಿ ನಿಯಮಿಸಲ್ಪಟ್ಟಿದ್ದನೆಂದು ಹೇಳಿರುವರು. ಚೀನ ಪ್ರವಾಸಿಯಾದ ಹುಯನ್‌ತ್ಸಾಂಗನ ಪ್ರವಾಸವೃತ್ತಾಂತದಲ್ಲಿಯೂ ರಾಜತರಂಗಿಣಿಯಲ್ಲಿಯೂ ಅಶೋಕನು ಬೌದ್ಧ ಅರ್ಹಂತರ ಸಲುವಾಗಿ ೫೦೦ ವಿಹಾರಗಳನ್ನು ಕಟ್ಟಿಸಿ ಭಿಕ್ಷುಸಂಘದ ವೆಚ್ಚದ ಸಲುವಾಗಿ ಸಮಗ್ರ ಕಾಶ್ಮೀರ ರಾಜ್ಯವನ್ನು ದಾನಮಾಡಿದ್ದನೆಂದು ವರ್ಣಿಸಲ್ಪಟ್ಟಿದೆ. ಈಗಲೂ ಅಲ್ಲಿ ಹಾಳಾದ ಹಲವು ಕಟ್ಟಡಗಳು ಅಶೋಕನ ಕೀರ್ತಿಚಿಹ್ನಗಳೆಂದು ಈಗಿನ ಐತಿಹಾಸಿಕರು ಹೇಳುತ್ತಿರುವರು.

ನಿಗ್ಲೀಭ ಮತ್ತು ರುಮ್ಮಿನದೇವಿಯ ಸ್ತಂಭಲಿಪಿಗಳನ್ನು ಓದಲು ನೇಪಾಲವೂ ತೆರಾಯಿ ಪ್ರದೇಶವೂ ಮೌರ್ಯ ಸಾಮ್ರಾಜ್ಯಕ್ಕೆ ಸೇರಿದ್ದವೆಂದು ತಿಳಿಯುವದು. ತೀರ್ಥಯಾತ್ರೆಯ ಕಾಲದಲ್ಲಿ ಅಶೋಕನು ನೇಪಾಲದ ಪರ್ವತ ಪ್ರದೇಶವಾದ ಚೂರಿಯಾಘಾಟ ಇಲ್ಲವೆ ಗೋರಾಮಸ್ತಾನವೆಂಬದನ್ನು ದಾಟಿ ನೇಪಾಲದಲ್ಲಿ ಹೋಗಿದ್ದನು. ಆಗ ಮಂಜುಪಾಟನ ಎಂಬದು ನೇಪಾಲದ ರಾಜಧಾನಿಯಾಗಿತ್ತು. ಕಿರಾತಜಾತಿಯು ಅಲ್ಲಿ ಆಳುತ್ತಿತ್ತು. ಹಳೆಯ ರಾಜಧಾನಿಯ ೨ ಮೈಲು ದಕ್ಷಿಣಕ್ಕೆ ಈಗಿನ ಲಲಿತಪತ್ತನವೆಂಬ ಸ್ಥಳದಲ್ಲಿ ಅಶೋಕನು ಹೊಸ ರಾಜಧಾನಿಯನ್ನು ಸ್ಥಾಪಿಸಿದ್ದನು. ಲಲಿತಪತ್ತನದ ಮಧ್ಯಸ್ಥಳದಲ್ಲಿ ಅಶೋಕನು ಕಟ್ಟಿಸಿದ ಶಿಲ್ಪಕೌಶಲ್ಯವುಳ್ಳ ಒಂದು ಮಂದಿರವು ಅರಮನೆಯ ದಕ್ಷಿಣ ದಿಕ್ಕಿನಲ್ಲಿ ಈಗಲೂ ಇರುವದು. ಆ ಪಟ್ಟಣದ ೪ ಮೂಲೆಗಳಲ್ಲಿ ಅಶೋಕನು ದಿಕ್ಕು ನಿರ್ಣಯಿಸುವದಕ್ಕಾಗಿ ಸ್ಥಾಪಿಸಿದ ಅರ್ಧಮಂಡಲಾಕಾರವಾದ ನಾಲ್ಕು ಸ್ತೂಪಗಳು ಈವೊತ್ತಿಗೂ ಇರುವವು. ಲಲಿತಪಟ್ಟಣದ ಸಣ್ಣ ದೇವಾಲಯವೂ ಒಂದು ಸಮಾಧಿಮಂದಿರವೂ ಅಶೋಕನ ಕೀರ್ತಿಚಿಹ್ನಗಳೆಂದು ಹೇಳಲ್ಪಡುವವು. ಪಾಟಲ, ಭಾಟಗಾಂವ, ಕೀರ್ತಿಪುರಗಳು ಮುಂದಿನ ಕಾಲದಲ್ಲಿ ಆ ಪರ್ವತ ಪ್ರದೇಶ ರಾಜಧಾನಿಯಾಗಿದ್ದವು. ಅಶೋಕ ಮಹಾರಾಜನು ತೀರ್ಥಯಾತ್ರೆಗೆ ಹೊರಟಾಗ ಆತನ ಮಗಳು ಚಾರುಮತಿಯು ಸಂಗಡ ಹೊರಟ್ಟಿದ್ದಳು. ಆಕೆಯೂ ಆಕೆಯ ಗಂಡನಾದ ದೇವಪಾಲನೂ ಪಶುಪತಿನಾಥದ ಬಳಿಯಲ್ಲಿ ದೇವಪತ್ತನವೆಂಬ ಪಟ್ಟಣವನ್ನು ಸ್ಥಾಪಿಸಿ ಅಲ್ಲಿ ವಾಸಮಾಡಹತ್ತಿದರು. ವೃದ್ಧಾಪ್ಯದಲ್ಲಿ ಅವರು ಅಲ್ಲಿ ಒಂದು ವಿಹಾರವನ್ನು ಕಟ್ಟಿಸಿ ಅದರಲ್ಲಿ ವಾಸಮಾಡುತ್ತಿದ್ದರು. ಈಗ ಆ ವಿಹಾರದ ಅವಶೇಷವು ಚಾರುಮತಿ ಸಂಘವೆಂದು ಕರೆಯಲ್ಪಡುತ್ತಿರುವದು. ಮೇಲೆ ಉಲ್ಲೇಖಿಸಿದ ಸಂಗತಿಗಳನ್ನೋದಿದರೆ ಕಾಶ್ಮೀರ ನೇಪಾಳ ದೇಶಗಳು ಅಶೋಕನ ಸಾಮ್ರಾಜ್ಯಕ್ಕೆ ಸೇರಿದ್ದವೆಂದು ಸ್ಪಷ್ಟವಾಗುವದು. ವಂಗದೇಶಕ್ಕೆ ಸೇರಿದ ಪಾಂಡುವರ್ಧನವೆಂಬ ಸ್ಥಾನದಲ್ಲಿ ಅಶೋಕನಿರ್ಮಿತವಾದ ಒಂದು ಸ್ತೂಪವಿರುತ್ತದೆಂದು ಹೇಳಿದೆ. ಅನುಗಾಂಗ ಪ್ರದೇಶವು ನಂದವಂಶದವರ ಅಧೀನದಲ್ಲಿತ್ತೆಂದು ಹಲವು ಕಡೆಯಲ್ಲಿ ಉಲ್ಲೇಖವುಂಟು. ಇದರಿಂದ ಅದು ಮೌರ್ಯರಾಜರ ಅಧಿಕಾರಕ್ಕೆ ಸೇರಿತ್ತೆಂದು ವ್ಯಕ್ತವಾಗುವದು. ಭರತ

ಖಂಡದ ಪೂರ್ವ ಪ್ರಾಂತದಲ್ಲಿರುವ ಬಹು ಪ್ರಾಚೀನವಾದ ಕಾಮರೂಪ ಇಲ್ಲವೆ ಪ್ರಾಗ್ಜ್ಯೋತಿಷಪುರವು ಮೌರ್ಯಸಾಮ್ರಾಜ್ಯಕ್ಕೆ ಸೇರಿತ್ತೆಂಬದಕ್ಕೆ ಪ್ರಮಾಣವೇನೂ ಇಲ್ಲ. ೭ನೆಯ ಶತಮಾನದಲ್ಲಿ ಹುವೆನ್‌ತ್ಸಾಂಗನು ಕಾಮರೂಪವು ಸಂಪೂರ್ಣ ಸ್ವತಂತ್ರ ರಾಜ್ಯವಿತ್ತೆಂದು ಉಲ್ಲೇಖಿಸಿರುವನು. ಆ ಕಾಲದಲ್ಲಿ ಅಲ್ಲಿ ಬೌದ್ಧಧರ್ಮವು ಹಬ್ಬಿತ್ತೆಂಬದಕ್ಕೂ ಆಧಾರವು ದೊರೆಯುವದಿಲ್ಲ.

ಮಹಾವಂಶದಲ್ಲಿ ಹೇಳಿರುವದೇನಂದರೆ ಭಾರತದ ಪೂರ್ವತೀರಕ್ಕಿರುವ ತಾಮ್ರಲಿಪ್ತಿ ನಗರದಿಂದ ಸಮುದ್ರಗಾಮಿಗಳಾದ ಹಡಗುಗಳು ಸಿಂಹಲಕ್ಕೆ ಹೋಗಿ ಬರುತ್ತಿದ್ದವು; ಕೆಲವರು ತಾಮ್ರಲಿಪ್ತಿಯು ಅನುಗಾಂಗ ಪ್ರದೇಶದೊಳಗಿನದೆಂದು ಊಹಿಸುತ್ತಾರೆ. ಮತ್ತು ಕೆಲವರು ತಾಮ್ರಲಿಪ್ತಿಯು ಬ್ರಹ್ಮದೇಶದ ರಾಜಧಾನಿಯೆಂದು ಹೇಳುತ್ತಾರೆ. ಅಶೋಕನು ತಾಮ್ರಲಿಪ್ತಿನಗರದಲ್ಲಿ ಒಂದು ಸ್ತೂಪವನ್ನು ಕಟ್ಟಿಸಿದ್ದನು. ಫಾಹೀಯಾನನು ಭಾರತ ಪ್ರವಾಸ ಕಾಲದಲ್ಲಿ ಅಲ್ಲಿ ೨೨ ಬೌದ್ಧ ವಿಹಾರಗಳನ್ನು ನೋಡಿದ್ದನು. ಕ್ರಿ. ೭ನೆಯ ಶತಮಾನದಲ್ಲಿ ಅವುಗಳಲ್ಲಿ ೭ ಮಾತ್ರ ಉಳಿದಿದ್ದವು. ಮೌರ್ಯರಾಜರ ಆಳಿಕೆಯಲ್ಲಿ ತಾಮ್ರಲಿಪ್ತಿಯು ಮುಖ್ಯ ಬಂದರವಾಗಿಯೂ ಸಮೃದ್ಧವಾದ ನಗರವಾಗಿಯೂ ಇತ್ತೆಂಬದಕ್ಕೆ ಸಂಶಯವಿಲ್ಲ. ಇದರ ಸುತ್ತಲಿನ ಪ್ರದೇಶಕ್ಕೆ ಸಂಸ್ಕೃತದಲ್ಲಿ ತಾಮ್ರಲಿಪ್ತಿ ಎಂದೂ ಪಾಲಿಯಲ್ಲಿ ತಾಮಲಿತ್ತಿ ಎಂದೂ ಹೇಳಿರುವದು. ಒಂದು ಕಾಲದಲ್ಲಿ ಈ ಪ್ರದೇಶದ ಸುತ್ತಳತೆಯು ೨೫೦ ಮೈಲು ಇತ್ತು ಇದರ ರಾಜಧಾನಿಗೂ ತಾಮ್ರಲಿಪ್ತಿ ಎಂದು ಹೆಸರು. ರಾಜಧಾನಿಯು ಉದ್ದಳತೆಯು ೧ ಕ್ರೋಶವು. ಇದರ ಈಗಿನ ಹೆಸರು ತಮಲೂಕ; ಒಂದು ಕಾಲದಲ್ಲಿ ಸಮುದ್ರವು ಪ್ರಾಚೀನ ತಾಮ್ರಲಿಪ್ತಿಯ ವರೆಗೆ ಹಬ್ಬಿತ್ತು. ತಾಮ್ರಲಿಪ್ತಿಯು ರೂಪನಾರಾಯಣ ಮತ್ತು ಹುಗ್ಲಿನದಿಯ ಸಂಗಮಸ್ಥಲ ಇವುಗಳಿಂದ ೬ ಕ್ರೋಶ ಉತ್ತರದಲ್ಲಿತ್ತು. ಈಗಿನ ತಮಲೂಕ ನಗರವು ಈ ಸ್ಥಳದಲ್ಲಿಯೇ ಇರುವದಾದರೂ ಈಗಿನ ತಮಲೂಕವೂ ಪ್ರಾಚೀನ ತಾಮ್ರಲಿಪ್ತಿಯೂ ಒಂದೇ ಎಂಬದಕ್ಕೆ ವಿಶೇಷ ಪ್ರಮಾಣವೇನೂ ಇಲ್ಲ. ತಾಮ್ರಲಿಪ್ತಿಯು ಸಮುದ್ರದಲ್ಲಿ ಮುಳುಗಿರುವದೆಂದು ಕೆಲವರ ಅಭಿಪ್ರಾಯವು.

ಅಶೋಕನು ತನ್ನ ಆಳಿಕೆಯ ೯ನೆಯ ವರ್ಷ ವಂಗೋಪಸಾಗರದ ದಂಡೆಯಲ್ಲಿ ಉತ್ತರಕ್ಕೆ ಮಹಾನದಿಯೂ ದಕ್ಷಿಣಕ್ಕೆ ಗೋದಾವರಿಯೂ ಮೇರೆಯಾಗಿರುವ ವಿಸ್ತಾರವಾದ ಕಲಿಂಗ ಪ್ರದೇಶವನ್ನು ತನ್ನ ಅಧಿಕಾರಕ್ಕೆ ಸೇರಿಸಿಕೊಂಡನು. ಓಡಿಯಾ, ಕಲಿಂಗ ಪ್ರದೇಶಗಳಲ್ಲಿ ಅತನು ಹಲವು ಸ್ತೂಪಗಳನ್ನು ಕಟ್ಟಿಸಿದ್ದನು. ಅಶೋಕನು ತನ್ನ ಗಿರಿಲಿಪಿಗಳಲ್ಲಿ ಚೋಲ, ಪಾಂಡ್ಯ ಸತಿಯ ಪುತ್ರ ಕೇರಲ, ಸಿಂಹಲ ಮೊದಲಾದ ಪ್ರದೇಶಗಳಲ್ಲಿ ತನ್ನ ಅಧಿಕಾರವು ನಡೆಯುತ್ತಿತ್ತೆಂದು ಉಲ್ಲೇಖಿಸಿರುವನು. ನೆಲ್ಲೂರಿನಿಂದ ಪದ್ಮಕೋಟಿಗೆ ಸೇರಿದ ಪ್ರದೇಶವು ಚೋಲಮಂಡಲ ಇಲ್ಲವೆ ಚೋಲರಾಜ್ಯ

ವೆಂದು ಕರೆಯಲ್ಪಡುತ್ತಿತ್ತು. ಉಡಿಯಾರ ಅಥವಾ ತ್ರಿಚನಾಪಲ್ಲಿಯು ಅದರ ರಾಜ ಧಾನಿಯಾಗಿತ್ತು ಐತಿಹಾಸಿಕರು ಚೋಲರಾಜ್ಯದ ಉತ್ತರ ಮೇರೆಯಾದ ಪೆನ್ನರ ನದಿಯಿಂದ ಅಶೋಕನ ಸಾಮ್ರಾಜ್ಯದ ಆರಂಭವಾಯಿತೆಂದು ಊಹಿಸುವರು. ಪದ್ಮ ಕೋಟೆಯು ದಕ್ಷಿಣಭಾಗವು ಪಾಂಡ್ಯದೇಶವೆನಿಸುತ್ತಿತ್ತು. ಪ್ಲಿನಿಯು ಕ್ರಿ. ೭೭ ರಲ್ಲಿ ಮಧುರೆಯು ಪಾಂಡ್ಯದೇಶದ ರಾಜಧಾನಿಯಿತ್ತೆಂದು ಉಲ್ಲೇಖಿಸಿರುವನು. ಮಲಬಾರ ದಿಂದ ಕನ್ಯಾಕುಮಾರಿಯವರೆಗಿನ ಎಲ್ಲ ಪ್ರದೇಶವು ಕೇರಲಕ್ಕೆ ಸೇರಿತ್ತು.

ಚೋಲ ಪಾಂಡ್ಯ ಕೇರಲ ಸತಿಯಪುತ್ರಗಳ ಹೊರತು ಸಮಗ್ರ ಭಾರತವರ್ಷವು ಅಶೋಕನ ಸಾಮ್ರಾಜ್ಯವು. ಈ ಮೇಲಿನ ಪ್ರದೇಶಗಳು ಅಶೋಕನ ರಾಜ್ಯಕ್ಕೆ ಸೇರಿರದಿದ್ದರೂ ಅಶೋಕನು ಅವುಗಳಲ್ಲಿ ಔಷಧಾಲಯ ಚಿಕಿತ್ಸಾಲಯಗಳನ್ನು ಕಟ್ಟಿಸಿದ್ದನೆಂದು ವರ್ಣನೆಯುಂಟು. ಅಶೋಕನ ಧರ್ಮಪ್ರಚಾರಕರು ಈ ಪ್ರದೇಶಗಳಲ್ಲಿ ಧರ್ಮೋಪದೇಶಮಾಡುತ್ತಿದ್ದರು. ಆದದರಿಂದ ಈ ಪ್ರದೇಶಗಳು ಮಾಂಡಲಿಕರಾಜ್ಯ ಗಳಾಗಿ ಇಲ್ಲವೆ ಮಿತ್ರರಾಜ್ಯಗಳಾಗಿ ಇದ್ದವೆಂದು ಸಿದ್ಧವಾಗುವದು. ಭಾರತದ ಪಶ್ಚಿಮ ಮೇರೆಯಲ್ಲಿ ಗುಜರಾಥದ ವಲ್ಲಭ ನಗರದಲ್ಲಿಯೂ, ಸಿಂಧುದೇಶಕ್ಕೆ ಸೇರಿದ ಸಣ್ಣ ಸಣ್ಣ ರಾಜ್ಯಗಳಲ್ಲಿಯೂ ಅಶೋಕನು ಕಟ್ಟಿಸಿದ ಹಲವು ಸ್ತೂಪಗಳ ಅವಶೇಷಗಳು ಕಂಡುಬರುವವು. ಸಮಗ್ರ ಖೋಟಾನ ರಾಜ್ಯವೂ ಖೋಟಾನ ನಗರವೂ ಅಶೋಕನ ಆಳಿಕೆಯಲ್ಲಿ ನೆಲಸಿದವೆಂದು ತಿಬೇಟದ ಗ್ರಂಥದಲ್ಲಿ ಉಲ್ಲೇಖವುಂಟು. ಅದೇ ಗ್ರಂಥ ದಲ್ಲಿ ಅಶೋಕನು ಬುದ್ಧನ ನಿರ್ವಾಣವಾದ ೨೫೦ ವರ್ಷಗಳ ತರುವಾಯ ಖೋಟಾ ನ ರಾಜ್ಯವನ್ನು ನೋಡುವದಕ್ಕೆ ಹೋಗಿದ್ದನೆಂದು ಹೇಳಿರುವದು. ಭಾರತವರ್ಷಕ್ಕೂ ಖೋಟಾನಕ್ಕೂ ಆ ಕಾಲದಲ್ಲಿ ಬಳಕೆಯು ಇತ್ತೆಂದ ಮಾತ್ರಕ್ಕೆ ಖೋಟಾನವು ಭಾರತವರ್ಷದ ಆಧೀನದಲಿತ್ತೆಂಬದನ್ನು ಐತಿಹಾಸಿಕರು ಒಪ್ಪುವದಿಲ್ಲ. ನೇಪಾಲ ಕಾಶ್ಮೀರ ಸೋಯಾಟ ಪರ್ವತಪ್ರದೇಶಸಹಿತವಾದ ಸಮಗ್ರ ಭಾರತವರ್ಷ, ಹಿಂದು ಕುಶ, ಅಫಗಾನಿಸ್ತಾನ, ಬಲೂಚಿಸ್ತಾನ, ಮೆಕ್ರಾನ ಸಿಂಧುಪ್ರದೇಶ, ಕಚ್ಛ, ಕಾಠೇ ವಾಡ ಮೊದಲಾದ ದೇಶಗಳು ಅಶೋಕನ ಸಾಮ್ರಾಜ್ಯಕ್ಕೆ ಸೇರಿದ್ದವೆಂದು ನಿಃಸಂಶ ಯವಾಗಿ ಸಿದ್ಧವಾಗಿರುವದು.

ರಾಜ್ಯಕಾರ್ಯದ ಅನುಕೂಲತೆಗಾಗಿ ವಿಶಾಲ ಮೌರ್ಯಸಾಮ್ರಾಜ್ಯವು ೫ ಭಾಗಗಳಾಗಿ ವಿಭಾಗಿಸಲ್ಪಟ್ಟಿತ್ತು. ಅವು:— ತಕ್ಷಶಿಲೆ, ಉಜ್ಜಯಿನಿ, ಸುವರ್ಣಗಿರಿ, ತೋಷಾಲಿ, ಮಗಧ. ಅಶೋಕನ ಅನುಶಾಸನಗಳಲ್ಲಿ ಈ ಎಲ್ಲ ವಿಭಾಗಗಳ ಉಲ್ಲೇ ಖವುಂಟು. ಅಶೋಕನು ಸಿಂಹಾಸನವನ್ನೇರುವದಕ್ಕೆ ಮುಂಚೆ ತಕ್ಷಶಿಲೆ ಉಜ್ಜಯಿನಿಗಳ ರಾಜಪ್ರತಿನಿಧಿಯಾಗಿ ನಿಯಮಿಸಲ್ಪಟ್ಟಿದ್ದನು. ಪಂಜಾಬ ಕಾಶ್ಮೀರಗಳು ತಕ್ಷಶಿಲೆಯ ರಾಜಪ್ರತಿನಿಧಿಯಿಂದ ಆಳಲ್ಪಡುತ್ತಿದ್ದವು. ಮಾಲವ ಗುಜರಾಥ ಸೌರಾಷ್ಟ್ರಗಳು ಉಜ್ಜ

ಯಿನಿಯು ಕೆಳಗೆ ಇದ್ದವು; ಸ್ವಲ್ಪ ಜಾಸ್ತಿ ಕಂಡಿತವಾದ ಬಿಲ್ಹಾರನು ಸುವರ್ಣಗಿರಿಯು ಪಶ್ಚಿಮಘಟ್ಟದ ತೀರ ಸಮೀಪದಲ್ಲಿತ್ತೆಂದು ಹೇಳುತ್ತಾನೆ. ಮೊದಲನೆಯ ಕ್ಷುದ್ರ ಗಿರಿಲಿಪಿಯಲ್ಲಿ "ಸುವರ್ಣ ಗಿರಿರಾಜಪುತ್ರನೇ" ಎಂದು ಸಂಬೋಧನೆಯಿರುವದು. ಇದರಿಂದ ಕೆಲವರು ಅಶೋಕನು ಭಿಕ್ಷುವ್ರತವನ್ನು ಸ್ವೀಕರಿಸಿದ ಮೇಲೆ ಅತನ ಮಗನು ಸುವರ್ಣಗಿರಿಯಲ್ಲಿದ್ದು ಮಗಧದ ರಾಜ್ಯಕಾರಭಾರವನ್ನು ನಾಗಿಸುತ್ತಿದ್ದನೆಂದು ಊಹಿಸುವರು. ಆದರೆ ಇದಕ್ಕೆ ವಿಶೇಷ ಪ್ರಮಾಣವು ಎಲ್ಲಿಯೂ ಸಿಗುವದಿಲ್ಲ. ಕಲಿಂಗದ ರಾಜಧಾನಿಯಾದ ತೋಷಾಲಿಯನ್ನು ಅಶೋಕನು ಸ್ಥಾಪಿಸಿದ್ದನು. ಅಲ್ಲಿ ಒಬ್ಬ ರಾಜ ಪ್ರತಿನಿಧಿಯು ಇದ್ದು, ಕಲಿಂಗಪ್ರದೇಶದ ಕಾರಭಾರವನ್ನು ನಾಗಿಸುತ್ತಿದ್ದನು. ಪಾಟಲಿಪುತ್ರವು ಮಗಧಸಾಮ್ರಾಜ್ಯದ ರಾಜಧಾನಿಯು. ಈ ಪಟ್ಟಣದಲ್ಲಿ ಚಕ್ರವರ್ತಿಯು ತಾನೇ ಇದ್ದು, ರಾಜ್ಯಕಾರಭಾರವನ್ನು ನಾಗಿಸುತ್ತಿದ್ದನು. ೨೦೦೦ ವರ್ಷಗಳ ಪೂರ್ವದಲ್ಲಿ ಮೌರ್ಯರಾಜರು ಬಹು ದೂರದಲ್ಲಿರುವ ಮಿಸರ ಮೊದಲಾದ ದೇಶಗಳಲ್ಲಿಯೂ ತಮ್ಮ ವರ್ಚಸ್ಸನ್ನು ನೆಲೆಗೊಳಿಸಿದ್ದರು. ಅಫಗಾಣಿಸ್ಥಾನ ಮೊದಲಾದ ಹೊರಗಿನ ಪ್ರದೇಶಗಳ ಮೇಲೆ ಅಶೋಕನು, ಮತ್ತೊಬ್ಬ ಅಧಿಕಾರಿಯನ್ನು ನಿಯಮಿಸಿದ್ದನೆಂದು ಐತಿಹಾಸಿಕರು ಊಹಿಸುವರು.

ಈ ಐದು ಭಾಗಗಳ ಹೊರತು ಸೋಮಾವಾ, ಇಸೀಲಾ ಮೊದಲಾದ ನಗರಗಳ ಉಲ್ಲೇಖವುಂಟು. ಈ ಮುಖ್ಯ ಮುಖ್ಯ ನಗರಗಳಲ್ಲಿ ಒಬ್ಬೊಬ್ಬ ಕಾಮದಾರನಿರುತ್ತಿದ್ದನು. ಮೌರ್ಯರಾಜ್ಯಶಾಸನಪದ್ಧತಿಯನ್ನು ನೋಡಿದರೆ ಆ ಕಾಲದಲ್ಲಿ ದೇಶದಲ್ಲಿ ಸಂಚರಿಸುವದಕ್ಕೆ ಅನುಕೂಲತೆಯು ಚನ್ನಾಗಿತ್ತೆಂದು ತೋರುವದು. ಇಲ್ಲದಿದ್ದರೆ ಪಾಟಲೀಪುತ್ರದಿಂದ ದೂರದಲ್ಲಿರುವ ಉಜ್ಜಯಿನಿ ತಕ್ಷಶಿಲೆ ಮೊದಲಾದ ಪಟ್ಟಣಗಳಲ್ಲಿ ರಾಜ್ಯಭಾರವು ಸರಿಯಾಗಿ ನಾಗುತ್ತಿರಲಿಲ್ಲ. ದೇಶದಲ್ಲಿ ಎಷ್ಟೋ ಪ್ರಶಸ್ತ ರಾಜಮಾರ್ಗಗಳಿದ್ದವು; ಜನರು ನೌಕಾಮಾರ್ಗದಿಂದಲೂ, ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸಂಚಾರ ಮಾಡುತ್ತಿದ್ದರು. ಮೆಗಾಸ್ಥನೀಸನು ಪಾಟಲೀಪುತ್ರದಿಂದ ಭಾರತದ ಉತ್ತರ ಪಶ್ಚಿಮ ಮೇರೆಗಳವರೆಗೆ ವಿಸ್ತಾರವಾದ ರಾಜಮಾರ್ಗಗಳಿದ್ದವೆಂದು ಉಲ್ಲೇಖಿಸಿರುವನು. ಈ ಎಲ್ಲ ಮಾರ್ಗಗಳಲ್ಲಿ ಗಿಣ್ಣಿ ಮೈಲಿಗೆ ಒಂದರಂತೆ ಅಂತರವನ್ನು ತೋರಿಸುವ ಕಂಬಗಳಿದ್ದವು. ದಾರಿಕಾರರಿಗೋಸ್ಕರ ಪ್ರತಿಯೊಂದು ಕಂಬದ ಬಳಿಯಲ್ಲಿ ಒಂದೊಂದು ಬಾವಿಯಿತ್ತು. ಮಾರ್ಗದಲ್ಲಿ ವಿಶ್ರಾಂತಿಗೋಸ್ಕರ ಧರ್ಮಶಾಲೆಗಳಿದ್ದವು. ಮಾರ್ಗದ ಬದಿಗಳಲ್ಲಿ ಫಲಪುಷ್ಪಗಳಿಂದ ಕಂಗೊಳಿಸುವ ಸಾಲುಮರಗಳಿದ್ದವು.

ಗ್ರೀಕ ಐತಿಹಾಸಿಕರು ಒರೆದ ವಿವರಣೆಯಿಂದಲೂ, ಚಾಣಕ್ಯಕೃತ ಅರ್ಥಶಾಸ್ತ್ರದಿಂದಲೂ ಮೌರ್ಯರಾಜರ ರಾಜ್ಯಕಾರಭಾರಪದ್ಧತಿಯು ಚೆನ್ನಾಗಿ ಗೊತ್ತಾಗುವದು. ಉಪಕ್ರಮಣಿಕೆಯಲ್ಲಿ ಈ ವಿಷಯವು ಸವಿಸ್ತರವಾಗಿ ವಿವರಿಸಲ್ಪಟ್ಟಿರುವದು.

ಚಂದ್ರಗುಪ್ತ ಮತ್ತು ಅಶೋಕ ಇವರ ರಾಜ್ಯಕಾರಭಾರಪದ್ಧತಿಯು ಬಹುಶಃ ಒಂದೇ ರೀತಿಯಿತ್ತು. ಆದರೆ ಚಂದ್ರಗುಪ್ತನ ರಾಜ್ಯಪದ್ಧತಿಯು ರಾಜಶಕ್ತಿಯ ಮೇಲೆ ಸ್ಥಾಪಿಸಲ್ಪಟ್ಟಿತ್ತು; ಅಶೋಕನ ರಾಜ್ಯಪದ್ಧತಿಯು ಧರ್ಮಶಕ್ತಿಯ ಮೇಲೆ ಸ್ಥಾಪಿಸಲ್ಪಟ್ಟಿತ್ತು. ಒಬ್ಬನ ಉದ್ದೇಶವು ರಾಜಶಕ್ತಿಯನ್ನು ಸ್ಥಾಪಿಸುವದರ ಕಡೆಗೆ, ಇನ್ನೊಬ್ಬನ ಉದ್ದೇಶವು ಧರ್ಮಶಕ್ತಿಯನ್ನು ಸ್ಥಾಪಿಸುವದರ ಕಡೆಗೆ ಇತ್ತು. ಈ ಉದ್ದೇಶವನ್ನು ಅಶೋಕನು ಹೇಗೆ ಕೊನೆಗಾಣಿಸಿದನೆಂಬದನ್ನು ಈ ಅಧ್ಯಾಯದಲ್ಲಿ ಸಂಕ್ಷೇಪವಾಗಿ ನಿವರಿಸುವೆವು.

ಅಶೋಕನ ಶಿಲಾಲಿಪಿಗಳನ್ನೋದಿದರೆ, ಕಾಮದಾರರಲ್ಲಿ ರಾಜಪ್ರತಿನಿಧಿಯು ತರುವಾಯ ರಾಜೂಕನೆಂಬವನು ಎಲ್ಲಕ್ಕೂ ಹೆಚ್ಚಿನವನೆಂದು ತಿಳಿದುಬರುವದು. ರಾಜೂಕರು ಕಂದಾಯ ಮತ್ತು ರಾಜ್ಯಶಾಸನ ಈ ಸಂಬಂಧದಿಂದ ಮುಖ್ಯಾಧಿಕಾರವುಳ್ಳವರಾಗಿದ್ದರು. ಅಪರಾಧಿಗಳನ್ನು ಶಿಕ್ಷಿಸುವದಕ್ಕೂ ಮತ್ತು ಯೋಗ್ಯರಾದವರಿಗೆ ಸನ್ಮಾನ ಮಾಡುವದಕ್ಕೂ ಅವರಿಗೆ ಪೂರ್ಣ ಅಧಿಕಾರವಿತ್ತು. ಪ್ರಜೆಗಳ ಸುಖದುಃಖಗಳ ಕಾರಣಗಳನ್ನು ಗೊತ್ತುಹಿಡಿದು, ಎಲ್ಲ ಪಕ್ರಾರದಿಂದ ಅವರ ಕಲ್ಯಾಣವಾಗುವಂತೆ ರಾಜೂಕರು ಯಾವಾಗಲೂ ಪ್ರಯತ್ನಿಸುತ್ತಿದ್ದರು. ಅವರು ಅಶೋಕನ ಧರ್ಮವಿಧಿಗಳನ್ನು ಪ್ರಜೆಗಳಿಗೆ ತಿಳಿಸುತ್ತಿದ್ದರು. ಮತ್ತು ಸತ್ಕಾರ್ಯ ಮಾಡುವದಕ್ಕೆ ಅವರಿಗೆ ಉತ್ತೇಜನ ಕೊಡುವದರಲ್ಲಿಯೂ ಯೋಗ್ಯರಾದವರಿಗೆ ಸನ್ಮಾನ ತೋರಿಸುವದರಲ್ಲಿಯೂ ರಾಜೂಕರು ತತ್ಪರರಾಗಿರುತ್ತಿದ್ದರು. ಅಶೋಕನರಪತಿಯ ಳನೆಯ ಸ್ತಂಭಲಿಪಿಯಲ್ಲಿ ಒಳ್ಳೇ ನಿಪುಣಳಾದ ದಾದಿಗೆ ಮಕ್ಕಳ ಪೋಷಣದ ಭಾರವನ್ನು ಅರ್ಪಿಸಿ ಮನುಷ್ಯರು ನಿಶ್ಚಿಂತರಾಗಿರುವಂತೆ ನಾನು ಪ್ರಜಾವರ್ಗದ ಸುಖಸಮೃದ್ಧಿಗಾಗಿ ರಾಜೂಕರನ್ನು ನಿಯಮಿಸಿ ನಿಶ್ಚಿಂತನಾಗಿರುತ್ತೇನೆ; ಸ್ವತಂತ್ರರಾಗಿ, ಶಾಂತಮನಸ್ಸಿನಿಂದ ಏನೂ ತೊಂದರೆ ಇಲ್ಲದೆ ಅವರು ತಮ್ಮ ತಮ್ಮ ಕರ್ತವ್ಯವನ್ನು ಮಾಡಬೇಕೆಂದು ಕಾರಭಾರದಲ್ಲಿ ಅವರಿಗೆ ಸಂಪೂರ್ಣ ಸ್ವತಂತ್ರತೆಯನ್ನು ಕೊಟ್ಟಿರುವೆನು." ಎಂದು ಪ್ರಕಟಿಸಿರುವನು. ನಿಜವಾಗಿ ರಾಜೂಕರು ರಾಜ್ಯಕಾರಭಾರದಲ್ಲಿ ಮಾಡಿದ ಅಪ್ಪಣೆಗೆ ಚಕ್ರವರ್ತಿಯ ಹೊರತು ಯಾರೂ ಎದುರು ನಿಲ್ಲುವಂತೆ ಇರಲಿಲ್ಲ. ರಾಜೂಕರ ಕೆಳಗೆ ಪ್ರದೇಶಿಕರೆಂಬವರು ಇರುತ್ತಿದ್ದರು. ಇವರು ರಾಜೂಕರ ಅಪ್ಪಣೆಗಳನ್ನು ಪಾಲಿಸಿ ಅವರಿಗೆ ರಾಜ್ಯಕಾರಭಾರದಲ್ಲಿ ಸಹಾಯ ಮಾಡುತ್ತಿದ್ದರು. ರಾಜೂಕರಿಗೂ ಪ್ರಾದೇಶಿಕರಿಗೂ ಮಹಾಮಾತ್ರ ಎಂಬ ಬೇರೊಂದು ಹೆಸರು ಇತ್ತು. ರಾಜೂಕರೂ ಪ್ರದೇಶಿಕರೂ ಯುಕ್ತರೂ ಅಯುಕ್ತರೂ ಕೂಡಿ ರಾಜಕಾರ್ಯಗಳನ್ನು ಸಾಗಿಸುತ್ತಿದ್ದರು. ಎಲ್ಲ ರಾಜಕಾರ್ಯಗಳು ಲೇಖಕರ ಮುಖಾಂತರ ನಡೆಯುತ್ತಿದ್ದವು. ಅಶೋಕ ಮಹಾರಾಜನ ಕಾಲದಲ್ಲಿ ರಾಜ್ಯದ ಒಳಕಾರಭಾರವು ಸುನಿಯಂತ್ರಿತವಾಗಿ ನಡೆದಿತ್ತೆಂಬದು ಇದರಿಂದ ಸ್ಪಷ್ಟವಾಗುವದು. ರಾಜೂಕರೂ ಪ್ರಾದೇಶಿಕರೂ ಯುಕ್ತರೂ

ಅಯುಕ್ತರೂ ಅನುಸಂಯಯ*ನದಲ್ಲಿ ರಾಜಕಾರ್ಯಗಳನ್ನು ಪ್ರತ್ಯಕ್ಷ ನೋಡಿ ನೆರೆದ ಪ್ರಜೆಗಳಿಗೆ ಧರ್ಮವಿಧಿಗಳ ವಿಷಯವಾಗಿ ಉಪದೇಶ ಮಾಡುತ್ತಿದ್ದರು.

ಅಯುಕ್ತರ ಕೆಲಸವು ಬಹುತರ ಶಾಸನಕಾರ್ಯವೇ ಆಗಿತ್ತು. ಇವರು ಸಾಮ್ರಾಜ್ಯದ ಎಲ್ಲ ಕಡೆಗಳಲ್ಲಿ ಶಾಂತತೆಯನ್ನು ಕಾಯುವದರಲ್ಲಿ ತೊಡಗಿರುತ್ತಿದ್ದರು. ಮಹಾಮಾತ್ರರ ಕೈಯಲ್ಲಿ ಒಂದೊಂದು ಪ್ರದೇಶದ ಶಾಸನಕಾರ್ಯವು ಅರ್ಪಿಸಲ್ಪಟ್ಟಿತ್ತು. ಇವರು ಅಪರಾಧಿ ನಿರಪರಾಧಿಗಳ ವಿಚಾರವನ್ನು ಮಾಡಿ ಕಾಯದೆಗನುಸರಿಸಿ ಶಿಕ್ಷೆಯನ್ನು ವಿಧಿಸುತ್ತಿದ್ದರು. ಇಂಗ್ಲಿಷ ಐತಿಹಾಸಿಕರು ರಾಜೂಕರು ಕಮಿಶನರರಂತೆಯೂ ಪ್ರಾದೇಶಿಕರು ಡಿಸ್ಟ್ರಿಕ್ಟ ಆಫೀಸರರಂತೆಯೂ ಇದ್ದರೆಂದು ಹೇಳುವರು. ಈ ಮತವು ಹೆಚ್ಚು ಸರಿಯಾಗಿಲ್ಲದಿದ್ದರೂ ಅವರ ಮತ್ತು ಇವರ ಕೆಲಸಗಳಲ್ಲಿ ಬಹುಮಟ್ಟಿಗೆ ಹೋಲಿಕೆ ಇತ್ತೆಂದು ತೋರುವದು. ಈ ಎಲ್ಲ ಹೆಚ್ಚಿನ ಕಾಮದಾರರ ಹೊರತು ಅಶೋಕನು ತನ್ನ ಅಳಿಕೆಯು ೧೪ನೆಯ ವರ್ಷ ಧರ್ಮಮಹಾಮಾತ್ರ ಎಂಬ ಹೊಸ ಕಾಮದಾರನ ಸ್ಥಳವನ್ನುಂಟುಮಾಡಿದನು. ಯೋನ, ಗಾಂಧಾರ, ಕಾಂಭೋಜ, ರಾಷ್ಟ್ರಿಕ, ಪಿತೀನಿಕ ದೇಶಗಳಲ್ಲಿಯೂ, ಮೇರೆಯಲ್ಲಿರುವ ಬೇರೆ ಬೇರೆ ಜಾತಿಗಳಲ್ಲಿಯೂ ಇವರು ಧರ್ಮಪ್ರಸಾರ ಮಾಡುವರು. ಎಲ್ಲ ಕಡೆಗೆ ಧರ್ಮವಿಧಿಗಳು ನೆಲೆಗೊಳ್ಳುವಂತೆಯೂ ಧರ್ಮವಿಧಿಗಳಿಗನುಸಾರವಾದ ಉಪದೇಶಗಳನ್ನು ಜನರು ಪಾಲಿಸುವಂತೆಯೂ ಧರ್ಮಮಹಾಮಾತ್ರರು ಯಾವಾಗಲೂ ನೋಡಿಕೊಳ್ಳುತ್ತಿದ್ದರು. ನ್ಯಾಯಕೋರ್ಟುಗಳಲ್ಲಿ ಯಾವನೊಬ್ಬ ಮುದುಕನು ಇಲ್ಲವೆ ನಿರಪರಾಧಿಯು ಇಲ್ಲವೆ ಬಹುಕುಟುಂಬಕನು ಅನ್ಯಾಯವಾಗಿ ಶಿಕ್ಷೆಯನ್ನು ಹೊಂದುತ್ತಾನೆಂಬದು ಈ ಧರ್ಮಮಹಾಮಾತ್ರರಿಗೆ ತಿಳಿದರೆ ಕೂಡಲೆ ಅವರು ಆ ಜನರನ್ನು ಬಿಡುಗಡೆ ಮಾಡುತ್ತಿದರು. ಜಾತಿಧರ್ಮಗಳ ಭೇದವಿಲ್ಲದೆ ಎಲ್ಲ ಜನರ ಉನ್ನತಿಗಾಗಿ ಅಶೋಕನು ಅವಲಂಬಿಸಿದ ಧರ್ಮವನ್ನು ಇವರು ಪ್ರಸಾರ ಮಾಡುತ್ತಿದ್ದರು. ಧರ್ಮಮಹಾಮಾತ್ರರ ತರುವಾಯ ಧರ್ಮಯುಕ್ತರೆಂಬ ಕಾಮದಾರರು ಇದ್ದರು. ಇವರು ಧರ್ಮಮಹಾಮಾತ್ರರಿಗೆ ಎಲ್ಲ ಕೆಲಸಗಳಲ್ಲಿ ಸಹಾಯ ಮಾಡುವರು. ಹೆಂಗಸರು ಕೂಡ ಧರ್ಮಮಹಾಮಾತ್ರರ ಸ್ಥಳದಲ್ಲಿ ನಿಯಮಿಸಲ್ಪಡುತ್ತಿದ್ದರು. ಇವರು ಸ್ತ್ರೀಯರ ಉನ್ನತಿಗಾಗಿ ಪ್ರಯತ್ನಿಸುವರು. ಸಾಮ್ರಾಜ್ಯದಲ್ಲಿರುವ ಎಲ್ಲ ಸಾಗಾದ ಭೂಮಿಗಳು ರಾಜಸಂಪತ್ತಿಯೆಂದು ಎಣಿಸಲ್ಪಡುತ್ತಿದ್ದವು. ಕಂದಾಯದ ಮೇಲಿನ ಕಾಮದಾರರು ನಿಯಮಿತವಾದ ಕಂದಾಯವನ್ನೇ ಎತ್ತುವರು. ಪರದೇಶದ ಐತಿಹಾಸಿಕರಲ್ಲಿ ಕೆಲವರು ಬೆಳೆದ ಧಾನ್ಯದ ಳನೆಯ ಅಂಶವನ್ನು ಎತ್ತುತ್ತಿ

* ಪ್ರತಿ ಐದು ವರ್ಷಗಳಿಗೊಮ್ಮೆ ಕಾಮದಾರರು ಕೈಕೆಳಗಿನ ಅಧಿಕಾರಿಗಳ ಮತ್ತು ಪ್ರಜೆಗಳ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವದಕ್ಕೆ ದೇಶದಲ್ಲಿ ಸಂಚರಿಸುತ್ತಿದ್ದರು. ಈ ಸಂಚಾರಕ್ಕೆ ಅನುಸಂಯಯನ ಎಂದು ಹೆಸರು,

ದ್ದರೆಂದೂ, ಕೆಲವರು ೬ನೆಯ ಭಾಗವನ್ನು ಎತ್ತುತ್ತಿದ್ದರೆಂದೂ ಹೇಳುವರು. ಆದರೆ ಪರದೇಶದವರ ಈ ವಿಚಾರವು ಸಂಪೂರ್ಣ ನಿಜವೆಂದು ಹೇಳಲಾಗುವದಿಲ್ಲ. ನೀವಾರದ ೬ನೆಯ ಅಂಶವು ರಾಜಕರವೆಂದು ಶಾಸ್ತ್ರಗಳಲ್ಲಿ ಹೇಳಿದೆ. ಮೌರ್ಯರಾಜರು ಈ ಕಂದಾಯದ ಪ್ರಮಾಣವನ್ನು ಹೆಚ್ಚಿಸಿದ್ದರೆಂಬದಕ್ಕೆ ಆಧಾರವೇನೂ ಇಲ್ಲ. ಧಾನ್ಯದ ೬ನೆಯ ಭಾಗವೇ ಎತ್ತಲ್ಪಡುತ್ತಿತ್ತೆಂಬದು ಸಂಭವನೀಯವಾಗಿರುವದು. ಕೃಷಿಕರಲ್ಲದೆ, ಬಡಿಗರು, ಕಮ್ಮಾರರು, ಕಣಿಗಾರರು ಕರವನ್ನು ಕೊಡುತ್ತಿದ್ದರೆಂಬದಕ್ಕೆ ಪ್ರಮಾಣಗಳುಂಟು. ಮೇಲೆ ಹೇಳಿದ ಕಾಮದಾರರಲ್ಲದೆ ಪ್ರತಿವೇದಕರೆಂಬ ಮೇಲ್ತರದ ಕಾಮದಾರರು ಇದ್ದರು. ಮೆಗಾಸ್ಥನೀಸನು ಹೇಳುವದೇನಂದರೆ ಈ ಪ್ರತಿವೇದಕರು ರಾಜ್ಯದೊಳಗೆ ನಡೆಯುವ ಎಲ್ಲ ವರ್ತಮಾನಗಳನ್ನು ಅರಸನ ಬಳಿಯಲ್ಲಿ ಗುಪ್ತವಾಗಿ ಹೇಳುತ್ತಿದ್ದರು. ಇವರಲ್ಲಿ ಎರಡು ವರ್ಗಗಳಿದ್ದವು. ಒಂದು ವರ್ಗದವರು ವೇಶ್ಯಾಸ್ತ್ರೀಯರ ಸಹಾಯದಿಂದ ಪಟ್ಟಣದ ಗುಪ್ತಸಂಗತಿಗಳನ್ನು ಸಂಗ್ರಹಿಸಿ ಅರಸನಿಗೆ ತಿಳಿಸುತ್ತಿದ್ದರು. ಇನ್ನೊಂದು ವರ್ಗದವರು ದಂಡಿನ ಪಾಳಯಗಳಲ್ಲಿ ತಿರುಗಾಡಿ ಗಣಿಕಾಸ್ತ್ರೀಯರ ಸಹಾಯದಿಂದ ಯುದ್ಧದ ಒಳತಂತ್ರಗಳನ್ನು ಮತ್ತು ಸೈನ್ಯದೊಳಗಿನ ಕಾಮದಾರರ ಮತ್ತು ಬೇರೆ ಕಾಮದಾರರ ಕಾರ್ಯಗಳನ್ನು ಗುಪ್ತವಾಗಿ ಅರಸನಿಗೆ ತಿಳಿಸುತ್ತಿದ್ದರು. ನಿಪುಣರೂ ನಂಬಿಗೆಯುವರೂ ಆದ ಜನರೇ ಪ್ರತಿವೇದಕರಾಗಿ ನಿಯುಮಿಸಲ್ಪಡುತ್ತಿದ್ದರು. ಈ ಎಲ್ಲ ಕಾಮದಾರರ ಹೊರತು ಹಲವು ಆಲೋಚನಾ ಸಭೆಗಳು ರಾಜ್ಯಶಾಸನದಲ್ಲಿ ಬಹಳ ಮಟ್ಟಿಗೆ ದಕ್ಷತೆಯನ್ನು ತೋರಿಸುತ್ತಿದ್ದವು.

ಯುದ್ಧವಿಭಾಗದಲ್ಲಿ ೬ ವರ್ಗಗಳಿದ್ದವು ಪ್ರತಿಯೊಂದು ವರ್ಗದಲ್ಲಿ ಐದೈದುಜನ ಸಭ್ಯರು ಇರುತ್ತಿದ್ದರು. ನೌಕಾಯುದ್ಧವಿಭಾಗ, ಸಾಮಗ್ರೀವಿಭಾಗ, ಪಾದಾತಿಕವಿಭಾಗ, ಅಶ್ವಾರೋಹಿ, ರಥಿಕ, ಗಜ ಎಂಬವು ೬ ವರ್ಗಗಳು. ಈ ೬ ವರ್ಗಗಳಿಂದ ಯುದ್ಧದ ಕಾರ್ಯಗಳು ಸಾಗಿಸಲ್ಪಡುತ್ತಿದ್ದವು. ರಾಜಧಾನಿಯಲ್ಲಿ ಕಾರಭಾರವನ್ನು ಸಾಗಿಸುವದಕ್ಕೂ ಇದೇ ಮೇರೆಗೆ ನಿಕಾಯಗಳಿದ್ದವು. ವಾಣಿಜ್ಯಶಿಲ್ಪನಿಕಾಯವು ರಾಜಧಾನಿಯ ವಾಣಿಜ್ಯಶಿಲ್ಪಗಳ ಮೇಲ್ವಿಚಾರಣೆಯನ್ನು ಮಾಡಿ ವಣಿಜರಿಗೂ, ಶಿಲ್ಪಿಗಳಿಗೂ ಹಲವು ಬಗೆಯಿಂದ ಉತ್ಸಾಹಕೊಡುತ್ತಿತ್ತು. ಆತಿಥ್ಯನಿಕಾಯವು ಪರದೇಶದಿಂದ ಬಂದವರಿಗೆ ಯೋಗ್ಯವಾದ ಸತ್ಕಾರ ಮರ್ಯಾದೆಗಳನ್ನು ಮಾಡಿ ಅವರಿಗೆ ಬೇಕಾದ ಸಹಾಯಮಾಡುತ್ತಿದ್ದರು. ಪರದೇಶದವರು ಬೇನೆಬಿದ್ದರೆ ಔಷಧೋಪಚಾರವು ಸರಿಯಾಗಿ ಮಾಡಲ್ಪಡುತ್ತಿತ್ತು. ಪರದೇಶದ ಮನುಷ್ಯನು ಮೃತನಾದರೆ ಅವನ ಆಸ್ತಿಯು ಅವನ ಉತ್ತರಾಧಿಕಾರಿಗೆ ಕೊಡಲ್ಪಡುತ್ತಿತ್ತು. ಯಾವನೊಬ್ಬ ಪರದೇಶದ ಅಭ್ಯಾಗತನು ಸಾಮ್ರಾಜ್ಯದೊಳಗಿನ ಯಾವದೊಂದು ರಮ್ಯವಾದ ಪ್ರದೇಶವನ್ನು ಇಲ್ಲವೆ ದೇಶವನ್ನು ನೋಡಲಪೇಕ್ಷಿಸಿದರೆ ಅವನೊಡನೆ ರಾಜಸೇವಕರು

ಕಳುಹಲ್ಪಡುತ್ತಿದ್ದರು. ಜನನಮರಣನಿಕಾಯವು ಪ್ರಜೆಗಳ ಜನನಮರಣಗಳ ಲೆಕ್ಕವನ್ನು ಇಡುತ್ತಿತ್ತು. ವಾಣಿಜ್ಯನಿಕಾಯವು ಇಡೀ ರಾಜ್ಯದ ವ್ಯಾಪಾರದ ಮೇಲ್ವಿಚಾರಣೆಯನ್ನು ಮಾಡುತ್ತಿತ್ತು. ಈ ನಿಕಾಯದವರು ವ್ಯಾಪಾರದ ಸರಕುಗಳ ಪರಿಮಾಣವನ್ನು ಜನರ ತಿಳುವಳಿಕೆಗೋಸ್ಕರ ಪ್ರಸಿದ್ಧಪಡಿಸುವರು. ಮತ್ತು ಯೋಗ್ಯಕಾಲದಲ್ಲಿ ಪ್ರಕಟವಾಗಿ ಸರಕುಗಳ ಮಾರಾಟವಾಗುವಂತೆ ವಿಶೇಷವಾಗಿ ಲಕ್ಷವಿಡುವರು.

ಸರಕುಗಳ ಬೆಲೆಯನ್ನು ಕೂಡ ಈ ನಿಕಾಯದವರು ನಿರ್ಣಯಿಸುತ್ತಿದ್ದರು. ಯಾವನಾದರೂ ಒಂದಕ್ಕಿಂತ ಹೆಚ್ಚು ಸರಕುಗಳ ವ್ಯಾಪಾರವನ್ನು ಮಾಡುವದಾದರೆ ಅವನು ಹೆಚ್ಚು ಕರವನ್ನು ಕೊಡಬೇಕಾಗುತ್ತಿತ್ತು. ಹಸ್ತಜಾತ ಶಿಲ್ಪನಿಕಾಯವು ಕೈಕೆಲಸಗಳ ವಿಷಯವಾಗಿ ಹಲವು ನೇಮಗಳನ್ನು ಮಾಡುತ್ತಿತ್ತು. ಶುಲ್ಕನಿಕಾಯವು ವ್ಯಾಪಾರದ ಸರಕುಗಳ ಮೇಲೆ ಸುಂಕವನ್ನು ಗೊತ್ತುಮಾಡುತ್ತಿತ್ತು. ಯಾವನಾದರೂ ಅದನ್ನು ಕೊಡುವದಕ್ಕೆ ತಪ್ಪಿದರೆ ಅವನಿಗೆ ದೇಹಾಂತ ಶಿಕ್ಷೆಯ ವ್ಯವಸ್ಥೆಯು ಇತ್ತು. ಇದು ಅತಿಶಯೋಕ್ತಿಯೆಂದು ನಮಗೆ ತೋರುವದು. ಯಾವನಾದರೂ ಆ ವಿಷಯದಲ್ಲಿ ವಂಚನೆಮಾಡಿದರೆ ಅವನಿಗೆ ಆ ಕಾಲಕ್ಕೆ ದೊಡ್ಡ ಶಿಕ್ಷೆಯ ವ್ಯವಸ್ಥೆಯು ಶಾಸ್ತ್ರದಲ್ಲಿ ಇತ್ತು. ಆದರೆ ಅಷ್ಟಕ್ಕೇ ಪ್ರಾಣವಧವು ಯಾವ ಶಾಸ್ತ್ರದಲ್ಲಿಯೂ ಹೇಳಲ್ಪಟ್ಟಿತ್ತೆಂದು ತೋರುವದಿಲ್ಲ. ಅದರಲ್ಲಿಯೂ ಅಶೋಕನಂಥ ನರಪತಿಯ ಆಳಿಕೆಯಲ್ಲಿ ಸುಂಕವನ್ನು ತಪ್ಪಿಸಿದ ಅಪರಾಧಕ್ಕಾಗಿ ಪ್ರಾಣದಂಡವು ವಿಧಿಸಲ್ಪಟ್ಟಿತ್ತೆಂಬದು ಜನ್ಯಾಗಿ ತೋರುವದಿಲ್ಲ. ಈ ನಿಕಾಯಗಳ ಸಭ್ಯರೆಲ್ಲ ಚಕ್ರವರ್ತಿಯಿಂದ ನಿಯಮಿಸಲ್ಪಟ್ಟವರೋ ಇಲ್ಲವೆ ಪ್ರಜೆಗಳಿಂದ ಆರಿಸಲ್ಪಟ್ಟವರೋ ಈ ವಿಷಯವನ್ನು ತಿಳಿಯುವ ಉಪಾಯವು ಈಗ ಇಲ್ಲ. ಏನೇ ಇರಲಿ ನಿಕಾಯಗಳಲ್ಲಿ ಇಲ್ಲವೆ ಮಂತ್ರಿಸಭೆಗಳಲ್ಲಿ ಯೋಗ್ಯರಾದ ಸಭ್ಯರೇ ಇರುತ್ತಿದ್ದರೆಂದು ಊಹಿಸಿದರೆ ತಪ್ಪಾಗಲಾರದು. ಅಶೋಕನು ತನ್ನ ಆಳಿಕೆಯಲ್ಲಿ ಬೇರೆ ಬೇರೆ ವಿಭಾಗಗಳ ಮೇಲೆ ದೊಡ್ಡ ದೊಡ್ಡ ಕಾಮದಾರರನ್ನು ನಿಯಮಿಸಿದ್ದನೆಂದು ಶಿಲಾಲಿಪಿಗಳಲ್ಲಿ ಉಲ್ಲೇಖವುಂಟು. ಆದರೆ ನಿಕಾಯಗಳಲ್ಲಿ ಸಂಬಳವುಳ್ಳ ಕಾಮದಾರರು ಇದ್ದರೆಂಬದರ ಉಲ್ಲೇಖವಿಲ್ಲ. ಈ ವಿಷಯದಲ್ಲಿ ಇದುವರೆಗೆ ಸ್ಪಷ್ಟವಾದ ಆಧಾರವು ದೊರೆತಿಲ್ಲ. ರಾಜಮಾರ್ಗಗಳನ್ನು ಮಾಡಿಸುವದು, ಮಾರ್ಗಗಳ ಬದಿಗಳಲ್ಲಿ ಕೆರೆ-ಬಾವಿಗಳನ್ನು ಕಡಿಸುವದು, ಒಕ್ಕಲತನದ ಉನ್ನತಿಗಾಗಿ ನದಿ-ಕೆರೆ ಮುಂತಾದವುಗಳಿಂದ ನೀರನ್ನು ಪೂರೈಸುವದು, ಈ ಕೆಲಸಗಳಿಗಾಗಿ ಪ್ರತ್ಯೇಕ ವ್ಯವಸ್ಥೆಯು ಇತ್ತು. ರುದ್ರದಾಮನದ ಶಾಸನದಿಂದ ತಿಳಿಯುವದೇನಂದರೆ— ಸೌರಾಷ್ಟ್ರಕ್ಕೆ ತುಶಾಸ್ಪನೆಂಬ ಪಾರಸಿಕ ಕಾರಭಾರಿಯನ್ನು ಅಶೋಕನು ನಿಯಮಿಸಿದ್ದನು. ಅವನು ಚಂದ್ರಗುಪ್ತನು ಕಟ್ಟಿಸಿದ ಗಿರ್ನಾರದ ಕೆರೆಯ ನೀರು ಯಾವಾಗಲೂ ಉಪಯೋಗಿಸಲಿಕ್ಕೆ ಒರುವಂತೆ ಒಂದು ಹೊಸ ಕಾಲುವೆಯನ್ನೂ ಸೇತುವೆಯನ್ನೂ ಕಟ್ಟಿಸಿದ್ದನು.

ಈ ಸಂಗತಿಯನ್ನು ಆಲೋಚಿಸಿದರೆ ಒಕ್ಕಲತನದ ಉತ್ಕರ್ಷಕ್ಕೂ, ಪ್ರಜಾಜನದ ಸುಖಾಭಿವೃದ್ಧಿಗೂ ಪಾಟಲೀಪುತ್ರ ರಾಜಧಾನಿಯಿಂದ ಸಾವಿರಾರು ಕ್ರೋಶಗಳ ದೂರದಲ್ಲಿ ಕೂಡ, ಆಡಳಿತವು ಸುವ್ಯವಸ್ಥಿತವಾಗಿ ನಡೆದಿತ್ತೆಂದು ಸ್ಪಷ್ಟವಾಗಿ ತೋರುವದು.

ಅಶೋಕನ ಆಳಿಕೆಯಲ್ಲಿ ಚಿಕಿತ್ಸಾಶಾಸ್ತ್ರವೂ ಪೂರ್ಣವಾಗಿ ಬೆಳವಣಿಗೆಯನ್ನು ಹೊಂದಿತ್ತು. ಅಲ್ಲಲ್ಲಿ ಚಿಕಿತ್ಸಾಲಯಗಳನ್ನು ಸ್ಥಾಪಿಸುವದೂ, ಔಷಧಾಲಯಗಳನ್ನು ಕಟ್ಟಿಸುವದೂ, ಔಷಧದ ಗಿಡ-ಮೂಲಿಕೆಗಳನ್ನು ಸಂಗ್ರಹಿಸುವದೂ ಈ ಕಾರ್ಯಗಳಲ್ಲಿ ಚಕ್ರವರ್ತಿಯು ಚನ್ನಾಗಿ ಲಕ್ಷಗೊಡುತ್ತಿದ್ದನು. ಪಶುಚಿಕಿತ್ಸೆಗಾಗಿ ಬೇರೆ ಚಿಕಿತ್ಸಾಲಯಗಳ ವ್ಯವಸ್ಥೆಯು ಇತ್ತು. ಭಾರತವರ್ಷದಲ್ಲಿ ಪೂರ್ವಕಾಲದಿಂದ ಧರ್ಮಾರ್ಥವಾಗಿ ಔಷಧೋಪಚಾರ ದೊರೆಯುವ ಅನುಕೂಲತೆ ಇಂತ್ತೆಬದರ ಉಲ್ಲೇಖವು ಉಂಟು. ಅಶೋಕನ ದಯಾಪೂರ್ಣ ಹೃದಯದಲ್ಲಿ ರೋಗಪೀಡಿತರ ಆರ್ತಧ್ವನಿಯಿಂದ ದಯಾರಸವು ಉಕ್ಕಿ ಒರುತ್ತಿತ್ತು. ಮೂಕ ಪಶು-ಪಕ್ಷಿಗಳ ರೋಗಪೀಡೆಯು ಕೂಡ ಅತನ ಮರ್ಮಸ್ಥಾನಕ್ಕೆ ಹೋಗಿ ಮುಟ್ಟಿತ್ತು. ಆದದರಿಂದಲೇ ಅತನು ಔಷಧಾಲಯು, ಪಶುಚಿಕಿತ್ಸಾಲಯು ಮೊದಲಾದವುಗಳನ್ನು ರಾಜ್ಯದಲ್ಲಿ ಬೇಕಾದಷ್ಟು ಕಟ್ಟಿಸಿದ್ದನು. ಮಗಧದಲ್ಲಿ ಉತ್ತಮ ಚಿಕಿತ್ಸಕರ ಕೊರತೆ ಇರಲಿಲ್ಲ. ಭಿಷಕ್ಕುಲತಿಲಕನೆನಿಸಿದ ಜೀವಕನು ಮಗಧದಲ್ಲಿ ಮತವನ್ನು ಕಟ್ಟಿಸಿ ಸಾವಿರಾರು ಜನ ವಿದ್ಯಾರ್ಥಿಗಳಿಗೆ ಚಿಕಿತ್ಸಾ ವಿದ್ಯೆಯ ಶಿಕ್ಷಣವನ್ನು ಕೊಡುತ್ತಿದನು. ಅವನು ಮುಪ್ಪಿನಲ್ಲಿ ಗೌತಮಬುದ್ಧನ ಚಿಕಿತ್ಸಕನಾಗಿ ನಿಯುಮಿಸಲ್ಪಟ್ಟಿದ್ದನೆಂದು ವಾರ್ತೆಯುಂಟು. ಆತನ ಬಳಿಯಲ್ಲಿ ಶಿಕ್ಷಣ ಹೊಂದಿದ ಎಷ್ಟೋ ವಿದ್ಯಾರ್ಥಿಗಳು ಮಗಧದಲ್ಲಿ ಚಿಕಿತ್ಸಾವೃತ್ತಿಯನ್ನು ಮಾಡುತ್ತಿದ್ದರು. ಮಗಧದ ಇತಿಹಾಸವನ್ನು ನೋಡಿದರೆ ಜೀವಕನು ಎಷ್ಟೋ ಜನ ದೇಶಸಂಚಾರಕ ಚಿಕಿತ್ಸಕರನ್ನು ತಯಾರಿಸಿದ್ದನೆಂದು ಗೊತ್ತಾಗುವದು. ಇವರು ಊರೂರಿಗೆ ಹೋಗಿ ಚಿಕಿತ್ಸೆಯನ್ನು ಮಾಡುತ್ತಿದ್ದರು. ಅಶೋಕನು ತನ್ನ ರಾಜ್ಯದಲ್ಲೆಲ್ಲ ಚಿಕಿತ್ಸಾಲಯು ಮೊದಲಾದವುಗಳನ್ನು ಸ್ಥಾಪಿಸಿದ್ದನಷ್ಟೇ ಅಲ್ಲ; ಅವುಗಳ ವೆಚ್ಚವನ್ನು ಬೊಕ್ಕಸದಿಂದ ಕೊಡುವ ವ್ಯವಸ್ಥೆಯನ್ನು ಮಾಡಿಸಿದ್ದನು.

ಚೋಲ, ಪಾಂಡ್ಯ, ಸತಿಯಪುತ್ರ, ಕೇರಲ, ಸಿಂಹಲ ಮೊದಲಾದ ದೇಶಗಳು ಅಶೋಕನ ಪ್ರಾಧಾನ್ಯವನ್ನು ಒಪ್ಪುತ್ತಿದ್ದವು. ಗ್ರೀಕರಾಜನಾದ ಅಂಟಿಓಕಸನ ರಾಜ್ಯದವರೆಗೆ ಆತನ ಪ್ರತಾಪವು ನೆಲೆಗೊಂಡಿತ್ತು. ಐತಿಹಾಸಿಕರ ಮತದಂತೆ ಮೇಲಿನ ಚೋಲ ಮೊದಲಾದ ಪ್ರದೇಶಗಳು ಅಶೋಕನ ಸಾಮ್ರಾಜ್ಯಕ್ಕೆ ಒಳಪಟ್ಟಿರಲಿಲ್ಲ. ಆ ಕಾಲದಲ್ಲಿ ಅವು ಸ್ವತಂತ್ರ ರಾಜ್ಯಗಳೆಂದು ಎಣಿಸಲ್ಪಡುತ್ತಿದ್ದವು. ಆದರೂ ಅವು ಅಶೋಕನ ಮಾಂಡಲಿಕ ರಾಜ್ಯಗಳಾಗಲಿ ಮಿತ್ರರಾಜ್ಯಗಳಾಗಲಿ ಆಗಿರಬಹುದೆಂದು

ತೋರುವದು. ಒಂದು ವೇಳೆ ಆ ರಾಜರು ಸ್ವತಂತ್ರರಾಗಿ ಇದ್ದರೆ ತಮ್ಮ ರಾಜ್ಯದಲ್ಲಿ ಅಶೋಕನು ಕೀರ್ತಿಸ್ತಂಭಗಳನ್ನು ನಿಲ್ಲಿಸುವದಕ್ಕೂ, ಚಿಕಿತ್ಸಾಲಯ ಮೊದಲಾದವುಗಳನ್ನು ಸ್ಥಾಪಿಸುವದಕ್ಕೂ ಸಮ್ಮತಿಸುತ್ತಿರಲಿಲ್ಲವೆಂದು ತೋರುವದು. ಏನೇ ಇರಲಿ; ಈ ವರ್ಣನೆಯಿಂದ ಅಶೋಕನು ತನ್ನ ಸಾಮ್ರಾಜ್ಯದಲ್ಲಷ್ಟೇ ಅಲ್ಲ; ತನ್ನ ಶ್ರೇಷ್ಠತ್ವವನ್ನೊಪ್ಪುವ ರಾಜ್ಯಗಳಲ್ಲಿಯೂ ತನ್ನ ಮಿತ್ರರಾಜ್ಯಗಳಲ್ಲಿಯೂ ಮಾಂಡಲಿಕ ರಾಜ್ಯಗಳಲ್ಲಿಯೂ ಚಿಕಿತ್ಸಾಲಯ ಮೊದಲಾದವುಗಳನ್ನು ಸ್ಥಾಪಿಸಿದ್ದನೆಂದು ವ್ಯಕ್ತವಾಗುವದು.

ಅಶೋಕನ ರಾಜ್ಯಶಾಸನಪದ್ಧತಿಯು ಆತನ ಅಂತರ್ದೃಷ್ಟಿ, ಬುದ್ಧಿ-ಶಕ್ತಿಗಳನ್ನು ಚನ್ನಾಗಿ ವ್ಯಕ್ತಪಡಿಸುವದು. ಅಶೋಕನು ತನ್ನ ಮಕ್ಕಳಂತೆ ಪ್ರಜೆಗಳನ್ನು ಪಾಲಿಸುತ್ತಿದ್ದನೆಂಬದು ಆತನ ಶಿಲಾಲಿಪಿ ಸ್ತಂಭಲಿಪಿಗಳಿಂದ ಗೊತ್ತಾಗುವದು. ಪ್ರಜೆಗಳ ಕೊರತೆಗಳನ್ನು ಕೇಳಿಕೊಳ್ಳುವದಕ್ಕೆ ಆತನು ಯಾವಾಗಲೂ ತತ್ಪರನಾಗಿರುತ್ತಿದ್ದನು. ಪ್ರಜೆಗಳು ನನ್ನ ಮಕ್ಕಳು; ನನ್ನ ಮಕ್ಕಳ ಸುಖ-ಕಲ್ಯಾಣಗಳನ್ನು ಬಯಸುವಂತೆ ಪ್ರಜೆಗಳ ಸುಖ-ಕಲ್ಯಾಣಗಳನ್ನು ಬಯಸುವೆನು'' ಎಂದು ಅನ್ನುತ್ತಿದ್ದನು. ರಾಜ್ಯದ ಪ್ರಜೆಗಳೊಡನೆಯೂ, ರಾಜ್ಯದ ಮೇರೆಯಲ್ಲಿರುವ ಪ್ರಜೆಗಳೊಡನೆಯೂ, ನೀವೂ ಇದೇ ಪ್ರಕಾರ ನಡೆದುಕೊಳ್ಳಿರೆಂದು ಕಾಮದಾರರಿಗೆ ಹೇಳುತ್ತಿದ್ದನು. ಯೋಗ್ಯವಾದ ಉಪದೇಶ, ಮತ್ತು ಆಚರಣೆ ಇವುಗಳಿಂದ ಪ್ರಜೆಗಳನ್ನು ತಿದ್ದುವದಕ್ಕೂ, ಸುಸ್ವಭಾವದವರನ್ನು ಮಾಡುವದಕ್ಕೂ ಆತನು ಪ್ರಯತ್ನಿಸುವನು. ರಾಜ್ಯಕಾರಭಾರವು ಉತ್ತಮವಾಗಿ ಆಗಬೇಕೆಂದು ಪ್ರಜೆಗಳಿಗೆ ನೀತಿಯ ಉಪದೇಶವನ್ನು ಯಾವಾಗಲೂ ಮಾಡುವನು. ಮತ್ತು ಆ ನೀತಿಯ ಉಪದೇಶಗಳನ್ನು ಎಲ್ಲ ಕಡೆಯಲ್ಲಿ ಪ್ರಕಟಿಸಿದ್ದನು. ಪ್ರಜೆಗಳು ಧರ್ಮವನ್ನು ಪಾಲಿಸಿ, ಸುಖಿಗಳೂ, ಸುಧಾರಿಸಿದವರೂ ಆಗಬೇಕೆಂಬದು ಅವನ ರಾಜನೀತಿಯ ಮುಖ್ಯ ಧ್ಯೇಯವಾಗಿತ್ತು.

ಅಶೋಕನ ರಾಜ್ಯಶಾಸನ ಪದ್ಧತಿಯನ್ನು ನೋಡಿದರೆ ರಾಜಕಾರ್ಯಗಳಲ್ಲಿ ಆತನ ಜಾಗರೂಕತೆಯೂ, ಯೋಗ್ಯತೆಯೂ ಕಂಡುಬರುವವು. ಪ್ರಜೆಗಳ ಕುಂದು ಕೊರತೆಗಳನ್ನು ತಿಳಿದುಕೊಳ್ಳುವದಕ್ಕಾಗಿ ಆತನು ಪ್ರತಿವೇದಕರನ್ನೂ ಪ್ರತಿಹಾರಿಗಳನ್ನೂ ನಿಯಮಿಸಿದ್ದನು. ಯಾವಾಗಲೂ ಎಲ್ಲ ಸ್ಥಳಗಳಲ್ಲಿಯೂ ಅಂತಃಪುರದಲ್ಲಿರಲಿ, ಶಯನಮಂದಿರದಲ್ಲಿರಲಿ, ಊಟದಲ್ಲಿರಲಿ, ಎಲ್ಲಿಗಾದರೂ ಹೊರಟಿರಲಿ, ಆಗಲೂ ಪ್ರಜೆಗಳ ಕೊರತೆಗಳನ್ನು ಕೇಳಿಕೊಳ್ಳುವನು ಪ್ರತಿಯೊಬ್ಬನಿಗೆ ತನ್ನ ಕಷ್ಟವನ್ನು ಅರಸನ ಬಳಿಯಲ್ಲಿ ಹೇಳಿಕೊಳ್ಳುವ ಅಧಿಕಾರವಿತ್ತು.

ರಾಜ್ಯದಲ್ಲಿ ಶಿಕ್ಷಣಪ್ರಸಾರಕ್ಕಾಗಿ ಅಶೋಕನು ಚೆನ್ನಾಗಿ ಯತ್ನಿಸುತ್ತಿದ್ದನು. ನಾಲಂದಾ ಅಥವಾ ನರೇಂದ್ರವಿಹಾರವು ಇತಿಹಾಸಪ್ರಸಿದ್ಧವಾದದ್ದು. ಈ ನರೇಂದ್ರವಿಹಾರವು ಅಶೋಕನ ಕಾಲದಲ್ಲಿಯೇ ಸ್ಥಾಪಿಸಲ್ಪಟ್ಟಿತೆಂದು ಹಲವರು ಹೇಳುವರು.

ಇದು ಮಗಧದ ಶಿಕ್ಷಣದ ಮುಖ್ಯ ಕೇಂದ್ರಸ್ಥಲವು, ಇಲ್ಲವೆ ವಿಶ್ವವಿದ್ಯಾಲಯವಾಗಿತ್ತು. ಈ ನರೇಂದ್ರವೆಹಾರವು ರಾಜಗೃಹದ ಬಳಿಯಲ್ಲಿತ್ತು. ಈ ವಿಹಾರದ ಹೆಸರಿನ ಉತ್ಪತ್ತಿಯ ವಿಷಯವಾಗಿ, ಹಲವು ಕಥೆಗಳು ಪ್ರಚಲಿತವಾಗಿವೆ. ಈ ವಿಹಾರದ ದಕ್ಷಿಣದಲ್ಲಿ ಒಂದು ಮಾವಿನ ತೋಪು ಇತ್ತು. ಆ ತೋಪಿನಲ್ಲಿರುವ ಒಂದು ಪುಷ್ಕರಿಣಿಯಲ್ಲಿ ನಾಲಂದಾ ಎಂಬ ಒಂದು ನಾಗವು ವಾಸವಾಗಿತ್ತು. ಆ ನಾಗನ ಹೆಸರಿನಿಂದ ಅಲ್ಲಿಯ ವಿಹಾರವು ನಾಲಂದಾ ವಿಹಾರವೆಂಬ ಹೆಸರನು ಹೊಂದಿತೆಂದು ಒಂದುಕಡೆಗೆ ಹೇಳಿದೆ. ಮತ್ತೆ ಕೆಲವರು ಹೇಳುವದೇನಂದರೆ, ಬುದ್ಧದೇವನು ತನ್ನ ಪೂರ್ವದ ಯಾವದೋ ಒಂದು ಜನ್ಮದಲ್ಲಿ ಬೋಧಿಸತ್ವನಾಗಿ ಈ ಸ್ಥಾನದಲ್ಲಿ ಹುಟ್ಟಿದನು. ಅವನು ಒಂದು ವಿಶಾಲವಾದ ರಾಜ್ಯದ ರಾಜನಾಗಿದ್ದನು. ಮುಂದಿನ ಕಾಲದಲ್ಲಿ ನಾಲಂದಾ ವಿಹಾರವು ಸ್ಥಾಪಿತವಾಗಿರುವ ಸ್ಥಳದಲ್ಲಿ ಅತನು ರಾಜಧಾನಿಯನ್ನು ಸ್ಥಾಪಿಸಿ ರಾಜ್ಯವಾಳಿದನು. ಪ್ರಾಣಿಗಳ ದುಃಖದಿಂದ ಅತನಿಗೆ ವ್ಯಥೆಯಾಗುತ್ತಿತ್ತು. ಅತನು ಯಾವಾಗಲೂ ದಾನ ಮಾಡುತ್ತಿದ್ದನು. ಈ ಕಥೆಯ ಸ್ಮರಣಾರ್ಥವಾಗಿ ಈ ವಿಹಾರವು ನಾಲಂದಾ ವಿಹಾರವೆಂದು ಕರೆಯಲ್ಪಟ್ಟಿತು. ವಿಹಾರವು ಸ್ಥಾಪಿತವಾಗುವದಕ್ಕೆ ಮುಂಚೆ ಈ ಸ್ಥಳದಲ್ಲಿ ಒಂದು ಸುಂದರವಾದ ಮಾವಿನ ತೋಪು ಇತ್ತು. ಒಂದು ಕಾಲದಲ್ಲಿ ೫೦೦ ಜನ ವ್ಯಾಪಾರಿಗಳು ಬಹಳ ಬೆಲೆ ಕೊಟ್ಟು ಅದನ್ನು ಕೊಂಡು ಬುದ್ಧದೇವನಿಗೆ ಕೊಟ್ಟಿದ್ದರು. ಗೌತಮಬುದ್ಧನು ೩ ತಿಂಗಳು ಅಲ್ಲಿ ಇದ್ದು ಜನಸಮಾಜಕ್ಕೆ ಉಪದೇಶ ಮಾಡಿದನು. ಬುದ್ಧದೇವನ ಪರಿನಿರ್ವಾಣವಾದ ಬಳಿಕ ತ್ರಿರತ್ನದ ಮೇಲೆ ಭಕ್ತಿಯುಳ್ಳ ಶಕ್ರಾದಿತ್ಯನೆಂಬ ಒಬ್ಬ ಅರಸನು ದೈವಯೋಗದಿಂದ ಈ ಸ್ಥಾನದ ಮಹಾತ್ಮ್ಯವನ್ನು ತಿಳಿದು ಅಲ್ಲಿ ಒಂದು ವಿಹಾರವನ್ನು ಕಟ್ಟಿಸಿದನು. ಹಲವು ಜನ ಭವಿಷ್ಯವಾದಿಗಳು ಈ ಸ್ಥಾನದ ಭವಿಷ್ಯಕಾಲದ ಗೌರವವನ್ನು ವರ್ಣಿಸಿದ್ದರು. ಶಕ್ರಾದಿತ್ಯನ ತರುವಾಯ ಬುದ್ಧಗುಪ್ತ, ತಥಾಗತಗುಪ್ತ, ಬಾಲಾದಿತ್ಯ, ವಜ್ರ ಎಂಬ ರಾಜರು ಮುಂದೆ ಮುಂದೆ ಈ ವಿಹಾರಕ್ಕೆ ಹೊಂದಿ ಮತ್ತೆ ಕೆಲವು ವಿಹಾರಗಳನ್ನು ಕಟ್ಟಿಸಿದ್ದರು. ಆ ಬಳಿಕ ಮಧ್ಯಹಿಂದುಸ್ಥಾನದ ಒಬ್ಬ ಅರಸನು ಈ ಎಲ್ಲ ವಿಹಾರಗಳ ಸುತ್ತಲು ಎತ್ತರವಾದ ಗೋಡೆಯನ್ನು ಕಟ್ಟಿಸಿದನು. ಅದರಲ್ಲಿ ಒಳಗೆ ಹೋಗುವದಕ್ಕೆ ಒಂದು ಬಾಗಿಲು ಇತ್ತು. ಮುಂದಿನ ಅರಸರು ಇದರ ಉತ್ಕರ್ಷಕ್ಕಾಗಿ ಸಹಾಯ ಮಾಡುತ್ತ ಬಂದರು. ಹುಯನ್‌ತ್ಸಾಂಗನು ಭರತಖಂಡದ ಪ್ರವಾಸದಕಾಲಕ್ಕೆ ೧೧ ತಿಂಗಳು ಈ ವಿಹಾರದಲ್ಲಿ ವಾಸಮಾಡಿದ್ದನು. ಈ ದೀರ್ಘಕಾಲದಲ್ಲಿ ಅತನು ಅಲ್ಲಿ ಸಂಸ್ಕೃತ ಶಾಸ್ತ್ರಗಳ ಅಧ್ಯಯನ ಮಾಡುತ್ತಿದ್ದನು. ಅತನು ಅಲ್ಲಿ ಇರುವಾಗ ಸಾವಿರಾರು ಜನ ಭಿಕ್ಷುಗಳು ಅಲ್ಲಿ ವಾಸಮಾಡುತ್ತಿದ್ದರು. ಇವರು ದೂರದೂರದ ದೇಶಗಳಿಂದ ಅಲ್ಲಿಗೆ ಶಿಕ್ಷಣಕ್ಕಾಗಿ ಬಂದಿದ್ದರು. ನಾಲಂದಾ ವಿಹಾರದ ವಿದ್ಯಾರ್ಥಿಗಳ ಸ್ವಭಾವವು ಸರಲವೂ, ಪವಿತ್ರವೂ ಆಗಿರುತ್ತಿತ್ತು. ಹಗಲಿರುಳು ಅಲ್ಲಿ ಹಲವು ಶಾಸ್ತ್ರಗಳ ಆಲೋಚನೆ ನಡೆಯುತ್ತಿತ್ತು. ಹುಯೆನ್‌ತ್ಸಾಂಗನ ಜೀವನಚರಿ

ತ್ರವನ್ನು ಬರೆದವನು ಈ ನಾಲಂದಾ ವಿಹಾರದಲ್ಲಿ ಪ್ರಾಚೀನ ಬೌದ್ಧಗ್ರಂಥಗಳು, ಮುಂದಿನ ಕಾಲದ ೧೮ ಬೌದ್ಧ ಸಾಂಪ್ರದಾಯಗಳ ಗ್ರಂಥಗಳು, ಇವಲ್ಲದೆ ಸಂಸ್ಕೃತ ಶಾಸ್ತ್ರಗಳು, ಹಿಂದು ಜನರ ವೇದಗಳು ಇವೆಲ್ಲವು ಅಭ್ಯಾಸಿಸಲ್ಪಡುತ್ತಿದ್ದವೆಂದು ಬರೆದಿರುವನು. ವೃದ್ಧರೂ ತರುಣರೂ ಎಲ್ಲರೂ ಈ ಗ್ರಂಥಸಮಾಲೋಚನೆಯಲ್ಲ ಸೇರುತ್ತಿದ್ದರು. ತ್ರಿಪಿಟಕದಲ್ಲಿ ಸೇರಿದ ಎಲ್ಲ ವಿಷಯಗಳ ಜ್ಞಾನವಿಲ್ಲದವರಿಗೆ ಆ ಕಾಲದಲ್ಲಿ ಜನರಲ್ಲಿ ಮಾನವು ಸಿಗುತ್ತಿರಲಿಲ್ಲವಾದುದರಿಂದ ಆ ವಿಷಯಗಳ ಜ್ಞಾನವನ್ನು ಸಂಪಾದಿಸುವ ಇಚ್ಛೆಯುಳ್ಳವರೆಲ್ಲರು ಈ ವಿಹಾರಕ್ಕೆ ಅಧ್ಯಯನಕ್ಕಾಗಿ ಬರುತ್ತಿದ್ದರು. ಈ ಸ್ಥಳದಲ್ಲಿ ಅಧ್ಯಯನ ಮಾಡಿದವರ ಪ್ರಸಿದ್ಧಿಯು ನಾಲ್ಕೂಕಡೆಗೆ ಆಗುತ್ತಿತ್ತು. ನಾಲಂದಾ ವಿಹಾರದ ವಿದ್ಯಾರ್ಥಿಯೆಂದು ಹೀಳಿದರೆ ಜನರಲ್ಲಿ ಮಾನವು ದೊರೆಯುತ್ತಿತ್ತು. ಇದರಿಂದ ಎಲ್ಲ ವಿದ್ಯಾರ್ಥಿಗಳು ತಾವು ನಾಲಂದಾವಿಹಾರದವರೆನಿಸಿಕೊಳ್ಳಲಪೇಕ್ಷಿಸುತ್ತಿದ್ದರು. ಈ ವಿಹಾರದಿಂದ ಮುಂದೆ ಎಷ್ಟು ಜನ ಮಹಾಕವಿಗಳು, ದಾರ್ಶನಿಕರು, ವಿದ್ವಾಂಸರು ಹೊರಟು ಭರತಖಂಡಕ್ಕೆ ಅಲಂಕಾರವಾಗಿದ್ದರೆಂಬದರ ಲೆಕ್ಕವೇ ಇಲ್ಲ. ಯಾವನೊಬ್ಬ ವಿದ್ಯಾರ್ಥಿಯು ನಾಲಂದಾವಿಹಾರದ ಪ್ರಸಿದ್ಧಿಯನ್ನು ಕೇಳಿ ಅಧ್ಯಯನಕ್ಕೆ ಅಲ್ಲಿಗೆ ಬಂದರೆ ಆತನ ವಿದ್ಯಾಬುದ್ಧಿಗಳನ್ನು ಪರೀಕ್ಷಿಸುವದಕ್ಕಾಗಿ ದ್ವಾರರಕ್ಷಕರು ಎಷ್ಟೋ ಗೂಢ ಪ್ರಶ್ನೆಗಳನ್ನು ಕೇಳುವರು. ಎಷ್ಟೋ ವಿದ್ಯಾರ್ಥಿಗಳು ಅಲ್ಲಿಂದಲೇ ನಿರಾಶರಾಗಿ ತಿರುಗಿ ಹೋಗುತ್ತಿದ್ದರು. ಈ ನಾಲಂದಾವಿಹಾರದಲ್ಲಿ ನಿಜವಾದ ಜ್ಞಾನಿಗಳ ಮತ್ತು ಪ್ರತಿಭಾಶಾಲಿಗಳ ಕೊರತೆಯಿರಲಿಲ್ಲ. ಧರ್ಮಪಾಲ, ಚಂದ್ರಪಾಲ, ಗುಣಮತಿ, ಸ್ಥಿರಮತಿ, ಪ್ರಭಾಮಿತ್ರ, ಜಿನಮಿತ್ರ, ಜ್ಞಾನಚಂದ್ರ, ಶೀಲಭದ್ರ ಮೊದಲಾದ ಪಂಡಿತರ ಕೀರ್ತಿಯು ಇಡಿ ದೇಶದಲ್ಲೆಲ್ಲ ಹಬ್ಬಿತ್ತು. ಅವರೆಲ್ಲರೂ ಬೌದ್ಧಧರ್ಮದ ಗ್ರಂಥಗಳನ್ನೂ ಭಾಷ್ಯಾಟಿಗಳನ್ನೂ ರಚಿಸಿರುವರು. ಕ್ರಿ. ಏನೆಯ ಶತಮಾನದಲ್ಲಿ ಚೀನ ಪ್ರವಾಸಿ ಇಸಿಂಗ (Itsing) ಎಂಬವನು ಭರತಖಂಡದಲ್ಲಿ ಬಂದಾಗ ಅವನು ಇಲ್ಲಿ† ೧೦ ವರ್ಷ ವಾಸ ಮಾಡಿದ್ದನು. (ಕ್ರಿ. ೬೭೫ರಿಂದ ೬೮೫ರ ವರೆಗೆ) ನಾಲಂದಾ (ನಾಲಂದ್ರ) ವಿಶ್ವವಿದ್ಯಾಯದಲ್ಲಿ ೧೦ ದೊಡ್ಡ ದೊಡ್ಡ ಸಭಾಗೃಹಗಳೂ, ವಿದ್ಯಾರ್ಥಿಗಳ ವಾಸಕ್ಕಾಗಿ ೩೦೦ ಬೇರೆ ಬೇರೆ ಕಟ್ಟಡಗಳೂ, ಇದ್ದವೆಂದು ಅತನು ವರ್ಣಿಸಿರುವನು. ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ರಾಜರು ೨೦೦ ಗ್ರಾಮಗಳನ್ನು ಈ ವಿಹಾರಕ್ಕೆ ದಾನಮಾಡಿದ್ದರು. ಅವುಗಳ ಉತ್ಪನ್ನದಿಂದ ವಿಹಾರದ ವೆಚ್ಚವು ನಡೆಯುತ್ತಿತ್ತು.

ನಾಲಂದಾವಿಹಾರವು ಯಾವಕಾಲದಲ್ಲಿ ಸ್ಥಾಪಿಸಲ್ಪಟ್ಟಿತ್ತೆಂಬದನ್ನು ನಿರ್ಣಯಿಸುವದು ಕಠಿಣವು. ಪಾಲಿಗ್ರಂಥಗಳಲ್ಲಿ ಅಲ್ಲಲ್ಲಿ ಇದರ ಉಲ್ಲೇಖವು ದೊರೆಯುತ್ತಿದ್ದರೂ

† Takakasu's Itsing.

§ Taranath's History of Buddhism.

ಕ್ರಿ. ಶ. ೧ನೆಯ ಶತಮಾನದಲ್ಲಿ * ಮಹಾಯಾನ ಬೌದ್ಧಸಾಂಪ್ರದಾಯವು ಉದಯವಾಗುವ ಪೂರ್ವದಲ್ಲಿ ಈ ವಿಹಾರದ ಉಲ್ಲೇಖವು ಬಹುಶಃ ಎಲ್ಲಿಯೂ ಕಂಡು ಬರುವದಿಲ್ಲ. ಕ್ರಿ. ೩ನೆಯ ಶತಮಾನದಲ್ಲಿ ನಾಗಾರ್ಜುನನೂ + ಆರ್ಯದೇವನೂ ಎಲ್ಲಕ್ಕೂ ಮೊದಲು ಈ ವಿಹಾರದ ಕಡೆಗೆ ಜನರ ದೃಷ್ಟಿಯನ್ನೆಳೆದರು. ಅದೇ ಕಾಲದಲ್ಲಿ ಸುವಿಷ್ಣು ಎಂಬ ಒಬ್ಬ ಬ್ರಾಹ್ಮಣನು ಮಹಾಯಾನ ಧರ್ಮದ ಪೋಷಣಕ್ಕಾಗಿ ೧೦೮ ಮಂದಿರಗಳನ್ನು ಕಟ್ಟಿಸಿದನು. ಕ್ರಿ. ಶ. ೪೫೦ ರಲ್ಲಿ ಮಗಧದ ಬಾಲಾದಿತ್ಯರಾಜನ ಕಾಲದಲ್ಲಿ ಈ ವಿಹಾರವು ಎಲ್ಲಕ್ಕೂ ಮೊದಲು ವಿಶ್ವವಿದ್ಯಾಲಯವಾಯಿತು. ಈ ಸಮಯವನ್ನಾರಂಭಿಸಿ ೭ನೆಯ ಶತಮಾನದ ವರೆಗೆ (ಕ್ರಿ. ೬೫೦ ವರೆಗೆ) ಇದರ ಪ್ರಸಿದ್ಧಿಯು ಬಹಳವಾಗಿತ್ತು. ಈ ಅವಧಿಯಲ್ಲಿ ಸುಪ್ರಸಿದ್ಧ ಕಮಲಶೀಲನು ಇಲ್ಲಿ ತಂತ್ರ ಶಾಸ್ತ್ರದ ಅಧ್ಯಾಪಕನಾಗಿದ್ದನು. ಯಾವ ಸ್ಥಳದಲ್ಲಿ ನಾಲಂದಾವಿಹಾರವೂ ಅದರ ಪುಸ್ತಕಾಲಯವೂ ಇದ್ದವೋ ಆ ಸ್ಥಾನಕ್ಕೆ ತಿಬೇಟದ ಗ್ರಂಥಕಾರರು ಧರ್ಮಗಂಜಿ ಎಂದು ಕರೆದಿರುವರು. ನಾಲಂದಾ ವಿಶ್ವವಿದ್ಯಾಲಯದಲ್ಲಿ ೩ ದೊಡ್ಡ ಉಪ್ಪರಿಗೆಗಳಿದ್ದವು. ಅವುಗಳಿಗೆ ರತ್ನಸಾಗರ, ರತ್ನೋದಧಿ, ರತ್ನರಂಜಕ ಎಂಬ ಹೆಸರುಗಳಿದ್ದವು. ಇವುಗಳಲ್ಲಿ ರತ್ನೋದಧಿ ಎಂಬದಕ್ಕೆ ೯ ನೆಲೆಗಳಿದ್ದವೆಂದು ವರ್ಣನೆಯುಂಟು. ಇದರಲ್ಲಿಯೇ 'ಪ್ರಜ್ಞಾಪಾರಮಿತಾ' ಮತ್ತು ತಂತ್ರಶಾಸ್ತ್ರ ಇವುಗಳ ಬಹಳ ಗ್ರಂಥಗಳು ಇಡಲ್ಪಟ್ಟಿದ್ದವು.

ಈಗಿನ ಬಡಗಾಂವೆಯ ಅವಶೇಷ ಸ್ಥಳದಲ್ಲಿ ನಾಲಂದಾವಿಹಾರವಿತ್ತೆಂದು ಐತಿಹಾಸಿಕರು ಹೇಳುವರು. ಈ ಸ್ಥಳವು ರಾಜಗೃಹ ಮತ್ತು ಗೃಹ್ಯಕೂಟ ಇವುಗಳಿಂದ

---

* ಮಹಾಯಾನ ಬೌದ್ಧಮತದಲ್ಲಿ ೪ ವಿಭಾಗಗಳುಂಟು. ವೈಭಾಷಿಕ, ಸೌತ್ರಾಂತಿಕ, ಮಾಧ್ಯಮಿಕ, ಯೋಗಾಚಾರ; ಮಾಧ್ಯಮಿಕ ಬೌದ್ಧಮತವನ್ನು ಸ್ಥಾಪಿಸಿದವನು ನಾಗಾರ್ಜುನನು. ಇವನು ದೊಡ್ಡ ಜ್ಞಾನಿಯೂ, ತಾರ್ಕಿಕನೂ ಎಂದು ಪ್ರಸಿದ್ಧನಿರುವನು ನಾಗಾರ್ಜುನನು ಈಗಿನ ವಿದರ್ಭದಲ್ಲಿ (ಈಗಿನ ಬೇರಾರ)ದ್ದ ಮಹಾಕೋಶಲ ಎಂಬ ಸ್ಥಾನದಲ್ಲಿ ಹುಟ್ಟಿದನು ಮತ್ತು ಕೃಷ್ಣಾನದೀ ತೀರದಲ್ಲಿರುವ ಶ್ರೀಪರ್ವತದ ಒಂದು ಗುಹೆಯಲ್ಲಿ ಬಹು ವಿಷಯ ತಪಸ್ಸನ್ನು ಮಾಡಿದನು. ನಾಗಾರ್ಜುನನು ಮಾಧ್ಯಮಿಕ ಕಾರಿಕಾ ಮೊದಲಾದ ಹಲವು ದಾರ್ಶನಿಕ ಗ್ರಂಥಗಳನ್ನು ರಚಿಸಿರುವನು.

+ ಇವನು ನಾಗಾರ್ಜುನನ ಶಿಷ್ಯನು. ಮಾಧ್ಯಮಿಕ ಮತಗ್ರಂಥಗಳನ್ನು ಬರೆದವರಲ್ಲಿ ಇವನೊಬ್ಬನು ಪ್ರಸಿದ್ಧನು. ಆರ್ಯದೇವನಿಗೆ ಹಲವು ಕಡೆಯಲ್ಲಿ ಕಾಣದೇವ, ನೀಲನೇತ್ರ, ಪಿಂಗಲನೇತ್ರ ಎಂಬ ದಾಗಿ ಹೆಸರುಗಳುಂಟು. ಇವನು ಭರತಖಂಡದ ಹಲವೆಡೆಗಳಲ್ಲಿ ಪ್ರವಾಸಮಾಡಿದನು. ಮತ್ತು ಹೋದ ಹೋದಲ್ಲಿ ಅನ್ಯಮತಾವಲಂಬಿಗಳನ್ನು ವಾದದಲ್ಲಿ ಜಯಿಸಿದನು ಆರ್ಯದೇವನು ಬಹುಕಾಲ ನಾಲಂದಾ ವಿಹಾರದಲ್ಲಿ ವಾಸಮಾಡಿದ್ದನು. ಮಹಾಯಾನ ದರ್ಶನದ ಹಲವು ಗ್ರಂಥಗಳನ್ನು ಬರೆದನು. ಚೀನಿ ಭಾಷೆಯಲ್ಲಿ ಕುಮಾರಜೀವನು ಇವನ ಜೀವನ ಚರಿತ್ರವನ್ನು ಬರೆದಿದ್ದನು.

೭ ಮೈಲಿನ ಮೇಲೆ ಇರುವದು. ಹುಯೆನ್‌ತ್ಸಾಂಗನಮತದಂತೆ ನಾಲಂದಾವಿಹಾರವು ಬುದ್ಧಗಯೆಯ ಬೋಧಿ ವೃಕ್ಷದಿಂದ ೪೯ ಮೈಲು ದೂರದಲ್ಲಿತ್ತು. ಫಾಹಿಯಾನನು ನಾಲಂದಾಸ್ಥಾನವು ಸಾರಿಪುತ್ರ ಮತ್ತು ಮಹಾಮೌದ್ಗಲಾಯನ ಇವರ ಜನ್ಮಸ್ಥಾನವೆಂದು ಹೇಳಿರುವನು. ಆದರೆ ಹುಯೆನ್‌ತ್ಸಾಂಗನು ಈ ಮತವನ್ನು ಸಮರ್ಥಿಸಿಲ್ಲ. ತಿಬೇಟದ ದುಲ್ಬಾಗ್ರಂಥದಲ್ಲಿ ಸಾರಿಪುತ್ರನ ತಾಯಿಯೂ ಅಜ್ಜನೂ (ತಾಯಿಯ ತಂದೆ) ನಾಲಂದಾವಾಸಿಗಳೆಂದು ಹೇಳಿದೆ. ಬಡಗಾಂವೆಯ ಅವಶೇಷವು ಬಹು ವಿಸ್ತಾರವಾಗಿದೆ. ಇಟ್ಟಿಗೆಗಳಿಂದ ಕಟ್ಟಿದ ಎಷ್ಟೋ ಕಟ್ಟಡಗಳ ಅವಶೇಷಗಳು ಅಲ್ಲಿ ಈಗಲೂ ಇರುವವು. ಬಹು ದೂರದವರೆಗೆ ಹಬ್ಬಿದ ಒಂದು ಎತ್ತರವಾದ ಸ್ಥಳವು ಇನ್ನೂ ಅಲ್ಲಿ ಕಾಣುತ್ತಿರುವದು. ಅದು ಆ ಕಾಲದ ಉಸ್ಪರಿಗೆ ಮೊದಲಾದ ವಿಹಾರಗಳಿದ್ದ ಸ್ಥಳವೆಂದು ಹಲವರು ಹೇಳುವರು. ಈ ಇಟ್ಟಿಗೆಯ ರಾಶಿಯ ಸುತ್ತಲೂ ಒಂದು ಪುಷ್ಕರಿಣಿಯು ಇತ್ತು. ವಿಸ್ತಾರವಾದ ಈ ಪ್ರದೇಶವನ್ನು ನೋಡಿದರೆ ನಾಲಂದಾವಿಶ್ವವಿದ್ಯಾಲಯದ ಅದ್ಭುತ ವ್ಯಾಪಾರದ ಕಲ್ಪನೆಯು ಸ್ವಲ್ಪ ಮಟ್ಟಿಗೆ ಬರುವದು. ಈ ವಿಶ್ವವಿದ್ಯಾಲಯದ ಮತ್ತು ಸುತ್ತಲಿನ ಕಟ್ಟಡಗಳ ಶಿಲ್ಪಚಾತುರ್ಯವು ವರ್ಣನೀಯವಾಗಿತ್ತೆಂದು ಎಲ್ಲರೂ ಒಪ್ಪುವರು.

ತಕ್ಷಶಿಲೆಯ ಶಿಕ್ಷಣಮಂದಿರವೂ ದೇಶಪ್ರಸಿದ್ಧವಾಗಿತ್ತು. ಪ್ರಾಚೀನ ಸಂಸ್ಕೃತ ಗ್ರಂಥಗಳಲ್ಲಿಯೂ, ಜಾತಕ ಮೊದಲಾದ ಪಾಲೀಗ್ರಂಥಗಳಲ್ಲಿಯೂ ಇದರ ವರ್ಣನೆಯುಂಟು. ತಕ್ಷಶಿಲೆಯ ಶಿಕ್ಷಣಾಲಯವು ನಾಲಂದಾವಿಶ್ವವಿದ್ಯಾಲಯಕ್ಕಿಂತ ಪ್ರಾಚೀನವು. ಆತ್ರೇಯ ಮಹರ್ಷಿಯು ಒಂದಾನೊಂದು ಕಾಲದಲ್ಲಿ ಈ ವಿದ್ಯಾಲಯದಲ್ಲಿ ಮುಖ್ಯಾಧ್ಯಾಪಕನಾಗಿದ್ದನು. ಈ ವಿದ್ಯಾಲಯದಲ್ಲಿ ಆಯುರ್ವೇದದ ಅಧ್ಯಯನವೂ ನಡೆಯುತ್ತಿತ್ತು. ಸುಪ್ರಸಿದ್ಧ ವೈಯಾಕರಣನಾದ ಪಾಣಿನಿಮಹರ್ಷಿಯೂ, ಮಹಾಭಾಷ್ಯಕಾರನಾದ ಪತಂಜಲಿಯೂ ಈ ವಿದ್ಯಾಲಯದಲ್ಲಿಯೇ ಅಧ್ಯಯನ ಮಾಡಿದರೆಂದು ಪ್ರವಾದವುಂಟು. ಈ ಎರಡು ಮುಖ್ಯಶಿಕ್ಷಣ ಕೇಂದ್ರಸ್ಥಳಗಳ ಹೊರತು ದೇಶದಲ್ಲಿ ಎಷ್ಟೋ ಕಡೆಗೆ ವಿಹಾರಾದಿಗಳು ಇದ್ದವು. ಈ ವಿಹಾರಗಳಲ್ಲಿ ಧರ್ಮಪ್ರಚಾರವೂ ಧರ್ಮಾಲೋಚನೆಯೂ ನಡೆಯುತ್ತಿದ್ದಂತೆ ವಿದ್ಯಾರ್ಥಿಗಳ ಶಿಕ್ಷಣವೂ ನಡೆಯುತ್ತಿತ್ತು. ಈ ವರ್ಣನೆಯಿಂದ ಮೌರ್ಯ ರಾಜನಾದ ಅಶೋಕನು ಶಿಕ್ಷಣ ವಿಷಯವಾಗಿ ಹೆಚ್ಚು ಮನಸ್ಸಿಟ್ಟಿದ್ದನೆಂದು ಸ್ಪಷ್ಟವಾಗುವದು. ಜನಸಾಮಾನ್ಯದಲ್ಲಿ ಶಿಕ್ಷಣವು ಆರಂಭವಾದದ್ದು ಬೌದ್ಧಯುಗದಿಂದಲೇ. ಅಶೋಕನ ಪ್ರಯತ್ನದಿಂದ ಲೋಕಶಿಕ್ಷಣವು ಹೆಚ್ಚು ವಿಸ್ತಾರವಾಗಿತ್ತು.

ಅಶೋಕನ ಕಾಲದಲ್ಲಿ ಸಮಾಜವು ಯಾವ ಸ್ಥಿತಿಯಲ್ಲಿತ್ತೆಂಬದರ ವಿವರಣವು ಎಲ್ಲಿಯೂ ದೊರೆಯುವದಿಲ್ಲ. ಶಿಲಾಲಿಪಿಗಳು, ಅನುಶಾಸನಗಳು ಇವುಗಳಿಂದ ಸ್ವಲ್ಪಮ

ಟ್ಟಿಗೆ ಅದರ ಕಲ್ಪನೆಯು ಆಗುವಂತಿರುವದು. ಆ ಕಾಲದಲ್ಲಿ ಯಾವದೊಂದು ಉತ್ಸವ ದಲ್ಲಿ ಅಥವಾ ಪರ್ವದಲ್ಲಿ (ಹಬ್ಬ) ಬಹು ಪ್ರಾಣಿಹಿಂಸೆಯು ಆಗುತ್ತಿದ್ದರೆ ಅಶೋಕನು ಅದಕ್ಕೆ ಪ್ರತಿಬಂಧ ಮಾಡುತ್ತಿದ್ದನು. ಅಣ್ಣತಮ್ಮಂದಿರೂ, ಬೇರೆ ಬಳಗದವರೂ ಅವಿ ಭಕ್ತರಾಗಿರುವ ಪದ್ಧತಿಯು ಇತ್ತೆಂದು ತೋರುವದು. ಮಾತಾಪಿತೃಭಕ್ತಿ, ಮಾತಾಪಿತೃ ಗಳ ಆಜ್ಞಾಪಾಲನ, ಗುರುಗಳಿಗೆ ಸಮ್ಮಾನಮಾಡುವದು, ಮೊದಲಾದ ಸದ್ಗುಣಗಳು ಜನರಲ್ಲಿ ನೆಲೆಗೊಂಡಿದ್ದವು. ಇವು ನೆಲೆಗೊಳ್ಳುವದಕ್ಕೆ ಶ್ರಮಣರೂ, ಬ್ರಾಹ್ಮಣರೂ ಸಮವಾಗಿಯೇ ಪ್ರಯತ್ನಿಸುತ್ತಿದ್ದರು. ಇದಲ್ಲದೆ ಆ ಕಾಲದಲ್ಲಿ ಪೌರೋಹಿತ್ಯಪದ್ಧ ತಿಯೂ ಪ್ರಚಲಿತವಾಗಿತ್ತು. ಈ ಪುರೋಹಿತರ ಪ್ರಭಾವಕ್ಕೆ ಒಂದಾನೊಂದು ಕಾಲ ದಲ್ಲಿ ಸಮಾಜದ ಎಲ್ಲರೂ ತಲೆಬಾಗಿ ನಡೆಯುತ್ತಿದ್ದರು. ಆದರೆ ಬೌದ್ಧಯುಗದಲ್ಲಿ ಈ ಪ್ರಭಾವವು ಕ್ರಮವಾಗಿ ಕಡಿಮೆಯಾಗುತ್ತ ನಡೆದಿತ್ತು. ಕ್ಷತ್ರಿಯರು ವೈಶ್ಯರು ಶೂದ್ರರು, ಬಡಗಿಗಳು, ಕಮ್ಮಾರರು, ಕಣಿಗಾರರು, ಕಸಬುಗಾರರು ಮೊದಲಾದ ಹಲವು ಪಂಗಡಗಳು ಸಮಾಜದಲ್ಲಿ ಉಂಟಾಗಿದ್ದವು ಆದರೆ ಈ ಜಾತಿಭೇದದಲ್ಲಿ ಇವುಗಳ ಒಳ ಭೇದಗಳು ಇದ್ದವೋ ಇಲ್ಲವೋ ಊಹಿಸಲಿಕ್ಕಾಗುವದಿಲ್ಲ. ಅರಸು ಮನೆತನದಲ್ಲಿ ಮದು ವೆಯ ವಿಶೇಷ ವಿಧಿನಿಷೇಧಗಳಿದ್ದಂತೆ ತೋರಲಿಲ್ಲ. ಅಶೋಕ ಮಹಾರಾಜನು ಒಬ್ಬ ಶ್ರೇಷ್ಠಿಯ ಮಗಳನ್ನು ಮದುವೆಯಾದದರಿಂದ ಸಮಾಜದಲ್ಲಿ ಏನೂ ಬಾಧೆಬರಲಿಲ್ಲ. ಬಿಂದುಸಾರರಾಜನು ಬಾಹ್ಮಣ ಕನ್ಯೆಯನ್ನು ಮದುವೆಯಾದದ್ದು ಅನ್ಯಾಯವೆಂದು ಎಲ್ಲಿಯೂ ವರ್ಣಿಸಲ್ಪಟ್ಟಿಲ್ಲ. ಮೌರ್ಯರಾಜರ ಕಾಲದಲ್ಲಿ ಬ್ರಾಹ್ಮಣರು ಸಮಾಜದಲ್ಲಿ ತಮಗಿದ್ದ ಉಚ್ಚಸ್ಥಾನದಿಂದ ಎಷ್ಟೋ ಕೆಳಗೆ ಎಳೆಯಲ್ಪಟ್ಟಿದ್ದರೆಂದು ತೋರುವದು. ಆಗ ಸಮಾಜದ ಮತ್ತು ಧರ್ಮದ ನಾಯಕತ್ವವು ಅರಸನಿಗೇ ಇತ್ತು. ಅರಸನ ಅಪ್ಪ ಣೆಯ ಕೆಳಗೇ ಸಮಾಜವೆಲ್ಲ ನಡೆಯುತ್ತಿತ್ತು

ಈ ಕಾಲದಲ್ಲಿ ಧರ್ಮದ ಸ್ಥಿತಿಯು ಯಾವ ಮೇರೆಗೆ ಇತ್ತೆಂಬದನ್ನು ಈಗ ಆಲೋ ಚಿಸಬೇಕಾಗಿರುವದು. ಅಶೋಕನ ಕಾಲದಲ್ಲಿ ಬೌದ್ಧಸಂಪ್ರದಾಯದಲ್ಲಿ ಮತಭೇದ ಗಳುಂಟಾಗಿದ್ದ ವಿಷಯವನ್ನು ಈ ಮೊದಲೇ ಆಲೋಚಿಸಿದೆ. ಬುದ್ಧದೇವನ ಪರಿನಿರ್ವಾ ಣವಾದ ೨೦೦ ವರ್ಷಗಳ ತರುವಾಯ ಬೌದ್ಧಧರ್ಮದಲ್ಲಿ ೧೮ ಸಂಪ್ರದಾಯಗಳುಂಟಾ ಗಿದ್ದವು ಕಾಲಕ್ರಮದಿಂದ ಈ ೧೮ ಸಂಪ್ರದಾಯಗಳಲ್ಲಿ ಒಂದೊಂದು ಸಂಪ್ರದಾ ಯವು ಲೋಪಹೊಂದುವದೂ ಮತ್ತೊಂದು ಉತ್ಪನ್ನವಾಗುವದೂ ನಡೆದಿತ್ತು. ಆದರೆ ಆಗ ಇನ್ನೂ ಮಹಾಯಾ*ನ ಬೌದ್ಧಮತವು ಪ್ರಚಾರಕ್ಕೆ ಬಂದಿರಲಿಲ್ಲ.

---

* ಕ್ರಿಸ್ತಶಕದ ಆರಂಭದಲ್ಲಿ ಶಕ ಜಾತಿಯು ಭರತಖಂಡದಲ್ಲಿ ವಾಯವ್ಯ ಭಾಗವನ್ನು ಆಕ್ರಮಿ ಸಿತ್ತು. ಕಾಶ್ಮೀರದಿಂದ ದಿಲ್ಲಿಯವರೆಗಿನ ಯಾವತ್ತೂ ಪ್ರದೇಶವನ್ನು ಅದು ವ್ಯಾಪಿಸಿಕೊಂಡಿತ್ತು. ಶಕನರ ಪತಿಕನಿಷ್ಕನು ಕ್ರಿ. ಒಲನೆಯ ಪರುಷ ಸಿಂಹಾಸನವನ್ನೇರಿ ತನ್ನ ಹೆಸರಿನಿಂದ ಒಂದು ಶಕವನ್ನು ಆರಂಭಿಸಿ

ಬೌದ್ಧಧರ್ಮ ಗ್ರಂಥಗಳೆಲ್ಲ ಆಗ ಪಾಲೀಭಾಷೆಯಲ್ಲಿಯೇ ರಚಿತವಾಗಿದ್ದವು. ಸಂಸ್ಕೃತದ ಬೌದ್ಧವಾಙ್ಮಯವು ದೇಶದಲ್ಲಿ ಆಗ ಅಷ್ಟೊಂದು ಪ್ರಚಲಿತವಾಗಿರಲಿಲ್ಲ. ಮುಂದಿನ ಕಾಲದಲ್ಲಿ ವೈದಿಕಧರ್ಮ, ಬೌದ್ಧಧರ್ಮಗಳಲ್ಲಿ ವಿರೋಧವು ಉತ್ಪನ್ನವಾದಾಗಲೂ ಆ ಎರಡು ಮತಗಳಲ್ಲಿ ವಿರೋಧವು ಉತ್ಪನ್ನವಾಗಿರಲಿಲ್ಲ. ಎರಡೂ ಸಂಪ್ರದಾಯಗಳ ಜನರು ತಮ್ಮ ತಮ್ಮ ಧರ್ಮಮತಗಳನ್ನು ಪಾಲಿಸುತ್ತಿದ್ದರು. ಈ ಕಾಲದಲ್ಲಿ ಜನವಸತಿಯಿಂದ ದೂರದಲ್ಲಿ ಪಟ್ಟಣದ ಕೋಲಾಹಲವನ್ನು ಬಿಟ್ಟು ಅರಣ್ಯದಲ್ಲಿ ಒಂದು ವರ್ಗದ ಜನರು ವಾಸಮಾಡಹತ್ತಿದ್ದರು. ಅವರಿಗೆ ತಾಪಸ ಸಂಪ್ರದಾಯದವರೆನ್ನುತ್ತಿದ್ದರು. ಇವರೆಲ್ಲರೂ ತಮ್ಮ ತಮ್ಮ ಮತದ ಶಿಕ್ಷಣವನ್ನು ಕೊಡುವದರಲ್ಲಿ ಇಲ್ಲವೆ ಧ್ಯಾನಧಾರಣಾದಿಗಳಲ್ಲಿ ಮಗ್ನರಾಗಿರುತ್ತಿದ್ದರು. ಕೆಲವರು ಇಂದ್ರಿಯ ನಿಗ್ರಹಮಾಡಿಕೊಂಡು ಇರುತ್ತಿದ್ದರು. ಕೆಲವರು ಶಿಷ್ಯರಿಗೆ ಮೋಕ್ಷತತ್ವವನ್ನು ಉಪದೇಶಿಸುತ್ತಿದ್ದರು. ಈ ಅರಣ್ಯವಾಸಿಗಳಾದ ತಾಪಸರು ಫಲಮೂಲಾದಿಗಳಿಂದ ಇಲ್ಲವೆ ಭಿಕ್ಷೆಯಿಂದ ಉಪಜೀವಿಸುತ್ತಿದ್ದರು.

ಅರಣ್ಯವಾಸಿಗಳಾದ ತಾಪಸರ ಹೊರತು ಪರಿವ್ರಾಜಕವೆಂಬ ಇನ್ನೊಂದು ವರ್ಗವು ಇತ್ತು. ಜನಸಾಮಾನ್ಯಕ್ಕೆ ಶಿಕ್ಷಣ ಕೊಡುವದು ಇವರ ಮುಖ್ಯ ಕರ್ತವ್ಯವಾಗಿತ್ತು. ಇವರು ವರ್ಷದಲ್ಲಿ ೮ ತಿಂಗಳು ದೇಶದಲ್ಲಿ ಎಲ್ಲಕಡೆಗೆ ತಿರುಗುತ್ತ ಜನರಿಗೆ ಧರ್ಮೋಪದೇಶವನ್ನು ಮಾಡುವರು. ಮತ್ತು ದಾರ್ಶನಿಕ ವಿಚಾರವನ್ನು ಮಾಡುವರು. ಅಲ್ಲಲ್ಲಿಗೆ ಪರಿವ್ರಾಜಕ ಜನರಿಗೆ ವಾಸಗೃಹಗಳು ಇರುತ್ತಿದ್ದವು. ಅವುಗಳಲ್ಲಿ ಅವರು ಧರ್ಮವಿಚಾರವನ್ನೂ ದಾರ್ಶನಿಕ ವಿಚಾರವನ್ನೂ ಮಾಡುವರು. ಈ ಆವಾಸಗೃಹಗಳಲ್ಲಾಗಲಿ, ಮಾರ್ಗದ ಬದಿಗಳಲ್ಲಿ ಕಟ್ಟಿಸಿದ ಪಥಿಕಾಶ್ರಮಗಳಲ್ಲಾಗಲಿ, ಮಾರ್ಗದ ಬದಿಗಳಲ್ಲಿ ಕಟ್ಟಿಸಿದ ಪಥಿಕಾಶ್ರಮಗಳಲ್ಲಾಗಲಿ ಅವರು ಇಳಿಯುತ್ತಿದ್ದರು. ಸ್ತ್ರೀಯರೂ ಪರಿವ್ರಾಜಿಕೆಯರಾಗಿದ್ದರು. ಇವರು ಅವಿವಾಹಿತರಾಗಿಯೇ ಕಾಲಕಳೆಯುವರು. ಈ ಪರಿವ್ರಾಜಕರಲ್ಲಿ ಹಲವು ಪಂಗಡಗಳಿದ್ದವು. ಒಂದೊಂದು ಪಂಗಡಕ್ಕೆ ಒಬ್ಬೊಬ್ಬ ಮುಖ್ಯ ಮನುಷ್ಯನಿರುವನು. ಅವನು ಪಾಂಡಿತ್ಯದಿಂದಲೂ ಆಚರಣದಿಂದಲೂ ಎಲ್ಲರ ಭಕ್ತಿಗೆ ಪಾತ್ರವಾಗಿರುತ್ತಿದ್ದನು. ಬೌದ್ಧಸಂಪ್ರದಾಯದ ಪರಿವ್ರಾಜಕರಿಗೆ ಶಾಕ್ಯಪುತ್ರ ಶ್ರಮಣರೆಂದು ಹೆಸರು. ಜೈನಸಂಪ್ರದಾಯದ ಪರಿವ್ರಾಜಕರಿಗೆ ನಿರ್ಗ್ರಂಥರೆಂದು ಹೆಸರು.

ದನು. ಆತನು ಬೌದ್ಧಮತವನ್ನು ಸ್ವೀಕರಿಸಿದ್ದನು. ಆ ಬೌದ್ಧಮತಕ್ಕೆ ಮಹಾಯಾನವೆಂಬ ಹೆಸರನ್ನು ಕೊಟ್ಟಿದ್ದನು. ಮಹಾಯಾನ ಸಂಪ್ರದಾಯದವರು ಪೂರ್ವದಿಂದ ನಡೆದುಬಂದ ಪಾಲಿಗ್ರಂಥದಲ್ಲಿರುವ ಬೌದ್ಧಮತವನ್ನು ತಿರಸ್ಕರಿಸಿ ಅದಕ್ಕೆ ಹೀನಯಾನವೆಂದು ಅನ್ನಹತ್ತಿದರು. ಕಾಲಕ್ರಮದಿಂದ ಈ ಮಹಾಯಾನ ಮತವು ನೇಪಾಲ, ತಿಬೇಟು, ಮೋಂಗೋಲಿಯಾ, ಚೀನ, ಜಪಾನ, ಕೋರಿಯಾ ಮೊದಲಾದ ದೇಶಗಳಲ್ಲಿ ಹಬ್ಬಿತು. ಹೀನಯಾನವು ಸಿಂಹಲ, ಬ್ರಹ್ಮ, ಶ್ಯಾಮದೇಶಗಳಲ್ಲಿ ನಿಂತಿತು. ಭಾರತ ವರ್ಷದಲ್ಲಿ ಎರಡೂ ಸಂಪ್ರದಾಯಗಳು ಪ್ರಚಲಿತವಾಗಿದ್ದವು.

ಇದೇ ಮೇರೆಗೆ ಆಜೀವಕರೆಂಬ ಒಂದು ವರ್ಗವೂ ಇತ್ತು. ಈ ಆಜೀವಕ ವರ್ಗವು ಅಶೋಕನ ಮೊಮ್ಮಗನಾದ ದಶರಥನ ಕಾಲದ ವರೆಗೂ ಸಂಘಗಳನ್ನು ಮಾಡಿಕೊಂಡು ಇರುತ್ತಿತ್ತು. ಪಾಲಿ ಅಂಗುತ್ತರನಿಕಾಯ ಎಂಬ ಪುಸ್ತಕದಲ್ಲಿ ಈ ಎಲ್ಲ ಸಂಪ್ರದಾಯಗಳ ಹೆಸರು ಉಲ್ಲೇಖಿಸಲ್ಪಟ್ಟಿದೆ. ಶಾಕ್ಯಪುತ್ರ ಶ್ರಮಣ, ನಿರ್ಗ್ರಂಥ, ಆಜೀವಕ ಇವರಲ್ಲದೆ ಮುಂಡಶ್ರಾವಕ, ಜಟಿಲಿಕ, ಮಾಗಂದಿಕ, ತ್ರಿದಂಡಿಕ, ಅವಿರುದ್ಧಕ, ಗೌತಮಕ, ದೇವ ಧಾರ್ಮಿಕ ಮೊದಲಾದ ಬೇರೆ ಪಂಗಡಗಳೂ ಇದ್ದವು. ಈ ಎಲ್ಲ ಪಂಗಡಗಳ ಸಂಚಾರಕರು (ಪರಿವ್ರಾಜಕರು) ಧರ್ಮ ಶ್ರವಣಮಾಡಿಸುವಾಗ ಎಲ್ಲ ವರ್ಣಗಳ ಜನರೂ ಸೇರುತ್ತಿದ್ದರು. ಮತ್ತು ಬ್ರಾಹ್ಮಣೇತರ ಜಾತಿಯ ಜನರು ಕೂಡ ಈ ಪರಿವ್ರಾಜಕರ ಮುಖ್ಯಸ್ಥರ ಸ್ಥಳದಲ್ಲಿ ನಿಯಮಿಸಲ್ಪಡುತ್ತಿದ್ದರು. ಅಶೋಕನ ಕಾಲದಲ್ಲಿ ಬೌದ್ಧಧರ್ಮಾವಲಂಬಿಗಳಲ್ಲಿ ಹಲವು ಸಂಪ್ರದಾಯಗಳು ಹುಟ್ಟಿದ್ದವೆಂದು ಈ ಮೊದಲೇ ಹೇಳಿದೆಯಷ್ಟೇ? ಈ ಸಂಪ್ರದಾಯಗಳ ಸಂಖ್ಯೆಯು ಕ್ರಮದಿಂದ ಹೆಚ್ಚಾಗುತ್ತ ಹೋಗಿ ಅವು ೧೮ ಆದವು. ಕೆಳಗೆ ಅವುಗಳ ಪಟ್ಟಿಯನ್ನು ಕೊಟ್ಟಿದೆ.

೧ ಆರ್ಯ ಸರ್ವಾಸ್ತಿವಾದ	(೧೦) ವಾತ್ಸೀಪುತ್ರೀಯ
(೧) ಮೂಲ ಸರ್ವಾಸ್ತಿವಾದ	೩ ಆರ್ಯಮಹಾಸಾಂಗಿಕ
(೨) ಕಾಶ್ಯಪೀಯ	(೧೧) ಪೂರ್ವಶೈಲ
(೩) ಮಹೀಶಾಸಕ	(೧೨) ಅಪರ ಶೈಲ
(೪) ಧರ್ಮಗುಪ್ತೀಯ	(೧೩) ಹೈಮವತ
(೫ ಬಹುಶ್ರುತ	(೧೪) ಲೋಕೋತ್ತರವಾದ
(೬) ತಾಮ್ರಶಟೀ	(೧೫) ಪ್ರಜ್ಞಪ್ತಿ.
(೭) ವಿಭಜ್ಯವಾದ	೪ ಆರ್ಯಸ್ಥವಿರ
೨ ಆರ್ಯ ಸಮ್ಮತ್ತಿಯ	(೧೬) ಮಹಾವಿಹಾರ
(೮) ಕುರು ಕುಲ್ಲಕ	(೧೭) ಜೇತವನೀಯ
(೯) ಅವಂತಿಕ	(೧೮) ಅಭಯ ಗಿರಿವಾಸಿ

ಅಶೋಕ ನರಪತಿಯು ಬೌದ್ಧಧರ್ಮವನ್ನು ಸ್ವೀಕರಿಸಿದ್ದನೆಂದು ಈ ಮೊದಲೇ ಹೇಳಿದೆ. ಆ ಕಾಲದಲ್ಲಿ ಜೈನಧರ್ಮವೂ ಉದಯ ಹೊಂದಿತ್ತು. ಈ ಮೊದಲೇ ಸುಪ್ರಸಿದ್ಧ ಜೈನತೀರ್ಥಂಕರನಾದ ಮಹಾವೀರ ಸ್ವಾಮಿಯು ವೈಶಾಲಿಯ ಬಳಿಯಲ್ಲಿರುವ ಪಾವಾ ಎಂಬ ಸ್ಥಳದಲ್ಲಿ ಜನ್ಮಿಸಿದ್ದನು. ಆಜೀವಕರೂ, ನಿರ್ಗ್ರಂಥರೂ ಇವರ "ಅಂಹಿಸಾ ಪರಮೋ ಧರ್ಮಃ" ಶಬ್ದವು ಎಲ್ಲ ಕಡೆಯಲ್ಲಿ ಪ್ರತಿಧ್ವನಿತವಾಗುತ್ತಿತ್ತು. ಅಶೋಕನ ಅಹಿಂಸಾಪ್ರವೃತ್ತಿಯನ್ನು ನೋಡಿ ಜೈನರು ಅಶೋಕನು ಜೈನ ನರಪತಿಯೆಂದು ಹೇಳುತ್ತಿರುವರು.

ಭಾವರಾ ಗಿರಿಲಿಪಿಯಿಂದ ತಿಳಿಯುವದೇನಂದರೆ ಅಶೋಕನು ಪ್ರಚಾರಗೊಳಿಸಿದ ಧರ್ಮವಿಧಿಗಳು ಬುದ್ಧದೇವನು ಹೇಳಿದ ಅಮೃತಮಯ-ಉಪದೇಶಗಳ ಪ್ರತಿಧ್ವನಿಯೇ ಇರುವವು. ಈ ಗಿರಿಲಿಪಿಯಲ್ಲಿ ಅವನು ಸ್ಪಷ್ಟವಾಗಿ ಹೇಳಿದ್ದೇನಂದರೆ— "ಭಿಕ್ಷುಗಳೂ, ಭಿಕ್ಷುಣಿಗಳೂ ಈ ಎಲ್ಲ ಉಪದೇಶವಾಕ್ಯಗಳನ್ನು ಶ್ರವಣಮಾಡಬೇಕು; ಮನನ ಮಾಡಬೇಕು; ಪ್ರತಿಯೊಬ್ಬ ಉಪಾಸಕನೂ, ಉಪಾಸಿಕೆಯೂ ಜೀವಮಾನದಲ್ಲಿ ಈ ಎಲ್ಲ ಉಪದೇಶಗಳನ್ನು ಅನುಸರಿಸಬೇಕು ಎಂದು ನನಗೆ ಬಲವಾದ ಇಚ್ಛೆಯುಂಟು." ಭಾವರಾ ಅನುಶಾಸನದ ಈ ಮಾತುಗಳಿಂದ ಜೈನರು ಹೇಳುವದು ಸಂಪೂರ್ಣವಾಗಿ ಖಂಡಿಸಲ್ಪಟ್ಟಂತಾಗುವದು. ಆಕಾಲದಲ್ಲಿ ಹಿಂದು ಧರ್ಮವು ಕುಂದಿಲ್ಲದೆ ಇದ್ದರೂ ಬೌದ್ಧಧರ್ಮವೇ ಆ ಕಾಲದಲ್ಲಿ ಪ್ರಚಲಿತವಾದ ಧರ್ಮಗಳಲ್ಲೆಲ್ಲ ತಲೆಯೆತ್ತಿಕೊಂಡಿತು. ಬೌದ್ಧಧರ್ಮವು ಆಗ ಸಾಮ್ರಾಜ್ಯದ ಸರ್ವಸಾಧಾರಣ ಧರ್ಮವಾಗಿತ್ತು. ಕೆಲವರು ಅಶೋಕನು ರಾಜಸಿಂಹಾಸನವನ್ನು ಬಿಟ್ಟು ಭಿಕ್ಷುಧರ್ಮವನ್ನು ಸ್ವೀಕರಿಸಿದ್ದನೆಂದು ಹೇಳುವರು. ಆದರೆ ಶಾಸನಗಳನ್ನು ನೋಡಿದರೆ ಈ ಮತವು ತಪ್ಪೆಂದು ತೋರುವದು. ಕ್ರಿ. ಪೂ. ೨೫೭ ರಲ್ಲಿ ಕೊರೆಸಿದ ಶಿಲಾಲಿಪಿಯಲ್ಲಿ ತಾನು ಒಂದು ವರ್ಷ ಕಾಲಮಾತ್ರ ಭಿಕ್ಷುವ್ರತವನ್ನು ಸ್ವೀಕರಿಸಿ ಸಂಘದಲ್ಲಿದ್ದೆನೆಂದು ಸ್ಪಷ್ಟವಾಗಿ ಬರೆದಿರುವನು.

ತನ್ನ ಆಳಿಕೆಯ ಕೊನೆಯ ಭಾಗದಲ್ಲಿ ಆತನು ಸಂಘನಾಯಕನಾಗಿಯೂ, ಧರ್ಮರಕ್ಷಕನಾಗಿಯೂ, ಸಂಘದ ಶಾಸನ ಕಾರ್ಯವನ್ನು ನಡೆಸುತ್ತಿದ್ದನು. ಸಾರನಾಥ ಶಾಸನವನ್ನು ನೋಡಿದರೆ ಅವನು ಭಿಕ್ಷುಗಳಲ್ಲಿ ವಾದವಿವಾದಗಳುಂಟಾಗದಂತೆ ಕಠಿಣ ನಿಯಮಗಳನ್ನು ವಿಧಿಸಿದ್ದನೆಂದು ಗೊತ್ತಾಗುವದು. ಮೊದಲು ಭಾವರಾಶಾಸನದಲ್ಲಿ ಅಶೋಕನು ತನಗೆ ಮಗಧಾಧಿಪತಿಯೆಂದು ಅಂದುಕೊಂಡಿರುವನು. ರಜಪುತಸ್ತಾನದಲ್ಲಿ ಪರ್ವತ ಶಿಖರದ ಮೇಲಿದ್ದ ವಿಹಾರದ ಅಂಗಳದಲ್ಲಿ ಈ ಶಾಸನವನ್ನು ಸ್ಥಾಪಿಸಿದ್ದನು. ಈ ಶಾಸನದಿಂದ ತಿಳಿಯುವದೇನಂದರೆ ಅಶೋಕನು ಈ ಶಾಸನವನ್ನು ಪ್ರಚಾರ ಪಡಿಸಿದಾಗ ಆ ವಿಹಾರದಲ್ಲಿದ್ದನು. ಸುಪ್ರಸಿದ್ಧ ಚೀನಪ್ರವಾಸಿಯಾದ ಇಸಿಂಗ್ ಎಂಬವನು ಕ್ರಿ. ೭ನೆಯ ಶತಕದಲ್ಲಿ ಭರತಖಂಡಕ್ಕೆ ಬಂದಾಗ ಭಿಕ್ಷುವೇಷವನ್ನು ಧರಿಸಿದ ಅಶೋಕನ ಕಲ್ಲಿನ ಮೂರ್ತಿಯನ್ನು ನೋಡಿದ್ದನು. ಅಶೋಕನ ಭಿಕ್ಷುವೇಷದ ಮೂರ್ತಿಯನ್ನು ನೋಡಿ, ಅವನಿಗೇನೂ ಆಶ್ಚರ್ಯವಾಗಿರಲಿಲ್ಲ. ಯಾಕಂದರೆ ಚೀನದೇಶದ ಲಿಂಗ್, ಲಿಂಗ್ ವಂಶದ ಎಲ್ಲಕ್ಕೂ ಮೊದಲನೆಯ ರಾಜನಾದ ಕೋತ್ಸುಬೂತಿಯ ಇತಿಹಾಸವನ್ನು ಇಸಿಂಗನು ಅರಿತಿದ್ದನು. ಈ ಚೀನರಾಜನು ೫೦೨ರಿಂದ ೫೪೯ರ ವರೆಗೆ ಆಳಿದನು. ಅವನು ಬಿಕ್ಷುವಿನಂತೆ ಒಪ್ಪತ್ತು ಊಟಮಾಡಿ ಸಂಘದ ನಿಯಮಗಳನ್ನು ಪಾಲಿಸುತ್ತಿದನು. ಅವನು ಒಮ್ಮೆ ೫೨೭ರಲ್ಲಿಯೂ ಇನ್ನೊಮ್ಮೆ ೫೪೯ರಲ್ಲಿಯೂ

ಭಿಕ್ಷುವೇಷವನ್ನು ಧರಿಸಿದ್ದನು. ಬ್ರಹ್ಮದೇಶದಲ್ಲಿಯೂ ಅರಸರು ಭಿಕ್ಷುವ್ರತವನ್ನು ಧರಿಸಿದ ಕಥೆಗಳು ಇತಿಹಾಸದಲ್ಲುಂಟು. ಬೋಧಾಪ್ರಾ ಎಂಬವನು ಬಿಕ್ಷುವ್ರತವನ್ನು ಧರಿಸಿ ಎಷ್ಟೋ ವರ್ಷಗಳನ್ನು ಸಂಘದಲ್ಲಿ ಕಳೆದನು. ಈ ಪದ್ಧತಿಯು ಬೌದ್ಧರಲ್ಲಷ್ಟೇ ಅಲ್ಲ. ಜೈನರಲ್ಲಿಯೂ ಹಿಂದುಜನರಲ್ಲಿಯೂ ಇತ್ತೆಂಬದಕ್ಕೆ ಅನೇಕ ದೃಷ್ಟಾಂತಗಳುಂಟು. ಗುಜರಾಥದ ಕುಮಾರಪಾಲನೆಂಬ ಜೈನರಾಜನು ೧೨ನೇ ಶತಕದಲ್ಲಿ ಆಳಿದನು. ಇವನೂ ಜೈನ ಸಂಘನಾಯಕನೆಂಬ ಉಪಾಧಿಯನ್ನು ಧರಿಸಿ, ಬೇರೆ ಬೇರೆ ಕಾಲದಲ್ಲಿ ವಿರಕ್ತ ವ್ರತದ ದೀಕ್ಷೆಯನ್ನು ತೆಗೆದುಕೊಂಡಿದ್ದನು.

ಅಶೋಕನ ರಾಜ್ಯಶಾಸನ ಪದ್ಧತಿ, ಆತನ ಸಾಮಾಜಿಕ ಕಾರ್ಯಗಳು, ಶಿಕ್ಷಣ ಪ್ರಸಾರ ಧರ್ಮ ಪ್ರಸಾರ ಇವುಗಳೆಲ್ಲೆಲ್ಲ ಬುದ್ಧದೇವನು ತೋರಿಸಿದ ಧರ್ಮ ಮತವನ್ನು ಹಬ್ಬಿಸುವದೇ ಆತನ ಮುಖ್ಯಧ್ಯೇಯವಾಗಿತ್ತು. ಈ ಉದ್ದೇಶವನ್ನು ಕೊಸೆಗಾಣಿಸುವದ ಕ್ಕಾಗಿ ಅವನು ಧರ್ಮ ಮಹಾಮಾತ್ರರನ್ನು ನಿಯಮಿಸಿದ್ದನು. ಕಾಮುದಾರರಿಗೆ ಈ ಉಪದೇಶವನ್ನೇ ಕೊಟ್ಟಿದ್ದನು. ಶಿಲಾಲಿಪಿಗಳಲ್ಲಿ ಇದನ್ನೇ ಕೊರೆಸಿದ್ದನು. ಅಶೋಕನಿಗೆ ಬೌದ್ಧಧರ್ಮದಲ್ಲಿ ಅತ್ಯಂತಾಸುರಾಗವಿದ್ದರೂ, ಅನ್ಯಧರ್ಮಗಳ ಮೇಲೆ ಔದಾಸೀನ್ಯವನ್ನು ಇಲ್ಲವೆ ತಿರಸ್ಕಾರವನ್ನು ತೋರಿಸುತ್ತಿರಲಿಲ್ಲ. ಆತನ ಧರ್ಮವು ಬಹು ಉದಾರವೂ ನೀತಿಪೂರ್ಣವೂ ಆಗಿತ್ತು. ಆತನ ರಾಜ್ಯಶಾಸನ ಪದ್ಧತಿಯು ಇಂಥ ಉದಾರಧರ್ಮದ ತಳಹದಿಯ ಮೇಲೆ ಸ್ಥಾಪಿಸಲ್ಪಟ್ಟಿತ್ತು. ಆತನ ಪ್ರಜಾವಾತ್ಸಲ್ಯವೂ, ಕರುಣಾಪೂರ್ಣವಾದ ಹೃದಯವೂ, ನಿಸ್ಪೃಹವಾದ ಉದಾರಭಾವವೂ, ಆತನ ಅಮೌಲ್ಯವಾದ ಅನುಶಾಸನಗಳೂ, ಯಾವಾಗಲೂ ಎಲ್ಲ ಅರಸರಿಗೂ ಅನುಕರಣಾರ್ಹವಾಗಿರುವವು. ಒಬ್ಬನೇ ರಾಜನೂ, ಭಿಕ್ಷುವೂ, ಚಕ್ರವರ್ತಿಯೂ, ಸಾಧುವೂ ಆದಂಥ ಕ್ಷಾತ್ರ, ಬ್ರಾಹ್ಮಣ್ಯ ಶಕ್ತಿಗಳ ಸಮಾವೇಶ ಉಳ್ಳಂಥ ನರಪತಿಯು ಐತಿಹಾಸಿಕ ಯುಗದಲ್ಲಿ ಒಬ್ಬ ಅಶೋಕನು ಮಾತ್ರ ಇರುವನು. ಈತನು ರಾಜಕಾರ್ಯಗಳಲ್ಲಿ ಅತ್ಯಂತ ತತ್ಪರನಿದ್ದನು. ಒಂದೆಡೆಗೆ ಆತನು ಪ್ರತಿ ವೇದಕರ ಸುದ್ದಿಗಳನ್ನು ಕೇಳುವದು, ಎಲ್ಲ ಕಾಲದಲ್ಲಿ ಪ್ರಜೆಗಳ ವಿಜ್ಞಾಪನೆಯನ್ನು ಕೇಳಿಕೊಳ್ಳುವದು, ರಾಜೂಕ, ಮಹಾಮಾತ್ರ, ಧರ್ಮ ಮಹಾಮಾತ್ರ ಮೊದಲಾದವರ ಮೇಲೆ ತೀಕ್ಷ್ಣ ದೃಷ್ಟಿಯನ್ನಿಟ್ಟು ರಾಜ್ಯಶಾಸನ ಕಾರ್ಯಗಳನ್ನು ನಿರ್ಣಯಿಸುವದು, ಪ್ರಜೆಗಳ ಅನುಕೂಲತೆಗಾಗಿ ಪ್ರಶಸ್ತವಾದ ರಾಜಮಾರ್ಗಗಳನ್ನು ಮಾಡಿಸುವದು, ಜಲಾಶಯಗಳನ್ನು ತೋಡಿಸುವದು, ಕಾಮದಾರರನ್ನು ನಿಯಮಿಸುವದು, ಯುದ್ಧಗಳಿಗೋಸ್ಕರ ಅಗಣಿತ ಸೇನೆಯನ್ನೂ ಯುದ್ಧ ಸಾಮಗ್ರಿಯನ್ನೂ ಸಜ್ಜು ಮಾಡುವದು ಈ ಕೆಲಸಗಳಲ್ಲಿ ತೊಡಗಿರುತ್ತಿದ್ದನು. ಇನ್ನೊಂದೆಡೆಗೆ ಆ ದೇವಪ್ರಿಯ ನರಪತಿಯು ಉಪಗುಪ್ತನೊಡನೆ ತೀರ್ಥಯಾತ್ರೆ ಮಾಡುವದು, ನಾಲ್ಕೂ ಕಡೆಗೆ ಗಿರಿಗಳ ಮೇಲೆ ಬೌದ್ಧಧರ್ಮದ ಉಪದೇಶಗಳನ್ನು ಕೊರೆಯಿಸುವದು, ಸಂಸಾರತ್ಯಾಗಿಯಾದ ಭಿಕ್ಷುವಿನಂತೆ ಯಾವಾಗಲೂ

ಧರ್ಮಪ್ರಸಂಗದಲ್ಲಿ ಕಾಲಕಳೆಯುವದು, ಮಾನವಜಾತಿಯ ಕಲ್ಯಾಣಕ್ಕಾಗಿ ಧರ್ಮವಿಧಿಗಳನ್ನು ಪ್ರಸಾರಗೊಳಿಸುವದು, ಪ್ರಾಣಿಹಿಂಸೆಯನ್ನು ನಿವಾರಿಸುವದು, ಪರದೇಶಗಳಿಗೆ ಧರ್ಮ ಪ್ರಚಾರಕರನ್ನು ಕಳಿಸುವದು, ಈ ಕೆಲಸಗಳನ್ನು ಮಾಡುವನು. ಒಂದು ಕಡೆಗೆ ಅಪರಾಧಿಗಳಿಗೆ ಶಿಕ್ಷೆಕೊಡುವನು; ಕಾಮದಾರರ ಕೆಲಸಗಳ ಮೇಲೆ ತೀಕ್ಷ್ಣದೃಷ್ಟಿಯನ್ನಿಡುವನು. ಇನ್ನೊಂದು ಕಡೆಗೆ ರೋಗಪೀಡಿತರಿಗೂ ಪಶುಗಳಿಗೂ ಚಿಕಿತ್ಸಾಲಯ ಔಷಧಾಲಯಗಳನ್ನು ಕಟ್ಟಿಸುವನು; ಔಷಧದ ಗಿಡಮೂಲಿಕೆಗಳನ್ನು ಸಂಗ್ರಹಿಸುವದರಲ್ಲಿ ಜನರನ್ನು ನಿಯಮಿಸುವನು. ಈ ಪ್ರಕಾರದ ವಾಸನಾರಹಿತನಾದ ಚಕ್ರವರ್ತಿಯು ಭರತಖಂಡದ ಇತಿಹಾಸದಲ್ಲಿ ದೊರೆಯುವದು ಅಪೂರ್ವವು- ಜಗತ್ತಿನ ಇತಿಹಾಸದಲ್ಲಿ ಕೂಡ ಎರಡು ಸಾವಿರ ವರ್ಷಗಳ ಪೂರ್ವದಲ್ಲಿ ಒಮ್ಮೆ ಮಾತ್ರ ಆಗಿಹೋದನು.

೧೭ನೆಯ ಅಧ್ಯಾಯ.

ಅಶೋಕನ ಸಂಬಂಧವಾಗಿ ಬೇರೆ ಬೇರೆ ಕಥೆಗಳು.

ಇದುವರೆಗೆ ನಾವು ಅಶೋಕನ ವಿಷಯವಾಗಿ ಐತಿಹಾಸಿಕ ಸಂಗತಿಗಳನ್ನು ಸಾಧ್ಯವಿದ್ದ ಮಟ್ಟಿಗೆ ಆಲೋಚಿಸಿದೆವು; ಈಗ ಆತನ ಕುಟುಂಬದವರ ವಿಷಯವಾಗಿ ಪ್ರಚಲಿತವಾಗಿರುವ ಒಂದೆರಡು ಕಥೆಗಳನ್ನು ಹೇಳಿ ಗ್ರಂಥವನ್ನು ಮುಗಿಸುವೆವು. ಅಶೋಕಾವದಾನದಲ್ಲಿ ಅಶೋಕನಿಗೆ ಬಹುಜನ ಅರಸಿಯರಿದ್ದರೆಂದು ಉಲ್ಲೇಖಿಸಿದೆ. ಅವರಲ್ಲಿ ಮುಖ್ಯಳಾದ ಅರಸಿಗೆ ಅಸಂಧಿಮಿತ್ರೆಯೆಂದು ಹೆಸರು. ಅಶೋಕನು ಉಜ್ಜಯಿನಿಯಲ್ಲಿರುವ 'ದೇವಿ' ಎಂಬ ಒಬ್ಬ ಶ್ರೇಷ್ಠಿ ಕನ್ಯೆಯನ್ನು ಮದುವೆಯಾಗಿದ್ದನೆಂದು ಮಹಾವಂಶದಲ್ಲಿ ಹೇಳಿದೆ. ೭ನೆಯ ಸ್ತಂಭಲಿಪಿಯನ್ನೋದಲು ದೇವಿಯೆಂಬದು ಒಂದು ವ್ಯಕ್ತಿಯ ಹೆಸರಾಗಿರದೆ ಅದು ಉಪಾಧಿಯೆಂದು ಗೊತ್ತಾಗಿರುವದು. ಅದು ಮುಖ್ಯಪಟ್ಟರಾಣಿಗೆ ಮಾತ್ರ ಉಪಯೋಗಿಪಲ್ಪಡುತ್ತಿತ್ತು. ಮೇಲೆ ಹೇಳಿದ ಶಾಸನದಲ್ಲಿ ಅಶೋಕನು ಬೇರೆ ರಾಣಿಯರ ಮಕ್ಕಳಿಗಿಂತ ದೇವಿಯ ಮಕ್ಕಳ ಯೋಗ್ಯತೆಯನ್ನೂ, ಮುಖ್ಯತ್ವವನ್ನೂ ಒಪ್ಪಿರುವನು. ಅಶೋಕನ ಆಳಿಕೆಯ ೧೫ನೆಯ ವರ್ಷ ಅಸಂಧಿಮಿತ್ರೆಯು ಮರಣಹೊಂದಿದಳು. ಮುಂದೆ ೪ ವರ್ಷಗಳಾದ ಬಳಿಕ ಅಶೋಕನು ತಿಷ್ಯರಕ್ಷಿತೆಯನ್ನು ಮದುವೆಯಾದನು. ೭ನೆಯ ಸ್ತಂಭಲಿಪಿಯಲ್ಲಿ ತಿವರನ ತಾಯಿಯಾದ

ಕಾರುವಾಕಿ ಎಂಬ ಇನ್ನೊಬ್ಬ ಅರಸಿಯ ಉಲ್ಲೇಖವುಂಟು. ಏನೇ ಇರಲಿ, ಅಶೋಕನಿಗೆ ಬಹುಜನ ಹೆಂಡಿರಿದ್ದರೆಂಬದು ಇದರಿಂದ ಸ್ಪಷ್ಟವಾಗುವದು. ಅಶೋಕನಿಗೆ ಎಷ್ಟು ಜನ ಮಕ್ಕಳಿದ್ದರೆಂಬದನ್ನು ನಿರ್ಣಯಿಸುವದು ಕಠಿಣವು. ಅಶೋಕಾವದಾನದಲ್ಲಿ ಕುನಾಲನೆಂಬ ಒಬ್ಬ ಮಗನ ಉಲ್ಲೇಖವುಂಟು. ಅಶೋಕನಿಗೆ ಜಾಲೂಕನೆಂಬ ಒಬ್ಬ ಮಗನೂ ಇದ್ದನು. ಅವನು ಒಂದು ಕಾಲದಲ್ಲಿ ಕಾಶ್ಮೀರದ ಕಾರಭಾರಿಯಾಗಿದ್ದನು. ಆತನ ಅರಸಿಯ ಹೆಸರು ಈಶಾನೀದೇವಿ. ಅಶೋಕನ ಚಾರುಮತಿ ಎಂಬ ಮಗಳ ಉಲ್ಲೇಖವು ಹಲವು ಕಡೆಗೆ ಇರುವದು. ಮಹಾವಂಶದಲ್ಲಿ ಮಹೇಂದ್ರನೆಂಬ ಮಗನ, ಮತ್ತು ಸಂಘಮಿತ್ರೆಯೆಂಬ ಮಗಳ ಉಲ್ಲೇಖವಿರುವದು. ಉಜ್ಜಯಿನಿಯಲ್ಲಿ ಹುಟ್ಟಿದ್ದರಿಂದ ಉಜ್ಜೀನಿಯ ಎಂಬ ಹೆಸರಿಟ್ಟ ಒಬ್ಬ ಮಗನ ಉಲ್ಲೇಖವೂ ಇರುವದು. ಆತನು ಮಹೇಂದ್ರನ ತಮ್ಮನು. ಅಶೋಕಾವದಾನದಲ್ಲಿ ಮಹೇಂದ್ರನು ಅಶೋಕನ ತಮ್ಮನೆಂದು ಹೇಳಿದೆ.

ತರುಣನಾದ ಮಹೇಂದ್ರನು ದುರಾಚಾರಿಯೂ, ಬಹಳ ವೆಚ್ಚದವನೂ ಆಗಿದ್ದನು. ಆತನು ಅರಸನಂತೆ ಉಡಿಗೆ ತೊಡಿಗೆಗಳನ್ನು ಧರಿಸುತ್ತಿದ್ದನು. ಒಂದು ಸಾರೆ ಮಂತ್ರಿಗಳು ಆತನು ಮಾಡಿದ ಪ್ರಜೋಪದ್ರವವನ್ನು ಅರಸನೆದುರಿಗೆ ಹೇಳಿದರು. ಆಗ ಅಶೋಕನು ಮಹೇಂದ್ರನನ್ನು ಕರೆದು–" ಪ್ರಜೆಗಳನ್ನು ಕಾಪಾಡುವದು ಅರಸನ ಕೆಲಸವು. ನಾನು ನಿನ್ನ ಅಪರಾಧಕ್ಕಾಗಿ ನಿನಗೆ ಶಿಕ್ಷೆಯನ್ನು ವಿಧಿಸಿದರೆ ಸ್ವರ್ಗವಾಸಿ ಪಿತೃಗಣವು ನನಗೆ ಶಾಪಕೊಡುವದು; ಇನ್ನು ನಿನ್ನ ಅಪರಾಧವನ್ನು ಕ್ಷಮಿಸಿದರೆ ಪ್ರಜೆಗಳು ನನ್ನಲ್ಲಿ ಅಸಂತುಷ್ಟರಾಗುವರು. ನೀನು ನನ್ನ ಸೋದರನಾಗಿದ್ದು ನನ್ನ ಪ್ರೀತಿ ವಿಶ್ವಾಸಗಳಿಗೆ ಎರವಾಗುವ ಕೆಲಸವನ್ನು ಏಕೆ ಮಾಡುವೆ? ಸರಿಯಾಗಿ ವಿಚಾರಮಾಡಿ ನಿನಗೆ ಶಿಕ್ಷೆಯನ್ನು ಕೊಡುವೆನು " ಎಂದು ಹೇಳಿದನು. ಮಹೇಂದ್ರನು ಅಶೋಕನ ಮಾತನ್ನು ಕೇಳಿ ತಾನು ದೊಡ್ಡ ತಪ್ಪು ಮಾಡಿದೆನೆಂದು ಒಪ್ಪಿ ತಪ್ಪಿಗೆ ತಕ್ಕ ಶಿಕ್ಷೆಯನ್ನು ಹೊಂದುವ ಮೊದಲು ೭ ದಿವಸಗಳ ಅವಧಿಯನ್ನು ಬೇಡಿಕೊಂಡನು. ರಾಜನು ಅದಕ್ಕೆ ಒಪ್ಪಿ ಆತನನ್ನು ಒಂದು ಕತ್ತಲೆಯ ಕೋಣೆಯಲ್ಲಿ ಸೆರೆಹಾಕಿದನು. ಮರು ದಿವಸ ಬೆಳಗ್ಗೆ ಪಹರೆಯವನು ಹೊರಗಿನಿಂದ—ಒಂದು ದಿವಸವು ಹೋಯಿತು. ೬ ದಿವಸಗಳುಳಿದವು ಎಂದು ಒದರಿ ಹೇಳಿದನು. ಪ್ರತಿದಿವಸ ಬೆಳಗ್ಗೆ ಇದೇ ಮೇರೆಗೆ ಹೋದ ಮತ್ತು ಉಳಿದ ದಿವಸಗಳನ್ನು ತಿಳಿಸುತ್ತಿದ್ದನು. ಪಶ್ಚಾತ್ತಾಪದಿಂದ ಮಹೇಂದ್ರನು ಮರುಗಿದನು. ಆತನು ಹಗಲಿರುಳು ಸಾವಿನ ಚಿಂತೆಯಲ್ಲಿಯೇ ಇದ್ದನು. ಈ ಮೇರೆಗೆ ನಿರಂತರವಾಗಿ ಜಗತ್ತಿನ ಅನಿತ್ಯತ್ವವನ್ನು ಧ್ಯಾನಿಸುತ್ತಿದ್ದ ಮಹೇಂದ್ರನಿಗೆ ೭ನೆಯ ದಿವಸ ಅರ್ಹತ್ವದವು ಪ್ರಾಪ್ತವಾಯಿತು. ಅಶೋಕನು ಆತನ ಆ ಸ್ಥಿತಿಯನ್ನು ನೋಡಿ ನೀನು ಧರ್ಮದ ಪ್ರಭಾವದಿಂದ ತಪ್ಪಿನಿಂದ ಬಿಡುಗಡೆ ಹೊಂದಿದೆ, ಈಗ ಅರಮನೆಗೆ ಬಾ ಎಂದು ಹೇಳಿದನು. ಆಗ ಮಹೇಂದ್ರನು ಮಹಾರಾಜರೇ, ಪೃಥಿವಿಯ ಕ್ಷಣಿಕ ಸುಖವು ನನಗೆ ವಿಷದಂತೆ ತೋರಹತ್ತಿದೆ, ನಾನು

ನಿರ್ಜನಪ್ರದೇಶದಲ್ಲಿದ್ದು ಧರ್ಮವನ್ನು ಸಂಪಾದಿಸಿಕೊಳ್ಳುವೆನು ಎಂದು ಹೇಳಿದನು. ಬಳಿಕ ಅಶೋಕನು ರಾಜಪುತ್ರನು ನಿರ್ಜನಪ್ರದೇಶದಲ್ಲಿ ವಾಸಿಸುವ ಅವಶ್ಯವಿಲ್ಲ; ನಾನು ರಾಜಧಾನಿಯಲ್ಲಿಯೇ ಒಂದು ಕುಟೀರವನ್ನು ಕಟ್ಟಿಸಿಕೊಡುವೆನು; ಎಂದು ಹೇಳಿ ದೈತ್ಯರಿಗೆ ಆಜ್ಞಾಪಿಸಿ ಕೂಡಲೆ ಒಂದು ಕಲ್ಲಿನ ಮನೆಯನ್ನು ಕಟ್ಟಿಸಿದನು; ಮುಂದೆ ಮಹೇಂದ್ರನು ದಕ್ಷಿಣದೇಶಕ್ಕೆ ಬಂದು ಕಾವೇರೀ ತೀರದಲ್ಲಿ ಒಂದು ವಿಹಾರವನ್ನು ಕಟ್ಟಿಸಿದ್ದನು. ಸಾವಿರಾರು ವರ್ಷಗಳಾದರೂ ಅದರ ಅವಶೇಷವು ಅಲ್ಲಿ ಇತ್ತು. ಮಹೇಂದ್ರನು ಯೋಗ ಶಕ್ತಿಯಿಂದ ಆಕಾಶದಲ್ಲಿ ಸಂಚರಿಸುತ್ತ ಸಿಂಹಲಕ್ಕೆ ಬಂದಿದ್ದನೆಂದೂ, ಮತ್ತು ಅಲ್ಲಿ ಬೌದ್ಧ ಧರ್ಮವನ್ನು ಪ್ರಚಾರಗೊಳಿಸಿ ಸಿಂಹಲ ವಾಸಿಗಳ ಕಲ್ಯಾಣ ಮಾಡಿದನೆಂದೂ ಪ್ರವಾದವಿರುವದು.

ಫಾಹಿಯಾನ ಮತ್ತು ಹುಯೆನ್‌ತ್ಸಾಂಗ ಇವರಿಬ್ಬರೂ ಮಹೇಂದ್ರನು ಅಶೋಕನ ತಮ್ಮನೆಂದು ಹೇಳಿರುವರು. ಹುಯನ್‌ತ್ಸಾಂಗನು ಮಧುರೆಯ ಪೂರ್ವಕ್ಕೆ ಇರುವ ಪ್ರಾಚೀನ ಸಂಘಾರಾಮವನ್ನು ಅಶೋಕನ ತಮ್ಮನಾದ ಮಹೇಂದ್ರನು ಕಟ್ಟಿಸಿರುವನೆಂದು ಬರೆದಿದ್ದಾನೆ. ಕಾವೇರಿಯ ದಂಡೆಯ ಮೇಲಿನ ವಿಹಾರದಲ್ಲಿ ಮಹೇಂದ್ರನು ವಾಸಿಸುತ್ತಿದ್ದನು. ಈ ಪ್ರದೇಶವು ಸಿಂಹಲಕ್ಕೆ ಸಮೀಪವಾಗುವದು. ಆದದರಿಂದ ಈ ಪ್ರದೇಶದಿಂದ ಮಹೇಂದ್ರನು ಸಿಂಹಲಕ್ಕೆ ಹೋಗಿದ್ದನೆಂಬದು ಸಹಜವದೆ. ಮಹೇಂದ್ರನು ಅಶೋಕನ ತಮ್ಮನೋ ಮಗನೋ ಎಂಬದನ್ನೂ ಆತನು ಸಿಂಹಲಕ್ಕೆ ಹೋಗಿದ್ದನೋ ಕಾವೇರಿಯ ದಂಡೆಯ ಮೇಲಿನ ಆಶ್ರಮದಲ್ಲಿಯೇ ಕಾಲಕ್ರಮಣ ಮಾಡಿದನೋ ಎಂಬದನ್ನೂ ನಿರ್ಣಯಿಸುವದು ಅಸಾಧ್ಯವು. ಆದರೆ ಸಿಂಹಲದ ಐತಿಹಾಸಿಕರು ಮಹೇಂದ್ರನ ಜನ್ಮವೃತ್ತಾಂತ, ಆತನ ತಾಯಿಯ ವೃತ್ತಾಂತ, ಆತನ ತಂಗಿಯಾದ ಸಂಘಮಿತ್ರೆಯ ವೃತ್ತಾಂತ ಮೊದಲಾದವುಗಳನ್ನು ಅನುಪೂರ್ವಿಯಿಂದ ಸರಿಯಾಗಿ ವರ್ಣಿಸಿರುವದನ್ನು ನೋಡಿದರೆ ಅದು ಕಲ್ಪಿಸಿ ಬರೆದ ಸಂಗತಿಯೆಂದು ತೋರುವದಿಲ್ಲ.

ವೀತಶೋಕನ ಇಲ್ಲವೆ ವಿಗತಾಶೋಕನ ಕಥೆ.

ಈ ಕಥೆಯು ಅಶೋಕಾವದಾನದಲ್ಲಿ ಮಾತ್ರ ಉಂಟು. ವಿಗತಾಶೋಕನಿಗೆ ಜೈನ ತೀರ್ಥಂಕರರ ಮೇಲೆ ಬಹಳ ಭಕ್ತಿಯಿತ್ತು. ಆತನು ಬೌದ್ಧರಿಗೆ ಭೋಗಾಸಕ್ತರೆಂದು ಉಪಹಾಸಮಾಡುತ್ತಿದ್ದನು. ಅಶೋಕನು ಆತನ ಬಳಿಯಲ್ಲಿ ಬೌದ್ಧಧರ್ಮದ ಸುದ್ದಿಯನ್ನೆತ್ತಿದರೆ ಆತನು ಬೌದ್ಧರು ಭಿಕ್ಷುಗಳ ಕೈಯೊಳಗಿನ ಗೊಂಬೆಗಳೆಂದು ಉಪಹಾಸಮಾಡುತ್ತಿದ್ದನು, ಅಶೋಕನು ಆತನನ್ನು ಬೌದ್ಧಧರ್ಮದಲ್ಲಿ ತೆಗೆದುಕೊಳುವದಕ್ಕೆ ಬೇರೊಂದು ಉಪಾಯವನ್ನು ಯೋಚಿಸಿದನು. ಮಂತ್ರಿಗಳು ಹಂಚಿಕೆಯಿಂದ ಅವನಿಗೆ ಒಂದು ದಿವಸ ರಾಜಚಿಹ್ನಗಳನ್ನು ಧರಿಸುವಂತೆ ಮಾಡಿದರು. ಅಶೋಕನು ಅದನ್ನು ನೋಡಿ ಸುಳ್ಳೇ ಸಿಟ್ಟಿಗೆದ್ದಂತೆ ತೋರಿಸಿ ಆ ಅಪರಾಧಕ್ಕೆ ಮರಣಶಿಕ್ಷೆಯನ್ನು ವಿಧಿಸಿದನು. ಮತ್ತು ನೀನು ೭ ದಿವ

ನಗಳವರೆಗೆ ಅರಸೊತ್ತಿಗೆಯನ್ನನುಭವಿಸು, ಬಳಿಕ ನಿನಗೆ ಮರಣ ಶಿಕ್ಷೆಯು ಕೊಡಲ್ಪಡುವದು ಎಂದು ಹೇಳಿದನು. ವಿಗತಾಶೋಕನು ಪ್ರಾಣಭಯದಿಂದ ಕಂಗೆಟ್ಟು ಸ್ಥವಿರಯಶನ ಬಳಿಯಲ್ಲಿ ಧರ್ಮದ ಶಾಂತಿದಾಯಕವಾದ ತತ್ವಗಳನ್ನು ಕೇಳಿ ಬೌದ್ಧಧರ್ಮವನ್ನು ಆಶ್ರಯಿಸಿದನು. ಬಳಿಕ ಆತನು ಭಿಕ್ಷುವ್ರತವನ್ನು ಸ್ವೀಕರಿಸುತ್ತೇನೆಂದು ಅಶೋಕನ ಒಪ್ಪಿಗೆಯನ್ನು ಕೇಳಿದನು. ಅಶೋಕನು ದುಃಖದಿಂದ ಒಪ್ಪಿಗೆಯನ್ನಿತ್ತನು. ಭಿಕ್ಷುಗಳ ಕಠೋರ ನಿಯಮಗಳನ್ನು ಪಾಲಿಸುವದಾಗಲಾರದೆಂದು ಅಶೋಕನು ಅರಮನೆಯಲ್ಲಿಯೇ ಅವನಿಗೊಂದು ಕುಟೀರವನ್ನು ಹಾಕಿಸಿಕೊಟ್ಟನು. ವಿಗತಾಶೋಕನು ಆ ಸ್ಥಳವನ್ನು ಬಿಟ್ಟು ಕುಕ್ಕುಟಾರಾಮಕ್ಕೆ ಹೊರಟು ಹೋದನು. ಕೆಲವು ದಿವಸ ಅಲ್ಲಿ ಇದ್ದು ಮುಂದೆ ವಿದೇಹವಿಹಾರಕ್ಕೆ (ಈಗಿನ ತಿರಹುತ) ಹೋಗಿ ಅರ್ಹತ್ಪದವನ್ನು ಹೊಂದಿದನು. ಮುಂದೆ ಚೀರ ಕೌಪೀನಧಾರಿಯಾಗಿ ವಿಗತಾಶೋಕನು ಪಾಟಲಿಪುತ್ರಕ್ಕೆ ಬರಲು ಅಶೋಕನು ಆತನಿಗೆ ಬಹಳ ಸತ್ಕಾರಮಾಡಿದನು. ಅಲ್ಲಿಂದ ಮೇರೆಯ ಪ್ರದೇಶಕ್ಕೆ ಹೋಗಿ ಅಲ್ಲಿ ಬೇನೆಬಿದ್ದನು. ಅಶೋಕನು ಅವನಿಗೆ ಔಷಧೋಪಚಾರಗಳ ವ್ಯವಸ್ಥೆಯನ್ನು ಮಾಡಿಸಲು ಅವನು ಆರೋಗ್ಯವನ್ನು ಹೊಂದಿದನು.

ವಂಗದೇಶದಲ್ಲಿ ಪೌಂಡ್ರವರ್ಧನನೆಂಬ ಗ್ರಾಮದಲ್ಲಿ ಒಬ್ಬ ಬ್ರಾಹ್ಮಣನು ಬುದ್ಧದೇವನ ಮೂರ್ತಿಯನ್ನು ಒಡೆದನೆಂಬ ಸುದ್ದಿಯನ್ನು ಕೇಳಿ ಅಶೋಕನು ಕ್ರೋಧಾಂಧನಾದನು. ರಾಜನ ಅಪ್ಪಣೆಯಿಂದ ಆ ಊರಲ್ಲಿ ೧೫೦೦೦ ಜನರು ಕೊಲ್ಲಲ್ಪಟ್ಟರೆಂದು ಪ್ರವಾದವುಂಟು. ಕೆಲವು ದಿವಸಗಳ ತರುವಾಯ ಪಾಟಲಿಪುತ್ರದಲ್ಲಿ ಒಬ್ಬ ವಿರಕ್ತ ಬ್ರಾಹ್ಮಣನು ಬುದ್ಧನ ಮೂರ್ತಿಯನ್ನು ಒಡೆದ ಸುದ್ದಿಯನ್ನು ಕೇಳಿ ಅಶೋಕನು ಆ ಬ್ರಾಹ್ಮಣನ ಬಂಧು ಬಳಗವನ್ನೆಲ್ಲ ಜೀವಂತ ಸುಡಬೇಕೆಂದು ಅಪ್ಪಣೆಮಾಡಿದನು. ಯಾವನು ಆ ಬ್ರಾಹ್ಮಣನ ತಲೆಗಡಿದು ತಲೆಯನ್ನು ತಂದು ತೋರಿಸುವನೋ ಅವನಿಗೆ ಒಂದು ದೀನಾರವು ಇನಾಮಾಗಿ ಕೊಡಲ್ಪಡುವದು ಎಂದು ಡಂಗುರ ಹೊಡೆಯಿಸಿದನು. ಈ ಭಯಂಕರವಾದ ಅಪ್ಪಣೆಯಾದ ಕೆಲವು ದಿವಸಗಳ ತರುವಾಯ ಮುಂಡಿತಮಸ್ತಕನಾಗಿ ಚೀರಗಳನ್ನು ಧರಿಸಿದ ವಿಗತಾಶೋಕನು ಒಬ್ಬ ಗೋವಳಿಗನ ಮನೆಯಲ್ಲಿ ಇಳಿದುಕೊಂಡಿದ್ದನು. ಆ ಗೋವಳಿಗನ ಹೆಂಡತಿಯು ಇವನನ್ನು ನೋಡಿ ಈತನೇ ಬುದ್ಧಮೂರ್ತಿಯನ್ನು ಒಡೆದ ಬ್ರಾಹ್ಮಣನಾಗಿರಬೇಕೆಂದು ನಿಶ್ಚಯಿಸಿ ಗಂಡನಿಗೆ ಈತನ ತಲೆಯನ್ನು ಕೊಯ್ದು ಒಯ್ದು ರಾಜನಿಗೆ ತೋರಿಸಿದರೆ ಹೆಚ್ಚಿನ ಇನಾಮು ದೊರೆಯುವದೆಂದು ಹೇಳಿದಳು. ಆಗ ಆ ಗೋವಳಿಗನು ಮರೆಯಲ್ಲಿ ವಿಗತಾಶೋಕನ ಕೊಲೆಮಾಡಿ ಆತನ ತಲೆಯನ್ನು ರಾಜಸಭೆಗೆ ಒಯ್ದು ಇನಾಮನ್ನು ಕೇಳಿದನು. ಅಶೋಕನು ತನ್ನ ತಮ್ಮನ ತಲೆಯನ್ನು ನೋಡಿ ಬಹಳ ದುಃಖಬಟ್ಟನು. ಮತ್ತು ಕೂಡಲೆ ಆ ನಿಷ್ಕರುಣವಾದ ಅಪ್ಪಣೆಯನ್ನು ರಹಿತಪಡಿಸಿದನು. ಆ ದಿವಸದಿಂದ ರಾಜ್ಯದಲ್ಲಿ ಮರಣ ಶಿಕ್ಷೆಯು ರಹಿತವಾಯಿತು.

ಯುವರಾಜನಾದ ತಿಷ್ಯನ ವಿಷಯವಾಗಿಯೂ ಒಂದು ಕಥೆಯು ಪ್ರಚಲಿತವಾಗಿರುವದು. ಪಾಠಕರ ತಿಳುವಳಿಕೆಗಾಗಿ ಅದನ್ನು ಇಲ್ಲಿ ಕೊಟ್ಟಿದೆ. ಒಮ್ಮೆ ಯುವರಾಜತಿಷ್ಯನು ಅರಣ್ಯದಲ್ಲಿ ಸಂಚರಿಸುವಾಗ ಆನಂದದಿಂದ ಸಂಚರಿಸುವ ಒಂದು ಚಿಗರೆಗಳ ಗುಂಪನ್ನು ನೋಡಿದನು. ಆಗ ಅವನ ಮನಸ್ಸಿಗೆ ಈ ಚಿಗರೆಗಳು ಅಡವಿಯಲ್ಲಿ ಹುಲ್ಲು ಕಂಟಿಗಳನ್ನು ತಿಂದುಕೊಂಡು ನಿಶ್ಚಿಂತವಾಗಿ ಹಾರಾಡುತ್ತಿವೆ; ಆದರೆ ಮನೋಹರವಾದ ವಿಹಾರದಲ್ಲಿದ್ದುಕೊಂಡು ಒಳ್ಳೆಯ ಆಹಾರವನ್ನುಂಡು ಭಿಕ್ಷುಗಳು ವಿನೋದವಾಗಿ ಯಾಕೆ ಕಾಲಕಳೆಯುವದಿಲ್ಲ? ಎಂದು ಅನಿಸಿತು. ಮನೆಗೆ ಬಂದು ತನ್ನ ಮನಸ್ಸಿನಲ್ಲಿ ಬಂದ ವಿಚಾರವನ್ನು ಅಣ್ಣನಾದ ಮಹಾರಾಜನಿಗೆ ಹೇಳಿದನು. ಅಶೋಕನು ಅದನ್ನು ಕೇಳಿ ನಾನು ನಿನಗೆ ಏಳು ದಿನಗಳವರೆಗೆ ಈ ವಿಶಾಲವಾದ ಸಾಮ್ರಾಜ್ಯದ ಅರಸೊತ್ತಿಗೆಯನ್ನು ಕೊಟ್ಟಿದ್ದೇನೆ. ಏಳುದಿವಸಗಳ ತರುವಾಯ ನಿನ್ನ ಶಿರಶ್ಛೇದವಾಗುವದು ಎಂದು ಹೇಳಿ ಅವನಿಗೆ ಪಟ್ಟಾಭಿಷೇಕ ಮಾಡಿಸಿದನು. ಏಳುದಿವಸಗಳಾದ ತರುವಾಯ ಅಶೋಕನು ಯುವರಾಜನನ್ನು ನೋಡಿ ನೀನು ಇಷ್ಟೊಂದು ಸೊರಗಿದ ಕಾರಣವೇನೆಂದು ಕೇಳಿದನು. ಆಗ ಆತನು ಮೃತ್ಯುಭಯದಿಂದ ನನ್ನ ಶರೀರಕ್ಕೆ ಈ ಅವಸ್ಥೆಯಾಯಿತೆಂದು ಹೇಳಿದನು. ಆಗ ಅಶೋಕನು—ಏಳು ದಿನಗಳಾದ ಬಳಿಕ ಮರಣವೊದಗುವದೆಂಬ ಅಂಜಿಕೆಯಿಂದ ನೀನು ವಿನೋದದಿಂದಿರಲಿಲ್ಲ, ಆದರೆ ಯಾವಾಗಲೂ ಎಲ್ಲ ವಸ್ತುಗಳ ನಶ್ವರತೆಯನ್ನು ಧ್ಯಾನಿಸುತ್ತಿರುವ ಭಿಕ್ಷುಗಳು ತುಚ್ಛವಾದ ವಿನೋದದಲ್ಲಿ ಹೇಗೆ ಕಾಲಕಳೆಯಬೇಕು. ಎಂದು ಅಂದನು. ತಿಷ್ಯನು ಇದನ್ನು ಕೇಳಿ ದಿವ್ಯಜ್ಞಾನವನ್ನು ಹೊಂದಲರ್ಹನಾದನು. ಬಳಿಕ ಒಂದು ದಿವಸ ತಿಷ್ಯನು ವನಕ್ಕೆ ಹೋಗಿದ್ದನು. ಅಲ್ಲಿ ಗಿಡದ ಬುಡದಲ್ಲಿ ಒಬ್ಬ ಅರ್ಹಂತನು ಕುಳಿತಿದ್ದನು. ಒಂದು ಕಾಡಾನೆಯು ಅವನ ಬದಿಯಲ್ಲಿ ನಿಂತು ಮರದ ಟೊಂಗೆಯಿಂದ ಆತನಿಗೆ ಗಾಳಿಯ ಹಾಕುತ್ತಿತ್ತು. ಇದನ್ನು ನೋಡಿ ಯುವರಾಜನು ಬೆರಗಾದನು. ಈ ಅರ್ಹಂತನ ಹೆಸರು ಮಹಾಧರ್ಮರಕ್ಷಿತನು. ಆವಾಗ ತಿಷ್ಯನು ತಾನೂ ಈ ವಿರಕ್ತನಂತೆ ವನದಲ್ಲಿದ್ದು ಯಾವಾಗ ಶಾಂತಿಯನ್ನು ಹೊಂದೇನೆಂದು ಆಲೋಚಿಸಹತ್ತಿದನು. ಮಹಾಧರ್ಮರಕ್ಷಿತನು ಯುವರಾಜನ ಮನಸ್ಸಿನಲ್ಲಿ ಧರ್ಮಬೀಜವನ್ನು ಹುಟ್ಟಿಸಬೇಕೆಂದು ಒಂದು ಅಲೌಕಿಕ ಶಕ್ತಿಯನ್ನು ತೋರ್ಪಡಿಸಿದನು. ಆ ಅರ್ಹಂತನು ಅಂತರಿಕ್ಷಮಾರ್ಗದಿಂದ ಹೋಗಿ ಅಶೋಕಾರಾಮದಲ್ಲಿದ್ದ ಸರೋವರದಲ್ಲಿ ಕುಳಿತಿರುವದನ್ನು ತಿಷ್ಯನು ಕಂಡನು. ಆ ಮಹಾಪುರುಷನ ಈ ಅಲೌಕಿಕ ಕೃತಿಯನ್ನು ನೋಡಿ ಕೂಡಲೆ ಭಿಕ್ಷುವ್ರತವನ್ನು ಸ್ವೀಕರಿಸಬೇಕೆಂದು ನಿಶ್ಚಯಿದನು. ಅಶೋಕ ಮಹಾರಾಜನೂ ಅದಕ್ಕೆ ಒಪ್ಪಿಗೆಯನ್ನಿತ್ತನು. ತಿಷ್ಯನು ಸಂಘದ ಆಶ್ರಯಮಾಡಲು ಅಶೋಕನು ಮಹೇಂದ್ರನಿಗೆ ಯುವರಾಜ ಪಟ್ಟವಕಟ್ಟಬೇಕೆಂದು ಆಲೋಚಿಸಿದ್ದನು. ಸಿಂಹಲಕ್ಕೆ ಬೋಧಿದ್ರುಮವನ್ನು ಕಳಿಸಿ ೧೮ ವರ್ಷಗಳಾದ ತರುವಾಯ ಆತನ ಮುಖ್ಯ ಪಟ್ಟದರಸಿಯಾದ ಅಸಂಧಿಮಿತ್ರೆಯು ಪರಲೋಕವನ್ನೈದಿದಳು.

ಕುನಾಲನ ಕಥೆ.

ಮುಖ್ಯರಾಣಿಯಾದ ಅಸಂಧಿಮಿತ್ರೆಯು ಮರಣಹೊಂದಿದ ತರುವಾಯ ಮುದುಕನಾದ ಅಶೋಕನು ತಿಷ್ಯರಕ್ಷಿತೆಯನ್ನು ಮದುವೆಯಾದನು. ತಿಷ್ಯರಕ್ಷಿತೆಯು ಚಪಲೆಯಾಗಿ ಒಳ್ಳೆಯ ನಡೆವಳಿಯಿಲ್ಲದವಳಿದ್ದಳೆಂದು ವರ್ಣಿಸಲ್ಪಟ್ಟಿದೆ. ಸವತಿಯ ಮಗನಾದ ಅತಿಸುಂದರ ರೂಪವುಳ್ಳ ಕುನಾಲನನ್ನು ನೋಡಿ ತಿಷ್ಯರಕ್ಷಿತೆಯ ಮನುಸ್ಸು ಚಂಚಲವಾಯಿತು. ಅವಳು ಒಂದು ದಿವಸ ಏಕಾಂತದಲ್ಲಿ ಕುನಾಲನನ್ನು ಕರೆದು ತನ್ನ ಮನೋಭಾವವನ್ನು ಹೇಳಿದಳು. ಧಾರ್ಮಿಕನಾದ ರಾಜಪುತ್ರನು ಮಲತಾಯಿಯ ಅಸಂಗತವಾದ ಭಾಷಣವನ್ನು ಕೇಳಿ ಬೆರಗುವಡೆದು ಅಂಜಿದನು. ಇದರಿಂದ ತಿಷ್ಯರಕ್ಷಿತೆಯು ಸಿಟ್ಟಿಗೆದ್ದು ಅತನ ಸರ್ವಸ್ವನಾಶ ಮಾಡುವ ನಿಶ್ಚಯ ಮಾಡಿದಳು.

ತಿಷ್ಯರಕ್ಷಿತೆಯು ಆ ಬಳಿಕ ಮಹಾರಾಜನ ಒಲವಿನಂತೆ ಅತನನ್ನು ಸಂತೋಷಬಡಿಸುವದರಲ್ಲಿ ತೊಡಗಿದಳು. ಒಂದು ದಿನ ಅವಳು ಒಳ್ಳೆಯ ಸಮಯವನ್ನು ನೋಡಿ ಕುನಾಲನನ್ನು ತಕ್ಷಶಿಲೆಯ ಕಾರಭಾರಿಯನ್ನಾಗಿ ಮಾಡಬೇಕೆಂದು ಪ್ರಸ್ತಾವ ತೆಗೆದಳು. ಅದಕ್ಕೆ ಅರಸನು ಒಪ್ಪಿ ಮಗನನ್ನು ಕರೆದು ನೀನು ತಕ್ಷಶಿಲೆಯ ಕಾರಭಾರವನ್ನು ಸಾಗಿಸು, ನನ್ನ ಮೊಹರು ಇದ್ದ ಬರಹವು ನನ್ನ ಅಪ್ಪಣೆಯೆಂದು ತಿಳಿ ಎಂದು ಹೇಳಿ ಕಳುಹಿದನು. ಕುನಾಲನು ರಾಜನ ಅಪ್ಪಣೆಯಿಂದ ತಕ್ಷಶಿಲೆಗೆ ಹೊರಟು ಹೋದನು.

ಕೆಲವು ತಿಂಗಳು ಹೋದ ಬಳಿಕ ತಿಷ್ಯರಕ್ಷಿತೆಯು ಮಂತ್ರಿಗಳನ್ನು ಕರೆದು ರಾಜನ ಸ್ವಾಕ್ಷರ (ಸಹಿ) ವುಳ್ಳ ಒಂದು ಕೃತ್ರಿಮ ಲೇಖವನ್ನು ತಕ್ಷಶಿಲೆಗೆ ಕಳುಹಿದಳು. ಆ ಲೇಖದಲ್ಲಿ ಕುನಾಲನ ಕಣ್ಣುಗಳನ್ನು ಕಿತ್ತಿ ಅತನನ್ನೂ ಅತನ ಹೆಂಡತಿಯನ್ನೂ ಪರ್ವತಪ್ರದೇಶದಲ್ಲಿ ಬಿಟ್ಟುಬರಬೇಕು; ಅದರಿಂದ ಅವನು ಸತ್ತು ಹೋಗಬೇಕು; ಎಂಬ ಅಭಿಪ್ರಾಯವಿತ್ತು. ಅಶೋಕನು ಮಲಗಿದಾಗ ಅರಸನ ಮೊಹರನ್ನೊತ್ತಿ ಆ ಪತ್ರವನ್ನು ತಕ್ಷಶಿಲೆಗೆ ಕಳುಹಿದ್ದಳು. ತಕ್ಷಶಿಲೆಯ ಮಂತ್ರಿಗಳು ಈ ಭಯಂಕರ ಪತ್ರವನ್ನೋದಿ ಬೆರಗುವಡೆದು ಮುಂದು ಗಾಣದಾದರು. ಅವರು ರಾಜಪುತ್ರನಾದ ಕುನಾಲನಿಗೆ ಎಲ್ಲ ವೃತ್ತಾಂತವನ್ನು ಹೇಳಿದರು. ಪಿತೃಭಕ್ತನಾದ ಕುನಾಲನು ರಾಜಾಜ್ಞೆಯನ್ನು ಪಾಲಿಸುತ್ತೇನೆಂದು ಅಂದನು. ಆಗ ಅವರು ಈ ಅಪ್ಪಣೆಯ ಅಭಿಪ್ರಾಯವನ್ನು ಮಹಾರಾಜರು ತಿಳಿದಿರಲಾರರು, ನಾವು ಮಹಾರಾಜರಿಗೆ ಈ ಪತ್ರದ ಅಭಿಪ್ರಾಯವನ್ನು ತಿಳಿಸುವೆವು. ಅದರ ಉತ್ತರವು ಬರುವವರೆಗೆ ತಾವು ಕಾರಾಗೃಹದಲ್ಲಿ ಇರಬೇಕು ಎಂದು ಆಪ್ತಾಲೋಚನೆ ಹೇಳಿದರು. ಕುನಾಲನು ಅವರ ಮಾತನ್ನು ಕೇಳಿ ಈ ಪತ್ರದ ಮೇಲೆ ರಾಜನ ಮೊಹರು ಒತ್ತಲ್ಪಟ್ಟಿದೆ; ಇದೀಗ ನಮ್ಮ ತಂದೆಯ ಅಪ್ಪಣೆಯು ಎಂದು ಹೇಳಿ ಕೊಲೆಗಡಿಕರನ್ನು ಕರೆಸಿ ತನ್ನ ಕಣ್ಣುಗಳನ್ನು ಕಿತ್ತಹೇಳಿದನು. ಕಣ್ಣು ಹೋದಬಳಿಕ ಕುನಾಲನು ತನ್ನ ಹೆಂಡತಿಯಾದ ಕಾಂಚನಮಾಲೆಯ ಕೈಹಿಡಿದುಕೊಂಡು ದಾರಿಯಲ್ಲಿ ಭಿಕ್ಷೆ ಬೇಡುತ್ತ ತಿರುಗಾಡಹತ್ತಿದನು. ಕೊನೆಗೆ

ಅತನು ಪಾಟಲಿಪುತ್ರಕ್ಕೆ ಬಂದನು. ಒಂದುದಿವಸ ದಾರಿದ್ರ್ಯದುಃಖದಿಂದ ಕಂಗೆಟು ಅಯ್ಯೋ ನಾನು ಅರಸುಮಗನಿದ್ದೆನು, ಈಗ ಭಿಕ್ಷುಕನಾಗಿರುವೆನು, ಯಾರೋ ನನ್ನ ಮೇಲೆ ಏನೋ ಒಂದು ಇಲ್ಲದ ಅಪವಾದವನ್ನು ಹೊರಿಸಿ ನನಗೆ ಈ ಅವಸ್ಥೆಯನ್ನು ತಂದಿರುವರು, ಈ ಕಷ್ಟವನ್ನಿನ್ನು ತಾಳಲಾರೆನು. ನಾನು ತಂದೆಯ ಎದುರಿಗೆ ಈ ವರ್ತಮಾನವನ್ನರುಹಿ ಇದರ ಪ್ರತೀಕಾರಮಾಡುವೆನು ಎಂದು ಗೋಳಿಟ್ಟನು. ಒಮ್ಮೆ ಕುನಾಲನು ರಾಜಾಂತಃಪುರದಲ್ಲಿ ಪ್ರವೇಶಿಸಿ ಇಂಪಾದ ದನಿಯಿಂದ ಕೊಳಲಿನಲ್ಲಿ ಗಾಯನಮಾಡಹತ್ತಿದನು. ಅರಸನು ತಾನಿದ್ದ ಸ್ಥಳದಿಂದಲೇ ಈ ಇಂಪಾದ ಕೊಳಲಿನ ದನಿಯನ್ನು ಕೇಳಿ ಬಾಲ್ಯದಲ್ಲಿಯೇ ಕೊಳಲೂದುವದರಲ್ಲಿ ಅತಿ ನಿಪುಣನಾಗಿದ್ದ ಕುನಾಲನನ್ನು ನೆನೆಸಿಕೊಂಡು ಕೂಡಲೆ ಆ ಕೊಳಲೂದುವನನ್ನು ತನ್ನ ಒಳಿಗೆ ಕರೆತರುವದಕ್ಕೆ ಪಹರೆಯವರನ್ನು ಕಳುಹಿದನು. ಅಂಧ ಕುನಾಲನು ಅರಸನ ಬಳಿಗೆ ಬಂದನು. ಅಶೋಕಮಹಾರಾಜನು ಮಗನ ಗುರುತು ಹಿಡಿದು ಇನ್ನಿಲ್ಲದಷ್ಟು ದುಃಖಬಟ್ಟನು. ಅರಸನು ಯಾರ ತಂತ್ರದಿಂದ ಈ ಶೋಚನೀಯಾವಸ್ಥೆಯು ನಿನಗೆ ಬಂತೆಂದು ಅತನಿಗೆ ಕೇಳಿದನು. ಕುನಾಲನು ನಾನು ಏನೋ ಒಂದು ದೊಡ್ಡ ಅಪರಾಧವನ್ನು ಮಾಡಿರಬಹುದು; ಅದಕ್ಕೇ ತಾವು ಈ ಶಿಕ್ಷೆಯನ್ನು ವಿಧಿಸಿದಿರಿ ಎಂದು ಮೆಲ್ಲನೆ ಉತ್ತರನಿತ್ತನು. ಅಶೋಕನು ಮಗನ ಬಾಯಿಂದ ಎಲ್ಲ ವೃತ್ತಾಂತವನ್ನು ತಿಳಿದು ತಿಷ್ಯರಕ್ಷಿತೆಯೇ ಈ ಅನರ್ಥಕ್ಕೆ ಮೂಲವೆಂದು ತಿಳಿದನು. ಆಗ ಅವನು ಅವಳನ್ನು ಜೀವಂತ ಸುಡುವದಕ್ಕೆ ಅಪ್ಪಣೆ ಮಾಡಿದನು. ಈ ತಂತ್ರದಲ್ಲಿ ಸೇರಿದವರಿಗೂ ದೇಹಾಂತಶಿಕ್ಷೆಯಾಯಿತು. ಕೆಲವರು ಒಬ್ಬ ಅರ್ಹಂತನ ಕೃಪೆಯಿಂದ ಕುನಾಲನಿಗೆ ಮತ್ತೆ ಕಣ್ಣುಗಳು ಬಂದಿದ್ದವೆಂದು ಹೇಳುವರು.

ತಿಷ್ಯರಕ್ಷಿತೆಯ ಕಥೆ.

ತಿಷ್ಯರಕ್ಷಿತೆಯು ತಂತ್ರದಿಂದ ಕುನಾಲನನ್ನು ತಕ್ಷಶಿಲೆಗೆ ಕಳಿಸಿದಬಳಿಕ ಸ್ವಲ್ಪ ದಿವಸಗಳಲ್ಲಿ ಅಶೋಕಮಹಾರಾಜನು ಬೇನೆಬಿದ್ದು ಅಶಕ್ತನಾದನು. ಅದರಿಂದ ಅವನು ಆಗ ರಾಜಕಾರ್ಯಗಳಲ್ಲಿ ತನ್ನ ಸ್ಥಳದಲ್ಲಿ ತಿಷ್ಯರಕ್ಷಿತೆಯನ್ನು ನಿಯಮಿಸಿದನು. ಮುಂದೆ ತಾನು ನೆಟ್ಟಗಾದೇನೆಂಬ ಆಶೆಯು ತಪ್ಪಲು ಅಶೋಕನು ಕುನಾಲನಿಗೆ ರಾಜ್ಯಭಾರವನ್ನೊಪ್ಪಿಸಬೇಕೆಂದು ನಿಶ್ಚಯಿಸಿದನು. ಕುನಾಲನು ಸಿಂಹಾಸನ ವೇರಿದರೆ ತನ್ನ ಪರಿಣಾಮವು ನೆಟ್ಟಗಾಗುವದಿಲ್ಲವೆಂದು ತಿಷ್ಯರಕ್ಷಿತೆಯು ತಿಳಿದಳು. ಆಗ ಅವಳು ಅಶೋಕನನ್ನು ಕುರಿತು ಮಹಾರಾಜರೇ, ತಾವು ನಿಶ್ಚಿಂತರಾಗಿ ಇರಬೇಕು. ನಾನು ತಮ್ಮ ಬೇನೆಯನ್ನು ಕಳೆಯುವೆನು, ಆದರೆ ತಾವು ಯಾವ ಚಿಕಿತ್ಸಕನೂ ಅರಮನೆಯಲ್ಲಿ ಪ್ರವೇಶಿಸಕೂಡದೆಂದು ಅಪ್ಪಣೆಮಾಡಬೇಕು ಎಂದು ಹೇಳಿದಳು. ಅದಕ್ಕೆ ರಾಜನು ಒಪ್ಪಿದನು. ಇತ್ತ ತಿಷ್ಯರಕ್ಷಿತೆಯು ಅರಸನ ಬೇನೆಯಂಥ ಬೇನೆಯುಳ್ಳ ಮನುಷ್ಯನು ಸಿಕ್ಕರೆ ಕೂಡಲೆ ಅವನನ್ನು ಇಲ್ಲಿಗೆ ತರಬೇಕೆಂದು ಅಪ್ಪಣೆಮಾಡಿದಳು. ಒಬ್ಬ ಗೋವಳಿಗನು ಇದೇ ತರದ ಬೇನೆ

ಯಿಂದ ಬಳಲುತ್ತಿದ್ದನು. ಕಾಮದಾರರು ಆತನನ್ನು ಅರಸಿಯ ಬಳಿಗೆ ಕಳುಹಿದರು. ತಿಷ್ಯರಕ್ಷಿತೆಯು ಆತನನ್ನು ಏಕಾಂತಸ್ಥಳದಲ್ಲಿ ಕೊಂದಳು. ಬಳಿಕ ಆ ಗೋವಳಿಗನ ಹೆಣವನ್ನು ಕೊಯ್ದು ನೊಡುತ್ತಾಳೆ-ಆತನ-ಅನ್ನಕೋಶದಲ್ಲಿ ಕೃಮಿಗಳು ತುಂಬಿಹೋಗಿವೆ. ಆ ಕೃಮಿಗಳಮೇಲೆ ಹಸಿಶುಂಠಿ ಮೆಣಸುಗಳನ್ನು ಪ್ರಯೋಗಿಸಲು ಅವು ಸಾಯಲಿಲ್ಲ. ಆದರೆ ನೀರುಳ್ಳಿಯ ರಸವು ಹತ್ತಿದೊಡನೆ ಅವೆಲ್ಲ ಸತ್ತುಹೋದವು. ಈ ಮೇರೆಗೆ ಬೇನೆಯ ಮೂಲವನ್ನೂ ಔಷಧವನ್ನೂ ಕಂಡುಹಿಡಿದು ತಿಷ್ಯರಕ್ಷಿತೆಯು ಅರಸನಿಗೆ ನೀರುಳ್ಳಿಯನ್ನು ತಿನ್ನುವ ವ್ಯವಸ್ಥೆ ಮಾಡಿದಳು. ಅದರಿಂದ ಸ್ವಲ್ಪಕಾಲದಲ್ಲಿ ಅರಸನಿಗೆ ಗುಣವಾಯಿತು. ತರುಣಿಯಾದ ತಿಷ್ಯರಕ್ಷಿತೆಗೆ ತನ್ನ ರೂಪಯೌವನಗಳ ಗರ್ವವಿತ್ತು. ಅಶೋಕನಿಗೆ ಬೋಧಿವೃಕ್ಷದ ಮೇಲೆ ಬಹಳ ಭಕ್ತಿಯಿರುವದನ್ನು ಕಂಡು ಆಕೆಯು ತನಗಿಂತ ಬೋಧಿವೃಕ್ಷದ ಮೇಲೆಯೇ ಅರಸನ ಅನುರಾಗವು ಹೆಚ್ಚಾಗಿರುವದೆಂದು ತಿಳಿದಳು. ಇದರಿಂದ ಅಸೂಯೆಬಟ್ಟು ಬೋಧಿವೃಕ್ಷವನ್ನು ನಾಶಪಡಿಸುವ ಹಲವು ಹಂಚಿಕೆಗಳನ್ನು ಮಾಡಿದಳು. ಆದರೆ ದೈವಯೋಗದಿಂದ ಆಕೆಯ ಉಪಾಯಗಳೆಲ್ಲ ವ್ಯರ್ಥವಾದವು. ಈ ಸಂಗತಿಯು ಒದಗಿಳ ವರ್ಷಗಳಾದ ತರುವಾಯ ಅಶೋಕನು ತನ್ನ ಆಳಿಕೆಯ ೩೭ನೆಯ ವರ್ಷ ಈ ಲೋಕವನ್ನು ಬಿಟ್ಟುಹೋದನು.

ಕೊನೆಯ ಕಾಲ.

ಅಶೋಕನು ಬೌದ್ಧಧರ್ಮವನ್ನು ಪ್ರಚಾರಪಡಿಸುವ ಕೆಲಸದಲ್ಲಿ ೧೦ ಕೋಟಿ ಸುವರ್ಣ ವೊಹರುಗಳನ್ನು ವ್ಯಯಮಾಡಬೇಕೆಂದು ಮಾಡಿದ್ದನು. ಅವನು ೯ ಕೋಟಿ ೬೦ ಲಕ್ಷ ವೊಹರುಗಳನ್ನು ದಾನಮಾಡಿ ಕೊನೆಗೆ ವೃದ್ಧಾಪ್ಯದಲ್ಲಿ ಬೊಕ್ಕಸದಿಂದ ದಿನಾಲು ಬಹಳ ಮಟ್ಟಿಗೆ ಬಂಗಾರ ಬೆಳ್ಳಿಗಳನ್ನು ಕುಕ್ಕುಟಾರಾಮಕ್ಕೆ ಕಳಿಸಹತ್ತಿದನು. ಮಂತ್ರಿಗಳು ಬೊಕ್ಕಸವು ತೆರವಾಗುತ್ತಿರುವದನ್ನು ನೋಡಿ ವ್ಯಥೆಬಟ್ಟರು. ಕುನಾಲನ ಮಗನಾದ ಸಂಪಾದಿಯು ಆಗ ಯುವರಾಜನು. ಮಂತ್ರಿಗಳು ಸಂಪಾದಿಗೆ ಎಲ್ಲ ವೃತ್ತಾಂತವನ್ನು ಹೇಳಿ ಮಹಾರಾಜರು ಇದೇ ಮೇರೆಗೆ ದಾನಮಾಡಹತ್ತಿದರೆ ಸ್ವಲ್ಪ ದಿವಸಗಳಲ್ಲಿ ಬೊಕ್ಕಸವು ಪೂರ್ಣವಾಗಿ ತೆರವಾಗುವದು; ಆಗ ಪರಚಕ್ರದ ದಾಳಿಯನ್ನು ತಡೆಯುವದೂ ರಾಜ್ಯವನ್ನು ಕಾಪಾಡುವದೂ ಕಠಿಣವಾಗುವದು ಎಂದು ಹೇಳಿದರು. ಆಗ ಯುವರಾಜನು ಮಂತ್ರಿಗಳು ಹೇಳುವದನ್ನು ಕೇಳಿ ಕೋಶಾಧಿಕಾರಿಗೆ ಅರಸನ ಅಪ್ಪಣೆಯನ್ನು ಪಾಲಿಸದಿರುವಂತೆ ಹೇಳಿದನು. ಅಶೋಕನು ಬೊಕ್ಕಸದಿಂದ ಏನೂ ದೊರೆಯದಂತಾಗಲು ತನ್ನ ಬೆಳ್ಳಿ ಬಂಗಾರದ ಪಾತ್ರೆಗಳನ್ನು ಒಂದೊಂದನ್ನೆ ದಾನಮಾಡಹತ್ತಿದನು. ಧಾತುಪಾತ್ರೆಗಳೆಲ್ಲ ಹೋಗಿ ಅವುಗಳ ಬದಲು ಅರಮನೆಯಲ್ಲಿ ಮಣ್ಣಿನ ಪಾತ್ರೆಗಳ ಆರಂಭವಾಗಲು ಆಗ ಘನಸ್ಸು ಉಕ್ಕಿ ಬರಲು ಅಶೋಕನು ಮಂತ್ರಿಗಳನ್ನು ಕುರಿತು ಈ ರಾಜ್ಯದ ಒಡೆಯರಾರು ಎಂದು ಕೇಳಿದನು. ಆಗ ಮಂತ್ರಿಗಳು ಮಹಾರಾಜರೇ

ತಾವು ಸಾಗರಾಂಕಿತವಾದ ಪೃಥ್ವಿಯ ಏಕಚ್ಛತ್ರಚಕ್ರವರ್ತಿಗಳು ಎಂದು ಹೇಳಿದರು. ಆಗ ಅಶೋಕನು ಕಣ್ಣೀರಿನಿಂದ ಕುತ್ತಿಗೆಯುಬ್ಬಿ ಬರಲು ಇದೆಂದೂ ನಿಜವಲ್ಲ, ನೀವು ನನ್ನ ಮೇಲಿನ ಪ್ರೇಮದಿಂದ ಹೀಗೆ ಹೇಳುತ್ತಿರುವಿರಿ. ನನ್ನ ಸಾಮ್ರಾಜ್ಯ ಗೌರವವು ನಷ್ಟವಾಗಿ ಹೋಗಿದೆ. ಈ ಆಮಲಕೀಖಂಡವೊಂದರ ಹೊರತು ನನಗೆ ದಾನಮಾಡುವದಕ್ಕೆ ಏನೂ ಉಳಿದಿಲ್ಲ ಎಂದು ಅಂದನು. ಅರಸನು ಕುಕ್ಕುಟಾರಾಮದ ಭಿಕ್ಷು ಸಂಘದ ಸೇವೆಗೋಸ್ಕರ ಆ ಆಮಲಕೀಖಂಡವನ್ನು ದಾನಮಾಡಿದನು, ಮತ್ತು ಭಿಕ್ಷು ಸಂಘಕ್ಕೆ ಇದೇ ತನ್ನ ಕೊನೆಯ ದಾನವೆಂದು ಹೇಳಿ ಕಳುಹಿದನು.

ಮತ್ತೊಮ್ಮೆ ಅಶೋಕನು ರಾಧಾಗುಪ್ತನೆಂಬ ಮಂತ್ರಿಗೆ ಈ ಸಾಮ್ರಾಜ್ಯದ ಒಡೆಯರಾರು? ಎಂದು ಕೇಳಿದನು. ಅದಕ್ಕವನು ತಾವೇ ಈ ಭರತಖಂಡದ ಏಕಚ್ಛತ್ರಾಧಿಪತಿಗಳು, ಎಂದು ಹೇಳಿದನು. ಆಗ ಅಶೋಕನು ಈ ಮೇರೆಗೆ ಅಂದನು. ನಮು ದ್ರಾಂಕಿತವಾಗಿ ಮುತ್ತುರತ್ನ ಮೊದಲಾದವುಗಳನ್ನು ಕೊಡುವ, ಯಾವತ್ತು ಪ್ರಾಣಿಗಳಿಂದ ತುಂಬಿದ ಈ ಭೂಮಿಯನ್ನು ನಾನು ಸಂಘಕ್ಕೆ ದಾನಮಾಡಿದೆನು. ಇಂದ್ರಪದವಾಗಲಿ, ಬ್ರಹ್ಮಪದವಾಗಲಿ ನನಗೆ ಬೇಡ, ನಾನು ಸಮಗ್ರ ಪೃಥ್ವಿಯ ಅಧಿಪತಿಯಾಗಬೇಕೆಂದೂ ಬಯಸುವದಿಲ್ಲ. ಯಾಕಂದರೆ ಎಲ್ಲ ಐಶ್ವರ್ಯವು ಜಲಪ್ರವಾಹದಂತೆ ಚಂಚಲವೂ ಅನಿತ್ಯವೂ ಆಗಿರುವದು. ಸಾಧುಸತ್ಪುರುಷರು ಬಯಸುವ ನಿತ್ಯವಾದ ಆತ್ಮಸಂಯಮನವನ್ನು ನಾನು ಬಯಸುತ್ತೇನೆ. ಬಳಿಕ ಅಶೋಕನು ದಾನಪತ್ರವನ್ನು ಮಾಡಿ ಮೊಹರು ಒತ್ತಿಕೊಟ್ಟನು. ಮುಂದೆ ಅಶೋಕನು ದೇಹವಿಟ್ಟ ಬಳಿಕ ಆತನ ಮೊಮ್ಮಗನಾದ ಸಂಪಾದಿಯು ಶೂನ್ಯಸಿಂಹಾಸನವನ್ನೇರಿದನು. ಸಂಪಾದಿಯ ತರುವಾಯ ಆತನ ಮಗನಾದ ಬೃಹಸ್ಪತಿಯೂ, ಬಳಿಕ ವೃಷಸೇನ, ಪುಷ್ಯಧರ್ಮ ಪುಷ್ಪಮಿತ್ರ ಎಂಬವರೂ ಕ್ರಮವಾಗಿ ಮಗಧವನ್ನಾಳಿದರು.

ಜೈನ ಗ್ರಂಥಗಳಲ್ಲಿಯ ಕಥೆಯು. *

ಬಿಂದುಸಾರರಾಜನು ದೇಹವಿಟ್ಟ ಬಳಿಕ ಆವನ ಮಗನಾದ ಅಶೋಕಶ್ರೀಯು ಮಗಧ ಸಿಂಹಾಸನವನ್ನೇರಿದನು. ಈ ಮೊದಲು ಅಶೋಕಶ್ರೀಗೆ ಕುನಾಲನೆಂಬ ಮಗನು ಹುಟ್ಟಿದ್ದನು. ಅಶೋಕಶ್ರೀಯು ಆತನಿಗೆ ಯುವರಾಜಪಟ್ಟವ ಕಟ್ಟಿ ಯೋಗ್ಯ ಶಿಕ್ಷಣಕ್ಕೋಸ್ಕರ ಉಜ್ಜಯಿನಿಗೆ ಆತನನ್ನು ಕಳುಹಿದನು. ಕುನಾಲನಿಗೆ ೮ ವರ್ಷಗಳು ತುಂಬಿದವೆಂಬದನ್ನು ತಿಳಿದು ಅಶೋಕನು ಕುನಾಲನ ಗುರುಗಳಿಗೆ ಆತನ ವಿದ್ಯಾಭ್ಯಾಸವು ಆರಂಭವಾಗಲಿ ಎಂಬ ಅಭಿಪ್ರಾಯದಿಂದ ಪ್ರಾಕೃತಭಾಷೆಯಲ್ಲಿ "ಅಧೀಯಉ" ಎಂಬ ಶಬ್ದವನ್ನು ಹಾಕಿ ಪತ್ರಬರೆದನು. ಕುನಾಲನ ಮಲತಾಯಿಯೊಬ್ಬಳು ಆ ಕಾಲ

* ಹೇಮಚಂದ್ರವಿರಚಿತ ತ್ರಿಷಷ್ಟಿಶಲಾಕಾಪುರುಷಚರಿತನೆಂಬ ಗ್ರಂಥದೊಳಗಿನ ಸ್ಥವಿರಾವಲೀಚರಿತ ಅಥವಾ ಪರಿಶಿಷ್ಟಪರ್ವ.

ದಲ್ಲಿ ಅಲ್ಲಿ ಇದ್ದಳು. ಅವಳು ಕುನಾಲನನ್ನು ರಾಜ್ಯಕ್ಕೆ ಎರವು ಮಾಡಿ ತನ್ನ ಮಗನಿಗೆ ಪಟ್ಟವಾಗುವ ಉಪಾಯವನ್ನು ಮಾಡಬೇಕೆಂದು ಆಲೋಚಿಸಹತ್ತಿದಳು. ಆಕೆಯು ಆ ಪತ್ರವನ್ನು ಓದುವ ನೆವಮಾಡಿ ತೆಗೆದುಕೊಂಡು ಮರೆಯಲ್ಲಿ "ಅಧೀಯಃಳು" ಎಂಬದಕ್ಕೆ ಬದಲಾಗಿ "ಅಂಧೀಯಃಳು" ಎಂದು ತಿದ್ದಿದಳು ಅಂದರೆ ಇವನನ್ನು ಕುರುಡನನ್ನು ಮಾಡಿರಿ ಎಂಬ ಅರ್ಥವಾಯಿತು. ಅರಸನು ಪತ್ರವನ್ನು ಎರಡನೆಯ ಸಾರೆ ಓದದೆ ಮೊಹರು ಮಾಡಿ ಉಜ್ಜಯಿನಿಗೆ ಕಳಿಸಿಕೊಟ್ಟನು. ಉಜ್ಜಯಿನಿಗೆ ಪತ್ರವು ಹೋಗಲು ಪತ್ರ ಓದಿದವನು ಏನು ಮಾಡಿದರೂ ಕುನಾಲನಿಗೆ ಈ ಭಯಂಕರ ಅಪ ಣೆಯಾದದ್ದನ್ನು ತಿಳಿಸಲಿಲ್ಲ. ಕುನಾಲನು ತಾನೇ ಆ ಪತ್ರವನ್ನು ತೆಗೆದುಕೊಂಡು ಓದಿದನು. ಆಗ ಆತನು ಮನಸ್ಸಿನಲ್ಲಿ ಮೌರ್ಯವಂಶದಲ್ಲಿ ಯಾವನೂ ಎಂದೂ ತಂದೆಯ ಅಪ್ಪಣೆಯನ್ನು ತಿರಸ್ಕರಿಸಿಲ್ಲ. ಆದದರಿಂದ ತಾನು ತಂದೆಯ ಅಪ್ಪಣೆಯನ್ನು ನಡೆಸದೆ ಎಂದೂ ಕೆಟ್ಟ ಉದಾಹರಣೆಯಾಗಲಾರೆನು ಎಂದು ವಿಚಾರಮಾಡಿದನು. ಬಳಿಕ ತಾನೇ ಕಾದ ಕಂಬಿಯಿಂದ ತನ್ನ ಎರಡೂ ಕಣ್ಣುಗಳನ್ನು ಕಿತ್ತಿಕೊಂಡನು. ಈ ಸುದ್ದಿಯು ಅರಸನಿಗೆ ಹತ್ತಲು ಆತನು ಅತ್ಯಂತ ದುಃಖಕ್ಕೊಳಗಾದನು. ಕುನಾಲನಿಗೆ ಪಟ್ಟಗಟ್ಟಬೇಕೆಂಬ ವಿಚಾರವನ್ನು ಬಿಡಬೇಕಾಯಿತು. ಕುರುಡತನದಿಂದ ಕುನಾಲನು ರಾಜ್ಯಕ್ಕೆರವಾದನು. ಅಶೋಕನು ಕುನಾಲನು ಸುಖದಿಂದ ಜೀವಿಸಲಿಕ್ಕೆ ಬೇಕಾಗು ವಷ್ಟು ಉತ್ಪನ್ನವುಳ್ಳ ಒಂದು ಗ್ರಾಮವನ್ನು ಆತನಿಗೆ ಕೊಟ್ಟನು.

ಮುಂದೆ ಕೆಲಕಾಲದ ಮೇಲೆ ಕುನಾಲನ ಹೆಂಡತಿ ಶರತಶ್ರೀಯು ಗಂಡುಮಗು ವನ್ನು ಹೆತ್ತಳು. ಕುನಾಲನು ಆತನೇ ಮಗಧರಾಜ್ಯದ ಉತ್ತರಾಧಿಕಾರಿಯೆಂದು ಮನ ಸ್ಸಿನಲ್ಲಿ ಮಾಡಿದನು. ಮುಂದೆ ಆತನು ಕುರುಡಗಾಯಕನ ವೇಷದಿಂದ ಪಾಟಲಿಪು ತ್ರಕ್ಕೆ ಬಂದನು. ಮತ್ತು ತನ್ನ ಇಂಪಾದ ಸಂಗೀತ ಸ್ವರದಿಂದ ಎಲ್ಲರನ್ನೂ ಮೆಚ್ಚಿಸಹ ತ್ತಿದನು. ಕ್ರಮವಾಗಿ ಆತನ ಮಧುರ ಸಂಗೀತದ ಸುದ್ದಿಯು ಅರಸನ ಕಿವಿಗೆ ಮುಟ್ಟಿತು. ಅರಸನು ಅರಮನೆಗೆ ಸಂಗೀತಕ್ಕೊಸ್ಕರ ಆತನನ್ನು ಕರೆಯಿಸಿದನು. ಕುನಾಲನು ಗಾಯನದ ಪದಗಳಲ್ಲಿ "ಬಿಂದುಸಾರನ ಮೊಮ್ಮಗನು, ಅಶೋಕಶ್ರೀಯ ಮಗನು ಈ ದಿವಸ ತನ್ನ ರಾಜ್ಯವನ್ನು ಬೇಡುತ್ತಿರುವನು" ಎಂಬ ಭಾವವನ್ನು ವ್ಯಕ್ತಪಡಿಸಿ ದನು. ಅರಸನು ನೀನಾರೆಂದು ಕೇಳಲು ಅವನು ತನ್ನ ಗುರುತು ಹೇಳಿದನು. ಇದು ವರೆಗೆ ಅರಸನು ತೆರೆಯ ಒಳಗೆ ಕುಳಿತು ಗಾಯನವನ್ನು ಕೇಳುತ್ತಿದ್ದನು. ಈಗ ತೆರೆ ಯನ್ನು ಸರಿಸಿ ಮಗನನ್ನು ಅಪ್ಪಿಕೊಂಡನು. ಕುನಾಲನ ಬೇಡಿಕೆಯನ್ನು ಕೇಳಿಕೊಂಡು ಅರಸನು ನೀನು ಕುರುಡನಾದದರಿಂದ ನಿನಗೆ ರಾಜ್ಯವು ದೊರೆಯುವಂತಿಲ್ಲವೆಂದು ದುಃಖದಿಂದ ಹೇಳಿದನು. ಆಗ ಕುನಾಲನು ಮತ್ತೆ ಹೊಸದಾಗಿ ಹುಟ್ಟಿದ ನನ್ನ ಮಗನ ಸಲುವಾಗಿ ನಾನು ರಾಜ್ಯವನ್ನು ಬೇಡುತ್ತೇನೆಂದು ಹೇಳಿದನು. ಅಶೋಕನು ಆಗ

ಆಶ್ಚರ್ಯಬಟ್ಟು ಯಾವಾಗ ನಿನಗೆ ಮಗನು ಹುಟ್ಟಿದನೆಂದು ಕೇಳಿದನು. ಕುನಾಲನು ಅದಕ್ಕೆ "ಸಂಪ್ರತಿ" (ಈಗ) ಎಂದು ಉತ್ತರಕೊಟ್ಟನು. ಇದರಿಂದ ಕುನಾಲಪುತ್ರನ ಹೆಸರು ಸಂಪ್ರತಿ (ಸಂಪಾದಿ) ಎಂದೇ ಆಯಿತು. ಇವನು ಜೈನಧರ್ಮಕ್ಕೆ ಒಹಳ ಬೆಂಬಲವಾಗಿದ್ದನು.

೧೪ನೆಯ ಅಧ್ಯಾಯ.

ಉಪಸಂಹಾರ.

ಅಶೋಕಮಹಾರಾಜನು ೩೭ ವರ್ಷ ಅಪ್ರತಿಹತವಾಗಿ ಧರ್ಮದಿಂದ ರಾಜ್ಯವಾಳಿ ಕ್ರಿ. ಪೂ. ೨೩೧ರಲ್ಲಿ ದೇಹವಿಟ್ಟನು. ಯಾವ ಮೌರ್ಯ ಕಾಲರವಿಯು ಮಧ್ಯಾಹ್ನದ ಸೂರ್ಯನಂತೆ ಭಾರತಾಕಾಶದಲ್ಲಿ ಉಜ್ವಲವಾಗಿ ಪ್ರಕಾಶಿಸುತ್ತಿದ್ದನೋ ಆ ರವಿಯು ಅನಂತಕಾಲ-ಸಾಗರದ ಅಂಧಕಾರಮಯವಾದ ಪ್ರದೇಶದಲ್ಲಿ ಮುಳುಗಿಹೋದನು. ಅದರೊಡನೆಯೇ ಮೌರ್ಯ ಕುಲದ ಗೌರವವೂ ನಷ್ಟವಾಗುತ್ತ ನಡೆಯಿತು. ಅಶೋಕನ ತರುವಾಯ ಕೆಳಗೆ ಬರೆದ ಅರಸರು ಮೌರ್ಯಸಿಂಹಾಸನದ ಮೇಲೆ ಕ್ರಮದಿಂದ ಆಳಿದರು.

ವಿಷ್ಣು, ವಾಯು ಪುರಾಣಗಳ ಮತದಂತೆ ಊಹಿಸಿದ ಆಳಿಕೆಯ ಕಾಲವು.			ದಿವ್ಯಾವದಾನದ ಮತದಂತೆ.
ದಶರಥ	ಕ್ರಿ. ಪೂ.	೨೩೧	ಸಂಪಾದಿ
ಸಂಗತ	,,	೨೨೪	ಬೃಹಸ್ಪತಿ
ಶಾಲಿಶುಕ	,,	೨೧೫	ವೃಷಸೇನ
ಸೋಮಶರ್ಮಣ	,,	೨೦೬	ಪುಷ್ಪಧರ್ಮ
ಶತಧನ್ವ	,,	೧೯೯	
ಬೃಹದ್ರಥ	,,	೧೮೪	

ಅಶೋಕನ ಆಳಿಕೆಯಲ್ಲಿ ಬೌದ್ಧಧರ್ಮದ ವಿಸ್ತಾರವಾದಂತೆ ದಶರಥನ ಕಾಲದಲ್ಲಿ ಜೈನಧರ್ಮದ ವಿಸ್ತಾರವಾಯಿತು. ಜೈನಗ್ರಂಥಕಾರರು ಈತನ ಇತಿಹಾಸವನ್ನು

ವಿಸ್ತಾರವಾಗಿ ಬರೆದಿರುವರು. ಮೌರ್ಯರಾಜರು ಒಟ್ಟಿಗೆ ೧೩೭ ವರ್ಷ ಆಳಿದರು.* ಕೊನೆಗೆ ಕ್ರಿ. ಪೂ. ೧೮೪ರಲ್ಲಿ ಕೊನೆಯ ಅರಸನಾದ ಬೃಹದ್ರಥನು ಅವನ ಸೇನಾಪತಿಯಾದ ಪುಷ್ಯಮಿತ್ರನಿಂದ ಕೊಲ್ಲಲ್ಪಟ್ಟನು. ಪುಷ್ಯಮಿತ್ರನು ಬಳಿಕ ತಾನೇ ಸಿಂಹಾಸನವನ್ನೇರಿದನು. ಅಂದಿನಿಂದ ಪಾಟಲಿಪುತ್ರದಲ್ಲಿ ಶುಂಗವಂಶದ ಆರಂಭವಾಯಿತು.

ಮೌರ್ಯಕಾಲದ ಇತಿಹಾಸವನ್ನು ಬರೆದವರಲ್ಲಿ ಕೆಲವರು—ಅಶೋಕನು ದೇಹವಿಟ್ಟಕೂಡಲೆ ಅಶೋಕನು ಆರಂಭಿಸಿದ ಶಾಸನತಂತ್ರದೊಡನೆ ಬ್ರಾಹ್ಮಣ್ಯಶಕ್ತಿಯ ಹೋರಾಟವು ಆರಂಭವಾಯಿತೆಂದೂ, ಅದರಿಂದ ಈ ವಿಶಾಲವಾದ ಮೌರ್ಯಸಾಮ್ರಾಜ್ಯವು ವಿನಾಶಹೊಂದಿತೆಂದೂ ಹೇಳುವರು. ಅಶೋಕನು ತಾನೇ ಬೌದ್ಧಧರ್ಮವನ್ನು ಸ್ವೀಕರಿಸಿದ್ದನು. ರಾಜ್ಯದಲ್ಲೆಲ್ಲಿಯೂ ಯಜ್ಞಕ್ಕೋಸ್ಕರ ಪಶುವಧವು ನಿಷೇಧಿಸಲ್ಪಟ್ಟಿತ್ತು. ಈ ಹೊಸ ನಿಯಮವು ಬ್ರಾಹ್ಮಣರಿಗೆ ಸೇರಲಿಲ್ಲ. ಯಾಕಂದರೆ ಆಗ ಅವರು ಇನ್ನೂ ಪಶುವಧದಲ್ಲಿ ಬಹಳ ಅಭಿಮಾನವುಳ್ಳವರಿದ್ದರು. " ಇದುವರೆಗೆ ಯಾರು ದೇವತೆಗಳೆಂದು ಪೂಜಿಸಲ್ಪಡುತ್ತಿದ್ದರೋ ಅವರು ಈಗ ಸುಳ್ಳೆನಿಸುತ್ತಿರುವರು " ಶಿಲಾಲಿಪಿಯಲ್ಲಿ ಅಶೋಕನು ಈ ವಾಕ್ಯವನ್ನು ಬರೆದದ್ದನ್ನು ನೋಡಿ ಇದು ಬ್ರಾಹ್ಮಣರ ಮೇಲೆಯೇ ಕಟಾಕ್ಷವಿಟ್ಟು ಬರೆಯಲ್ಪಟ್ಟಿದೆಯೆಂದು ಅವರು ಹೇಳುವರು. ಮೊದಲು ಜನಸಾಮಾನ್ಯದಲ್ಲಿ ಧರ್ಮ, ನೀತಿಗಳ ಮೇಲ್ವಿಚಾರಣೆಮಾಡುವ ಕೆಲಸವನ್ನು ಬ್ರಾಹ್ಮಣರೇ ಮಾಡುತ್ತಿದ್ದರು. ಈಗ ಧರ್ಮಮಹಾಮಾತ್ರರೆಂಬ ಕಾಮದಾರರು ಆ ಕೆಲಸಕ್ಕೆ ನಿಯಮಿಸಲ್ಪಟ್ಟರು. " ದಂಡಸಮತಾ " " ವ್ಯವಹಾರಸಮತೆ " ಗಳು (ಅಂದರೆ ಜಾತಿವರ್ಣಗಳ ಭೇದವಿಲ್ಲದೆ ತಪ್ಪಿಗೆ ತಕ್ಕಂತೆ ಶಿಕ್ಷೆಯನ್ನು ವಿಧಿಸುವದು) ಬ್ರಾಹ್ಮಣರಿಗೆ ಬಹಳ ವೈಮನಸ್ಯವನ್ನು ಹುಟ್ಟಿಸಿದವು. ಅಶೋಕನ ಪ್ರಬಲ ಪ್ರತಾಪದೆದುರಿಗೆ ಬ್ರಾಹ್ಮಣ್ಯಶಕ್ತಿಯು ಅಷ್ಟು ದಿವಸ ತಲೆವಾಗಿಸಿಕೊಂಡು ಇತ್ತು. ಆದರೆ ಆತನು ದೇಹವಿಟ್ಟ ಬಳಿಕ ಮತ್ತೆ ಬ್ರಾಹ್ಮಣರು ತಮ್ಮ ಸಾಮರ್ಥ್ಯವನ್ನು ಸ್ಥಾಪಿಸುವದಕ್ಕೋಸ್ಕರ ಪ್ರಯತ್ನಿಸಹತ್ತಿದರು. ಬಹುಕಾಲದಿಂದ ಕ್ಷತ್ರಿಯರು ಬ್ರಾಹ್ಮಣರನ್ನು ಕಾಪಾಡುತ್ತ ಬಂದಿದ್ದರು. ನಂದವಂಶದ ಅಳಿಕೆಯ ಕಾಲದಲ್ಲಿ ಕ್ಷತ್ರಿಯ ಕುಲವು ಲೋಪವಾಗಿತ್ತು. ಈಗ ಬೃಹದ್ರಥನ ಸೇನಾಪತಿಯಾದ ಪುಷ್ಯಮಿತ್ರನು ಈ ಬ್ರಾಹ್ಮಣ್ಯಧರ್ಮವನ್ನು ರಕ್ಷಿಸುವದರಲ್ಲಿ ತೊಡಗಿದನು. ಆತನು ಬೃಹದ್ರಥನನ್ನು ಸಂಹರಿಸಿ ತಾನೇ ಮಗಧ ಸಿಂಹಾಸನವನ್ನೇರಿದನು. ಈ ಕಾಲದಿಂದ ಅಲ್ಲಲ್ಲಿ ಬ್ರಾಹ್ಮಣವರ್ಗವು ಮತ್ತೆ ಪ್ರಬಲವಾಗಹತ್ತಿತು. ಯಾವ ಪಾಟಲಿಪುತ್ರನಗರದಿಂದ ಯಜ್ಞಕ್ಕೋಸ್ಕರ ಪಶುವಧಮಾಡಬಾರದೆಂಬ ಅಪ್ಪಣೆಯು ಹೊರಟಿತ್ತೋ ಅದೇ ಪಾಟಲಿಪುತ್ರದಲ್ಲಿ ಪುಷ್ಯಮಿತ್ರನ ಕಾಲದಲ್ಲಿ ಒಂದು ದೊಡ್ಡ

* ವಾಯುಪುರಾಣದಲ್ಲಿ ೧೩೩ ವರ್ಷಗಳೆಂದು ಹೇಳಿದೆ.

ಅಶ್ವಮೇಧಯಜ್ಞದ ಸಮಾರಂಭವು ನಡೆಯಿತು. ಪುಷ್ಯಮಿತ್ರನ× ಮೊಮ್ಮಗನಾದ ವಸುಮಿತ್ರನು ಯಜ್ಞಾಶ್ವವನ್ನು ಕಾಯುವದಕ್ಕೆ ಹೊರಟಿದ್ದನು. ಮೊದಲು ಹೇಳಿದ ಮತಕ್ಕೆ ಈ ಸಂಗತಿಯನ್ನು ಅವರು ಪೋಷಕವಾಗಿ ಉದಾಹರಿಸುವರು. ಈ ತರದ ಸಿದ್ಧಾಂತವು ಅನೇಕರಿಗೆ ಸರಿದೋರುವದಿಲ್ಲ. ಇದು ಎಷ್ಟುಮಟ್ಟಿಗೆ ನಿಜವೆಂಬದನ್ನು ನಿರ್ಣಯಿಸುವದೂ ಅಸಾಧ್ಯವು. ಅಶೋಕನ ಧರ್ಮಮತವು ಉದಾರವಾದದ್ದಿತ್ತು. ಅದರಲ್ಲಿ ಸಂಕುಚಿತತನವು ಸ್ವಲ್ಪವೂ ಇರಲಿಲ್ಲ. ಪ್ರತಿಯೊಂದು ಧರ್ಮದವರು ತಮ್ಮ ತಮ್ಮ ಧರ್ಮದಂತೆ ನಡೆಯುವದಕ್ಕೆ ಅತನು ಪೂರ್ಣವಾಗಿ ಸ್ವಾತಂತ್ರ್ಯವನ್ನು ಕೊಟ್ಟಿದ್ದನು. ಯಜ್ಞಕ್ಕೋಸ್ಕರ ಪಶುವಧೆಯನ್ನು ಅತನು ಪೂರ್ಣವಾಗಿ ಪ್ರತಿಬಂಧಿಸಿದ್ದನೆಂಬದು ಎಲ್ಲಿಯೂ ಕಂಡುಬರುವದಿಲ್ಲ. ಅಶೋಕನು ದೇಹವಿಟ್ಟಬಳಿಕ ಉಂಟಾದ ರಾಷ್ಟ್ರೀಯ ತಂತ್ರಗಳೇ ಮೌರ್ಯರಾಜ್ಯದ ವಿನಾಶಕ್ಕೆ ಕಾರಣವಾದವೆಂದು ನಮಗೆ ತೋರುವದು. ಅಶೋಕನ ಮೊಮ್ಮಗನಾದ ದಶರಥನ ತರುವಾಯದ ಅರಸರು ಹೆಸರಿಗೆ ಮಾತ್ರ ಅರಸರಾಗಿದ್ದರು. ಅವರ ಸಾಮರ್ಥ್ಯದ ನಿದರ್ಶನವೆಲ್ಲಿಯೂ ಕಂಡುಬರುವದಿಲ್ಲ. ಈ ಕಾಲದಲ್ಲಿ ಕಲಿಂಗ, ವಿದರ್ಭ, ಆಂಧ್ರದೇಶಗಳು ತಮ್ಮ ತಮ್ಮ ಸ್ವಾತಂತ್ರ್ಯವನ್ನು ಪ್ರಕಟಿಸಿ ಮೌರ್ಯ ಸಾಮ್ರಾಜ್ಯದಿಂದ ಬೇರೆಯಾದವು, ಮತ್ತು ಅದೇ ಕಾಲದಲ್ಲಿ ಪ್ರಬಲ ಗ್ರೀಕವೀರನಾದ ಮಿನಾಂಡರ‡ನು ತನ್ನ ಶೌರ್ಯದಿಂದ ಪಂಚನದವನ್ನು ದಾಟಿ ಭರತಖಂಡದ ಮಧ್ಯದವರೆಗೆ ತನ್ನ ಜಯಪತಾಕೆಯನ್ನು ನಿಲ್ಲಿಸಿದ್ದನು; ಆದರೆ ಪುಷ್ಯಮಿತ್ರನ ಪರಾಕ್ರಮದೆದುರಿಗೆ ಏನೂ ಸಾಗದೆ ಅವನು ಅಪಜಯವನ್ನೊಪ್ಪಿ ಈ ದೇಶವನ್ನು ಬಿಟ್ಟು ಹೋಗಬೇಕಾಯಿತು. ಆ ಕಾಲದಲ್ಲಿಯೇ ಮಗಧದ ಸಿಂಹಾಸನದ ಮೇಲೆ ದುರ್ಬಲಮನಸ್ಸಿನ ಬೃಹದ್ರಥರಾಜನು ಇದ್ದನೆಂಬದನ್ನು ಎಲ್ಲರೂ ಬಲ್ಲರು. ಇಂಥ ಸಮಯದಲ್ಲಿ ತನ್ನ ವಿಜಯದಿಂದ ಉಬ್ಬಿದ ಪುಷ್ಯಮಿತ್ರನು ಅತನನ್ನು ಸಿಂಹಾಸನದಿಂದ ತಳ್ಳಿ ತಾನು ಸಿಂಹಾಸನದ ಮೇಲೆ ಕುಳಿತುಕೊಳ್ಳಬೇಕೆಂದು ಮಾಡಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

ಮೌರ್ಯವಂಶವು ಯಾವ ಕಾರಣದಿಂದೇ ಲೋಪ ಹೊಂದಲಿ, ಅಶೋಕನು ಐತಿಹಾಸಿಕ ಯುಗದಲ್ಲಿ ಎಲ್ಲಕ್ಕೂ ಹೆಚ್ಚಿನ ಅರಸನಾಗಿದ್ದನೆಂಬದರಲ್ಲಿ ಏನೂ ಸಂಶಯವಿಲ್ಲ. ಎಲ್ಲಿಯವರೆಗೆ ಭರತಖಂಡದ ಇತಿಹಾಸವು ಇರುವದೋ ಅಲ್ಲಿಯವರೆಗೆ ಅದರಲ್ಲಿ ಅಶೋಕನ ಕೀರ್ತಿಯು ಸುವರ್ಣಾಕ್ಷರಗಳಿಂದ ಬರೆದಿಡಲ್ಪಡುವದು. ಕೇವಲ

× ಈತನಿಗೆ ಹಲವೆಡೆಗಳಲ್ಲಿ ಪುಷ್ಪಪುತ್ರನೆಂದೂ ಹೆಸರುಂಟು ಪುಷ್ಪಮಿತ್ರನ ವಿಷಯವಾಗಿ ಹೆಚ್ಚಿಗೆ ತಿಳಿದುಕೊಳ್ಳುವದಾದರೆ ಹರ್ಷಚರಿತ, ಮಾಲವಿಕಾಗ್ನಿಮಿತ್ರಗಳಲ್ಲಿ ನೋಡಬೇಕು. ಈತನ ಕಾಲದಲ್ಲಿಯೇ ಮಹಾಭಾಷ್ಯಕಾರನಾದ ಸುಪ್ರಸಿದ್ಧ ಪತಂಜಲಿಯು ಇದ್ದನು.

‡ ಮಿನಾಂಡರನು ಭರತಖಂಡದಲ್ಲಿ ಬಂದದ್ದರ ಉಲ್ಲೇಖವು ಪ್ಯಾಬೋನ ಪುಸ್ತಕದಲ್ಲಿಯೂ, ಪತಂಜಲಿ, ಮತ್ತು ಕಾಠಾನಾಥ ಇವರ ವರ್ಣನೆಯಲ್ಲಿಯೂ ಗಾರ್ಗಿ ಸಂಹಿತೆಯಲ್ಲಿಯಲ್ಲಿಯೂ ಉಂಟು.

ಭರತಖಂಡದಲ್ಲಿಯೇ ಏಕೆ, ಸಮಗ್ರ ಬೌದ್ಧಜಗತ್ತಿನಲ್ಲಿ ನಿರಂತರವಾಗಿ ಆತನ ಗೌರವವು ಹೊಗಳಲ್ಪಡುವದು. ಆತನ ಶಿಲಾಲಿಪಿಗಳು, ಸ್ತಂಭಲಿಪಿಗಳು, ಸ್ತೂಪಗಳು, ವಿಹಾರಗಳು, ಮಂದಿರಗಳು ಮೊದಲಾದವು ಆತನ ಆಶ್ಚರ್ಯಕರವಾದ ಉದಾರಚರಿತ್ರೆಯ ದೃಷ್ಟಾಂತಗಳು. ಕಾಲದ ದುರ್ಭೇದ್ಯವಾದ ಅಂಧಕಾರದ ಆವರಣದಲ್ಲಿ ಅಶೋಕ ಚರಿತ್ರವು ಸ್ಫುಟವಾಗಿ ವ್ಯಕ್ತವಾಗದಿದ್ದರೂ ಈ ಹೊತ್ತಿಗೂ ಆತನ ಆ ಉಜ್ವಲ ಮೂರ್ತಿಯೂ, ಭೂತದಯಾರಸದಿಂದ ತುಂಬಿದ ಗಂಭೀರವಾಣಿಯೂ, ಆ ಉದಾರ ಹೃದಯವೂ ಇವುಗಳ ನಿದರ್ಶನಗಳು ಭಾರತವರ್ಷದ ಪುಣ್ಯಕ್ಷೇತ್ರಗಳಲ್ಲಿ ಶೋಧಿಸಲ್ಪಡುತ್ತಿರುವವು. ನಿಃಶಬ್ದವಾದ ಶಿಲಾಮಯ ಪರ್ವತಗಳಲ್ಲಿ ಆತನ ಆವೇಗಯುಕ್ತವಾದ ಆಜ್ಞಾವಚನಗಳು ಪ್ರತಿಧ್ವನಿತವಾಗುತ್ತಿರುವವು. ಹಿಮಾಲಯದ ತುಷಾರ ಧವಲವಾದ ಪಾದಪ್ರದೇಶದಲ್ಲಿ ಆತನ ಅತ್ಯಂತವಾದ ಧರ್ಮಾನುರಾಗವನ್ನು ವ್ಯಕ್ತಪಡಿಸುವ ಶಿಲೆಗಳು ಅಕ್ಷಯವಾಗಿ ನಿಂತಿವೆ. ಎಷ್ಟೋ ಪುರಾಣಗಳಲ್ಲಿ ಮತ್ತು ಅವದಾನಗಳಲ್ಲಿ ಪಂಕ್ತಿ ಪಂಕ್ತಿಗೆ ಬಂದ ಆತನ ಚರಿತ್ರಭಾಗವು ಐತಿಹಾಸಿಕರ ಹೃದಯದಲ್ಲಿ ಆತನ ವಿಸ್ತೃತ ಚರಿತ್ರವನ್ನು ತಿಳಿದುಕೊಳ್ಳುವ ಬಲವಾದ ಆಕಾಂಕ್ಷೆಯನ್ನು ಹುಟ್ಟಿಸುತ್ತಿರುವದು.

ಹರಿಶ್ಚಂದ್ರ, ರಾಮಚಂದ್ರ, ಯುಧಿಷ್ಠಿರ ಮೊದಲಾದ ಮಹಾರಾಜರು ಧರ್ಮಪರಾಯಣರಾಗಿ ಯಾವ ದೃಷ್ಟಾಂತವನ್ನು ಹಾಕಿಟ್ಟರೋ ಅದೇ ದೃಷ್ಟಾಂತವನ್ನು ಅಶೋಕಮಹಾರಾಜನೂ ಹಾಕಿಟ್ಟಿರುವನು. ಅವರು ಸತ್ಯಪಾಲನ, ಪ್ರಜಾಸಂತೋಷ ಇವುಗಳಿಗೋಸ್ಕರ ಹೆಂಡಿರು, ಮಕ್ಕಳು, ರಾಜ್ಯಸುಖ ಮೊದಲಾದವುಗಳನ್ನು ಸಹ ಬಿಟ್ಟುಕೊಟ್ಟಿದ್ದರು. ಅದೇ ಮೇರೆಗೆ ಅಶೋಕಮಹಾರಾಜನೂ ತನ್ನ ವಿಶಾಲ ಸಾಮ್ರಾಜ್ಯದಲ್ಲಿ ಪ್ರಜೆಗಳ ದುಃಖನಿವಾರಣೆಗಾಗಿಯೂ, ಅವರ ಕಲ್ಯಾಣಕ್ಕಾಗಿಯೂ ಎಷ್ಟೋ ಪ್ರಯತ್ನಗಳನ್ನು ಮಾಡಿದನು. ಜನರು ಧಾರ್ಮಿಕರೂ, ಸತ್ಯಶೀಲರೂ, ಪಾಪರಹಿತರೂ, ಆಗಬೇಕೆಂಬದೇ ಅವನ ಅತ್ಯಂತ ಇಚ್ಛೆಯೂ, ಜೀವನದ ಮುಖ್ಯ ಧ್ಯೇಯವೂ ಆಗಿತ್ತು. ಆತನು ರಾಜ್ಯದಲ್ಲಿ ಸುಖಶಾಂತಿಗಳನ್ನು ನೆಲೆಗೊಳಿಸುವದು, ಪ್ರಜೆಗಳ ಅಭಿವೃದ್ಧಿಯನ್ನು ಮಾಡುವದು ಈ ರಾಜಧರ್ಮವನ್ನಷ್ಟೇ ಪಾಲಿಸಿ ಸುಮ್ಮನಿರದೆ ಪ್ರಜೆಗಳ ಆಧ್ಯಾತ್ಮಿಕ ಸುಧಾರಣೆಗಾಗಿಯೂ ಹಲವು ಉಪಾಯಗಳನ್ನು ಯೋಜಿಸಿದ್ದರ ಉದಾಹರಣವು ಭರತಖಂಡದ ಪ್ರಾಚೀನೇತಿಹಾಸದಲ್ಲಿ ದೊರೆಯುವದು ತೀರ ಕಡಿಮೆ. ಆತನು ತನ್ನ ಜೀವನದಲ್ಲಿ ಯಾವ ಸತ್ಯವನ್ನು ಕಂಡುಹಿಡಿದಿದ್ದನೋ ಆ ಸತ್ಯವನ್ನು ರಾಜ್ಯದೊಳಗಿನ ಒಬ್ಬ ಸಾಮಾನ್ಯ ಪ್ರಜೆಯು ಕೂಡ ತನ್ನ ಜೀವನದಲ್ಲಿ ಅವಲಂಬಿಸುವಂತೆಯೂ, ಅದೇ ದಿಕ್ಕಿನಿಂದ ಉನ್ನತಿಯನ್ನು ಹೊಂದುವಂತೆಯೂ ಸಂಪೂರ್ಣ ಪ್ರಯತ್ನಗಳನ್ನು ಮಾಡಿದನು. ಅಶೋಕನಂಥ ಜನಹಿತಕರನಾದ ನರಪತಿಯ ಚರಿತ್ರವು

ಕೇವಲ ಭರತಖಂಡದಲ್ಲಿಯೇ ಏಕೆ? ಎಲ್ಲ ದೇಶಗಳಲ್ಲಿ ಎಲ್ಲ ಕಾಲದಲ್ಲಿ ಎಲ್ಲ ಜಾತಿಗೆಳಲ್ಲಿ ಶ್ರೇಷ್ಠನೆಂದು ಹೊಗಳಲ್ಪಡುವದೆಂಬದಕ್ಕೆ ಸಂಶಯವಿಲ್ಲ. ಯಾವನು ರಾಜ್ಯದ ಅಧೀಶ್ವರನಾಗಿದ್ದರೂ ಮನಸ್ಸಿನಲ್ಲಿ ಸರ್ವಸಂಗರಹಿತನು, ಯಾವನು ಸುಖವಿಲಾಸಗಳಲ್ಲಿ ಬೆಳೆದಿದ್ದರೂ ಮೂಕ ಪಶುಪಕ್ಷಿಗಳ ಪ್ರಾಣರಕ್ಷಣೆಯಲ್ಲಿ ಕೂಡ ಆಸಕ್ತನು, ಪರರ ದುಃಖನಿವಾರಣ ಮಾಡಬೇಕೆಂಬದೇ ಯಾವನ ಜೀವನದ ಮುಖ್ಯ ಧ್ಯೇಯವು ಆತನು ಮನುಷ್ಯಕುಲದಲ್ಲಿ ದೇವತೆಯೇ ಸರಿ ಅಶೋಕನರಪತಿಯು ಮನುಷ್ಯಕುಲದಲ್ಲಿ ನಿಜವಾಗಿಯೂ ದೇವತೆಯೇ ಆಗಿದ್ದನು; ಆತನ ನಾಮಸ್ಮರಣದಿಂದ ನಾವು ಧನ್ಯರಾಗುವೆವು. ಆತನ ಸ್ಮರಣೀಯವಾದ ಕೀರ್ತಿಯು ಭಾರತವರ್ಷದಲ್ಲಿ ಗತಕಾಲದ ಗೌರವವನ್ನು ತೋರ್ಪಡಿಸುವಂಥದೂ, ಭವಿಷ್ಯತ್ಕಾಲದ ಅಭ್ಯುದಯಾಶೆಯನ್ನು ಹುಟ್ಟಿಸುವಂಥದೂ ಆಗಿರುವದು.

ಪರಿಶಿಷ್ಟ. (೧)

ಮೌರ್ಯವಂಶದ ಉತ್ಪತ್ತಿ.

(ಮಹಾವಂಶವನ್ನನುಸರಿಸಿ.)

ಚಂದ್ರಗುಪ್ತ ಮಹಾರಾಜನು ಮೌರ್ಯವಂಶಸ್ಥಾಪಕನು. ಅಶೋಕಮಹಾರಾಜನು ಇದೇ ವಂಶದವನು. ಈ ಮೌರ್ಯವಂಶದ ಉತ್ಪತ್ತಿಯ ವಿಷಯವಾಗಿ ಬೇರೆ ಬೇರೆ ಕಥೆಗಳು ಪ್ರಚಲಿತವಾಗಿರುವವು. ಪುರಾಣಗಳಲ್ಲಿಯೂ ಸಂಸ್ಕೃತನಾಟಕದಲ್ಲಿಯೂ ಮೌರ್ಯ ರಾಜವಂಶವು ನೀಚಕುಲದಿಂದ ಹುಟ್ಟಿತೆಂದು ಉಲ್ಲೇಖವುಂಟು. 'ಮುರಾ' ಎಂಬ ಒಬ್ಬ ಶೂದ್ರಜಾತಿಯ ಸ್ತ್ರೀಯ ಹೊಟ್ಟೆಯಲ್ಲಿ ಹುಟ್ಟಿದ ಸಂತಾನವು ಮೌರ್ಯ ಎಂಬ ಹೆಸರನ್ನು ಹೊಂದಿತೆಂದು ಅವುಗಳಲ್ಲಿ ಹೇಳಲ್ಪಟ್ಟಿದೆ. ಮುದ್ರಾರಾಕ್ಷಸವೆಂಬ ನಾಟಕದಲ್ಲಿ ಚಾಣಕ್ಯನು ಚಂದ್ರಗುಪ್ತನಿಗೆ ವೃಷಲ (ಶೂದ್ರೀಪುತ್ರ) ನೆಂದು ಕರೆದಿರುತ್ತಾನೆ. ಆದರೆ ಸಿಂಹಲದ್ವೀಪದ ಪ್ರಸಿದ್ಧ ಐತಿಹಾಸಿಕ ಗ್ರಂಥವಾದ ಮಹಾವಂಶದ ಟೀಕೆಯಲ್ಲಿ ಮೌರ್ಯವಂಶದ ಉತ್ಪತ್ತಿಯ ವಿಷಯವಾಗಿ ಬೇರೆ ವಿಧವಾಗಿ ಹೇಳಲ್ಪಟ್ಟಿದೆ. ಅದನ್ನೇ ಇಲ್ಲಿ ಸಂಕ್ಷೇಪವಾಗಿ ಉದ್ಧರಿಸಿ ಬರೆಯುವೆವು. ಇದರಿಂದ ಮೌರ್ಯವಂಶದ ಉತ್ಪತ್ತಿಯ ವಿಷಯವಾಗಿ ಸ್ವಲ್ಪ ಕಲ್ಪನೆಯಾಗುವಂತಿರುವದು.

ಪೂರ್ವದಲ್ಲಿ ವೈಶಾಲಿಯಲ್ಲಿ ಆಳುತ್ತಿದ್ದ ಲಿಚ್ಛವಿವಂಶದ ಯಾವನೋ ಒಬ್ಬ ಅರಸನು ಲಾವಣ್ಯವತಿಯಾದ ಒಬ್ಬ ವಾರಾಂಗನೆಗೆ ಮರುಳಾದನು. ಆ ಅರಸನ ಸಹವಾಸದಿಂದ ಆ ವಾರಾಂಗನೆಯು ಸ್ವಲ್ಪ ದಿವಸಗಳಲ್ಲಿ ಗರ್ಭಿಣಿಯಾದಳು. ಹತ್ತು ತಿಂಗಳು

ಹತ್ತು ದಿವಸಗಳಾದ ಬಳಿಕ ಅವಳು ಒಂದು ಪಿಂಡವನ್ನು ಹೆತ್ತಳು. ಅವಳು ಆ ಮಾಂಸ ಪಿಂಡವನ್ನು ನೋಡಿ ನಾಚಿಕೆಯಿಂದಲೂ ಅಂಜಿಕೆಯಿಂದಲೂ ಅದನ್ನೊಂದು ಪೆಟ್ಟಿಗೆಯಲ್ಲಿ ಹಾಕಿ ನಸುಕಿನಲ್ಲಿ ಆ ಪೆಟ್ಟಿಗೆಯನ್ನು ದಾರಿಯ ಮಗ್ಗುಲಲ್ಲಿದ್ದ ಒಂದು ತಿಪ್ಪೆಯಲ್ಲಿ ಚಲ್ಲಿಸಿದಳು. ಬೆಳಗಾಗಲು ಆ ಪೆಟ್ಟಿಗೆಯು ದಾರಿಕಾರರ ಕಣ್ಣಿಗೆ ಬಿತ್ತು. ಒಂದು ದೊಡ್ಡ ಸರ್ಪವು ಆ ಪೆಟ್ಟಿಗೆಯ ಬಳಿಯಲ್ಲಿ ಕಾಯುತ್ತ ಕುಳಿತಿತ್ತು. ದಾರಿಕಾರರು ಆ ನಾಗವನ್ನು ನೋಡಿ ಸಂಭ್ರಮದಿಂದ 'ಸು' 'ಸು' ಎಂಬ ಶಬ್ದದಿಂದ ಅಲ್ಲಿ ನಾಗವಿದ್ದ ದ್ದನ್ನು ಎರಡನೆಯವರಿಗೆ ತಿಳಿಸಹತ್ತಿದರು. ಆಗ ಆ ನಾಗವು ಆ ಸ್ಥಳವನ್ನು ಬಿಟ್ಟು ಹೊರಟು ಹೋಯಿತು. ಬಳಿಕ ಅಲ್ಲಿ ನೆರೆದವರು ಆ ಪೆಟ್ಟಿಗೆಯನ್ನು ತೆರೆದು ನೋಡಲು ಅದರಲ್ಲಿ ಅದೇ ಆಗ ಹುಟ್ಟಿದ ಸರ್ವಲಕ್ಷಣಯುಕ್ತವಾದ ಒಂದು ಗಂಡುಕೂಸು ಆಡುತ್ತಿತ್ತು. ಆ ಕೂಸನ್ನು ನೋಡಿ ಒಬ್ಬ ರಾಜಕೀಯ ಅಧಿಕಾರಿಯು ಮನೆಗೆ ಒಯ್ದು ಪ್ರೀತಿಯಿಂದ ಜೋಪಾನ ಮಾಡಹತ್ತಿದನು. ಮೇಲೆ ಹೇಳಿದ ಪ್ರಸಂಗದಿಂದ ಬಾಲಕನಿಗೆ " ಸುಸುನಾಗ " ಎಂಬ ಹೆಸರು ಬಂದಿತು. ಸುಸುನಾಗನು ಕ್ರಮದಿಂದ ಬಳೆಯುತ್ತ ಜ್ಞಾನವಂತನೂ ಗುಣವಂತನೂ ಆದನು. ಆ ಕಾಲದಲ್ಲಿ ಮಗಧ ದೇಶದ ರಾಜರಲ್ಲಿ ಮಕ್ಕಳು ತಂದೆಯನ್ನು ಕೊಂದು ಪಟ್ಟಕ್ಕೆ ಬರುವದು ೨-೩ ತಲೆಗಳಿಂದ ನಡೆದು ಬಂದಿತ್ತು. ಈ ಪಿತೃದ್ರೋಹವನ್ನು ನೋಡಿ ಅಸಹ್ಯಪಟ್ಟ ಪ್ರಜೆಗಳು ನಾಗದಾಸನೆಂಬ ಪಿತೃಘಾತಿಯನ್ನು ಪಟ್ಟದಿಂದ ತಳ್ಳಿ ಈ 'ಸುಸುನಾಗ' ನನ್ನು ಪಟ್ಟದ ಮೇಲೆ ಕುಳ್ಳಿರಿಸಿದರು. ಸುಸುನಾಗನಿಗೆ ಕಾಲಾಶೋಕನೆಂಬ ಮಗನಾದನು. ಕಾಲಾಶೋಕನಿಗೆ ಹತ್ತುಜನ ಮಕ್ಕಳು ಹುಟ್ಟಿದರು. ಹಿರಿಯ ಮಗನು ತಾಯಿಯ ಕಡೆಯಿಂದ ಹೀನವಂಶದವನಾದದರಿಂದ ಅವನಿಗೆ ಪಟ್ಟವು ದೊರೆಯಲಿಲ್ಲ. ಉಳಿದ ಒಂಬತ್ತು ಜನ ಮಕ್ಕಳು ನವನಂದರೆನಿಸಿದರು.

ಈ ನವನಂದರು ಆಳುತ್ತಿರುವಾಗ ಒಬ್ಬಾನೊಬ್ಬ ಕಳ್ಳನು ಪಟ್ಟಣವನ್ನೂ ಹಳ್ಳಿ ಪಳ್ಳಿಗಳನ್ನೂ ಸುಲಿದು ಹಾಳುಮಾಡಿ ಪ್ರಜೆಗಳ ಸರ್ವಸ್ವವನ್ನು ಅಪಹರಿಸಿಕೊಂಡು ಹೋಗುತ್ತಿದ್ದನು. ಈ ಚೋರಪತಿಯ ಕೈಕೆಳಗೆ ಒಂದು ಕಳ್ಳರ ದಂಡೇ ಇತ್ತು. ಅವರು ಯಾವ ಹಳ್ಳಿಯನ್ನು ಸುಲಿಯುವರೋ ಅಲ್ಲಿಯ ಜನರಿಂದಲೇ ಸುಲಿಗೆಯ ದ್ರವ್ಯವನ್ನು ಹೊರಿಸಿಕೊಂಡು ಅಡವಿಗೆ ಒಯ್ಯುತ್ತಿದ್ದರು. ಒಮ್ಮೆ ಅವರು ಈ ತೆರದಲ್ಲಿ ಯಾವದೋ ಒಂದು ಸಮೃದ್ಧವಾದ ನಗರವನ್ನು ಕೊಳ್ಳೆ ಹೊಡೆದು ಒಬ್ಬ ಅತಿಬಲಿಷ್ಠನಾದ ತರುಣನಿಂದ ಸುಲಿಗೆಯ ಹಣವನ್ನು ಹೊರಿಸಿಕೊಂಡು ಹೋದರು. ಅಂದಿನಿಂದ ಆ ತರುಣನು ಆ ಗುಂಪಿಗೇ ಸೇರಿದನು. ಮುಂದೆ ಮತ್ತೊಂದು ಊರನ್ನು ಸುಲಿಯುವಾಗ ಆ ಕಳ್ಳರೊಡೆಯನನ್ನು ಊರಜನರು ಕೊಂದರು. ಬಳಿಕ ಆ ಗುಂಪಿನವರು ಹಿಂದೆ ಹೇಳಿದ ತರುಣನ ಧೈರ್ಯವನ್ನೂ ಶೌರ್ಯವನ್ನೂ ಕಂಡು ಅವನನ್ನೇ ತಮ್ಮ

ಒಡೆಯನನ್ನಾಗಿ ಮಾಡಿಕೊಂಡರು. ಈ ತರುಣನು ಕಾಲಾಶೋಕನ ಹಿರಿಯ ಮಗನು. ಆ ಬಳಿಕ ಅವನು ತನಗೆ ನಂದನೆಂಬ ಹೆಸರಿಟ್ಟುಕೊಂಡನು. ತನ್ನ ಗುಂಪಿಗೆ ಸೇರಿದ ಜನರ ಸಹಾಯದಿಂದ ಹೊಸ ದಂಡನ್ನು ಕೂಡಿಸಿದನು. ಅಂದಿನಿಂದ ಸುಲಿಗೆಯನ್ನು ಬಿಟ್ಟು ದೇಶವನ್ನು ಗೆಲ್ಲುವ ಆಲೋಚನೆ ಮಾಡಿದನು. ಒಂದೊಂದೇ ಪ್ರಾಂತವನ್ನು ವಶಮಾಡಿಕೊಳ್ಳುತ್ತ ಕೊನೆಗೆ ಅವನು ಪಾಟಲಿಪುತ್ರನಗರವನ್ನು ಮುತ್ತಿ ಅದನ್ನು ವಶ ಮಾಡಿಕೊಂಡು ಸಿಂಹಾಸನವೇರಿದನು. ಆದರೆ ಸ್ವಲ್ಪ ದಿವಸಗಳಲ್ಲಿ ಅವನು ಮರಣ ಹೊಂದಿದನು. ಬಳಿಕ ಅವನ ಉಳಿದ ತಮ್ಮಂದಿರು (ನವನಂದರು) ಕ್ರಮವಾಗಿ ೨೨ ವರ್ಷಗಳವರೆಗೆ ಮಗಧರಾಜ್ಯವನ್ನಾಳಿದರು. ಎಲ್ಲಕ್ಕೂ ಚಿಕ್ಕ ತಮ್ಮನು ಧನಾನಂದನೆಂಬವನು. ಇವನು ಬಹು ಕೃಪಣನು. ಪಾಟಲಿಪುತ್ರದ ಸಿಂಹಾಸನವೇರಿದ ಬಳಿಕ ಇವನು ಹೊಳೆಯೊಳಗೆ ಒಂದು ಗುಹೆಯನ್ನು ಕಡಿಸಿ ಅಲ್ಲಿ ಎಂಬತ್ತು ಕೋಟಿ ಮೋಹರುಗಳನ್ನು ಹುಗಿಸಿಬಿಟ್ಟಿದ್ದನಂತೆ. ಮರ ಕಲ್ಲು ತೊಗಲು ಮೊದಲಾದವುಗಳ ಮೇಲೂ ಕರವನ್ನು ಕೂಡಿಸಿ ರಾಜಾದಾಯವನ್ನು ಹೆಚ್ಚು ಮಾಡಿದ್ದನು. ಅತ್ಯಂತ ಧನಪ್ರಿಯನಾದದರಿಂದಲೇ ಅವನಿಗೆ ಧನಾನಂದನೆಂಬ ನಾಮವು ಉಂಟಾಯಿತು.

ಬಳಿಕ ಧನಾನಂದನು ಶಾಸ್ತ್ರಗಳಲ್ಲಿಯೂ, ಪುರಾಣಗಳಲ್ಲಿಯೂ ದಾನದ ಮಹಾತ್ಮ್ಯವನ್ನು ಕೇಳಿ ಕೃಪಣತೆಯನ್ನು ಬಿಟ್ಟು ತನ್ನ ದುಡ್ಡನ್ನೆಲ್ಲ ದಾನಮಾಡಬೇಕೆಂದು ಸಂಕಲ್ಪಮಾಡಿದನು. ತರುವಾಯ ಅರಮನೆಯಲ್ಲಿ ದೊಡ್ಡದೊಂದು ದಾನಶಾಲೆಯನ್ನು ಏರ್ಪಡಿಸಿ ಎಲ್ಲರಿಗಿಂತ ಶ್ರೇಷ್ಠನೆನಿಸಿದ ಒಬ್ಬ ಬ್ರಾಹ್ಮಣನಿಗೆ ನೂರು ಕೋಟಿ ಮೊಹರುಗಳನ್ನೂ, ಉಳಿದವರಿಗೆ ಲಕ್ಷ ಮೊಹರುಗಳನ್ನೂ ಕೊಡುವೆನೆಂದು ರಾಜ್ಯದಲ್ಲಿ ಪ್ರಕಟಿಸಿದನು. ಈ ಸುದ್ದಿಯನ್ನು ಕೇಳಿ ನಾನಾದಿಗ್ದೇಶಗಳಿಂದ ಬ್ರಾಹ್ಮಣರು ತಂಡತಂಡವಾಗಿ ಬರಹತ್ತಿದರು. ಆದೇ ಕಾಲದಲ್ಲಿ ತಕ್ಷಶಿಲೆಯಲ್ಲಿ ವಾಸವಾಗಿದ್ದ ಚಾಣಕ್ಯನೆಂಬ ಒಬ್ಬ ಬ್ರಾಹ್ಮಣನು ಪಾಟಲಿಪುತ್ರಕ್ಕೆ ಬಂದಿದ್ದನು. ಅವನು ವೇದಗಳನ್ನು ಬಲ್ಲವನೂ, ಸರ್ವಶಾಸ್ತ್ರಗಳಲ್ಲಿ ಪಾರಂಗತನೂ, ಕೂಟರಾಜನೀತಿಯಲ್ಲಿ ಪಂಡಿತನೂ ಆಗಿದ್ದನು. ಈ ಚಾಣಕ್ಯನು ಒಂದು ಪ್ರಸಂಗದಲ್ಲಿ ತಾಯಿಯ ಸಂತೋಷಕ್ಕಾಗಿ ತನ್ನ ರಾಜಲಕ್ಷಣಯುಕ್ತವಾದ ಹಲ್ಲನ್ನು ಕಿತ್ತುಕೊಂಡಿದ್ದನಂತೆ. ಅದರಿಂದ ಇವನಿಗೆ ಖಂಡದಂತನೆಂಬ ಹೆಸರೂ ಬಂದಿತ್ತು. ಧನನಂದ ಮಹಾರಾಜನು ಅರಮನೆಯಲ್ಲಿ ದೊಡ್ಡ ಸಭಾಮಂಟಪವನ್ನು ನಿರ್ಮಿಸಿರುವದನ್ನೂ, ಬ್ರಾಹ್ಮಣ ಸಮಾಜದಲ್ಲಿ ಎಲ್ಲರಿಗಿಂತ ಶ್ರೇಷ್ಠನಾದವನಿಗೆ ಶತಕೋಟಿಸುವರ್ಣ ಮುದ್ರೆಗಳನ್ನು ಕೊಡುತ್ತಾನೆಂಬದನ್ನೂ ಕೇಳಿ ಚಾಣಕ್ಯನು ದ್ರವ್ಯಲೋಭದಿಂದ ಅರಮನೆಯೊಳಗಿನ ಸಭಾಮಂಟಪವನ್ನು ಪ್ರವೇಶಿಸಿ ಎಲ್ಲಕ್ಕೂ ಶ್ರೇಷ್ಠನೆನಿಸಿದ ಬ್ರಾಹ್ಮಣನಿಗೆಂದು ಗೊತ್ತುಪಡಿಸಿದ ಆಸನದ ಮೇಲೆ ಕುಳಿತುಕೊಂಡನು. ಅಷ್ಟರಲ್ಲಿ ಮಹಾರಾಜನು ರಾಜವೇಷವನ್ನು ಧರಿಸಿ ರಕ್ಷಕರು ಸುತ್ತಲು ಬರುತ್ತಿರಲು ವೈಭವ

ದಿಂದ ದಾನಮಂಟಪವನ್ನು ಪ್ರವೇಶಿಸಿದನು. ಎಲ್ಲಕ್ಕೂ ಮೊದಲಿಗೇ ಕುರೂಪಿಯೂ, ವಾಮನ ಮೂರ್ತಿಯೂ ಆದ ಚಾಣಕ್ಯನು ಶ್ರೇಷ್ಠವಾದ ಆಸನದ ಮೇಲೆ ಕುಳಿತಿರುವದನ್ನು ನೋಡಿ ಬಹಳ ಸಿಟ್ಟಾದನು. ಸಿಟ್ಟಿನ ಭರದಲ್ಲಿ ಬಿರುನುಡಿಗಳಿಂದ ಆತನನ್ನು ತಿರಸ್ಕರಿಸಿ ಸಭಾಗೃಹದಿಂದ ಹೊರದೂಡಬೇಕೆಂದು ರಕ್ಷಕರಿಗೆ ಅಪ್ಪಣೆಯನ್ನಿತ್ತನು. ಆ ಕ್ಷಣದಲ್ಲಿಯೇ ರಾಜಾಜ್ಞೆಯು ನೆರವೇರಿಸಲ್ಪಟ್ಟಿತು. ಚಾಣಕ್ಯನು ಕೋಪಾತಿರೇಕದಿಂದ ಮುಂದುಗಾಣದೆ ತನ್ನ ಯಜ್ಞೋಪವೀತವನ್ನು ತುಂಡು ತುಂಡಾಗಿ ಹರಿದು ಚಲ್ಲಿ ಭಿಕ್ಷಾಪಾತ್ರವನ್ನು ದೂರದಲ್ಲಿ ಬಿಸುಟಿ ನಿನ್ನ ಈ ದಾನಕಾರ್ಯವು ನಿಷ್ಫಲವಾಗಲಿ ಎಂದು ರಾಜನಿಗೆ ಶಾಪವಿತ್ತನು. ರಾಜನು ಅವನ ಈ ಆಕ್ರೋಶವನ್ನು ಕೇಳಿ ಆತನನ್ನು ಹಿಡಿದು ತರಲಪ್ಪಣೆ ಮಾಡಿದನು. ಆಗ ಚಾಣಕ್ಯನು ಪ್ರಾಣಭಯದಿಂದ ಅರಮನೆಯ ಒಳಭಾಗಕ್ಕೆ ಓಡಿಹೋಗಿ ದಿಗಂಬರ ಭಿಕ್ಷುವೇಷದಿಂದ ಅಡಗಿ ಕುಳಿತುಕೊಂಡನು. ರಾಜದೂತರಿಗೆ ಆಗ ಅವನ ಶೋಧವಾಗಲಿಲ್ಲ.

ಮಧ್ಯರಾತ್ರಿಯಲ್ಲಿ ರಾಜಪುತ್ರನಾದ ಪರ್ವತನಿಗೂ ಚಾಣಕ್ಯನಿಗೂ ಪರಿಚಯವಾಯಿತು. ಚಾಣಕ್ಯನು ಅವನಿಗೆ ರಾಜ್ಯದಾಶೆಯನ್ನು ತೋರಿಸಿ ಅವನಿಂದ ಅರಮನೆಯ ಗುಪ್ತದ್ವಾರವನ್ನು ಗೊತ್ತುಮಾಡಿಕೊಂಡು ಹೊರಬಿದ್ದು ರಾಜಧಾನಿಯನ್ನು ಬಿಟ್ಟು ಅಡವಿಯ ಸೇರಿದನು. ರಾಜಪುತ್ರನಾದ ಪರ್ವತನೂ ಅವನೊಡನೆ ಹೊರಟನು. ಮುಯ್ಯರಿಸಿಕೊಳ್ಳುವದರಲ್ಲಿ ತೊಡಗಿದ ಕೂಟಬುದ್ಧಿಯ ಆ ಬ್ರಾಹ್ಮಣನು ಎಂಬತ್ತು ಕೋಟಿ ವೊಹರುಗಳನ್ನು ಕೂಡಹಾಕಿದನು. ಮತ್ತು ನಂದರಾಜನಿಗೆ ಪ್ರತಿಭಟನಾಗಿ ನಿಲ್ಲಬಹುದಾದ ಒಂದು ವ್ಯಕ್ತಿಯನ್ನು ಹುಡುಕಹತ್ತಿದನು. ಇದೇ ಸಮಯದಲ್ಲಿ ಮೌರ್ಯ ಚಂದ್ರಗುಪ್ತನಿಗೂ ಇವನಿಗೂ ದರ್ಶನವಾಯಿತು.

ಬಿರುಡಕನೆಂಬ ಒಬ್ಬ ರಾಜನು ಶಾಕ್ಯಜಾತಿಯನ್ನು ಮುರಿಬಡಿಯುವದಕ್ಕಾಗಿ ಕಪಿಲಾವಸ್ತು ನಗರಕ್ಕೆ ಮುತ್ತಿಗೆ ಹಾಕಲು ಆಗ ಕೆಲವು ಶಾಕ್ಯಸಾಮಂತರು ಹಿಮಾಲಯದ ನಿರ್ಜನಪ್ರದೇಶಕ್ಕೆ ಹೊರಟು ಹೋದರು. ಅಲ್ಲಿಯೇ ಅವರು ವಾಸಮಾಡಿ ಒಂದು ಸುಂದರವಾದ ನಗರವನ್ನು ನಿರ್ಮಿಸಿ ಹೊಸರಾಜ್ಯವನ್ನು ಸ್ಥಾಪಿಸಿದರು. ಶಾಕ್ಯ ಜಾತಿಯು ಈ ಹೊಸರಾಜಧಾನಿಯು ದೂರದಿಂದ ಮಯೂರದಂತೆ ಮನೋಹರವಾಗಿ ಕಾಣಿಸುತ್ತಿದ್ದುದರಿಂದ ಅದಕ್ಕೆ ಎಲ್ಲರೂ ಮಯೂರನಗರವೆಂದು ಹೇಳುತ್ತಿದ್ದರು. ಮಯೂರ ನಗರದಲ್ಲಿಯು ಶಾಕ್ಯಜಾತಿಯು ಮೌರಿಯು ಇಲ್ಲವ ಮೌರ್ಯವೆಂಬ ಹೆಸರಿನಿಂದ ಭರತಖಂಡದಲೆಲ್ಲ ಹೆಸರಾಯಿತು. ಆದರೆ ಕಾಲಕ್ರಮದಿಂದ ಮೌರ್ಯಜಾತಿಯು ಭಾಗ್ಯಲಕ್ಷ್ಮಿಯು ಕಾಲ್ದೆಗೆದಳು. ಯಾವನೋ ಒಬ್ಬ ಪರಾಕ್ರಮಿಯಾದ ರಾಜನು ಮಯೂರ ನಗರದ ವೈಭವವನ್ನು ಕೇಳಿ ಮಹಾಸೈನ್ಯದೊಡನೆ ಆ ರಾಜ್ಯವನ್ನಾಕ್ರಮಿಸಿ

ಹಾಳು ಮಾಡಿದ್ದಲ್ಲದೆ ಅಸಂಖ್ಯ ಮೌರ್ಯರನ್ನು ಕೊಂದು ಹಾಕಿದನು. ಈ ಕಾಲದಲ್ಲಿ ಮೌರ್ಯರಾಜನ ಪಟ್ಟದರಸಿಯು ಗರ್ಭಿಣಿಯಾಗಿದ್ದಳು. ಅವಳು ತನ್ನ ಗರ್ಭವನ್ನು ರಕ್ಷಿಸಿಕೊಳ್ಳುವದಕ್ಕಾಗಿ ತನ್ನ ಅಣ್ಣಂದಿರ ಸಹಾಯವನ್ನು ಹೊಂದಿದಳು. ಅವರು ಚಾಣಕ್ಯನದಿಂದ ಮಯೂರ ನಗರದಿಂದ ಓಡಿಬಂದು ಪುಷ್ಪಸಾರದಲ್ಲಿ (ಪಾಟಲಿಪುತ್ರ) ವಾಸಮಾಡಹತ್ತಿದರು. ಆ ಮೌರ್ಯರ ಅರಸಿಯು ಗಂಡುಮಗುವನ್ನು ಹೆತ್ತಳು. ಮೌರ್ಯವಂಶದ ರಾಜಕುಮಾರನು ಬದುಕಿರುವನೆಂಬದನ್ನು ಕೇಳಿದರೆ ವೈರಿಗಳು ತನ್ನ ಮಗನನ್ನು ಕೊಂದಾರೆಂಬ ಅಂಜಿಕೆಯಿಂದ ಅವಳು ಆ ಮಗುವನ್ನು ಒಂದು ಪಾತ್ರೆಯಲ್ಲಿ ಬಚ್ಚಿಟ್ಟು ಒಬ್ಬ ಗೋವಳಿಗನ ಹಟ್ಟಿಯಲ್ಲಿ ಒಯ್ದಿಟ್ಟಳು. ಹುಡುಗನ ಅಳುವ ಧ್ವನಿಯನ್ನು ಕೇಳಿ ಆ ಗೋವಳಿಗನು ಅಲ್ಲಿಗೆ ಬಂದು ಕೂಸಿನ ರೂಪಲಾವಣ್ಯಗಳನ್ನು ನೋಡಿ ಬೆರಗಾಗಿ ಸ್ನೇಹರಸದಲ್ಲಿ ಮುಳುಗಿ ಹೋದನು. ಅವನು ಆ ಕೂಸನ್ನು ತನ್ನ ಮಗನಂತೆ ಕಾಪಾಡಹತ್ತಿದನು. ಮಗುವಿಗೆ ಚಂದ್ರಗುಪ್ತನೆಂಬ ಹೆಸರನ್ನಿಟ್ಟನು. ಚಂದ್ರಗುಪ್ತನು ಸ್ವಲ್ಪ ದೊಡ್ಡವನಾದ ಬಳಿಕ ಓರಿಗೆಯ ಹುಡುಗರೊಡನೆ ಅಂಗಳದಲ್ಲಿ ಆಟವಾಡಹತ್ತಿದನು.

ಒಂದು ದಿವಸ ಚಂದ್ರಗುಪ್ತನು ಗೋವಳಿಗರ ಹುಡುಗರೊಡನೆ ಅರಸನಾಗಿ ಆಟವಾಡುತ್ತಿದ್ದನು. ಹುಡುಗರಲ್ಲಿ ಕೆಲವರು ಮಂತ್ರಿಗಳು, ಕೆಲವರು ಯುವರಾಜರು, ಕೆಲವರು ರಕ್ಷಕರು ಆಗಿದ್ದರು. ಕೆಲವರು ನ್ಯಾಯಾಧೀಶರಾಗಿ ನ್ಯಾಯವಿಚಾರಣೆ ಮಾಡಿ ಅಪರಾಧಿಗಳಿಗೆ ಶಿಕ್ಷೆಯನ್ನು ಕೊಡುತ್ತಿದ್ದರು. ಚಂದ್ರಗುಪ್ತನು ತಾನು ರಾಜನಾಗಿ ಮುಖ್ಯಸ್ಥಳದಲ್ಲಿ ವಿರಾಜಮಾನನಾಗಿದ್ದನು. ಈ ಹೊತ್ತಿಗೆ ಚಾಣಕ್ಯನು ಅದೇ ದಾರಿಯಿಂದ ಹೋಗುತ್ತಿದ್ದನು. ಚಂದ್ರಗುಪ್ತನ ಕಡೆಗೆ ಅವನ ಮನಸ್ಸೆಳೆಯಿತು. ಅವನು ಗೋವಳಿಗನಿಗೆ ಸಾವಿರ ಮೊಹರುಗಳನ್ನು ಕೊಟ್ಟು ಚಂದ್ರಗುಪ್ತನನ್ನು ಬೇಡಿ ತೆಗೆದುಕೊಂಡನು. ಚಂದ್ರಗುಪ್ತನು ಚಾಣಕ್ಯನೊಡನೆ ಹೊರಟನು.

ಚಾಣಕ್ಯನು ಚಂದ್ರಗುಪ್ತನ ಮೈಮೇಲೆ ಚಕ್ರವರ್ತಿ-ಲಕ್ಷಣಗಳಿರುವದನ್ನು ಕಂಡನು. ರಾಜಪುತ್ರನಾದ ಪರ್ವತನಲ್ಲಿ ಅರಸುತನಕ್ಕೆ ಯೋಗ್ಯತೆಯಿರಲಿಲ್ಲ. ಚಾಣಕ್ಯನು ಈ ಇಬ್ಬರಲ್ಲಿ ಯಾವನು ಹೆಚ್ಚು ಬುದ್ಧಿವಂತನೂ, ಪ್ರತಿಭಾಶಾಲಿಯೂ ಇರುವನೆಂಬದನ್ನು ಪರೀಕ್ಷಿಸತೊಡಗಿದನು. ಒಂದು ದಿನ ದಾರಿಯಲ್ಲಿ ಚಾಣಕ್ಯನು ಈ ಇಬ್ಬರು ರಾಜಪುತ್ರರೊಡನೆ ಗಿಡದ ನೆಳಲಲ್ಲಿ ಮಲಗಿದ್ದನು. ಸ್ವಲ್ಪ ವೇಳೆಯಲ್ಲಿ ಚಾಣಕ್ಯನು ಅವರಿಬ್ಬರಿಗಿಂತ ಮುಂಚೆ ಎದ್ದು ರಾಜಪುತ್ರನಾದ ಪರ್ವತನನ್ನು ಎಚ್ಚರಿಸಿ ಅತನನ್ನು ಒಂದೆಡೆಗೆ ಕರೆದು "ಈ ಕತ್ತಿಯನ್ನು ತೆಗೆದುಕೊಳ್ಳು; ಚಂದ್ರಗುಪ್ತನ ಕೊರಳಲ್ಲಿ ರೇಶಿಮೆ ಎಳೆಗಳಿಂದ ಕಟ್ಟಿದ ಸುವರ್ಣ ಯಜ್ಞೋಪವೀತವಿರುವದಷ್ಟೇ; ಅದನ್ನು

ಕಡಿಯದೆ ಕತ್ತರಿಸದೆ ಇಲ್ಲವೆ ಬಿಚ್ಚದೆ ಇಲ್ಲಿಗೆ ತೆಗೆದುಕೊಂಡು ಬಾ" ಎಂದು ಹೇಳಿದನು. ಪರ್ವತನಿಗೆ ಹೇಗೆ ಒಯ್ಯಬೇಕೆಂಬದು ತೋರದೆ ಹಾಗೆಯೇ ತಿರುಗಿ ಬಂದನು. ಚಾಣಕ್ಯನು ಇದಕ್ಕೆ ಸಿಟ್ಟಾದನು. ಮರುದಿವಸ ಚಾಣಕ್ಯನು ಚಂದ್ರಗುಪ್ತನನ್ನು ಮೊದಲು ಎಚ್ಚರಿಸಿ ಅವನಿಗೂ ಇದೇ ಉಪ್ಪಣೆಯನ್ನು ಮಾಡಿದನು. ಚಂದ್ರಗುಪ್ತನು ಬೇರೆ ಉಪಾಯವನ್ನು ಕಾಣದೆ ಕತ್ತಿಯಿಂದ ಪರ್ವತನ ತಲೆಯನ್ನು ಕಡಿದು ಯಜ್ಞೋಪವೀತವನ್ನು ತಂದುಕೊಟ್ಟನು. ಚಾಣಕ್ಯನು ಸಂತೋಷದಿಂದ ಚಂದ್ರಗುಪ್ತನ ಪ್ರಶಂಸೆಮಾಡಹತ್ತಿದನು.

ಬಳಿಕ ಚಂದ್ರಗುಪ್ತನು ಚಾಣಕ್ಯನ ದುಡ್ಡಿನ ಮತ್ತು ಬುದ್ಧಿಯ ಬಲದಿಂದ ಒಂದು ದೊಡ್ಡ ಸೈನ್ಯವನ್ನು ಸಿದ್ಧಮಾಡಿದನು. ಮುಂದೆ ಒಂದೊಂದೇ ದೇಶವನ್ನು ಆಕ್ರಮಿಸತೊಡಗಿದನು. ಮೊದಮೊದಲು ಕೆಲವೆಡೆಗಳಲ್ಲಿ ಪರಾಜಯವೂ ಆಯಿತು. ಕೊನೆಗೆ ಅವನು ಕಪಟವೇಷದಿಂದ ಎಲ್ಲ ದೇಶಗಳಲ್ಲಿ ತಿರುಗಾಡಿ ಯಾವಾಗ ಮುತ್ತಿಗೆ ಹಾಕಿದರೆ ಕೆಲಸವು ಕೈಗೂಡುವದೆಂಬದನ್ನು ಗೊತ್ತುಮಾಡಿಕೊಂಡನು. ಕೂಟರಾಜನೀತಿ ಪಂಡಿತನಾದ ಚಾಣಕ್ಯನ ಸಹಾಯದಿಂದ ಬುದ್ಧಿಶಾಲಿಯಾದ ಚಂದ್ರಗುಪ್ತನು ಮತ್ತೊಮ್ಮೆ ಮೇರೆಯೊಳಗಿನ ಒಂದೊಂದೇ ಪ್ರದೇಶವನ್ನು ಜಯಿಸುತ್ತ ಕೊನೆಗೆ ಪಾಟಲಿಪುತ್ರಕ್ಕೆ ಬಂದನು. ಧನಾನಂದ ಮಹಾರಾಜನು ಚಂದ್ರಗುಪ್ತನ ಪ್ರಬಲವಾದ ಮುತ್ತಿಗೆಯನ್ನು ಸಹಿಸಲಾರದೆ ರಣರಂಗದಲ್ಲಿ ಬಿದ್ದು ಮಡಿದನು. ಬಳಿಕ ಕ್ರಮವಾಗಿ ಚಂದ್ರಗುಪ್ತನು ಭರತಖಂಡದ ಏಕಚ್ಛತ್ರಾಧಿಪತಿಯಾದನು. ಅವನು ತನ್ನ ಸೋದರಮಾವನ ಮಗಳನ್ನು ಮದುವೆಯಾಗಿ ಅವಳನ್ನೇ ಪಟ್ಟದರಸಿಯನ್ನು ಮಾಡಿದನು. ವಿಷಪ್ರಯೋಗದಿಂದ ಅರಸನನ್ನು ಯಾರೂ ಕೊಲ್ಲಬಾರದೆಂದು ಚಾಣಕ್ಯನು ತನ್ನ ಕೈಯಿಂದಲೇ ರಾಜನ ಆಹಾರದಲ್ಲಿ ಅಲ್ಪ ಪ್ರಮಾಣದಿಂದ ವಿಷವನ್ನು ಬೆರಸುತ್ತ ಅವನಿಗೆ ವಿಷದ ಅಭ್ಯಾಸವನ್ನು ಮಾಡಿಸಹತ್ತಿದನು. ಮತ್ತು ಆ ವಿಷ ಮಿಶ್ರವಾದ ಆಹಾರವನ್ನು ಇನ್ನಾರೂ ತೆಗೆದುಕೊಳ್ಳದಂತೆ ನೋಡಿಕೊಳ್ಳುತ್ತಿದ್ದನು. ಒಂದು ದಿನ ದೈವಾನುಸಾರವಾಗಿ ಚಾಣಕ್ಯನು ಬೇರೆ ಕೆಲಸದಲ್ಲಿ ತೊಡಗಿ ರಾಜನ ಆಹಾರ ಕಾಲದಲ್ಲಿ ಸ್ವಲ್ಪಕಾಲ ಬೇರೆ ಕಡೆಯಲ್ಲಿರಲು ಪೂರ್ಣ ಗರ್ಭಿಣಿಯಾದ ಪಟ್ಟದರಸಿಯು ಅದೇ ದಿವಸ ಅರಸನ ಆಹಾರದ ಶೇಷಭಾಗದಲ್ಲಿ ಒಂದೆರಡು ತುತ್ತುಗಳನ್ನು ಬಾಯಲ್ಲಿ ಹಾಕಿಕೊಂಡಳು. ಇಷ್ಟರಲ್ಲಿ ಚಾಣಕ್ಯನು ಅಲ್ಲಿಗೆ ಬಂದು ನೋಡಿ ಅರಸಿಗೆ ಆ ತುತ್ತನ್ನು ಕೂಡಲೆ ಉಗುಳ ಹೇಳಿದನು. ಆದರೆ ಅವಳು ಅಷ್ಟರಲ್ಲಿ ಸ್ವಲ್ಪ ನುಂಗಿದ್ದಳು. ಉಪಾಯಾಂತರವು ತೋರದೆ ರಾಜಭಕ್ತನಾದ ಆ ಬ್ರಾಹ್ಮಣನು ಕತ್ತಿಯಿಂದ ರಾಣಿಯನ್ನು ಕಡಿದು ಗರ್ಭದಿಂದ ಶಿಶುವನ್ನು ಹೊರತೆಗೆದು ಅಡಿನ ಗರ್ಭದಲ್ಲಿ ರಕ್ಷಿಸಹತ್ತಿದನು. ಕೆಲವು ದಿವಸಗಳ ತರುವಾಯ ಆ ಕೂಸನ್ನು ಅಂತಃಪುರದ ಒಬ್ಬ ದಾಸಿಯ ಕೈಯಲ್ಲಿ ಜೋಪಾ

ನಮಾಡುವದಕ್ಕೆ ಕೊಟ್ಟನು. ಆಡಿನ ರಕ್ತದ ಬಿಂದುಗಳು ಕೂಸಿನ ಮೈಗೆ ಹತ್ತಿದ್ದರಿಂದ ಶಿಶುವಿಗೆ ಬಿಂದುಸಾರನೆಂಬ ಹೆಸರು ಬಂದಿತು.

ಜೈನ ಗ್ರಂಥಗಳಲ್ಲಿ.

ಚಾಣಕ್ಯ ಚಂದ್ರಗುಪ್ತರ ವಿಷಯವಾಗಿ ಜೈನಗ್ರಂಥಗಳಲ್ಲಿಯೂ ಕೆಲಮಟ್ಟಿಗೆ ಉಲ್ಲೇಖವು ದೊರೆಯುವದು, ಅದನ್ನು ಇಲ್ಲಿ ಸಂಕ್ಷೇಪವಾಗಿ ಕೊಡುವೆವು.

ಚಣಕ ಎಂಬ ಊರಲ್ಲಿ ಚಾಣಕ್ಯನು ಹುಟ್ಟಿದನು. ಅವನ ತಂದೆಯ ಹೆಸರು ಚಣನು. ತಾಯಿ ಚಣೇಶ್ವರಿ. ಚಾಣಕ್ಯನು ಸರ್ವ ಶಾಸ್ತ್ರಪಾರಂಗತನಾದನು. ದ್ರವ್ಯೋಪಾರ್ಜನೆಗಾಗಿ ಹೊರಟು ನಂದರಾಜನು ಮಾಡುವ ದಾನದ ವಾರ್ತೆಯನ್ನು ಕೇಳಿ ಪಾಟಲಿಪುತ್ರಕ್ಕೆ ಬಂದಿದ್ದನು, ಮತ್ತು ರಾಜಸಭೆಯಲ್ಲಿ ಅರಸನಿಗಾಗಿ ಗೊತ್ತುಪಡಿಸಿದ ಆಸನದಲ್ಲಿ ಕುಳಿತುಕೊಂಡನು. ಅಷ್ಟರಲ್ಲಿ ಅರಸನು ಮಕ್ಕಳೊಡನೆ ಅಲ್ಲಿಗೆ ಬಂದನು. ತನ್ನ ಆಸನದಲ್ಲಿ ಚಾಣಕ್ಯನು ಕುಳಿತಿರುವದನ್ನು ನೋಡಿ ಅರಸನಿಗೆ ಬಹಳ ಸಿಟ್ಟು ಬಂದಿತು. ಇಷ್ಟಾದರೂ ಚಾಣಕ್ಯನು ಆಸನದಿಂದ ಏಳಲಿಲ್ಲ. ಪರಿಚಾರಕರು ಚಾಣಕ್ಯನ ಸಲುವಾಗಿ ಬೇರೊಂದು ಆಸನವನ್ನು ತಂದಿರಿಸಿದರು. ಅದರೂ ಚಾಣಕ್ಯನು ಏಳದೆ ಆ ಆಸನದ ಮೇಲೆ ತನ್ನ ಕೋಲು ಜಲಪಾತ್ರೆ ಮೊದಲಾದವನ್ನು ಇಟ್ಟನು. ಇದನ್ನು ನೋಡಿ ಪರಿಚಾರಕರು ಕೂಡಲೆ ಅಪಮಾನಮಾಡಿ ಚಾಣಕ್ಯನನ್ನು ಅಲ್ಲಿಂದ ಹೊರಗೆ ಹಾಕಿದರು. ಆಗ ಅತನು ಈ ಅಪಮಾನದಿಂದ ಪರಮಾವಧಿ ಸಿಟ್ಟಿಗೆದ್ದು ನಂದವಂಶವನ್ನು ನಾಶಮಾಡುವ ಪ್ರತಿಜ್ಞೆಮಾಡಿ ಅಲ್ಲಿಂದ ಹೊರಟುಹೋದನು. ಬಾಲ್ಯದಲ್ಲಿ ಒಬ್ಬ ಭವಿಷ್ಯವಾದಿಯು ಇವನಿಗೆ "ಹೆಸರಿಗೊಬ್ಬ ಅರಸನನ್ನು ಮಾಡಿ ನೀನು ರಾಜ್ಯವನ್ನಾಳುವೆ" ಎಂದು ಹೇಳಿದ್ದನು. ಈಗ ಅಂತಹ ಅರಸನಾಗುವ ಒಂದು ವ್ಯಕ್ತಿಯನ್ನು ಹುಡುಕುವದಕ್ಕಾಗಿ ದೇಶದಲ್ಲಿ ಸಂಚರಿಸಹತ್ತಿದನು. ಒಮ್ಮೆ ಅರಸನ ಮಯೂರಪೋಷಕರ ದೇಶಕ್ಕೆ ಬಂದಿದ್ದನು. ಅಲ್ಲಿ ಆ ಜನರ ಒಡೆಯನ ಮಗಳು ಆಗ ಗರ್ಭಿಣಿಯಿದ್ದಳು. ಆಕೆಗೆ ಚಂದ್ರನನ್ನು ಕುಡಿಯಬೇಕೆಂಬ ಬಯಕೆಯಾಗಿತ್ತು. ಈ ಬಯಕೆಯನ್ನು ಪೂರ್ಣಮಾಡುವದು ಯಾರಿಂದಲೂ ಆಗಿರಲಿಲ್ಲ ಆಗ ಈ ಬ್ರಾಹ್ಮಣನು ಆ ಬಯಕೆಯನ್ನು ಪೂರ್ಣಮಾಡುವೆನೆಂದೂ, ಅವಳಿಗೆ ಗಂಡುಕೂಸು ಹುಟ್ಟಿದರೆ ತನಗೆ ಕೊಡಬೇಕೆಂದೂ ಹೇಳಿದನು. ಅದಕ್ಕೆ ಅವರು ಒಪ್ಪಲು ಚಾಣಕ್ಯನು ಒಂದು ಹುಲ್ಲಿನ ಗುಡಿಸಲನ್ನು ಹಾಕಿಸಿ ಅದಕ್ಕೆ ಮೇಲ್ಗಡೆಗೆ ಒಂದು ತೂತನ್ನು ಬಿಟ್ಟು ಆ ತೂತಿನಿಂದ ಒಳಗೆ ಚಂದ್ರಕಿರಣಗಳು ಬೀಳುವ ಸ್ಥಳದಲ್ಲಿ ಒಂದು ಹಾಲಿನ ಪಾತ್ರೆಯನ್ನಿಟ್ಟು ಆ ಗರ್ಭಿಣಿಯನ್ನು ಅಲ್ಲಿಗೆ ಕರೆಯಿಸಿದನು. ಮಾಳಿಗೆಯ ಮೇಲೆ ಒಬ್ಬ

ಮನುಷ್ಯನನ್ನು ಕುಳ್ಳಿರಿಸಿದ್ದನು. ಹಾಲಿನ ಬಟ್ಟಲಲ್ಲಿ ಚಂದ್ರಬಿಂಬವನ್ನು ತೋರಿಸಿ ಬ್ರಾಹ್ಮಣನು ಕುಡಿಯುಹೇಳಿದನು. ಮಾಳಿಗೆಯ ಮೇಲೆ ಕುಳಿತವನು ಸ್ವಲ್ಪಸ್ವಲ್ಪವಾಗಿ ಆ ತೂತನ್ನು ಮುಚ್ಚುತ್ತ ಹಾಲು ತೀರುವ ಹೊತ್ತಿಗೆ ಪೂರ್ಣವಾಗಿ ಮುಚ್ಚಿಬಿಟ್ಟನು. ಆಗ ಆ ಗರ್ಭಿಣಿಗೆ ಚಂದ್ರನನ್ನು ಕುಡಿದೆನೆಂದು ಸಂತೋಷವಾಯಿತು. ಮುಂದೆ ಕಾಲಾನುಸಾರವಾಗಿ ಅವಳು ಗಂಡುಮಗುವನ್ನೇ ಹೆತ್ತಳು. ಮೇಲಿನ ಪ್ರಸಂಗಕ್ಕನುಸರಿಸಿ ಆ ಕೂಸಿಗೆ ಚಂದ್ರಗುಪ್ತನೆಂಬ ಹೆಸರು ಆಯಿತು.

ಮುಂದೆ ಕೆಲವು ದಿವಸಗಳಾದ ಬಳಿಕ ಚಾಣಕ್ಯನು ಮತ್ತೆ ಅಲ್ಲಿಗೆ ಬಂದನು. ಆಗ ಗೋವಳಿಗರ ಹುಡುಗರೊಡನೆ ಆಡುತ್ತಿದ್ದ ಚಂದ್ರಗುಪ್ತನ ಗುರುತು ಅತನಿಗೆ ಹತ್ತಿತು. ಬಳಿಕ ಚಾಣಕ್ಯನು ಈ ಹುಡುಗನಿಗೆ ರಾಜ್ಯವನ್ನು ಕೊಡಿಸುತ್ತೇನೆಂದು ಹೇಳಿ ಚಂದ್ರಗುಪ್ತನನ್ನು ತನ್ನ ಸಂಗಡ ಕರೆದುಕೊಂಡುಹೋದನು.

ಮುಂದೆ ಚಂದ್ರಗುಪ್ತನು ಚಾಣಕ್ಯನ ಬುದ್ಧಿಯ ಮತ್ತು ದುಡ್ಡಿನ ಬಲದಿಂದ ದೊಡದೊಂದು ಸೇನೆಯನ್ನು ಕೂಡಿಸಿ ನಂದರಾಜರೊಡನೆ ಯುದ್ಧಕ್ಕೆ ಸಿದ್ಧನಾದನು. ಆಗ ನಂದರಾಜನು ಚಂದ್ರಗುಪ್ತನನ್ನು ಸೋಲಿಸಿದನು. ಬಳಿಕ ಚಂದ್ರಗುಪ್ತನು ಹಿಮವತ್ಪರ್ವತದ ಅಡಿಯಲ್ಲಿ ರಾಜ್ಯವಾಳುತ್ತಿದ್ದ ಪರ್ವತನೆಂಬ ಅರಸನ ಸಹಾಯವನ್ನು ಹೊಂದಿ ಮೇರೆಯ ಕಡೆಯಿಂದ ಒಂದೊಂದೇ ಪ್ರಾಂತವನ್ನು ಜಯಿಸುತ್ತಬಂದು ಪಾಟಲಿಪುತ್ರವನ್ನು ಮುತ್ತಿ ವಶಮಾಡಿಕೊಂಡನು. ಈ ಯುದ್ಧದಲ್ಲಿ ನಂದರಾಜನು ಓಡಿಹೋದನು. ನಂದನ ಮಗಳನ್ನೇ ಚಂದ್ರಗುಪ್ತನು ಮದುವೆಯಾದನು. ನಂದರಾಜನು ಊರೊಳಗಿನ ಒಬ್ಬ ಸುಂದರಿಯಾದ ಹುಡುಗಿಗೆ ವಿಷದ ಅಭ್ಯಾಸ ಮಾಡಿಸಿದ್ದನು. ಅದರಿಂದ ಆ ಹುಡುಗಿಗೆ ವಿಷಕನ್ಯೆಯನ್ನುತ್ತಿದ್ದರು. ಪರ್ವತರಾಜನು ಆ ಸುಂದರಿಯಾದ ಕನ್ಯೆಯನ್ನು ನೋಡಿ ಮದುವೆಯಾಗಬೇಕೆಂದು ಬಯಸಿದನು. ಅವರಿಬ್ಬರ ವಿವಾಹ ಕಾಲದಲ್ಲಿ ಅಗ್ನಿಯ ಎದುರಿಗೆ ಪಾಣಿಗ್ರಹಣವಾಗುವಾಗ ಆ ಕನ್ನೆಯ ಕೈಯ ಬೆವರ ಹನಿಗಳು ಪರ್ವತನ ಶರೀರದಲ್ಲಿ ಸೇರಲು ಕೂಡಲೆ ಅವನು ವಿಷವೇರಿ ಸತ್ತನು. ಬಳಿಕ ಪರ್ವತನ ರಾಜ್ಯವೂ ಚಂದ್ರಗುಪ್ತನ ರಾಜ್ಯಕ್ಕೆ ಸೇರಿತು. ಕ್ರಮವಾಗಿ ಚಂದ್ರಗುಪ್ತನು ಏಕಚ್ಛತ್ರಾಧಿಪತಿಯಾದನು.

ಹಿಂದು ಪುರಾಣಗಳಲ್ಲಿ.

ಮಹಾನಂದನೆಂಬ ರಾಜನಿಗೆ ಒಬ್ಬ ಶೂದ್ರಸ್ತ್ರೀಯ ಹೊಟ್ಟೆಯಲ್ಲಿ ಮಹಾಪದ್ಮನೆಂಬವನು ಹುಟ್ಟಿದನು. ಅವನು ಅತ್ಯಂತ ಪರಾಕ್ರಮಶಾಲಿಯಾಗಿ ಕ್ಷತ್ರಿಯ ರಾಜರನ್ನೆಲ್ಲ ಸಮೂಲವಾಗಿ ನಾಶಮಾಡಿದನು. ಈ ನಂದಮಹಾಪದ್ಮನು ಭರತಖಂಡದಲ್ಲಿ

ಏಕಚ್ಛತ್ರಾಧಿಪತಿಯಾಗಿ ಎರಡನೆಯ ಪರಶುರಾಮನಂತೆ ಸರಾಕ್ಷತ್ರವನ್ನು ತೋರಿಸಿದನು. ಮಹಾಪದ್ಮನಿಗೆ ಎಂಟುಜನ ಮಕ್ಕಳಿದ್ದರು. ಜ್ಯೇಷ್ಠನಿಗೆ ಸುಮಾಲ್ಯನೆಂಬ ಹೆಸರು. ಅವನು ನೂರು ವರ್ಷ ರಾಜ್ಯವಾಳಿದನು. ಒಬ್ಬ ಬ್ರಾಹ್ಮಣನು ಈ ನಂದವಂಶವನ್ನು ನಾಶಮಾಡಿ ಮೌರ್ಯವಂಶದಲ್ಲಿ ಹುಟ್ಟಿದ ಚಂದ್ರಗುಪ್ತನನ್ನು ಪಾಟಲಿಪುತ್ರದ ಸಿಂಹಾಸನದಲ್ಲಿ ಕುಳ್ಳಿರಿಸಿದನು.

(ಶ್ರೀಮದ್ಭಾಗವತ ದ್ವಾದಶಸ್ಕಂಧ)

ಶಿಶುನಾಗವಂಶದ ಕೊನೆಯ ಅರಸನಿಗೆ ಮಹಾನಂದಿಯೆಂಬ ಹೆಸರು. ಮಹಾನಂದಿಯ ಮಗನಾದ ಮಹಾಪದ್ಮನು ಎರಡನೆಯ ಪರಶುರಾಮನಂತೆ ಕ್ಷತ್ರಿಯ ರಾಜವಂಶವನ್ನು ಸಮೂಲ ನಾಶಮಾಡಿದನು. ಇವನು ಶೂದ್ರಸ್ತ್ರೀಯ ಹೊಟ್ಟೆಯಲ್ಲಿ ಹುಟ್ಟಿದವನು. ಸುಮಾಲ್ಯ ಮೊದಲಾದ ಇವನ ಎಂಟುಜನ ಮಕ್ಕಳು ಕ್ರಮವಾಗಿ ರಾಜ್ಯವಾಳಿದರು. ಕೌಟಿಲ್ಯನೆಂಬ ಒಬ್ಬ ಬ್ರಾಹ್ಮಣನು ನಂದವಂಶವನ್ನು ನಾಶಮಾಡಿ ಮೌರ್ಯ ಚಂದ್ರಗುಪ್ತನಿಗೆ ಸಾಮ್ರಾಜ್ಯವನ್ನು ಕೊಟ್ಟನು.

(ಶ್ರೀ ವಿಷ್ಣುಪುರಾಣ.)

ಪುರಾಣ ಟೀಕಾಕಾರರು—ನಂದಮಹಾಪದ್ಮನ ಒಬ್ಬ ಮಹಿಷಿಗೆ ಮುರಾ ಎಂಬ ಹೆಸರಿತ್ತೆಂದೂ, ಅದರಿಂದಲೇ ಅವಳ ಮಗನಾದ ಚಂದ್ರಗುಪ್ತನಿಗೆ ಮೌರ್ಯನೆಂಬ ಹೆಸರು ಬಂದಿತೆಂದೂ ಹೇಳುತ್ತಾರೆ.

